# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆಂಟನೆಯ ಅಧಿವೇಶನ

20ನೇ ಡಿಸೆಂಬರ್ 2022
ಮಂಗಳವಾರ

## ವಿಷಯಾನುಕ್ರಮಣಿಕೆ (INDEX)

01. ಪ್ರಕಟಣೆ

"ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಬಗ್ಗೆ"

02. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

18 – "ಉದ್ಯಮಿಯಾಗು ಉದ್ಯೋಗ ನೀಡು" ಯೋಜನೆ ಕುರಿತು

– ಶ್ರೀ ಡಿ.ಎಸ್.ಅರುಣ್

– ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

208 – ಗದಗ ಜಿಲ್ಲೆಯ ಬೆಟಗೇರಿ 24X7 ಕುಡಿಯುವ ನೀರಿನ ಯೋಜನೆ ಕುರಿತು.

–ಶ್ರೀ ಎಸ್.ವ್ಹಿ.ಸಂಕನೂರ

–ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು)

221 – ವಶಿಷ್ಠ ಸೌಹಾರ್ದ ಸಹಕಾರ ಸಂಘದಲ್ಲಿನ ಅವ್ಯವಹಾರದ ಕುರಿತು

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**166+215- ರಾಜ್ಯದಲ್ಲಿರುವ ಕಬ್ಬು ಬೆಳೆಗಾರರಿಗೆ ನಿಗದಿಪಡಿಸಲಾದ ಎಫ್.ಆರ್.ಪಿ. ಬಗ್ಗೆ.**

- ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಪಿ.ಆರ್.ರಮೇಶ್
- ಶ್ರೀ ಶಂಕರ ಬ.ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು)

**(ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಲಾಯಿತು)**

**211+265+244-ಕರ್ನಾಟಕ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್ (ಡಾ॥ ಕೆ.ಗೋವಿಂದರಾಜ್‌ರವರ ಪರವಾಗಿ)
- ಶ್ರೀ ಎಂ.ನಾಗರಾಜು
- ಶ್ರೀ ಮಂಜುನಾಥ್ ಭಂಡಾರಿ
- ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**218- ಹುಬ್ಬಳ್ಳಿ ಧಾರವಾಡದಲ್ಲಿನ ಸ್ಮಾರ್ಟ್ ಸಿಟಿ ಯೋಜನೆಯ ಸ್ಥಿತಿಗತಿಯ ಬಗ್ಗೆ.**

- ಶ್ರೀ ಸಲೀಂ ಅಹಮದ್
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)
- ಶ್ರೀ ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**239 – ರಾಜ್ಯದಲ್ಲಿ ಮಹಿಳೆಯರ ಒಡೆತನದ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಬಗ್ಗೆ**

-ಶ್ರೀ ಕೆ.ಎ.ತಿಪ್ಪೇಸ್ವಾಮಿ

-ಶ್ರೀ ಎನ್.ನಾಗರಾಜು (ಎಂ.ಟಿ.ಬಿ), (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**250–ಸಹಕಾರಿ ಬ್ಯಾಂಕುಗಳಲ್ಲಿ ಹಣ ದುರುಪಯೋಗ**

– ಶ್ರೀ ಹೆಚ್.ಎಸ್.ಗೋಪಿನಾಥ್

– ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

**232– ಬೆಳಗಾವಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಬಗ್ಗೆ**

– ಶ್ರೀ ಶರವಣ ಟಿ.ಎ.

– ಡಾ||ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು)

– ಶ್ರೀ ಶಂಕರ ಬ.ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು)

**213 – ಮಧುಗಿರಿ ನಗರದ ಯು.ಜಿ.ಡಿ. ಕಾಮಗಾರಿಯ ಬಗ್ಗೆ.**

– ಶ್ರೀ ರಾಜೇಂದ್ರ ರಾಜಣ್ಣ

– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**258– ಬೀದರ್ ಜಿಲ್ಲೆಯ ಯುಜಿಡಿ 24X7 ಕುಡಿಯುವ ನೀರಿನ ಯೋಜನೆ ಕುರಿತು.**

– ಶ್ರೀ ಅರವಿಂದ ಕುಮಾರ್ ಅರಳಿ

– ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**206 – ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸರ್ವೆ ನಂ.74ರಲ್ಲಿ ದಾಖಲಾಗಿರುವ ಅಕ್ರಮ ಖಾತೆಗಳ ಬಗ್ಗೆ.**

– ಶ್ರೀ ಡಿ.ಎಸ್.ಅರುಣ್ (ಶ್ರೀ ಮುನಿರಾಜು ಗೌಡ ಪಿ.ಎಂ.ರವರ ಪರವಾಗಿ)

– ಶ್ರೀ ಎನ್.ನಾಗರಾಜು(ಎಂ.ಟಿ.ಬಿ)(ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

೦೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

ಅ) ಕರ್ನಾಟಕ ರಾಜ್ಯ ಸರಕಾರಿ ಎನ್.ಪಿ.ಎಸ್. ನೌಕರರ ಸಂಘವು ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್.) ಯನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತು.

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

ಆ) ಆರೋಗ್ಯ ಇಲಾಖೆಯ ಶುಚಿ ಯೋಜನೆ ಅಡಿಯಲ್ಲಿ "3 ವರ್ಷದಿಂದ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆ ಸ್ಥಗಿತ" ಕುರಿತು.

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

ಇ) ಆನ್‌ಲೈನ್ ಗೇಮಿಂಗ್ ನಿಯಂತ್ರಣ ಕುರಿತು ಶೀಘ್ರ ಕ್ರಮ ಕೈಗೊಳ್ಳುವ ಸಲುವಾಗಿ ಕಾಯ್ದೆ ರೂಪಿಸುವ ಬಗ್ಗೆ.

– ಶ್ರೀ ಡಿ.ಎಸ್.ಅರುಣ್

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

ಈ) ಬಂಗಾಳಕೊಲ್ಲಿಯ ಮ್ಯಾಂಡಸ್ ಚಂಡಮಾರುತದಿಂದ ಸುರಿದ ಮಳೆಯಿಂದಾಗಿ ಕೋಲಾರ ನಗರ ಸೇರಿದಂತೆ ಗ್ರಾಮೀಣ ಭಾಗದ ರಸ್ತೆಗಳು ಹಾಳಾಗಿರುವ ಕುರಿತು.

– ಶ್ರೀ ಗೋವಿಂದ ರಾಜು

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

ಉ) ಬೆಂಗಳೂರು ನಗರಕ್ಕೆ ಪ್ರತಿದಿನ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ಇ-ಶೌಚಾಲಯ ನಿರ್ಮಿಸಿದ್ದು ಅವುಗಳ ಸಮರ್ಪಕ ನಿರ್ವಹಣೆ ಆಗದಿರುವ ಕುರಿತು.

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**ಊ) 2022-23ನೇ ಸಾಲಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕೌನ್ಸಿಲಿಂಗ್ ಸೀಟು ಹಂಚಿಕೆಯಾದ ನಂತರ ಉಳಿದ ಸೀಟುಗಳನ್ನು ಸರ್ಕಾರಿ ಕಾಲೇಜುಗಳ ಹಂತದಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸುವ ಕುರಿತು.**

**- ಶ್ರೀ ಮರಿತಿಬ್ಬೇಗೌಡ**

**- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)**

**೦4. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**"ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸುವಲ್ಲಿ ಸರ್ಕಾರವು ವಿಫಲವಾಗಿರುವ ಕುರಿತು"**

**- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)**

**- ಶ್ರೀ ಕೆ.ಎ.ತಿಪ್ಪೇಸ್ವಾಮಿ**

**- ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)**

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

**೦5. ಕಾರ್ಯದರ್ಶಿಯವರ ವರದಿ**

"ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿ/ರಾಜ್ಯಪಾಲರವರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿಯ ಮಂಡನೆ"

**೦6. ವರದಿಯನ್ನೊಪ್ಪಿಸುವುದು**

**೦7. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**೦8. ಗಮನ ಸೆಳೆಯುವ ಸೂಚನೆಗಳು**

ಅ) **ಕೋಲಾರ ಜಿಲ್ಲೆಯಲ್ಲಿ ಮಿನಿ ವಿಧಾನಸೌಧ ಇದ್ದರೂ ಕೂಡ ಉಪನೋಂದಣಾಧಿಕಾರಿ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುರಿತು.**

- ಶ್ರೀ ಗೋವಿಂದ ರಾಜು

- ಶ್ರೀ ಪಿ.ಆರ್.ರಮೇಶ್

- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

(ಕಂದಾಯ ಸಚಿವರ ಪರವಾಗಿ)

**ಆ) ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಪಾದೂರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ISPRL (Indian Strategic Petroleum Reserve Limited) ರವರು 2015 ರಿಂದ ಗ್ರಾಮ ಪಂಚಾಯತಿಗೆ ಆಸ್ತಿ ಮತ್ತು ಕಟ್ಟಡ ತೆರಿಗೆ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಕುರಿತು.**

– ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

– ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ)

**೦9. ನಿಯಮ 33೦ರ ಮೇರೆಗೆ ಚರ್ಚೆ**

**ಅ) ದಿನಾಂಕ:01.04.2006ರ ನಂತರ ನೇಮಕಗೊಂಡಿರುವ ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ನಿಶ್ಚಿತ ಪಿಂಚಣಿ ಸೌಲಭ್ಯ ಕಲ್ಪಿಸದೇ ಇರುವುದು ಹಾಗೂ ಜ್ಯೋತಿ ಸಂಜೀವಿನ ಸೌಲಭ್ಯ ವಿಸ್ತರಿಸದೇ ಇರುವ ಕುರಿತು.**

– ಶ್ರೀ ಮರಿತಿಬ್ಬೇಗೌಡ

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಆಯನೂರು ಮಂಜುನಾಥ್

– ಶ್ರೀ ಶಶೀಲ್ ಜಿ. ನಮೋಶಿ

– ಡಾ: ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು)

– ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಆ) ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ನಿರ್ವಹಣೆಗೆ ಸರ್ಕಾರದ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಕಾಯ್ದಿರಿಸುವ ಕುರಿತು.**

– ಶ್ರೀ ಎನ್.ಮಂಜೇಗೌಡ

– ಶ್ರೀ ಆನಂದ್ ಸಿಂಗ್ (ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

–ಶ್ರೀ ಮರಿತಿಬ್ಬೇಗೌಡ

–ಶ್ರೀ ಪಿ.ಆರ್.ರಮೇಶ್

~ * ~ * ~ * ~ *~

(1047)20-12-2022(11-30)bsd-md

# ಕರ್ನಾಟಕ ವಿಧಾನ ಪರಿಷತ್ತು

**ಮಂಗಳವಾರ, 20ನೇ ಡಿಸೆಂಬರ್ 2022**

ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 37 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ **(ಶ್ರೀ ರಘುನಾಥರಾವ್ ಮಲ್ಕಾಪುರೆ)** ರವರು ಪೀಠದಲ್ಲಿ ಉಪಸ್ಥಿತರಾದರು

**1. ಪ್ರಕಟಣೆ**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ ೨೮ ಮೇರೆಗೆ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡಲು 147ನೇ ಅಧಿವೇಶನದಲ್ಲಿ ನಾಮನಿರ್ದೇಶನ ಮಾಡಿದ್ದ ಈ ಕೆಳಕಂಡ ಶಾಸಕರನ್ನು ಪ್ರಸಕ್ತ ಅಧಿವೇಶನದಲ್ಲಿಯೂ ಮುಂದುವರೆಸಲಾಗಿದೆ.

**1) ಶ್ರೀ ಶಶಿಲ್ ಜಿ ನಮೋಶಿ**
**2) ಡಾ: ತೇಜಸ್ವಿನಿಗೌಡ**
**3) ಶ್ರೀ ಮರಿತಿಬ್ಬೇಗೌಡ**
**4) ಶ್ರೀ ಪಿ.ಆರ್. ರಮೇಶ್**

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಸಭಾಪತಿಯವರು:-** ಶ್ರೀ ಚಲವಾದಿ ನಾರಾಯಣಸ್ವಾಮಿ ರವರು ಹಾಜರಿಲ್ಲ, ಶ್ರೀಮತಿ ಹೇಮಲತಾ ನಾಯಕ್ ರವರು ಹಾಜರಿಲ್ಲ, ನಂತರ ಶ್ರೀ ಡಿ.ಎಸ್. ಅರುಣ್ ರವರು ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ 18**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಮಾನ್ಯ ಸಚಿವರ ಕಾರ್ಯಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರಿಗೆ ಇರುವ ಕಾಳಜಿಗೆ ಅತ್ಯುತ್ತಮವಾದ ಕೆಲಸ ಆಗಿದೆ. ಉದ್ಯಮಿಯಾಗು ಉದ್ಯೋಗ ನೀಡು ಎನ್ನುವ ಯೋಜನೆಯು ಅದ್ಭುತವಾದ ಯೋಜನೆಯಾಗಿದ್ದು, ಈ ಯೋಜನೆಯು ಸುಮಾರು ಒಂದೂವರೆ ವರ್ಷದ ಹಿಂದೆ ಪ್ರಾರಂಭವಾಗಿದ್ದು, ಸುಮಾರು 31,768 ಅಭ್ಯರ್ಥಿಗಳು enrolment ಆಗಿದ್ದಾರೆ. ಅಲ್ಲಿಂದ ಮುಂದಕ್ಕೆ ಆಗುವುದರೊಳಗೆ ಅಧಿಕಾರಿಗಳ ಇಚ್ಛಾ ಶಕ್ತಿಯಿಂದ ಮುಂದುವರೆದಿಲ್ಲ. ಒಬ್ಬನು Entrepreneur ಆಗಬೇಕೆಂದು ಸರ್ಕಾರ ಒಂದು ಯೋಜನೆಯನ್ನು ಪ್ರಾರಂಭಿಸಿದ ಮೇಲೆ ಆ ಸಂದರ್ಭದಲ್ಲಿ ಇರುವ interest ತದನಂತರದಲ್ಲಿ ಕಡಿಮೆಯಾಗುತ್ತಾ ಹೋಗಬಹುದು. 31,768 ಜನರು ಬೇರೆ ಬೇರೆ ವಿಭಾಗದಲ್ಲಿ ಮೊದಲನೆಯ ಹಂತದ training ಅನ್ನು ತೆಗೆದುಕೊಂಡಿದ್ದಾರೆ. ಅದಾದ ಮೇಲೆ ಅವರೆಲ್ಲರಿಗೂ Entrepreneur Development Programme (EDP) ಎಂದಾಗಬೇಕು. ಅದಾದ ಮೇಲೆ

ಅವರಿಗೆ ಏನು ಪ್ರೋತ್ಸಾಹ ಸಿಗುತ್ತದೆ ಎಂದು ಗೊತ್ತಾದರೆ ಮಾತ್ರ ಆತ Entrepreneur ಆಗಿ ಉಳಿಯುತ್ತಾನೆ.

(ಮುಂದು)

**(1048) 20.12.2022/11.40/ಹೆಚ್‌ವಿ:ಎಕೆ**

**ಶ್ರೀ ಡಿ.ಎಸ್.ಅರುಣ್ (ಮುಂದು):-**

ಸರ್ಕಾರದಿಂದ ಯಾವಯಾವ ಸೌಲಭ್ಯಗಳು ದೊರೆಯುತ್ತವೆ ಎನ್ನುವುದು ಗೊತ್ತಾದಾಗ ಮಾತ್ರ ಉದ್ಯಮಿ ಇಲ್ಲಿ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಸುಮಾರು ಒಂದೂವರೆ ವರ್ಷಗಳ ಅವಧಿ ಆದ ಮೇಲೆ ಆತ ಮೊದಲನೆಯ ಸೆಷನ್ ತೆಗೆದುಕೊಂಡರೇ, ಆ ಉದ್ಯಮಿ ಬಹಳ ದಿನಗಳ ಕಾಲ ಕಾಯುವುದಕ್ಕೆ ತಯಾರು ಇರುವುದಿಲ್ಲ. ಆತ ಬೇರೆ ಕಡೆಗೆ ಹೋಗುವಂತಹ ಸಾಧ್ಯತೆಗಳು ಹೆಚ್ಚಾಗಿವೆ. ಆದ್ದರಿಂದ ಇಂತಹ ಉದ್ಯಮಿಗಳನ್ನು ಹಿಡಿದಿಟ್ಟುಕೊಳ್ಳುವುದು ಮತ್ತು ಆತನನ್ನು ಒಂದು ತಾರ್ಕಿಕ ಹಂತಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ ಎನ್ನುವುದು ನನ್ನ ಕೋರಿಕೆಯಾಗಿದೆ. **"ಉದ್ಯಮಿಯಾಗು; ಉದ್ಯೋಗ ನೀಡು"** ಯೋಜನೆಯಡಿಯಲ್ಲಿ 31,768 ಅಭ್ಯರ್ಥಿಗಳು ಭಾಗವಹಿಸಿ ಉದ್ಯಮಗಳನ್ನು ಪ್ರಾರಂಭಿಸಲು ಪ್ರೇರಣೆ ಹೊಂದಿರುತ್ತಾರೆ ಎನ್ನುವ ಅಂಶವನ್ನು ಅವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ ತಿಳಿಸಿದ್ದಾರೆ. ಇವರುಗಳ ಪೈಕಿ ಎಷ್ಟು ಜನರು ಉದ್ಯಮಿಗಳಾಗಿದ್ದಾರೆ ಎನ್ನುವ ಮಾಹಿತಿಯನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಡಾ|| ಮುರುಗೇಶ ಆರ್.ನಿರಾಣಿ:-** ಸನ್ಮಾನ್ಯ ಸಭಾಪತಿಯವರೇ, **"ಉದ್ಯಮಿಯಾಗು; ಉದ್ಯೋಗ ನೀಡು"** ಎನ್ನುವ ಕಾರ್ಯಕ್ರಮವನ್ನು ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ಪ್ರಾರಂಭಿಸಿದ್ದೆವು, ಆ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಹಿರಿಯ ಸಚಿವರುಗಳು ಮತ್ತು ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು. ಬೆಂಗಳೂರು ನಗರದಲ್ಲಿ ಕನಿಷ್ಠ 10 ಸಾವಿರ ಬಿ.ಇ.,

ಎಂ.ಟೆಕ್., ಎಂ.ಬಿ.ಎ., ಪದವೀಧರರು ಮತ್ತು ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಉದ್ಯಮಿಗಳಾಗಲು ಬಯಸಿದ್ದಲ್ಲಿ; ಅವರುಗಳಿಗೆ ಯಾವ ರೀತಿಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಸೌಲಭ್ಯಗಳು ದೊರೆಯುತ್ತವೆ ಮತ್ತು 'One District One Product' ಎನ್ನುವ ಯೋಜನೆಯಡಿಯಲ್ಲಿ ಯಾವಯಾವ ಜಿಲ್ಲೆಗಳಲ್ಲಿ ಯಾವಯಾವ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು ಎನ್ನುವುದರ ಬಗ್ಗೆ ವಿವರವಾಗಿರುವ ಮಾಹಿತಿಯನ್ನು ನೀಡಲು ಒಂದು ದಿನದ ಕಾರ್ಯಕ್ರಮವನ್ನು ಬೆಂಗಳೂರು ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ನಂತರದ ದಿನಗಳಲ್ಲಿ ಕಲಬುರ್ಗಿ, ಬೆಳಗಾವಿ, ಮೈಸೂರು, ಮಂಗಳೂರು ಮತ್ತು ತುಮಕೂರು ಜಿಲ್ಲೆಗಳ ಪ್ರಮುಖ 6 ಸ್ಥಳಗಳಲ್ಲಿ ಇಂತಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 31,768 ಜನರಿಗಿಂತಲೂ ಹೆಚ್ಚು ಜನರು ನೇರವಾಗಿ ಪಾಲ್ಗೊಂಡಿದ್ದರು ಮತ್ತು virtual ಆಗಿ ಸಹ ಸಾಕಷ್ಟು ಜನರು ಭಾಗವಹಿಸಿದ್ದರು. ಬೆಂಗಳೂರು ನಗರದಲ್ಲಿ ನಡೆದಂತಹ ಕಾರ್ಯಕ್ರಮದಲ್ಲಿ "ಇದು ಒಂದು ದಿನದ ಕಾರ್ಯಕ್ರಮವಾಗಿರಬಾರದು, ಯಾವ ಸೆಕ್ಟರ್‌ನಲ್ಲಿ ನಿರ್ದಿಷ್ಟವಾಗಿ ಉದ್ಯಮವನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರುತ್ತಾರೆ. ಅವರಿಗೆ "ಇಡೀ ರಾಜ್ಯದಲ್ಲಿ ಒಂದೊಂದು ಸೆಕ್ಟರ್ ಅನ್ನು, ಒಂದೊಂದು ಡಿವಿಜ಼ನ್‌ನಲ್ಲಿ ಪ್ರಾರಂಭ ಮಾಡಬೇಕು" ಎನ್ನುವ ಕರೆಯನ್ನು ಸಹ ನೀಡಲಾಗಿದೆ. ಈ ಆರು ಡಿವಿಜ಼ನ್‌ಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿ ಮುಗಿಸಿದ ನಂತರ ನವೆಂಬರ್ 2ನೇ ತಾರೀಖಿನಿಂದ 4ನೇ ತಾರೀಖಿನವರೆಗೆ ಒಟ್ಟು 3 ದಿನಗಳ ಕಾಲ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲಾಗಿತ್ತು. ಅದನ್ನು 'Invest Karnataka' ಎಂದು ಸಹ ಕರೆಯುತ್ತೇವೆ. ಅದರಲ್ಲಿ ನಾವು ಬೇರೆಬೇರೆ ದೇಶಗಳಿಗೆ ಹೋಗುವುದು ಮತ್ತು ಅಲ್ಲಿ ನಮ್ಮ ಕರ್ನಾಟಕ ರಾಜ್ಯದ ಬಗ್ಗೆ showcase ಮಾಡುವುದು, market ಮಾಡುವಂತಹ ಉದ್ದೇಶಗಳನ್ನು ಇಟ್ಟುಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ನಮ್ಮ ದೇಶದ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು virtual ಆಗಿ ಮಾತನಾಡಿದ್ದರು. ನಂತರ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು, ಕೈಗಾರಿಕಾ ಸಚಿವರು ಇನ್ನಿತರ ಸಚಿವರುಗಳು ಮತ್ತು ನಮ್ಮ ರಾಜ್ಯದವರಾದ ಮೂರು ಜನ ಕೇಂದ್ರ ಸಚಿವರು ಅಂದರೆ, ಶ್ರೀಯುತರುಗಳಾದ ಪ್ರಹ್ಲಾದ್ ಜೋಷಿಯವರು, ಶೋಭಾ ಕರಂದ್ಲಾಜೆಯವರು ಮತ್ತು ಕೂಬಾರವರು ಇದರಲ್ಲಿ ಭಾಗವಹಿಸಿದ್ದರು. ಇಡೀ ದೇಶದ ಕೈಗಾರಿಕಾ ಇತಿಹಾಸದಲ್ಲಿಯೇ

ಮೊಟ್ಟಮೊದಲನೆಯ ಬಾರಿಗೆ ಸುಮಾರು 9.81 ಲಕ್ಷ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆಗಾಗಿ ನಾನು ಎಂ.ಓ.ಯು.ಗಳಿಗೆ ಸಹಿ ಮಾಡಿದ್ದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ 2000ನೇ ಇಸವಿಯಿಂದ 2022ನೇ ಇಸವಿಯವರೆಗೆ ಸುಮಾರು ಮೂರು ಬಾರಿ ನಡೆದಿದೆ. ಈ ಮೂರು ಸಮಾವೇಶವೂ ನಾನು ಕೈಗಾರಿಕಾ ಸಚಿವನಾಗಿದ್ದಾಗಲೇ ನಡೆದಿದೆ. ಹಿಂದೆ ಆಗಿರುವಂತಹ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಸಂಗ್ರಹವಾಗಿರುವ conversion ratio ಗೂ ಈ ಬಾರಿ ಆಗಿರುವಂತಹ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಸಂಗ್ರಹವಾಗಿರುವ conversion ratio ಗೂ ಹೋಲಿಕೆ ಮಾಡಿ ನೋಡಿದರೆ, ಈ ಬಾರಿ ಶೇಕಡಾ 70 ರಿಂದ 75ರಷ್ಟು ಹೆಚ್ಚಾಗುವಂತಹ ಸಾಧ್ಯತೆಗಳಿವೆ. ಇದಕ್ಕೆ ಕಾರಣವೇನೆಂದರೆ, ಕ್ಲಿಯರ್ ಮಾಡಿರುವಂತಹ ಎಲ್ಲ ಪ್ರಾಜೆಕ್ಟ್‌ಗಳನ್ನು ಉನ್ನತ ಮಟ್ಟದ ಸಮಿತಿಗಳು ಮತ್ತು ಏಕಗವಾಕ್ಷಿ ಸಮಿತಿಗಳ ಮುಂದೆ ತಂದು ಎಲ್ಲ ಹಿರಿಯ ಸಚಿವರು ಮತ್ತು ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚೆ ಮಾಡಿ, ಉದ್ಯಮಿಗಳಿಗೆ ಬೇಕಾಗಿರುವಂತಹ ಭೂಮಿ, ನೀರು, ವಿದ್ಯುತ್ ಮತ್ತು concessions ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದಾಗ ಮಾತ್ರ ಆತನ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಕೊಟ್ಟು ಅಂತಹ ಉದ್ಯಮಿಗಳೊಂದಿಗೆ ಮಾತ್ರ ಎಂ.ಓ.ಯು.ಗಳಿಗೆ ಸಹಿ ಮಾಡಿರುವಂತಹ ಉದಾಹರಣೆಗಳು ಇಲ್ಲಿ ಹೆಚ್ಚಾಗಿವೆ. ಈ ರೀತಿಯಾದಾಗ ನಮ್ಮ conversion ratio ಸಹ ಹೆಚ್ಚಾಗುತ್ತದೆ. ಮತ್ತೊಂದು ವಿಶೇಷವಾಗಿರುವ ಅಂಶವೆಂದರೆ, ಬೆಂಗಳೂರು ನಗರದಲ್ಲಿ ನಡೆದಂತಹ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬೆಂಗಳೂರಿನಲ್ಲಿ less than 10% ಬಂಡವಾಳ ಹೂಡಿಕೆಗೆ ಬೇಡಿಕೆ ಬಂದಿದೆ. Beyond Bengaluru, 90% ಹೂಡಿಕೆಗೆ ಬೇಡಿಕೆ ಬಂದಿದೆ. ಟಯರ್-1, ಟಯರ್-2 ಮತ್ತು ಟಯರ್-3 ನಗರಗಳಲ್ಲಿ ಬಂಡವಾಳ ಹೂಡಿಕೆಯನ್ನು ನೋಡಿದರೆ, ಟಯರ್-2 ನಗರದಲ್ಲಿಯೇ ಹೆಚ್ಚು ಬಂಡವಾಳ ಹೂಡಿಕೆಗೆ ಬೇಡಿಕೆ ಬಂದಿದೆ. ಇದರಿಂದ ಸುಮಾರು 6 ಲಕ್ಷ ಜನರಿಗೆ ಉದ್ಯೋಗ ಸಿಗುವಂತಹ ಸಾಧ್ಯತೆಗಳಿವೆ. ಇದರ ಬಗ್ಗೆ ಇನ್ನೂ ವಿವರವಾಗಿರುವ ಮಾಹಿತಿಯನ್ನು ನಾನು ಲಿಖಿತರೂಪದಲ್ಲಿ ಅವರಿಗೆ ಒದಗಿಸಿಕೊಟ್ಟಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, **"ಉದ್ಯಮಿಯಾಗು; ಉದ್ಯೋಗ ನೀಡು"** ಎನ್ನುವ ಕಾರ್ಯಕ್ರಮವನ್ನು ಏರ್ಪಡಿಸಿದಾಗ, ಯಾವ ಜಿಲ್ಲೆಯಲ್ಲಿ ಆ ಕಾರ್ಯಕ್ರಮವನ್ನು ಏರ್ಪಡಿಸಿರುತ್ತೇವೆ, ಆ ಜಿಲ್ಲೆಯಲ್ಲಿರುವ ಯಶಸ್ವಿ ಉದ್ದಿಮೆದಾರರನ್ನು, ನವ ಉದ್ದಿಮೆದಾರರಿಗೆ ಮಾರ್ಗದರ್ಶನ ಮಾಡುವುದಕ್ಕೆ ಆಹ್ವಾನಿಸಲಾಗಿತ್ತು. ಅವರುಗಳು, ತಾವು ನಡೆದು ಬಂದ ದಾರಿ, ಎಲ್ಲಿ ಸಮಸ್ಯೆಗಳು ಬಂದವು, ಅವುಗಳನ್ನು ದಾಟಿ ನಾವು ಹೇಗೆ ಯಶಸ್ವಿ ಉದ್ಯಮಿಗಳಾದೆವು ಎನ್ನುವುದರ ಬಗ್ಗೆ ತಿಳಿಸಿಕೊಡುತ್ತಿದ್ದರು. ಈ ರೀತಿಯಾದ ಪ್ರೇರಣಾತ್ಮಕ ಕಾರ್ಯಕ್ರಮಗಳನ್ನು ಮಾಡಿದಾಗ, ಬಿ.ಇ., ಎಂ.ಟೆಕ್., ಮತ್ತು ಎಂ.ಬಿ.ಎ. ಪದವೀಧರರು "ನಾವು ಸಹ ಇಂತಹ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ" ಎಂದು ಮುಂದೆ ಬಂದಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಒಂದು ನಿರ್ದಿಷ್ಟವಾಗಿರುವ ಸೆಕ್ಟರ್ ಬಗ್ಗೆ ಇಡೀ ರಾಜ್ಯದಲ್ಲಿ ಒಂದು ಡಿವಿಜನ್‌ನಲ್ಲಿ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಅಂದರೆ, ಒಟ್ಟು 6 ಡಿವಿಜನ್‌ಗಳಲ್ಲಿ ಒಂದೊಂದು ನಿರ್ದಿಷ್ಟ ಸೆಕ್ಟರ್‌ಗಳ ಬಗ್ಗೆ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಇದಕ್ಕೆ ಯಾವುದೇ ರೀತಿಯ ಶುಲ್ಕವನ್ನು ತೆಗೆದುಕೊಳ್ಳದೇ ಕನಿಷ್ಠ 3 ದಿನದಿಂದ 13 ದಿನಗಳ ಕಾಲ ಪ್ರೇರಣಾತ್ಮಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಅವರಿಗೆ Detailed Project Report ಮಾಡಿಸಿ, ಅವರಿಗೆ marketing strategyನ್ನು ಹೇಳಲಾಗುತ್ತದೆ. ಕೊನೆಯ ದಿವಸ ರಾಜ್ಯದಲ್ಲಿ ಹೆಸರುವಾಸಿಯಾಗಿರುವ ಬ್ಯಾಂಕರ್ಸ್‌ಗಳನ್ನು ಕರೆಯಿಸಿ ಉದ್ದಿಮೆದಾರರಿಗೆ ಸಾಲ ಸೌಲಭ್ಯವನ್ನು ಒದಗಿಸಿಕೊಡುವಂತಹ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಮಾಡಲಾಗುತ್ತದೆ. ಇದೊಂದು ಬದಲಾವಣೆಯ ಕ್ರಾಂತಿಯಾಗಿದೆ. ಇಡೀ ರಾಜ್ಯದಲ್ಲಿ ಎಲ್ಲರೂ ಉದ್ಯೋಗಕ್ಕಾಗಿ ಕಾತರಿಸುತ್ತಿರುವ ಈ ಸಂದರ್ಭದಲ್ಲಿ ಅವರೇ ಉದ್ಯಮಿದಾರರಾಗುವ ಅವಕಾಶವಾಗಿದೆ. Instead of an employee, he should be an employer. ಅವರು ಮತ್ತೊಬ್ಬರಿಗೆ ಉದ್ಯೋಗ ಕೊಡುವಂತಹ ಕೆಲಸವಾಗಬೇಕು ಎನ್ನುವ ಉದ್ದೇಶದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದು ಬಹಳ ಯಶಸ್ವಿಯಾಗುತ್ತಿದೆ. ಮುಂದಿನ ದಿನಮಾನಗಳಲ್ಲಿಯೂ ಇದನ್ನು ಮುಂದುವರಿಸಿಕೊಂಡು ಹೋಗಲಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಎಸ್.ಅರುಣ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಮೂಲ ಪ್ರಶ್ನೆ ಏನೆಂದರೆ, ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉದ್ಯಮವನ್ನು ಪ್ರಾರಂಭಿಸಲು ಮುಂದೆ ಬಂದಿರುವ ಸುಮಾರು 31,768 ಅಭ್ಯರ್ಥಿಗಳ ಪೈಕಿ ಯಾರಾದರು ಉದ್ಯಮಿದಾರರಾಗಿ convert ಆಗಿರುವಂತಹ ಮಾಹಿತಿ ಸರ್ಕಾರಕ್ಕೆ ಇದೆಯೇ ಎನ್ನುವುದಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಡಾ|| ಮುರುಗೇಶ್ ಆರ್.ನಿರಾಣಿ:-** ಸನ್ಮಾನ್ಯ ಸಭಾಪತಿಯವರೇ, ಈ 31,768 ಅಭ್ಯರ್ಥಿಗಳ ಪ್ರಾಜೆಕ್ಟ್‌ಗಳನ್ನು ಜಿಲ್ಲಾ ಉನ್ನತ ಮಟ್ಟದ ಸಮಿತಿಗಳು ಮತ್ತು ಏಕಗವಾಕ್ಷಿ ಸಮಿತಿಗಳ ಮುಂದೆ ಪ್ರತಿ ತಿಂಗಳು ತಂದು ಕ್ಲಿಯರ್ ಮಾಡುತ್ತಿದ್ದೇವೆ. ನಾವು ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಭಾಗಿಯಾದವರಲ್ಲಿ ಎಷ್ಟು ಜನರಿಗೆ ಕ್ಲಿಯರೆನ್ಸ್ ನೀಡಲಾಗಿದೆ ಎನ್ನುವುದಕ್ಕೆ ಸಂಬಂಧಪಟ್ಟ ಅಂಕಿಸಂಖ್ಯೆ ನನ್ನ ಬಳಿ ಈಗ ಲಭ್ಯವಿಲ್ಲ. ಮಾನ್ಯ ಸದಸ್ಯರ ಗಮನದಲ್ಲಿ ಯಾರಾದರು ಉದ್ಯಮವನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರುತ್ತಿದ್ದಾರೆ ಎಂದು ಕಂಡು ಬಂದರೆ, ಅದನ್ನು ನನಗೆ ತಿಳಿಸಿದರೆ ಅವರಿಗೆ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಜಿಲ್ಲಾವಾರು ಅಥವಾ ಡಿವಿಜನ್‌ವಾರು ಹಮ್ಮಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 208**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯ ಬೆಟಗೇರಿ 24X7 ಕುಡಿಯುವ ನೀರಿನ ಯೋಜನೆ ಮತ್ತು ಸಮರ್ಪಕ ನೀರಿನ ವಿತರಣೆಯನ್ನು ಕುರಿತು ಸುಮಾರು 5 ಪ್ರಶ್ನೆಗಳನ್ನು ಕೇಳಿದ್ದೆ, ಆ 5 ಪ್ರಶ್ನೆಗಳಿಗೆ ಮಾನ್ಯ ಸಚಿವರು ನೀಡಿರುವಂತಹ ಉತ್ತರ ಸಮಾಧಾನಕರವಾಗಿಲ್ಲವೆನ್ನುವ ಹಿನ್ನೆಲೆಯಲ್ಲಿ 3 ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ಗದಗ ಜಿಲ್ಲೆಯ ಬೆಟಗೇರಿ ನಗರದಲ್ಲಿರುವ 14 ವಾರ್ಡ್‌ಗಳಿಗೆ ಎಷ್ಟು ದಿನಗಳಿಗೊಮ್ಮೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಸಚಿವರು ಅನುಬಂಧ-1ರಲ್ಲಿ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಆ ಪಟ್ಟಿಯಲ್ಲಿ ಕೊಟ್ಟಿರುವಂತಹ ಉತ್ತರ ಸರಿಯಾದಂತಹ ಉತ್ತರವಾಗಿಲ್ಲ. ತಪ್ಪು ಉತ್ತರವನ್ನು ಅಧಿಕಾರಿಗಳು ಸಚಿವರಿಂದ ಸದನದಲ್ಲಿ ಹೇಳಿಸಿದ್ದಾರೆ. ಏಕೆಂದರೆ, ನಾನು ಗದಗ-ಬೆಟಗೇರಿಯಲ್ಲಿ ವಾಸವಾಗಿದ್ದೇನೆ. ಇಲ್ಲಿ ಒಟ್ಟು 12 ಝೋನ್‌ಗಳನ್ನು ಮಾಡಲಾಗಿದೆ. ಮೊದಲನೆಯ ಝೋನ್‌ನಲ್ಲಿ ವಾರ್ಡ್ ನಂಬರ್ 33, 34 ಮತ್ತು 35ಗಳು ಬರುತ್ತವೆ. ಈ ಮೂರೂ ವಾರ್ಡ್‌ಗಳಿಗೆ 4 ರಿಂದ 5 ದಿನಗಳಿಗೊಮ್ಮೆ ನೀರು ಕೊಡುತ್ತಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ, ವಸ್ತುಸ್ಥಿತಿ ಆ ರೀತಿ ಇಲ್ಲ. ಅಲ್ಲಿ 15 ದಿನಗಳಿಗೊಮ್ಮೆ ಕುಡಿಯುವ ನೀರು ಬರುತ್ತಿದೆ. ವಿಶೇಷವಾಗಿ ಹೇಳಬೇಕಾದರೆ, ವಾರ್ಡ್ ನಂಬರ್ 34ಕ್ಕೆ ಕಳೆದ ಎರಡು ತಿಂಗಳುಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಿಲ್ಲ. ಇಲ್ಲಿ ಅತ್ಯಂತ ಬಡವರು ಮತ್ತು ಹಿಂದುಳಿದವರು ವಾಸಿಸುತ್ತಿದ್ದಾರೆ. ಇತ್ತೀಚಿಗೆ ಪತ್ರಿಕೆಯೊಂದರಲ್ಲಿ **"ಖಾಲಿ ಬಿಂದಿಗೆಯೊಂದಿಗೆ ರಸ್ತೆ ತಡೆದು ಮಹಿಳೆಯರ ಪ್ರತಿಭಟನೆ" " ಕುಡಿಯುವ ನೀರಿಗಾಗಿ ಸಂಚಾರ ಬಂದ್"** ಎನ್ನುವ ಶೀರ್ಷಿಕೆಯಡಿಯಲ್ಲಿ ವರದಿಗಳು ಪ್ರಕಟವಾಗಿವೆ.

ಸನ್ಮಾನ್ಯ ಸಭಾಪತಿಯವರೇ, 34ನೇ ವಾರ್ಡ್‌ನಲ್ಲಿರುವ ಮಹಿಳೆಯರು ಮತ್ತು ಮಕ್ಕಳು ಬೀದಿಯಲ್ಲಿ ಬಿಂದಿಗೆಗಳನ್ನಿಟ್ಟು ಪ್ರತಿಭಟನೆಯನ್ನು ಮಾಡಿದ್ದಾರೆ. ಝೋನ್ ನಂಬರ್ 4ರಲ್ಲಿ 26, 30, 31 ಮತ್ತು 32 ಹೀಗೆ ನಾಲ್ಕು ವಾರ್ಡ್‌ಗಳು ಬರುತ್ತವೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಈ

ವಾರ್ಡ್‌ಗಳಗೆ 3 ರಿಂದ 4 ದಿನಗಳಗೊಮ್ಮೆ ನೀರು ಬಿಡಲಾಗುತ್ತದೆಂದು ಹೇಳಿದ್ದಾರೆ. ಆದರೆ, ಅಲ್ಲಿಗೆ 12 ದಿನಗಳಿಗೊಮ್ಮೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನಿರ್ದಿಷ್ಟವಾಗಿ ಹೇಳಬೇಕಾದರೆ, ವಾರ್ಡ್ ನಂಬರ್ 26ಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಿ ಸುಮಾರು 22 ದಿನಗಳಾಗಿವೆ. ಆ ವಾರ್ಡ್‌ಗೆ ಕುಡಿಯುವ ನೀರೇ ಇಲ್ಲ. ಅದೇ ರೀತಿಯಲ್ಲಿ ಝೋನ್ ನಂಬರ್ 11ರಲ್ಲಿ ವಾರ್ಡ್ ನಂಬರ್ 12, 13, 14, 26, 27 ಮತ್ತು 28 ಬರುತ್ತದೆ. ಇಲ್ಲಿಗೆ ಸುಮಾರು 8 ರಿಂದ 10 ದಿನಗಳಗೊಮ್ಮೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ ಎನ್ನುವ ಉತ್ತರವನ್ನು ನೀಡಲಾಗಿದೆ. ಆದರೆ, ಅಲ್ಲಿ 12 ದಿನಗಳಾದರೂ ನೀರು ಬರುವುದಿಲ್ಲ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ನಾನು ಗದಗ ಬೆಟಗೇರಿಯವನಾಗಿದ್ದೇನೆ. ಅಲ್ಲಿಯೇ ವಾಸಿಸುತ್ತಿದ್ದೇನೆ. ಆದ್ದರಿಂದ ಮಾನ್ಯ ಸಚಿವರು ಎಚ್ಚರಿಕೆಯಿಂದ ಉತ್ತರವನ್ನು ನೀಡಬೇಕಾಗಿದೆ. ಮಾನ್ಯ ಸಚಿವರಿಂದ ಅಧಿಕಾರಿಗಳು ತಪ್ಪು ಉತ್ತರವನ್ನು ಕೊಡಿಸುತ್ತಿದ್ದಾರೆ. ಇಂತಹ ತಪ್ಪು ಮಾಹಿತಿಯನ್ನು ಕೊಟ್ಟಿರುವಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಗದಗ-ಬೆಟಗೇರಿ ನಗರದ 24X7 ಕುಡಿಯುವ ನೀರಿನ ಯೋಜನೆಯನ್ನು ಮೆ॥ ಎಸ್.ಪಿ.ಎಂ.ಎಲ್. ಇನ್‌ಫ್ರಾ ಲಿ., ಅವರಿಗೆ ನೀಡಲಾಗಿದೆ. ಈ ಯೋಜನೆಯನ್ನು ಅವರಿಗೆ ಗುತ್ತಿಗೆ ನೀಡುವಂತಹ ಸಂದರ್ಭದಲ್ಲಿ 3 ವರ್ಷಗಳಲ್ಲಿ ಮುಕ್ತಾಯಗೊಳಿಸಬೇಕೆನ್ನುವ ಕರಾರು ವಿಧಿಸಲಾಗಿತ್ತು. ಆದರೆ, ಈ ಯೋಜನೆ ಪ್ರಾರಂಭವಾಗಿ ಇಲ್ಲಿಗೆ 8 ವರ್ಷಗಳು ಕಳೆದಿವೆ. ಆದರೂ ಸಹ ಸಂಪೂರ್ಣವಾಗಿ ಯೋಜನೆಯನ್ನು ಮುಕ್ತಾಯಗೊಳಿಸಿಲ್ಲ. ಸುಮಾರು 14 ಝೋನ್‌ಗಳ ಪೈಕಿ 12 ಝೋನ್‌ಗಳ ಕಾಮಗಾರಿಯನ್ನು ಮಾತ್ರ ಮುಕ್ತಾಯಗೊಳಿಸಿದ್ದಾರೆ. ಸುಮಾರು 5 ಓವರ್‌ಹೆಡ್ ಟ್ಯಾಂಕ್ ಕಟ್ಟಬೇಕಾಗಿತ್ತು. ಅದರಲ್ಲಿ 3 ಓವರ್‌ಹೆಡ್ ಟ್ಯಾಂಕ್‌ಗಳ ನಿರ್ಮಾಣ ಕಾರ್ಯವನ್ನು ಮುಕ್ತಾಯಗೊಳಿಸಲಾಗಿದೆ. ಉಳಿದಂತೆ 2 ಓವರ್‌ಹೆಡ್ ಟ್ಯಾಂಕ್‌ಗಳನ್ನು ಇನ್ನೂ ನಿರ್ಮಾಣ ಮಾಡಿಲ್ಲ. Valve ಅಳವಡಿಸಿಲ್ಲ. ಇನ್ನೂ ಸಾಕಷ್ಟು ಕೆಲಸ ಕಾರ್ಯಗಳು ಬಾಕಿ ಉಳಿದಿವೆ. ಮಾನ್ಯ ಸಚಿವರು ಗದಗ-ಬೆಟಗೇರಿಗೆ ಭೇಟಿ ನೀಡಿದ್ದಾರೆ. ಅಲ್ಲಿನ ಜನರ ಸಮಸ್ಯೆಗಳನ್ನು ನೋಡಿದ್ದಾರೆ. ಈ ಸದನದಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ

ಬಿ.ಸಿ.ಪಾಟೀಲ್‌ರವರು ಉಪಸ್ಥಿತರಿದ್ದಾರೆ. ಅವರು ಉಸ್ತುವಾರಿ ಸಚಿವರಾದ ಮೇಲೆ, ಗದಗ-ಬೆಟಗೇರಿ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆನ್ನುವುದು ಅವರ ಮೊದಲ ಆದ್ಯತೆಯಾಗಿತ್ತು. ಸಚಿವರಾದ ಮಾನ್ಯ ಸಿ.ಸಿ.ಪಾಟೀಲ್‌ರವರೂ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಇದೊಂದು ಜ್ವಲಂತ ಸಮಸ್ಯೆ ಆಗಿರುವುದರಿಂದ ದಯಮಾಡಿ ಇದರ ಬಗ್ಗೆ ಮಾತನಾಡಲು ತಾವು ನನಗೆ ಸಮಯಾವಕಾಶವನ್ನು ನೀಡಬೇಕಾಗಿದೆ ಎನ್ನುವುದು ನನ್ನ ಕೋರಿಕೆಯಾಗಿದೆ.

(ಮುಂದು)

**(1049) 20.12.2022 11.50: ಪಿಕೆ:ಎಕೆ**

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು):**

ಮಾನ್ಯ ಸಭಾಪತಿಯವರೇ, ಆ ಗುತ್ತಿಗೆದಾರ ಸರಿಯಾಗಿಲ್ಲ; ಆದುದರಿಂದಲೇ 10 ಸಲ ಎಕ್ಸ್‌ಟೆನ್‌ಷನ್ ಕೊಟ್ಟರು. ನಿಗದಿಪಡಿಸಿದ ಕೆಲಸ ಅಲ್ಲಿ ಆಗುತ್ತಿಲ್ಲ. ನಾನು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅವರೂ ಕೂಡ 3 ಸಲ ಸಭೆ ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ಎನ್ನುವುದನ್ನು ಮೊದಲು ಕೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಆ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕೆಂದು ನಿರ್ಣಯ ಕೈಗೊಂಡಿದ್ದಾರೆ. ನಿರ್ಣಯ ತೆಗೆದುಕೊಂಡು 3 ತಿಂಗಳಾಯಿತು; ಆದರೆ ಕ್ರಮ ಆಗಿಲ್ಲ. ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಇದು ಕುಡಿಯುವ ನೀರಿನ ಹಕ್ಕಿನ ಪ್ರಶ್ನೆಯಾಗಿದೆ. ನಾನು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅವರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ; 3 ಸಲ ಸಭೆ ಮಾಡಿದ್ದಾರೆ. ಮಾನ್ಯ ಕೃಷಿ ಸಚಿವರಾದ ಬಿ.ಸಿ.ಪಾಟೀಲ್‌ರವರು ಮತ್ತು ಮಾನ್ಯ ಸಿ.ಸಿ.ಪಾಟೀಲ್‌ರವರೂ ಕೂಡ ಸಭೆಗಳನ್ನು ಮಾಡಿದ್ದಾರೆ. ಈ ಸಮಸ್ಯೆಗೆ ಪರಿಹಾರ ಇದೆಯೋ ಇಲ್ಲವೋ? ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುತ್ತೀರೋ ಇಲ್ಲವೋ ತಿಳಿಸಬೇಕು.

**ಸಭಾಪತಿಯವರು:-** ನೀವೇ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೀದ್ದೀರಿ. ನಿಮ್ಮ ಪ್ರಶ್ನೆ ಏನು ಕೇಳಿ. ಮಾನ್ಯ ಮಂತ್ರಿಗಳೇ, ಮಾನ್ಯ ಸದಸ್ಯರು, 15-20 ದಿವಸಗಳಿಗೊಮ್ಮೆ ನೀರು ಬರುತ್ತಿದೆ ಎಂದೂ ಮತ್ತು 30 ತಿಂಗಳಲ್ಲಿ ಗುತ್ತಿಗೆದಾರ ಕೆಲಸ ಮುಗಿಸಬೇಕಿತ್ತು, ಆದರೆ 8 ವರ್ಷಗಳಾದರೂ ಪೂರ್ತಿ ಕೆಲಸ ಮುಗಿದಿಲ್ಲ. ಒಟ್ಟಿನಲ್ಲಿ ನಿರಂತರ ನೀರು ಸರಬರಾಜು ಆಗಬೇಕು ಮತ್ತು ವಹಿಸಿರುವ ಕೆಲಸ ಮುಗಿಯಬೇಕು ಎನ್ನುವುದರ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾರೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಸಚಿವನಾಗಿ ಬಂದ ಮೇಲೆ, ವಿಶೇಷವಾಗಿ ಗದಗಕ್ಕೆ 3 ಸಲ ಭೇಟಿ ಕೊಟ್ಟಿದ್ದೇನೆ. ಇದೇ ವಿಷಯದಲ್ಲಿ ಚರ್ಚೆ ಮಾಡಿ ಅವರಿಗೆ ಕಾಲಾವಕಾಶವನ್ನು ಕೊಟ್ಟಿದ್ದೆ. ಆದರೆ ಗುತ್ತಿಗೆದಾರರು ಎಲ್ಲೋ ಒಂದು ಕಡೆ ನಿರ್ಲಕ್ಷ್ಯ ಮಾಡಿಕೊಂಡೇ ಬಂದಿದ್ದಾರೆ. ಅವರನ್ನು ಟರ್ಮಿನೇಟ್ ಮಾಡಬೇಕು ಎಂದು ಹೈಪವರ್ ಕಮಿಟಿಗೆ ಈಗಾಗಲೇ ಶಿಫಾರಸ್ಸು ಮಾಡಿದ್ದೇವೆ. ಈಗ ನಾನು ಅಧಿಕಾರಿಗಳಿಗೆ ಯಾವುದೇ ಕಾರಣದಿಂದ ಇದು ವಿಳಂಬವಾಗಬಾರದು, ಸಾರ್ವಜನಿಕರಿಗೆ ಕುಡಿಯುವ ನೀರನ್ನು ಒದಗಿಸುವ ಕೆಲಸದಲ್ಲಿ ವ್ಯತ್ಯಾಸ ಆಗಬಾರದು, ಆ ನಿಟ್ಟಿನಲ್ಲಿ ಅಗತ್ಯವಾದ ಕ್ರಮ ಜರುಗಿಸಬೇಕೆಂದು ಬೆಳಗ್ಗೆ ಕೂಡ ಮೀಟಿಂಗ್ ಮಾಡಿದ್ದೇನೆ. ಮಾನ್ಯ ಸಂಕನೂರರವರು, ಮಾನ್ಯ ಸಿ.ಸಿ.ಪಾಟೀಲ್‌ರವರೂ ಜೊತೆಯಲ್ಲಿದ್ದರು. ಈ ಗುತ್ತಿಗೆದಾರರಿಂದ ಇವತ್ತು ಅನಾಹುತಗಳಾಗಿವೆ. ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತಿದ್ದೇವೆ. ಟರ್ಮಿನೇಟ್ ಮಾಡಿ, ಅವರನ್ನು ಕಪ್ಪುಪಟ್ಟಿಗೆ ಸೇರಿಸಿ ಎಂದು ಈಗಾಗಲೇ ನಿರ್ದೇಶನ ಕೊಟ್ಟಿದ್ದೇವೆ. ಇದು ಮಾನ್ಯ ಸಂಕನೂರ ಅವರಿಗೂ ಗೊತ್ತಿದೆ. ಇಲ್ಲಿ ತೊಂದರೆಯಾಗಿದೆ ನಿಜ, ಇಲ್ಲ ಎಂದು ನಾನು ಹೇಳುತ್ತಿಲ್ಲ. ನಾನು ಮತ್ತು ನಮ್ಮ ಎಂ.ಡಿ.ಯವರು ಕೂಡ ಅಲ್ಲಿಗೆ ಹೋಗಿ, ಅಲ್ಲೇ 2 ದಿವಸ ಕುಳಿತು ಚರ್ಚೆ ಮಾಡಿದ್ದೇವೆ. 1567 ಮನೆಗಳಿಗೆ ಸಂಪರ್ಕ ಕಲ್ಪಿಸಬೇಕು; ಸುಮಾರು 10 ಸಾವಿರ ಮನೆಗಳಿಗೆ ಏನು ಸಂಪರ್ಕ ಕಲ್ಪಿಸಿದ್ದೇವೆಯೋ ಆ ಸಂಬಂಧ ಕೆಲವು ರಿಪೇರಿ ಕೆಲಸ ಆಗಬೇಕಿದೆ. ಮೇಲುತೊಟ್ಟಿಗಳಿಗೆ ಸಂಬಂಧಪಟ್ಟಂತೆ ಫಿನಿಶಿಂಗ್ ವರ್ಕ್ ಇದೆ. ಇದನ್ನು ಬೇರೆಯವರಿಗೆ ಕೊಟ್ಟು ಮಾಡಿಸಿ ಎಂದು ನಾವು ಈಗಾಗಲೇ ನಿರ್ದೇಶನ ಕೊಟ್ಟಿದ್ದೇವೆ.

**ಸಭಾಪತಿಯವರು:-** ಆದಷ್ಟು ಬೇಗ ಕೆಲಸ ಮುಗಿಸಿ, ನಿರಂತರ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಸದನ ಮುಗಿದ ಮೇಲೆ ನಾನು ಮತ್ತೊಂದು ಬಾರಿ ಮಾನ್ಯ ಸದಸ್ಯರ ಜೊತೆ ವಿಶೇಷ ಸಭೆ ಮಾಡುತ್ತೇನೆ. ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟ ಗುತ್ತಿಗೆದಾರನನ್ನು ಟರ್ಮಿನೇಟ್ ಮಾಡಿ, ಬೇರೆಯವರಿಗೆ ಗುತ್ತಿಗೆ ಕೊಟ್ಟು ಸಮರ್ಪಕವಾಗಿ ನೀರು ಸರಬರಾಜು ಆಗುವಂತಹ ಕೆಲಸ ಮಾಡಿಸುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ನಗರಸಭೆಯ ಸದಸ್ಯರ ಮನೆ ಮುಂದೆ ಧರಣಿ ಮಾಡುತ್ತಿದ್ದಾರೆ; ಅವರ ಬಗ್ಗೆ ಟೀಕೆ-ಟಿಪ್ಪಣಿ ಮಾಡುತ್ತಿದ್ದಾರೆ. ಏನೇನು ಬೈಯುವುದು ಇದೆಯೋ ಆ ಎಲ್ಲಾ ಬೈಗಳನ್ನು ತಿಂದಿದ್ದಾರೆ. ನಗರ ಸಭಾ ಸದಸ್ಯರು, ನಾವು ಏಕಾದರೂ ಚುನಾವಣೆಗೆ ನಿಂತುಕೊಂಡೆವೋ, ಏಕಾದರೂ ನಗರ ಸಭೆಯ ಸದಸ್ಯರಾಗಿದ್ದೇವೆಯೋ ಎನ್ನುವ ಮಟ್ಟಿಗೆ ಯೋಚನೆ ಮಾಡುತ್ತಿದ್ದಾರೆ. ಆ ಜನ, ನೀವು ನೀರನ್ನಾದರೂ ಸರಬರಾಜು ಮಾಡಿ; ಇಲ್ಲವೇ ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ಅಲ್ಲಿ ಪರಿಸ್ಥಿತಿ ತುಂಬಾ ಉಲ್ಬಣವಾಗಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಈ ಸದನ ಮುಗಿದ ತಕ್ಷಣ ಮಾನ್ಯ ಸಂಕನೂರ ಅವರ ಜೊತೆ ಮತ್ತೊಂದು ಸಭೆ ಮಾಡುತ್ತೇನೆ. ಅಲ್ಲಿನ ಪುರಸಭೆಯ ಅಧ್ಯಕ್ಷರ ಜೊತೆ ನಾನು ಈಗಾಗಲೇ ಸಭೆ ಮಾಡಿದ್ದೇನೆ, ಮಾನ್ಯ ಸಂಕನೂರ ಅವರಿಗೆ ಅಲ್ಲಿನ ವಸ್ತು ಸ್ಥಿತಿ ಏನು ಎನ್ನುವುದು ಗೊತ್ತಿದೆ. 300 ಕಿ.ಮೀ. ಉದ್ದದ ಪೈಪ್ ಲೈನ್ ಮಾಡಬೇಕಾಗಿದ್ದುದು, 468 ಕಿ.ಮೀ.ಗೆ ವಿಸ್ತರಿಸಿದ್ದರು. ನಾನು ಆಗ ಸಚಿವನಾಗಿರಲಿಲ್ಲ. ಅಂದರೆ 168 ಕಿ.ಮಿ. ಹೆಚ್ಚುವರಿ ಪೈಪ್ ಲೈನ್ ಅಳವಡಿಸುವಂತಾದ ಕಾರಣ ವ್ಯತ್ಯಾಸಗಳಾಯಿತು. ಈಗ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ನೀವು ಅಧಿಕಾರದಲ್ಲಿರುವಾಗಲೇ ಈ ಕೆಲಸ ಮಾಡಿಸಬೇಕೆಂದು ಕೋರುತ್ತೇನೆ.

**ಪ್ರಶ್ನೆ ಸಂಖ್ಯೆ : 221**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಹಿಂದಿನ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಮಾನ್ಯ ಸಚಿವರು, ನಾನು ಎಲ್ಲರ ದುಡ್ಡನ್ನು ವಾಪಸ್ಸು ಕೊಡಿಸುವ ಕೆಲಸ ಮಾಡುತ್ತೇನೆ, ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅವರನ್ನೂ ಕರೆಸುತ್ತೇನೆ; ನಿಮ್ಮನ್ನು ಕರೆದು ಸಭೆ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಆದರೆ ಆ ಮೀಟಿಂಗ್ ಕೂಡ ಆಗಲಿಲ್ಲ; ದುಡ್ಡು ವಾಪಸ್ಸು ಕೊಡಿಸುವ ಕೆಲಸವೂ ಆಗಲಿಲ್ಲ. ಹಿಂದೆ, ರೂ. 80 ಕೋಟಿ ಅವ್ಯವಹಾರವಾಗಿದೆ ಎಂದು ಹೇಳಿದ್ದರು; ಇವತ್ತು ರೂ. 280 ಕೋಟಿ ಅವ್ಯವಹಾರ ಕಂಡು ಬಂದಿದೆ ಎಂದು ಹೇಳುತ್ತಿದ್ದಾರೆ. ಮತ್ತೆ, 729 ಜನರಿಗೆ ಸ್ವಲ್ಪ ದುಡ್ಡು ಹಿಂದಿರುಗಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ 4000 ಜನ ಡೆಪಾಸಿಟ್ ಇರಿಸಿದ್ದಾರೆ. ಈ 729 ಜನರನ್ನೇ ಹೇಗೆ ಮತ್ತು ಯಾವ ಮಾನದಂಡದ ಆಧಾರದ ಮೇಲೆ ಗುರುತಿಸಿ ಹಣ ಹಿಂದಿರುಗಿಸಿದ್ದೀರಿ ಎನ್ನುವುದು ಗೊತ್ತಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಪದೇ ಪದೇ ಏಕೆ ಸುಳ್ಳು ಹೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಬೆಂಗಳೂರಿನ ಬಸವನಗುಡಿಯಲ್ಲಿರುವಂತಹ ಸಹಕಾರ ಸಂಘಗಳು ಏನಿವೆ ಅವು ಬಹಳ ಕಷ್ಟದಲ್ಲಿವೆ. ಅಲ್ಲಿ ಡೆಪಾಸಿಟ್ ಇಟ್ಟಿರುವ ಜನ ಬಹಳ ಕಷ್ಟದಲ್ಲಿದ್ದಾರೆ. ಇದು ಮಾನ್ಯ ಸಚಿವರಿಗೂ ಗೊತ್ತು. ಇವರಲ್ಲಿ ಪ್ರಭಾವಿ ವ್ಯಕ್ತಿಗಳಿದ್ದಾರೆ ಎನ್ನುವುದೂ ಕೂಡ ಅವರಿಗೆ ಗೊತ್ತಿದೆ. ಅವರನ್ನು ರಕ್ಷಣೆ ಮಾಡುವುದಕ್ಕೆ ಇವರು ಪ್ರತಿ ಮೂರು ತಿಂಗಳು ಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದಾರೆ. ಹೋದ ಸಲ, ನಿಮ್ಮನ್ನು ಸಭೆ ಕರೆಸುತ್ತೇನೆ, ಕೆಪಿಐಡಿಯವರನ್ನು ಕರೆಸುತ್ತೇನೆ, ದುಡ್ಡು ವಾಪಸ್ಸು ಕೊಡಿಸುತ್ತೇನೆ ಎಂದು ಹೇಳಿದ್ದರು. ಈ ದಿಸೆಯಲ್ಲಿ ಯಾವುದೇ ಮೀಟಿಂಗ್ ಆಗಲಿಲ್ಲ. ದಯವಿಟ್ಟು ಮಂತ್ರಿಗಳು ಕುರಿತು ಮಾತನಾಡಿದರೆ ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಇದಕ್ಕೆ ಸಂಬಂಧಪಟ್ಟಂತೆ 3-4 ಸಭೆಗಳನ್ನು ಮಾಡಿದ್ದೇವೆ. ಒಂದು ಸಭೆಯಲ್ಲಿ ಮಾನ್ಯ ಯು.ಬಿ.ವೆಂಕಟೇಶ್‌ರವರು, ಸ್ಥಳೀಯ ಶಾಸಕರು ಮತ್ತು ಎಂ.ಪಿ.ಅವರುಗಳೂ ಇದ್ದರು.

**ಶ್ರೀ ಯು.ಬಿ.ವೆಂಕಟೇಶ್:-** ಇಲ್ಲಾ, ನಾನು ಆ ಸಭೆಯಲ್ಲಿ ಇರಲಿಲ್ಲ. ನಾನು ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ಗೆ ಸಂಬಂಧಪಟ್ಟಂತೆ ಕರೆದ ಸಭೆಯಲ್ಲಿ ಇದ್ದೆ. ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಎಸ್.ಟಿ.ಸೋಮಶೇಖರ್:-** ನಾನು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿಲ್ಲ. ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ಗೆ ಸಂಬಂಧಪಟ್ಟಂತೆ ನಡೆದ ಸಭೆಯಲ್ಲಿ ಮಾನ್ಯ ಸದಸ್ಯರು ಇದ್ದರು. ಆಗ ವಶಿಷ್ಠ ಸಹಕಾರಿ ಬ್ಯಾಂಕ್‌ಗೆ ಸಂಬಂಧಪಟ್ಟಂತೆಯೂ ಚರ್ಚೆ ಆಯಿತು. ಮಾನ್ಯ ಸಭಾಪತಿಯವರೇ, ನಮ್ಮ ಇತಿಮಿತಿಯೊಳಗೆ ಅವರ ಮೇಲೆ ಏನು ಕ್ರಮ ಕೈಗೊಳ್ಳಬೇಕೋ ಅಂದರೆ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನು ಡಿಸ್ಕ್ವಾಲಿಫೈ ಮಾಡುವುದಕ್ಕೆ ಸಂಬಂಧಪಟ್ಟಂತೆ ಪ್ರಿಲಿಮಿನರಿ ಮಾಡಿದ್ದೇವೆ. ಎರಡನೆಯದಾಗಿ, ಇದನ್ನು ಸಿಐಡಿಗೆ ವಹಿಸುವ ಮುಖಾಂತರ ಅವರ ಒಟ್ಟು ಆಸ್ತಿಯನ್ನು ಸೀಜ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಂಡಿದ್ದೇವೆ. ಈಗ ಸುಮಾರು 27 ಕೋಟಿ. ರೂ.ಗಳನ್ನು ರಿಕವರಿ ಮಾಡಲಾಗಿದೆ. ಆ ರೂ. 27 ಕೋಟಿಗಳನ್ನು 729 ಠೇವಣಿದಾರರಿದ್ದರೋ ಅವರಿಗೆ ಮರುಪಾವತಿ ಮಾಡಲಾಗಿದೆ. ಈ ನಿಟ್ಟಿನಲ್ಲಿ ತನಿಖೆ ಹೆಚ್ಚು ಮಾಡಬೇಕೆಂದು ಅಸಿಸ್ಟೆಂಟ್ ಕಮಿಷನರ್ ಅವರ ನೇತೃತ್ವದಲ್ಲಿ ಸಕ್ಷಮ ಪ್ರಾಧಿಕಾರ ಮಾಡುವುದಕ್ಕೆ ಹೊರಟಿದ್ದೇವೆ. 2013-14 ರಿಂದ 2020ನೇ ಸಾಲಿನ ಆಡಿಟ್ ರಿಪೋರ್ಟ್‌ಗಳನ್ನು ಮರುಪರಿಶೀಲನೆ ಮಾಡುವುದಕ್ಕೆ ಹೊರಟಿದ್ದೇವೆ. ಆ ಸಂದರ್ಭದಲ್ಲಿ ಇವು ಆಡಿಟ್‌ಗೆ ಒಳಪಟ್ಟಿರಲಿಲ್ಲ. ಆದರೆ ಈಗ ಇವು ಅಂತಿಮ ಹಂತಕ್ಕೆ ತಲುಪಿದೆ. ತಾತ್ಕಾಲಿಕವಾಗಿ ರೂ. 280 ಕೋಟಿ ಚೀಟಿಂಗ್ ಆಗಿದೆ ಎನ್ನುವುದು ಸದ್ಯದ ಮಾಹಿತಿಯಾಗಿದೆ. ಆರೋಪಿಗಳ ಸುಮಾರು 10 ಸ್ಥಿರಾಸ್ತಿಗಳ ಮಾಹಿತಿಯನ್ನು ಶೇಖರಣೆ ಮಾಡಿ ಅದನ್ನು ಹರಾಜು ಮಾಡುವ ನಿಟ್ಟಿನಲ್ಲಿ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುತ್ತಿದ್ದೇವೆ. ಸರ್ಕಾರ ಈ ದಿಸೆಯಲ್ಲಿ ಏನೂ ಮಾಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿಲ್ಲ ಎನ್ನುವ ವಿಷಯವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸಹಕಾರ ಇಲಾಖೆಗೆ ಸಂಬಂಧಪಟ್ಟ ವ್ಯಾಪ್ತಿ ಎಷ್ಟು ಎನ್ನುವುದು ತಮಗೂ ಗೊತ್ತಿದೆ. ನಮ್ಮ ಇಲಾಖೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನು ಕಾನೂನು ಪ್ರಕಾರ ಕೈಗೊಳ್ಳುವುದಕ್ಕೆ

ಸಂಬಂಧಪಟ್ಟಂತೆ ಸೂಕ್ತ ಕ್ರಮ ವಹಿಸಿದ್ದೇವೆ; ರೆಕವರಿ ಮಾಡುವುದಕ್ಕೆ ಸಂಬಂಧಪಟ್ಟಂತೆ ರೆವಿನ್ಯೂ ಸೆಕ್ರೆಟರಿಯವರ ಜೊತೆ ಮಾತನಾಡಿದ್ದೇವೆ. ಬೆಂಗಳೂರು ಸೌತ್‌ನ ಅಸಿಸ್ಟೆಂಟ್ ಕಮಿಷನರ್‌ರವರು ಏನು ಸಕ್ಷಮ ಪ್ರಾಧಿಕಾರವಾಗಿದ್ದಾರೋ ಅವರಿಗೆ ರೆಕವರಿ ಮಾಡುವ ಕುರಿತು ಸರ್ಕಾರದಿಂದ ಆದೇಶ ಆಗಬೇಕಿದೆ ಮತ್ತು ನಾವು ನಿಟ್ಟಿನಲ್ಲೂ ಪ್ರೊಸೆಸ್ ಮಾಡುತ್ತಿದ್ದೇವೆ. ಆ ಆದೇಶ ಆದಮೇಲೆ ಇನ್ನೂ ರೂ.280 ಏನು ಬಾಕಿ ಇದೆಯೋ ಅದನ್ನು ಹಿಂದಿರುಗಿಸಲು, ಆರೋಪಿಗಳ ಪ್ರಾಪರ್ಟಿ ಸೀಜ್ ಮಾಡಿ, ಹರಾಜು ಮಾಡಿ ಆ ಮೊತ್ತವನ್ನು ವಾಪಸ್ಸು ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾವು ಪ್ರತಿ ಸಲ ಪ್ರಶ್ನೆ ಹಾಕಿದಾಗ ಏನೋ ಒಂದು ಉತ್ತರ ಕೊಡುತ್ತಾರೆ, ಆದರೆ ಮತ್ತೆ ಮೂರು ತಿಂಗಳುಗಳವರೆಗೆ ಯಾವುದೇ ಕ್ರಮ ಆಗುವುದಿಲ್ಲ. ಇದು ನಿರಂತರವಾಗಿ ನಡೆಯುತ್ತಿದೆ. ಯಾರು ಫಲಾನುಭವಿಗಳಾದ್ದಾರೋ ಇವರು ಪ್ರಭಾವಿಗಳಾಗಿದ್ದಾರೆ; ಸರ್ಕಾರ ಇವರ ಜೊತೆ ಇದೆ ಎನ್ನುವ ಮಾತನ್ನು ಹೇಳದೆ. ಯಾರು ಬಾಕಿದಾರರು ಇದ್ದಾರೋ; ಸುಸ್ತಿದಾರರು ಇದ್ದಾರೋ ಅವರ ಪಟ್ಟಿಯನ್ನೇಕೆ ಬಿಡುಗಡೆ ಮಾಡುತ್ತಿಲ್ಲ? ಮೊನ್ನೆ ನಾನು ಪೇಪರ್‌ನಲ್ಲಿ ಒಂದು ವಿಷಯ ಓದಿದೆ. ಬಾಗಲಕೋಟೆಯ ಒಂದು ಡಿಸಿಸಿ ಬ್ಯಾಂಕ್‌ನಲ್ಲಿ ರೂ. 12 ಕೋಟಿಗಳ ಅವ್ಯವಹಾರವಾಗಿದೆ ಎಂದು ಅದರ ತನಿಖೆಯನ್ನು ಸಿ.ಬಿ.ಐ.ಗೆ ವಹಿಸುತ್ತಾರೆ. ಆದರೆ ಇಲ್ಲಿ ರೂ. 280 ಕೋಟಿಗಳ ಅವ್ಯವಹಾರವಾಗಿದೆ, ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ರೂ.2500 ಕೋಟಿಗಳ ಅವ್ಯವಹಾರವಾಗಿದ್ದರೂ ಅದನ್ನು ಸಿ.ಬಿ.ಐ.ಗೆ ಕೊಡುತ್ತಿಲ್ಲ. ಈ ಕುರಿತು ನಾನು ನಿಮ್ಮಲ್ಲಿ ಎಷ್ಟು ಸಲ ಕೇಳಿಕೊಳ್ಳಬೇಕು? ಮೀಟಿಂಗ್ ಕರೆಯುತ್ತೇವೆ ಎಂದು ಹೇಳಿ ಆ ಕೆಲಸವನ್ನು ಮಾಡಲಿಲ್ಲ. ಈ ಕುರಿತು ಮಾತನಾಡಿದರೆ, ನಾವು ಸದನಕ್ಕೆ ಸುಳ್ಳು ಮಾಹಿತಿ ಕೊಡುವುದಿಲ್ಲ ಎಂದು ಹೇಳುತ್ತೀರಿ. ರೂ. 12 ಕೋಟಿಯ ಅವ್ಯವಹಾರವಾದಾಗ ಅದನ್ನು ಸಿ.ಬಿ.ಐ.ಗೆ ವಹಿಸುತ್ತೀರಿ. ಆದರೆ, ರೂ. 280 ಕೋಟಿ ಮತ್ತು ರೂ. 2500 ಕೋಟಿಗಳ ಅವ್ಯವಹಾರವಾದಾಗ ಅದನ್ನೇಕೆ ಸಿ.ಬಿ.ಐ.ಗೆ ಕೊಡುವುದಿಲ್ಲ? ನಿಮ್ಮ ಕೈಯನ್ನು ಯಾರಾದರೂ ಕಟ್ಟಿ ಹಾಕಿದ್ದಾರೆಯೇ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಡಿ.ಸಿ.ಸಿ. ಬ್ಯಾಂಕ್‌ನ ಆಡಳಿತ ಮಂಡಳಿಯವರು, ಸುಮಾರು 12.75 ಕೋಟಿ ಚೀಟಿಂಗ್ ಆಗಿದೆ ಎಂದು ಅವರೇ ಠರಾವು ಮಾಡಿ, ಇದನ್ನು ಸಿ.ಬಿ.ಐ. ತನಿಖೆಗೆ ವಹಿಸಿ ಎಂದು ಬರೆದು ಕಳುಹಿಸಿದ್ದರು.

(ಮುಂದು)

**(1050) 20-12-2022 12.00 ಡಿಎಸ್-ಆರ್ ಎನ್**

**ಶ್ರೀ ಎಸ್.ಟಿ.ಸೋಮಶೇಖರ್ (ಮುಂದು):**

ಇದಕ್ಕೆ preliminary action ತೆಗೆದುಕೊಂಡಿದ್ದೇವೆ. ನಾವು ಯಾರನ್ನು ರಕ್ಷಣೆ ಮಾಡುವುದಕ್ಕೆ ಹೋಗಿಲ್ಲ. ಪ್ರಭಾವಿ ವ್ಯಕ್ತಿಗಳು ಯಾರೇ ಇರಲಿ, ಅದು cheating. ಅವರಿಗೆ ನಿಯಮದ ಪ್ರಕಾರವೇ ಅನರ್ಹರನ್ನಾಗಿ ಮಾಡಿದ್ದೇವೆ. 280 ಕೋಟಿ ರೂಪಾಯಿಗಳಲ್ಲಿ ಯಾರ್ಯಾರು ಸಾಲ ತೆಗೆದುಕೊಂಡಿದ್ದಾರೆ ಅವರೆಲ್ಲರನ್ನು ಪತ್ತೆ ಮಾಡಿದ್ದಾರೆ. ಅವುಗಳನ್ನೆಲ್ಲಾ CID ತನಿಖೆ ಮಾಡುವುದಕ್ಕೆ ಕೊಟ್ಟಿದ್ದಾರೆ. CID ಯವರು ಹತ್ತು ಪ್ರಾಪರ್ಟಿಯನ್ನು ಸೀಜ್ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಮೂವ್ ಮಾಡಿದ್ದಾರೆ. ಅದಕ್ಕೆ ಸಕ್ಷಮ ಪ್ರಾಧಿಕಾರವನ್ನು ಮಾಡಿ ಅಸಿಸ್ಟೆಂಟ್ ಕಮೀಷನರ್‌ರವರನ್ನು ಮುಖ್ಯಸ್ಥರನ್ನಾಗಿ ಮಾಡಿದ್ದೇವೆ. ಅವರು ವಿಚಾರಣೆ ಮಾಡಿ ಏನೇನು ಹೇಳಿದ್ದಾರೆ ಅವೆಲ್ಲವನ್ನು ರಿಕವರಿ ಮಾಡುತ್ತಿದ್ದೇವೆ. ಅದರಲ್ಲಿ powerful or weak ಅದು ಯಾವುದು ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ಈಗ ಸಿಬಿಐ ಗೆ ಕೊಡಿ. ಬಾಗಲಕೋಟೆಯ ಆಡಳಿತ ಮಂಡಲಿಯವರು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈಗ ಇದನ್ನೆಲ್ಲಾ ಡಿಸ್‌ಮಿಸ್ ಮಾಡಿದ್ದಾರೆ. ಈಗ ಮಾನ್ಯ ಸಚಿವರ ಕೈಯಲ್ಲೇ ಇದೆ. ಇದನ್ನು takeover ಮಾಡಿ ಸಿಬಿಐ ಗೆ ಕೊಡಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಕೆಲವು ಪ್ರಕರಣ CID and ED (Directorate of Enforcement) ಗೆ ಕೊಟ್ಟಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು CID ಗೆ ಕೊಟ್ಟಿದ್ದಾರೆ. ಅಲ್ಲಿ ಸಿಬ್ಬಂದಿಗಳೇ ಇಲ್ಲದೆ ಪ್ರಕರಣಗಳು ಮುಂದಕ್ಕೆ ಹೋಗುತ್ತಿಲ್ಲ. ಇದನ್ನು ನಾವು ನೋಡುತ್ತಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, CBI and ED ಸಂಸ್ಥೆಗಳೇನಿವೆ ಅವು ಕೇವಲ ವಿರೋಧಪಕ್ಷದವರ ವಿರುದ್ದ ತನಿಖೆ ಮಾಡುವುದಕ್ಕಷ್ಟೆ ಇವೆಯೇ ಹೊರತು ಬೇರೆ ಯಾವುದೇ ಸಂಘ-ಸಂಸ್ಥೆಗಳ ವಿರುದ್ಧ ಅಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಅವು independent ಸಂಸ್ಥೆಗಳು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು 12 ಕೋಟಿ ರೂಪಾಯಿಗಳನ್ನು ಕೊಟ್ಟಾಗ ಬಹಳ ಸಂತೋಷವಾಯಿತು. ಮಾನ್ಯ ಸಚಿವರನ್ನು ಸನ್ಮಾನ ಮಾಡುತ್ತೇವೆ. ಇವೆರಡನ್ನು ಮಾನ್ಯ ಸಚಿವರು ಸಿಬಿಐ ಗೆ ಕೊಟ್ಟುಬಿಡಲಿ. ನಾವು ಮಾನ್ಯ ಸಚಿವರನ್ನು ಕೇಳುವ ಪ್ರಶ್ನೆಯೇ ಇರುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ತನಿಖೆಯಲ್ಲಿ CID powerful ಇದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, CID ಯಲ್ಲಿ ಸಿಬ್ಬಂದಿಗಳೇ ಇಲ್ಲ. ಪೊಲೀಸ್‌ನವರಿಗೆ ಶೇಕಡ 50 ರಷ್ಟು ಸಿಬ್ಬಂದಿಗಳೇ ಇಲ್ಲ. ನಾನು CID ಕಛೇರಿಗೆ ಹೋಗಿದ್ದೆ, ಅಲ್ಲಿ ಸಿಬ್ಬಂದಿಗಳೇ ಇಲ್ಲ. ಆ ಕಡತವನ್ನು ಇವತ್ತು ತೆಗೆದರೆ, ಇನ್ನು ಮೂರು ತಿಂಗಳಿಗೆ ತೆಗೆಯುತ್ತಾರೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾನೇ ನಾಲ್ಕು ಸಭೆಗಳನ್ನು ಮಾಡಿದ್ದೇನೆ. ನಾವು ಸಹಕಾರ ಸಂಘದ ರಿಜಿಸ್ಟ್ರಾರ್‌ರವರು, ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘದ ಆಡಳಿತ ಮಂಡಲಿಯವರೆಲ್ಲರೂ CID ಅಧಿಕಾರಿಗಳ ಜೊತೆಯಲ್ಲಿ ಸಭೆ ಮಾಡಿ Instruction ಕೊಟ್ಟಿದ್ದೇವೆ. CID ಯವರು ರಿಕವರಿ ಮಾಡಬೇಕಾದರೆ ಅಕಸ್ಮಾತ್ ದಾಖಲೆಗಳನ್ನು ಕೊಡದಿದ್ದರೆ ಇಷ್ಟು ದಿವಸಗಳೊಳಗೆ ದಾಖಲೆಯನ್ನು ವಾಪಸ್ ಕೊಡುತ್ತಾರೆ, ನೀವು ಹಣ ವಾಪಸ್

ಮಾಡಿ ಎಂದು ಸೂಚನೆಯನ್ನು ಕೊಟ್ಟಿದ್ದೇವೆ. ಇವರು ಹೇಳಿದ ಹಾಗೆ ಯಾರನ್ನು ರಕ್ಷಣೆ ಮಾಡುವಂತಹ ಅವಶ್ಯಕತೆ ಇಲ್ಲ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಇದು ಪ್ರಶ್ನೋತ್ತರ ವೇಳೆ. ಪ್ರಶ್ನೋತ್ತರಕ್ಕೆ ಸಮಯವನ್ನು ನಿಗದಿ ಮಾಡಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಪ್ರತಿ ಸಲ ನಾವು ಪ್ರಶ್ನೆಯನ್ನು ಕೇಳುತ್ತಿರುತ್ತೇವೆ, ಅವರು ಉತ್ತರ ಕೊಡದಿದ್ದರೆ ಹೇಗೆ? ಈ ರೀತಿಯಾದರೆ ನಾನು ಸದನದ ಬಾವಿಗೆ ಹೋಗಬೇಕಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಯಾರಿಗೂ ರಕ್ಷಣೆ ಮಾಡುತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿರುವುದು ಸತ್ಯ. ಆದರೆ ಎಲ್ಲರಿಗೂ ಟೋಪಿ ಹಾಕಿರುವವರು ರಾಜರೋಷವಾಗಿ ಬೆಂಗಳೂರಿನಲ್ಲಿ ಓಡಾಡುತ್ತಿದ್ದಾರೆ. ಅವರಿಗೆ ಯಾರು ರಕ್ಷಣೆ ಕೊಡುತ್ತಿದ್ದಾರೆ? ಜನಸಾಮಾನ್ಯರು ಯಾವುದೋ ನಂಬಿಕೆ ಮೇಲೆ ಈ ಸೊಸೈಟಿಗಳಲ್ಲಿ ಹಣವನ್ನು ಇಟ್ಟಿರುತ್ತಾರೆ. ನಾನು ಕಳೆದ ಸಲವೂ ಹೇಳಿದ್ದೇನೆ. ಬಹಳ ಜನರು ಹಣ ಇಟ್ಟು ಇವತ್ತು 2500 ಕೋಟಿ ರೂಪಾಯಿಗಳವರೆಗೆ ಹೋಗಿದೆ. ಅವರು ರಾಜರೋಷವಾಗಿ ಓಡಾಡುತ್ತಿದ್ದಾರೆ. ಅವರ ಹತ್ತಿರ ಯಾರು ಮಾತನಾಡುವುದಿಲ್ಲ. ಅವರು ಬಂದರೆ ವಿವಿಐಪಿ ಟ್ರೀಟ್‌ಮೆಂಟ್ ಕೊಡುತ್ತಿದ್ದಾರೆ. ಆದ್ದರಿಂದ ಸಿಬಿಐ ತನಿಖೆಗಾದರೂ ಕೊಡಿ ಅಥವಾ ಬೇರೆ ಇನ್ನೇನಾದರೂ ರೀತಿಯಲ್ಲಿ ಅವರಿಗೆ ಶಿಕ್ಷೆಯಾಗುವಂತಹ ರೀತಿಯಲ್ಲಿ ಮಾಡಿ. ನಮಗೆ ಬುದ್ಧಿ ಬಂದಾಗಿನಿಂದಲೂ CID ತನಿಖೆ ಮಾಡುವುದನ್ನು ನೋಡಿದ್ದೇವೆ. ಅವರು ಯಾವ ಪ್ರಕರಣವನ್ನು ಅಂತ್ಯಕ್ಕೆ ತೆಗೆದುಕೊಂಡು ಹೋಗಿಲ್ಲ. ಆದ್ದರಿಂದ ನಮ್ಮ ಸದಸ್ಯರು ಸಿಬಿಐ ತನಿಖೆಗೆ ಕೊಡಬೇಕೆಂದು ಹೇಳಿದ್ದಾರೆ, ತಾವು ಮಾನ್ಯ ಸಚಿವರಿಗೆ ನಿರ್ದೇಶನವನ್ನು ಕೊಡುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾವು ಪ್ರಾಥಮಿಕ ಹಂತದಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕು ಅವೆಲ್ಲವನ್ನು ತೆಗೆದುಕೊಂಡಿದ್ದೇವೆ. ಈ ಪ್ರಕರಣ ಹನುಮಂತ

ನಗರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುತ್ತದೆ. ಅವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನೆಲ್ಲಾ ಹಾಕಿದ್ದೇವೆ. CID ತನಿಖೆಗೆ ಈಗಾಗಲೇ ಹಸ್ತಾಂತರ ಮಾಡಿ ತನಿಖೆ ನಡೆಯುತ್ತಿದೆ. ನಾವು CID ಅಧಿಕಾರಿಗಳ ಜೊತೆಯಲ್ಲಿ ಸುಮಾರು ಸಭೆಗಳನ್ನು ಮಾಡಿದ್ದೇವೆ. ನಮಗೇನಾದರೂ ವ್ಯತ್ಯಾಸ ಕಂಡು ಬಂದರೆ, CID ಯವರು ಸರಿಯಾಗಿ ತನಿಖೆ ಮಾಡುತ್ತಿಲ್ಲವೆಂದು ಕಂಡುಬಂದಾಗ ಮಾತ್ರ ಬೇರೆ ಕ್ರಮ ತೆಗೆದುಕೊಳ್ಳುವಂಥದ್ದಾಗುತ್ತದೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ,…..

**ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ಕುಳಿತುಕೊಳ್ಳಿ. I am not allowed. Hon'ble Minister is coming to conclude.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, CID ಯವರು powerful ಇದ್ದಾರೆ. ಅವರು ಆಸಕ್ತಿಯನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ನಾವು ಕೂಡ ಪ್ರಾಥಮಿಕ ಹಂತದ ಸಭೆಯನ್ನು ಮಾಡುತ್ತಿದ್ದೇವೆ. ಅಸಿಸ್ಟೆಂಟ್ ಕಮೀಷನರ್‌ರವರ ನೇತೃತ್ವದಲ್ಲಿ ಸಕ್ಷಮ ಪ್ರಾಧಿಕಾರವನ್ನು ಕೂಡ ಮಾಡುತ್ತಿದ್ದೇವೆ. ಈಗ ಕಂದಾಯ ಕಾರ್ಯದರ್ಶಿಗಳಿಗೆ ಹೋಗಿದೆ. ಅದರಲ್ಲಿ ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ್‌ಗಳು, ಇವರೆಲ್ಲರೂ ಇದ್ದಾರೆ. ಇದಕ್ಕೋಸ್ಕರವೇ ಒಂದು ಟೀಮ್‌ನ್ನು ಮಾಡುತ್ತಿದ್ದೇವೆ. ಇದು ಆಗಲಿಲ್ಲವೆಂದರೆ ಬೇರೆ ಮಾಡತಕ್ಕಂಥದ್ದನ್ನು ಮಾಡಿದ್ದೇವೆ. ನೂರಕ್ಕೆ ನೂರು ಪ್ರಾಮಾಣಿಕವಾಗಿ ರಿಕವರಿ ಮಾಡಬೇಕು, ಯಾರು ಡೆಪಾಸಿಟ್ ಮಾಡಿರುತ್ತಾರೆ ಅವರಿಗೆ ಮರುಪಾವತಿ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈ ಘಟನೆ ನಡೆದು ಮೂರು ವರ್ಷಗಳಾಗಿವೆ. ಅದರಲ್ಲಿರುವಂತಹ ಹಿರಿಯ ನಾಯಕರೆಲ್ಲರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬೀದಿಗೆ ಬಂದಿದ್ದಾರೆ. ಮೂರೂವರೆ ಸಾವಿರ ಕೋಟಿ ರೂಪಾಯಿಗಳ ಹಗರಣವಾಗಿದೆ ಎಂದು ಜಗಜ್ಜಾಹೀರಾದರೂ ಕೂಡ ಏಕೆ ಈ ರೀತಿ ಮಾಡುತ್ತಿದ್ದಾರೆ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮೂರೂವರೆ ಸಾವಿರ ಕೋಟಿ ರೂಪಾಯಿ ಹಗರಣ ಎಲ್ಲಿ ಆಗಿದೆ? ಸುಮ್ಮನೆ ಏಕೆ misguide ಮಾಡುತ್ತಿದ್ದೀರಿ?

(ಗೊಂದಲ)

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ವಶಿಷ್ಠ ಕ್ರೆಡಿಟ್ ಸೌಹಾರ್ದ ಬ್ಯಾಂಕ್ ಆಗಲಿ, ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಆಗಲಿ,.....

(ಗೊಂದಲ)

**ಸಭಾಪತಿಯವರು:-** ಈಗ ವಶಿಷ್ಠ ಕ್ರೆಡಿಟ್ ಸೌಹಾರ್ದ ಬ್ಯಾಂಕ್ ಬಗ್ಗೆ ಪ್ರಶ್ನೆ ಇರುವಂಥದ್ದು, ಇದರಲ್ಲಿ ರಾಘವೇಂದ್ರ ಬ್ಯಾಂಕ್‌ನ್ನು ದಯವಿಟ್ಟು ಅಡ್ಡ ತರಬೇಡಿ. ಇದು ಪ್ರಶ್ನೋತ್ತರ ಅವಧಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಸಿಐಡಿ ತನಿಖೆಗೆ ಕೊಟ್ಟು ಸುಮ್ಮನಾಗಿಬಿಡುವುದೇ? ಅದಕ್ಕೆ ಸಿಬಿಐ ತನಿಖೆಗೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ, ಕೋಟ್ಯಂತರ ರೂಪಾಯಿಗಳನ್ನು ನೂರಾರು ಬ್ಯಾಂಕ್‌ಗಳಲ್ಲಿ ಡೆಪಾಸಿಟ್ ಇಟ್ಟಿರುತ್ತಾರೆ. ಮೂರೂವರೆ ಸಾವಿರ ಕೋಟಿ ರೂಪಾಯಿಗಳು ಚೀಟಿಂಗ್ ಆಗಿದೆ ಎಂದರೆ ನಾಳೆ ಡೆಪಾಸಿಟ್ ಇಟ್ಟಿರುವ ಜನಗಳ ಗತಿ ಏನು? ಎರಡು ಬ್ಯಾಂಕ್‌ಗಳಲ್ಲಿ ಅವ್ಯವಹಾರವಾಗಿದೆ, ನಾನು ಇಲ್ಲ ಎಂದು ಹೇಳುತ್ತಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ,.....

**ಸಭಾಪತಿಯವರು:-** ಮಾನ್ಯ ಶರವಣರವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಪ್ರಶ್ನೆ ಕೇಳುತ್ತಿದ್ದಾರೆ. He is capable to ask the question. ನೀವು ಕುಳಿತುಕೊಳ್ಳಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ಸರಿಯಾದ ಮಾಹಿತಿಯನ್ನು ಹೇಳಬೇಕು. ಸುಮ್ಮನೆ ಮೂರೂವರೆ ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿ ಇರುವ ಬ್ಯಾಂಕ್‌ಗಳಿಗೆಲ್ಲಾ ಏಕೆ ತೊಂದರೆ ಮಾಡುತ್ತಾರೆ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೋಪ ಮಾಡಿಕೊಳ್ಳಬಾರದು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಕೋಪ ಅಲ್ಲ. ಸದನದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ಎಲ್ಲಾ 260 ಸಹಕಾರ ಸಂಘಗಳೇನು ಇರುತ್ತವೆ ಅಲ್ಲಿ ಸಾಲ ತೆಗೆದುಕೊಂಡು ವಿತ್‌ಡ್ರಾ ಮಾಡುವುದಕ್ಕೆ ಕ್ಯೂ ನಿಲ್ಲುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಸಭೆ ಕರೆಯುತ್ತೇನೆ, ಎಲ್ಲರಿಗೂ ಹಣ ವಾಪಸ್ ಕೊಡಿಸುತ್ತೇನೆಂದು ಸೆಪ್ಟೆಂಬರ್ 13ನೇ ತಾರೀಖಿನಂದು ಸದನದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ನನ್ನ ಸಂದೇಹವೇನೆಂದರೆ, 29 ಕೋಟಿ ರೂಪಾಯಿಗಳನ್ನು 729 ಜನರಿಗೆ ಕೊಟ್ಟಿದ್ದಾರಲ್ಲಾ 4500 ಜನರಲ್ಲಿ ಫಲಾನುಭವಿಗಳನ್ನು ಹೇಗೆ ಕಂಡುಹಿಡಿದಿದ್ದಾರೆ? ಅವರು ಯಾರು ಪುಣ್ಯಾತ್ಮರು, ಇವರು ಯಾರು ಪಾಪಾತ್ಮರು? ಎಲ್ಲರಿಗೂ ಸಮಾನವಾಗಿ ಹೋಗಬೇಕಾಗಿತ್ತು, ಕೇವಲ 700 ಜನರಿಗೆ ಹಣ ಏಕೆ ಹೋಯಿತು? ಎಷ್ಟೇ ಹಣವನ್ನು ಸಂಗ್ರಹ ಮಾಡಿರಲಿ, Proportionately, ಎಷ್ಟೆಷ್ಟು ಇಟ್ಟಿರುತ್ತಾರೆ ಅದರ ಪ್ರಕಾರವಾಗಿ ಎಲ್ಲರಿಗೂ ಹತ್ತು ರೂಪಾಯಿ, ನೂರು ರೂಪಾಯಿ ಬರಲಿ ಅವರಿಗೆ ಹೋಗಬೇಕಾಗಿತ್ತು. ಮಾನ್ಯ ಸಚಿವರು ಕೋಪ ಮಾಡಿಕೊಳ್ಳಬಾರದು. ಇದು ಕೊನೆಯ ಅಧಿವೇಶನವಾಗಿದೆ. ಮುಂದೆ ಅಧಿವೇಶನ ನಡೆಯುತ್ತದೆಯೋ ಇಲ್ಲವೋ, ಅವರು ಮುಂದೆ ಬರುತ್ತಾರೆಯೋ ಏನೋ ಗೊತ್ತಿಲ್ಲ. ಅವರಿಗೆ ಜನರ ಪಾಪ ತಟ್ಟುವುದು ಬೇಡ. ಬಹಳ ಜನ ಅಯ್ಯೋ ಎನ್ನುತ್ತಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಅಧಿವೇಶನ ನಡೆಯುವಾಗಲೇ ತಕ್ಷಣ ಸಭೆಯನ್ನು ಕರೆದು ಆ ಸಭೆಗೆ ನನ್ನನ್ನು ಕರೆದು, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿರಿ. ದಯವಿಟ್ಟು ಏನಾದರೂ ಪರಿಹಾರವನ್ನು ಕಂಡುಹಿಡಿಯಿರಿ ಎಂದು ಅವರ ಪಾದಗಳಿಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಅವರೆಲ್ಲರೂ ಬಹಳ ಬಡವರು. ಅವರಿಗೆ ಮಾತ್ರೆ ತೆಗೆದುಕೊಳ್ಳುವುದಕ್ಕೆ ಹಣವಿಲ್ಲ. ಜನರು ಬಂದು ಅಳುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಸರ್ಕಾರದ ಜವಾಬ್ದಾರಿಯಾಗಿದೆ. ಅವರ ಪಾದಕ್ಕೆ ಏಕೆ ಬೀಳುತ್ತಾರೆ? Let him tell.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ... **(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ.ವೇಂಕಟೇಶ್‌ರವರೇ, ಅವರು ಮಾತು ಮುಗಿಸಲಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾವು ತನಿಖೆ ಮಾಡುವುದಕ್ಕೆ ಕೊಡುತ್ತಲೇ ಇದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇವತ್ತು ಸಿಬಿಐ ತನಿಖೆಗೆ ವಹಿಸಿದ್ದೇವೆ ಎಂದು ಆರ್ಡರ್ ಮಾಡಿಬಿಡಿ ನಾವು ಅವರನ್ನು ಕೇಳುವುದೇ ಇಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅವರು ಹೈಕೋರ್ಟ್‌ಗೆ ಹೋಗಿ ಸ್ಟೇ ಮಾಡಿಸುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇವತ್ತು ಘೋಷಣೆ ಮಾಡಿ, ನಾವು ಏನು ಮಾಡಬೇಕೋ ಅದನ್ನು ಮಾಡಿಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ನೀವು ಕೇಳಿದ್ದೀರಿ, ಮಾನ್ಯ ಸಚಿವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇಲಾಖೆಯವರು ಸಮರ್ಥರಿದ್ದಾರೆ. ಅಧಿಕಾರಿಗಳು ಸಮರ್ಥರಿದ್ದಾರೆ. ಯಾರು ಕೂಡ ಚೀಟ್ ಮಾಡಿರತಕ್ಕಂಥವರಿಗೆ ಬೆಂಬಲ ಕೊಡುತ್ತಿಲ್ಲ. ನೂರಕ್ಕೆ ನೂರು ಅವರನ್ನು ಬಲಿ ಹಾಕಬೇಕೆನ್ನುವ ಉದ್ದೇಶ ಇದೆ. ಕೆಲವು ಪ್ರಕರಣ ಇಡಿ, CID ತನಿಖೆಗೆ ಕೊಡಲಾಗಿದೆ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಲಾಗಿದೆ. ಅವರ ಪಾಪರ್ಟಿಯನ್ನು ಸೀಜ್ ಮಾಡಲಾಗಿದೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದ ಹಾಗೆ ಯಾರು ರಾಜರೋಷವಾಗಿ ಓಡಾಡುತ್ತಿಲ್ಲ. ಅವರ ಕುಟುಂಬದ ಸಮಾರಂಭದಲ್ಲೇ ಅವರು ಮುಖ ಎತ್ತಿಕೊಂಡು ಓಡಾಡಲು ಆಗುತ್ತಿಲ್ಲ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಲಾಗಿದೆ, CID, ಇ.ಡಿ ತನಿಖೆಗೆ ಕೊಟ್ಟಿದ್ದೇವೆ. ಏನೆಲ್ಲಾ ನಿಯಮದ ಪ್ರಕಾರ ಮಾಡಬಹುದೋ ಅದನ್ನು ಶೇಕಡ ನೂರರಷ್ಟು

ಮಾಡಿದ್ದೇವೆ. ಯಾರು ರಾಜರೋಷವಾಗಿ ಓಡಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರ ಪ್ರಾಪರ್ಟಿ ಸೀಜ್ ಮಾಡಿಸುತ್ತಿದ್ದೇವೆ, ಸೇಲ್ ಮಾಡಿಸುತ್ತಿದ್ದೇವೆ, ರಿಕವರಿ ಮಾಡಿ ಯಾರು ಠೇವಣಿದಾರರು ಇದ್ದಾರೆ ಅವರಿಗೆ ಕೊಡುತ್ತಿದ್ದೇವೆ. ಇಲ್ಲ ಯಾವುದು ಮುಚ್ಚುಮರೆ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾನು ಹಗುರವಾಗಿ ತೆಗೆದುಕೊಳ್ಳುತ್ತಿಲ್ಲ. ಇರುವುದನ್ನು ಹೇಳುತ್ತಿದ್ದೇನೆ ಅಷ್ಟೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಸಹಕಾರ ಕ್ಷೇತ್ರದಲ್ಲಿರುವಂತಹ ದಿಗ್ಗಜರು. ಅವರು ದೇಶದ ತುಂಬಾ ಓಡಾಡುತ್ತಿದ್ದಾರೆ. ನಾವು ಎಲ್ಲಿ ಹೋದರೂ ಅವರು ಸಿಗುತ್ತಿರುತ್ತಾರೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಏನು ಹೇಳಿದ್ದಾರೆಂದರೆ, ಬಡವರು ನಿವೃತ್ತಿಯಾದ ಮೇಲೆ ಬಡ್ಡಿ ಬರುತ್ತದೆಂದು ತೆಗೆದುಕೊಂಡು ಹೋಗಿ ಠೇವಣಿ ಇಟ್ಟಿರುವಂತಹ ಹಣ. ಮಾನ್ಯ ಶರವಣರವರು ಹೇಳಿದ ಹಾಗೆ ಕೆಲವರು ಆತ್ಮಹತ್ಯೆ ಕೂಡ ಮಾಡಿಕೊಂಡಿದ್ದಾರೆ. ಇನ್ನೇನು ಬೇಕಾಗಿದೆ? ರಾಜರೋಷವಾಗಿ ಓಡಾಡುತ್ತಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ಅವರು ಆರಾಮವಾಗಿ ದಿನವೂ ಕಬ್ಬನ್ ಪಾರ್ಕ್, ಲಾಲ್‌ಬಾಗ್‌ನಲ್ಲಿ ಯಾವ ರೀತಿ ವಾಕ್ ಮಾಡುತ್ತಿರುತ್ತಾರೆ ಎಂದು ಮಾನ್ಯ ಸಚಿವರು ಬಂದು ನೋಡಲಿ. ಯಾರು ಆ ರೀತಿ ವಾಕ್ ಮಾಡುವುದಿಲ್ಲ, ಆ ರೀತಿ ವಾಕ್ ಮಾಡುತ್ತಿರುತ್ತಾರೆ. ಸಿಬಿಐ ತನಿಖೆಗೆ ಕೊಟ್ಟರೆ ಅವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುತ್ತಾರೆಂದು ಮಾನ್ಯ ಸಚಿವರಿಗೆ ಮೊದಲೇ ಗೊತ್ತಿದೆ. ಅಷ್ಟೆಲ್ಲಾ ಮಾಹಿತಿ ಇರುವವರು ಸಿಬಿಐ ತನಿಖೆಗೆ ಕೊಡಿ, ಏನಾಗುತ್ತದೆಂದು ನೋಡೋಣ. ನ್ಯಾಯ ಸಿಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಿಬಿಡೋಣ. ಆದ್ದರಿಂದ ಇದು ಸಮಾಜದಲ್ಲಿ ಏನು ಆದಾಯ ಇಲ್ಲದಿರತಕ್ಕಂಥವರು ನಂಬಿಕೆ ಮೇಲೆ ಠೇವಣಿಯನ್ನಿಟ್ಟಿದ್ದಾರೆ. ಆದರೆ ನಂಬಿಕೆ ದ್ರೋಹವಾಗುತ್ತಿದೆ.

**(ಮುಂದು)**

**(1051) 20/12/2022/ಎಸ್‌ಪಿಆರ್-ಆರ್‌ಎನ್/12:10** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):**

ಜಮೆ ಮಾಡಿದ ಠೇವಣಿಯನ್ನು ಎಲ್ಲರೂ ಹಿಂಪಡೆಯುತ್ತಿದ್ದಾರೆಂದು ಶ್ರೀ ಟಿ.ಎ.ಶರವಣರವರು ತಿಳಿಸಿದರು. ಜನರಿಗೆ ಗೊತ್ತಿಲ್ಲವೆಂದು ಸರ್ಕಾರವು ತಿಳಿಯಬಾರದು. ನಂಬಿಕೆಯನ್ನು ಉಳಿಸಿಕೊಳ್ಳಲು ಇದರ ತನಿಖೆಯನ್ನು ದಯಮಾಡಿ ಸರ್ಕಾರವು ಸಿ.ಬಿ.ಐ. ಸಂಸ್ಥೆಗೆ ವಹಿಸಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ.

**ಶ್ರೀ ಎಸ್.ಟಿ.ಸೋಮಶೇಖರ:-** ಮಾನ್ಯ ಸಭಾಪತಿಯವರೇ, ಸದಸ್ಯರು ಹೇಳುವುದು ಸರಿ ಇದೆ. ಇಲ್ಲಿ ನನಗೆ ಕೋಪವಿಲ್ಲ.

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಅವರಿಗೆ ಅವಕಾಶ ಮಾಡಿಕೊಡಲಿ; ಈ ಬಗ್ಗೆ ಮಂತ್ರಿಗಳು ಹೇಳಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಎಷ್ಟು ಚರ್ಚೆಯನ್ನು ಮಾಡುತ್ತಾರೆ?

**ಸಭಾಪತಿಯವರು:-** ಮಂತ್ರಿಗಳೇ, ಇದನ್ನು ಮುಗಿಸಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರ ತೆಗೆದುಕೊಳ್ಳುವ ಎಲ್ಲಾ ರೀತಿಯ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಪ್ರಸಕ್ತ ಅಧಿವೇಶನ ಪೂರ್ಣಗೊಂಡ ನಂತರ, ಇದೇ ವಿಚಾರವಾಗಿ ಮತ್ತೊಂದು ಸಭೆಯನ್ನು ಮಾಡಿ ಅದಕ್ಕೆ ಸದಸ್ಯರನ್ನೂ ಆಹ್ವಾನಿಸೋಣ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಅಂದರೆ, 19ನೇ ಸೆಪ್ಟೆಂಬರ್ ದಿನಾಂಕದಂದು ಇದೇ ವಿಷಯವನ್ನು ಹೇಳಲಾಗಿತ್ತು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದಾದ ನಂತರ ಏನೇನು ಕ್ರಮಗಳಾಗಿವೆ ಎನ್ನುವುದು ಸದಸ್ಯರಿಗೆ ತಿಳಿದಿದೆಯೇ? ಏನೇನು ಕ್ರಮಗಳನ್ನು ಹಂತ ಹಂತವಾಗಿ ತೆಗೆದುಕೊಂಡಿದ್ದೇವೆ ಎನ್ನುವುದರ ಬಗ್ಗೆ ಈಗ ಎಲ್ಲಾ ಮಾಹಿತಿಯನ್ನು ನಾವು ನೀಡುತ್ತಿದ್ದೇವೆ. ಏಕಾಏಕಿಯಾಗಿ ಒಂದೇ ಬಾರಿಗೆ ಅವರನ್ನು ನೇಣಿಗೆ ಏರಿಸುವುದಕ್ಕಾಗುತ್ತದೆಯೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವ ಆಸ್ತಿಗಳನ್ನು ಜಪ್ತಿಗೊಳಿಸಿ, ಹಣ ನೀಡಬೇಕಾಗಿರುವವರಿಗೆ ಹಣವನ್ನು ನೀಡಿ; ಅವರನ್ನು ನೇಣಿಗೆ ಹಾಕಿ ಎಂದು ನಾವು ಹೇಳಿದ್ದೇವೆಯೇ? ನಿಮ್ಮ ಕೈಯ್ಯಲ್ಲಿ ಆಗದಿದ್ದನ್ನು ಸಿ.ಬಿ.ಐ. ಸಂಸ್ಥೆಗೆ ವಹಿಸಿ ಎಂದು ನಾನು ಹೇಳುತ್ತಿದ್ದೇನೆ; ಅವರನ್ನು ಮರ್ಡರ್ ಮಾಡಬೇಡಿ ಅಷ್ಟೇ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸಿ.ಓ.ಡಿ. ಸಂಸ್ಥೆಯು ಪ್ರಬಲವಾಗಿದೆ. ಸಿ.ಓ.ಡಿ. ಸಂಸ್ಥೆಯಿಂದ ತನಿಖೆಯು ಆಗಲಿಲ್ಲವೆಂದಾದರೆ, ಆಗ ತನಿಖೆಯನ್ನು ಸಿ.ಬಿ.ಐ. ಸಂಸ್ಥೆಗೆ ವಹಿಸಲು ನಮ್ಮ ಯಾವುದೇ ಅಭ್ಯಂತರವಿಲ್ಲ. ಅವರ ರಕ್ಷಣೆಯ ಮಾತು ಇಲ್ಲವೇ ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ಆದಷ್ಟು ಬೇಗ ಮಾಡುವಂತೆ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಪ್ರ.ಸಂ. 166 + 215**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಉತ್ತರವು ಬಂದಿದೆ. ನಾನು ವಿಶೇಷವಾಗಿ ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ ನೀಡಲಾಗುತ್ತಿರುವ ಹಣದ ಮಾಹಿತಿಯನ್ನು ಕೇಳಿದ್ದು, ಸರ್ಕಾರವು ಪ್ರತಿ ಟನ್ ಕಬ್ಬಿಗೆ 3,050/- ರೂಪಾಯಿಗಳಷ್ಟು ದರ ನಿಗದಿ ಮಾಡಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಆದರೆ ಬೇರೆ ರಾಜ್ಯಗಳಲ್ಲಿ, ಅಂದರೆ ನೆರೆಯ ಆಂಧ್ರಪ್ರದೇಶದಲ್ಲಿ 3,200/- ರೂಪಾಯಿಗಳನ್ನು, ತಮಿಳುನಾಡಿನಲ್ಲಿ 3,150/- ರೂಪಾಯಿಗಳನ್ನು, ಉತ್ತರಪ್ರದೇಶದಲ್ಲಿ 3,500/- ರೂಪಾಯಿಗಳನ್ನು, ಹರಿಯಾಣದಲ್ಲಿ 3,700/- ರೂಪಾಯಿಗಳನ್ನು, ಪಂಜಾಬ್ ರಾಜ್ಯದಲ್ಲಿ 3,800/- ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರದ ನಿಯಮಾನುಸಾರ ರಾಜ್ಯ ಸರ್ಕಾರವು ದರವನ್ನು ನಿಗದಿಪಡಿಸಿದೆ ಎಂದು ಸರ್ಕಾರವು ತಿಳಿಸಿದೆ. ನಮ್ಮ ದೇಶದ ಬೇರೆ ರಾಜ್ಯಗಳಲ್ಲಿ ನಮ್ಮ ರಾಜ್ಯಕ್ಕಿಂತಲೂ ಕಡಿಮೆ ಇಳುವರಿ ಇದ್ದರೂ ಸಹ ಬಹಳಷ್ಟು ದರವನ್ನು ನಿಗದಿಪಡಿಸಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಹೆಚ್ಚಿನ ದರವನ್ನು ಏಕೆ ನಿಗದಿಪಡಿಸುತ್ತಿಲ್ಲ ಎನ್ನುವುದು ನನ್ನ ಮೊದಲನೇ ಪ್ರಶ್ನೆಯಾಗಿದೆ.

ಸಕ್ಕರೆ ಸಾಗಾಣಿಕೆಯ ವೆಚ್ಚವನ್ನು ರೈತರಿಗೆ ಸರ್ಕಾರವು ನೀಡುತ್ತಿದೆ. ಒಂದು ಲೋಡ್ ಕಬ್ಬಿಗೆ ರೈತರಿಗೆ 200–300 ರೂಪಾಯಿಗಳವರೆಗೆ ನಷ್ಟವುಂಟಾಗುತ್ತಿದೆ. ಕಬ್ಬು ಸಾಗಾಣಿಕೆಯಲ್ಲಿ ಸರ್ಕಾರವು ಹಣ ನೀಡುತ್ತಿದೆ, ಆದರೆ, ಒಟ್ಟಾರೆಯಾಗಿ 2,100 ಕೋಟಿ ರೂಪಾಯಿಗಳಷ್ಟು ಹಣವು ರೈತರಿಗೆ ಹಾಗೂ ಸಕ್ಕರೆ ಬೆಳೆಗಾರರಿಗೆ ಹಾನಿಯುಂಟಾಗುತ್ತಿದೆ. ಡೀಸೆಲ್ ಮತ್ತು ಪೆಟ್ರೋಲ್ ದರಗಳು ಬಹಳಷ್ಟು ಜಾಸ್ತಿಯಾಗಿರುವುದರಿಂದ, ಬಹಳಷ್ಟು ನಷ್ಟವು ಕಬ್ಬು ಬೆಳೆಗಾರರಿಗೆ ಆಗುತ್ತಿದೆ; ಇದು ನನ್ನ ಎರಡನೇ ಪ್ರಶ್ನೆಯಾಗಿದೆ.

ಕಬ್ಬು ಬೆಳೆಗಾರರು ಈಗಾಗಲೇ ನ್ಯಾಯಾಲಯದ ಮೊರೆ ಹೋಗಿದ್ದಾರೆಂದು ಸರ್ಕಾರವು ತಿಳಿಸಿದೆ. ಆದರೆ, ನ್ಯಾಯಾಲಯಕ್ಕೆ ಹೋಗುವ ಮೊದಲು ಸರ್ಕಾರವೇ ಅವರೊಂದಿಗೆ ಮಾತನಾಡಿ, ಬೇರೆ ರಾಜ್ಯಗಳಲ್ಲಿ ಹೆಚ್ಚಿನ ದರವನ್ನು ನಿಗದಿಪಡಿಸಿರುವಂತೆಯೇ, ನಮ್ಮ ರಾಜ್ಯ ಸರ್ಕಾರವೂ ಸಹ ಹೆಚ್ಚಿನ ದರವನ್ನು ನಿಗದಿಪಡಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಶಂಕರ ಬ.ಪಾಟೀಲ್ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಸದಸ್ಯರು ಇವತ್ತಿನ ದಿವಸ ನಮ್ಮ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಪ್ರತಿ ಟನ್ ಸಕ್ಕರೆಗೆ ಹೆಚ್ಚಿನ ದರವನ್ನು ನಿಗದಿಪಡಿಸಿದ್ದಾರೆ, ಆದರೆ, ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಮೊತ್ತವನ್ನು ನಿಗದಿಪಡಿಸಿರುವ ಬಗ್ಗೆ ಮಾತನಾಡಿದ್ದಾರೆ. ನಮ್ಮ ರಾಜ್ಯವನ್ನು ಮತ್ತು ಬೇರೆ ರಾಜ್ಯವನ್ನು ಹೋಲಿಸಿದಾಗ, ಬೇರೆ ರಾಜ್ಯಗಳಲ್ಲಿ SAP (State Advised Price) ಕಾನೂನು ಇದೆ. ಆದರೆ, ನಮ್ಮ ರಾಜ್ಯದಲ್ಲಿ ಎಸ್.ಎ.ಪಿ. ಕಾನೂನನ್ನು ಇವತ್ತಿನವರೆಗೂ ಸಹ ನಾವು ಜಾರಿಗೊಳಿಸಿಲ್ಲ. ಇವತ್ತಿನ ದಿವಸ ಇಡೀ ದೇಶದಲ್ಲಿಯೇ ಕಬ್ಬು ಬೆಳೆಯು ಎರಡನೇ ವಾಣಿಜ್ಯ ಬೆಳೆ ಎಂಬುದಾಗಿ ಘೋಷಣೆಯಾಗಿದೆ. ಇವತ್ತಿನ ದಿವಸ ಲಾಭದಾಯಕ ಬೆಳೆಗಳಲ್ಲಿ ಕಬ್ಬು ಬೆಳೆಯೂ ಸಹ ಒಂದಾಗಿದೆ ಎನ್ನುವುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಇವತ್ತಿನ ದಿವಸ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು FRP (Fair and Remunerative Price) ನಿಗದಿಪಡಿಸಲಾಗಿದೆ. ಇದರ ಆಧಾರದನ್ವಯ ಇವತ್ತಿನ ದಿವಸ ಅನೇಕ ಕಾರ್ಖಾನೆಗಳು ಇದಕ್ಕಿಂತಲೂ ಹೆಚ್ಚಿನ ಹಣವನ್ನು ನೀಡುತ್ತಿದ್ದಾರೆ.

ರಾಜ್ಯದ 92 ಕಾರ್ಖಾನೆಗಳ ಪೈಕಿ ಈಗಾಗಲೇ 73 ಕಾರ್ಖಾನೆಗಳು ಕಬ್ಬನ್ನು ನುರಿಸುವ ಕೆಲಸವನ್ನು ಪ್ರಾರಂಭಿಸಿವೆ. ಕಳೆದ ವರ್ಷಕ್ಕಿಂತಲೂ ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ನುರಿಸುವ ಅವಕಾಶವು ನಮ್ಮ ರಾಜ್ಯಕ್ಕೆ ದೊರೆತಿದೆ. ಕಳೆದ ವರ್ಷ 500 ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಕಬ್ಬನ್ನು ನುರಿಸುವ ಕೆಲಸವು ನಮ್ಮ ರಾಜ್ಯದಲ್ಲಾಗಿದೆ. ದೇಶದ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಹೊರತುಪಡಿಸಿದರೆ, ನಮ್ಮ ರಾಜ್ಯವೇ ಮೂರನೇ ಸ್ಥಾನದಲ್ಲಿದೆ. ನಮ್ಮ ರಾಜ್ಯದಲ್ಲಿನ ಕಬ್ಬಿನ ಕಾರ್ಖಾನೆಗಳು ನಷ್ಟದ ಹಾದಿಯಲ್ಲಿ ಹೋಗುತ್ತಿದ್ದವು. ಆದರೆ,

ಇವತ್ತಿನ ದಿವಸ ಇವುಗಳು ಲಾಭದಾಯಕವಾಗಿವೆ. ಎಥನಾಲ್ ಬಂದ ನಂತರ ಈ ರೀತಿಯ ಬದಲಾವಣೆಗಳಾಗಿವೆ. ಈಗಾಗಲೇ 41 ಅರ್ಜಿಗಳು ನಮ್ಮ ಕಛೇರಿಯಲ್ಲಿವೆ. ಇವತ್ತಿನ ದಿವಸ ಕಬ್ಬು ಬೆಳೆಯು ಲಾಭದಾಯಕವಾಗಿದೆ. ರೈತರಿಗೂ ಸಹ ಇದರ ಪಾಲುದಾರಿಕೆ ಹೋಗಬೇಕು ಎನ್ನುವ ದೃಷ್ಟಿಯಿಂದ ರಾಜ್ಯದಲ್ಲಿಯೇ ಮೊದಲನೇ ಬಾರಿಗೆ ಕಬ್ಬಿನಿಂದಾಗುವ ಉಪ ಉತ್ಪನ್ನಗಳಿಗೂ ಸಂಬಂಧಪಟ್ಟಂತೆ, ಅನೇಕ ತಜ್ಞರ ಸಮಿತಿಯನ್ನು ರಚಿಸಿ, ಆ ಮೂಲಕ ರೈತರಿಗೂ ಸಹ 50/- ರೂಪಾಯಿಗಳಷ್ಟು ಪಾಲುದಾರಿಕೆಯನ್ನು ನೀಡಬೇಕೆನ್ನುವ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಅಂದರೆ ಉಪ ಉತ್ಪನ್ನಗಳಿಗೂ ಸಹ ಲಾಭವನ್ನು ನೀಡುವ ಬಹು ದೊಡ್ಡ ತೀರ್ಮಾನವನ್ನು ನಾವಿಂದು ತೆಗೆದುಕೊಂಡಿದ್ದೇವೆ. ಇದರ ಮೊದಲನೇ ಕಂತಿನಲ್ಲಿ ಸುಮಾರು 202 ಕೋಟಿ ರೂಪಾಯಿಗಳಷ್ಟು ಹಣವನ್ನು ರೈತರ ಖಾತೆಗಳಿಗೆ ಬಿಡುಗಡೆ ಮಾಡುವ ಬಗ್ಗೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ನ್ಯಾಯಯುತ ಮತ್ತು ಲಾಭದಾಯಕ ಬೆಲೆಗಿಂತ ಒಂದು ರೂಪಾಯಿಯಷ್ಟೂ ಹೆಚ್ಚಿನ ಮೊತ್ತವನ್ನು ನೀಡಲು ಸಾಧ್ಯವಿಲ್ಲವೆನ್ನುವ ಅಂಶದ ಬಗ್ಗೆ ದಕ್ಷಿಣ ಭಾರತದ ಸಕ್ಕರೆ ಕಾರ್ಖಾನೆಗಳ ಒಕ್ಕೂಟದವರು ಇವತ್ತಿನ ದಿವಸ ನ್ಯಾಯಾಲಯದ ಮೊರೆ ಹೋಗಿದ್ದಾರೆ. ರಾಜ್ಯದ ಬೀದರ್, ಕಲಬುರಗಿ, ಬಾಗಲಕೋಟೆ, ಬೆಳಗಾವಿ, ಮಂಡ್ಯ, ಮೈಸೂರು ಅಥವಾ ಕಾರವಾರ ಜಿಲ್ಲೆಗಳಿರಬಹುದು, ಈ ಎಲ್ಲಾ ಭಾಗಗಳಲ್ಲಿಯೂ ಸಹ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಮೇಲೆ 150-200 ರೂಪಾಯಿಗಳಷ್ಟು ಹೆಚ್ಚಿನ ಮೊತ್ತವನ್ನು ನೀಡುವ ಪ್ರಾದೇಶಿಕವಾರು ತೀರ್ಮಾನವನ್ನು ಆಯಾ ಕಾರ್ಖಾನೆಯ ಮಾಲೀಕರುಗಳು ತೆಗೆದುಕೊಂಡಿದ್ದಾರೆ. ಕಬ್ಬನ್ನು ಬೆಳೆಯುವ ರೈತರ ಹಿತವನ್ನು ಕಾಪಾಡಬೇಕೆನ್ನುವ ಸಲಹೆಯನ್ನು ನಾವು ಸಕ್ಕರೆ ಕಾರ್ಖಾನೆಯ ಮಾಲೀಕರುಗಳಿಗೆ ನೀಡಿದಾಗ, ನಮ್ಮ ರಾಜ್ಯದ ಅನೇಕ ಸಕ್ಕರೆ ಕಾರ್ಖಾನೆಯ ಮಾಲೀಕರುಗಳು ನ್ಯಾಯಯುತ ಮತ್ತು ಲಾಭದಾಯಕ ಬೆಲೆಗಿಂತಲೂ ಹೆಚ್ಚಿನ ಮೊತ್ತವನ್ನು ನೀಡುವ ಕೆಲಸಗಳನ್ನು ಮಾಡಿದ್ದಾರೆ.

ಕಟಾವು ಮತ್ತು ಸಾಗಾಣಿಕೆ ವೆಚ್ಚದಲ್ಲಿಯೂ ಸಹ ರೈತರಿಗೆ ಮೋಸವಾಗುತ್ತಿದೆ ಎಂಬ ಬಗ್ಗೆ ನಮ್ಮ ರಾಜ್ಯದಲ್ಲಿ ಬಹಳ ವರ್ಷಗಳಿಂದ ಕೂಗು ಇತ್ತು. ಯಾವುದೇ ಒಂದು ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ ಅಥವಾ ದಾಳಿ ಮಾಡಿ ತೂಕದಲ್ಲಿ ವ್ಯತ್ಯಾಸವಾಗಿದೆ ಎನ್ನುವುದನ್ನು ಪರಿಶೀಲನೆ ಮಾಡುವುದು

ನಮ್ಮ ರಾಜ್ಯದಲ್ಲಿ ಈ ಹಿಂದೆ ಯಾವತ್ತೂ ಸಹ ಆಗಿರಲಿಲ್ಲ. ಆದರೆ, ಮೊದಲನೇ ಬಾರಿಗೆ ನಮ್ಮ ಮುಖ್ಯಮಂತ್ರಿಗಳು ನೀಡಿದ ಸೂಚನೆಯ ಮೇರೆಗೆ, ಇವತ್ತಿನ ದಿವಸ ನಾವು ಪಕ್ಷಾತೀತವಾಗಿ ರೈತರ ಹಿತವನ್ನು ಕಾಪಾಡುವ ಒಂದೇ ದೃಷ್ಟಿಯನ್ನಿಟ್ಟುಕೊಂಡು, ಇವತ್ತಿನ ದಿವಸ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮೇಲೆ ಈಗಾಗಲೇ ಒಂದು ದಾಳಿ ಮಾಡಿ, ಅನೇಕ ಅಂಕಿ-ಅಂಶಗಳನ್ನು ಪಡೆದುಕೊಳ್ಳಲಾಗಿದೆ. ಮೊದಲನೇ ಹಂತದಲ್ಲಿ ದಾಳಿ ಮಾಡಲಾಗಿದೆ. ಅದನ್ನು ಪರಿಶೀಲಿಸಿ, ತಪ್ಪಿತಸ್ಥರು ಅಂದರೆ, ರೈತರಿಗೆ ತೂಕದಲ್ಲಿ ಮೋಸಮಾಡುತ್ತಿರುವವರ ವಿರುದ್ಧ ಉಗ್ರ ಮತ್ತು ಕಠಿಣ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ನಿರ್ಣಯ ಮಾಡಿ, ಸರ್ಕಾರವು ನಿಯಮಗಳನ್ನು ಮಾಡಿದೆ. ಉಪ ಉತ್ಪನ್ನಗಳ ವಿಚಾರದಲ್ಲಿ ಸಮಿತಿಯನ್ನು ಮಾಡಿ, ದೇಶದಲ್ಲಿನ ವಸಂತದಾದ ಸಕ್ಕರೆ ಸಂಸ್ಥೆ (VSI) ಅಥವಾ ಖಾನ್‌ಪುರದಲ್ಲಿನ ಸಂಸ್ಥೆಗಳಿರಬಹುದು, ಇವುಗಳೆಲ್ಲವನ್ನೂ ಆಧಾರವಾಗಿಟ್ಟುಕೊಂಡು ಇವತ್ತಿನ ದಿಸವ ಉಪ ಉತ್ಪನ್ನಗಳ ವಿಚಾರದಲ್ಲಿ ಯಾವ ರೀತಿಯಾಗಿ ಲಾಭವನ್ನು ನೀಡಬೇಕು ಎನ್ನುವುದರ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೇವೆ. ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಕಟಾವು ಮತ್ತು ಸಾಗಾಣಿಕೆ ವೆಚ್ಚ (HnT Charges) ವಿಚಾರದ ಬಗ್ಗೆಯೂ ಸಹ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಈ ಬಗ್ಗೆ ಎರಡು ತಿಂಗಳೊಳಗಾಗಿ ಸಮಿತಿಯನ್ನು ರಚಿಸಲಾಗುವುದು. ಏಕೆಂದರೆ, ಇವತ್ತಿನ ದಿವಸ ಸುಖಾಸುಮ್ಮನೆ ಯಾವುದಾದರೂ ಆದೇಶವನ್ನು ಹೊರಡಿಸಿದರೆ, ಕಾರ್ಖಾನೆಗಳ ಮಾಲೀಕರುಗಳು ನ್ಯಾಯಾಲಯದ ಮೊರೆ ಹೋಗುತ್ತಾರೆ. ನಮ್ಮ ರಾಜ್ಯದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳ ಜೊತೆಗೆ ಖಾಸಗಿ ಸಕ್ಕರೆ ಕಾರ್ಖಾನೆಗಳೂ ಸಹ ಬಹಳ ಹೆಚ್ಚಿನ ಸಂಖ್ಯೆಯಲ್ಲಿವೆ. ನಾವು ಯಾವುದಾದರೊಂದು ಆದೇಶವನ್ನು ಮಾಡಿದರೆ, ಅವರುಗಳು ತಕ್ಷಣವೇ ನ್ಯಾಯಾಲಯದ ಮೊರೆ ಹೋಗುವ ಅವಕಾಶಗಳಿರುತ್ತವೆ.

**(ಮುಂದು)**

**(1052)20-12-2022/12-20/ಬಿಕೆಪಿ-ವಿಕೆ**

**ಶ್ರೀ ಶಂಕರ್ ಬ. ಪಾಟೀಲ್ ಮುನೇನಕೊಪ್ಪ (ಮುಂದು):**

Harvesting and Transportation ವೆಚ್ಚದ ವಿಚಾರದಲ್ಲಿ ನಾವು ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿಯ ಆಧಾರದ ಮೇಲೆ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಇದು ಜಂಟಿ ಪ್ರಶ್ನೆಯಾಗಿರುವುದರಿಂದ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್‌ರವರು ಇದರ ಬಗ್ಗೆ ಮಾನ್ಯ ಸಚಿವರಿಗೆ ಏನಾದರೂ ಕೇಳುವುದು ಇದ್ದರೆ ಕೇಳಬಹುದು.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗಳ ಪೈಕಿ ಕೆಲವು ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾನು ನಿರ್ಧಿಷ್ಟವಾಗಿ ಕೇಳುವುದೇನೆಂದರೆ, ಒಂದು ಮೆಟ್ರಿಕ್ ಟನ್ ಕಬ್ಬಿನಲ್ಲಿ ಎಷ್ಟು ಸಕ್ಕರೆ ಉತ್ಪತ್ತಿಯಾಗುತ್ತದೆ, ಮತ್ತೆ ಒಂದು ಟನ್ ಕಬ್ಬಿನಲ್ಲಿ ಎಷ್ಟು ಎಥನಾಲ್ ಲೀಟರ್ಸ್ ಬರುತ್ತದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರ ಕೊಟ್ಟಿಲ್ಲ.

**ಶ್ರೀ ಶಂಕರ್ ಬ. ಪಾಟೀಲ್ ಮುನೇನಕೊಪ್ಪ:-** ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ತಾವು ಅದಕ್ಕೆ ಉತ್ತರವನ್ನು ಕೊಟ್ಟಿಲ್ಲ. ಅದು ಎಲ್ಲಿದೆ ಎಂದು ಹೇಳಿ. ಮಾನ್ಯ ಸಭಾಪತಿಯವರೆ, ಇಲ್ಲಿ ಮಾನ್ಯ ಸಚಿವರು ಏನು ಮಾಹಿತಿಯನ್ನು ಕೊಟ್ಟಿದ್ದಾರೆ. 73 ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರಿಯುತ್ತಿವೆ. ಇದರ ಪೈಕಿ 34 ಸಕ್ಕರೆ ಕಾರ್ಖಾನೆಗಳಲ್ಲಿ ಎಥನಾಲ್ ಅಂದರೆ 46,500 ಲೀಟರ್ ಎಥನಾಲ್ ಬರುತ್ತಿದೆ ಎನ್ನುವ ಮಾಹಿತಿಯನ್ನು ಸಚಿವರು ಕೊಟ್ಟಿದ್ದಾರೆ. 46,50,000 ಲೀಟರ್ ಬರುತ್ತಿದೆ. ಆದರೆ, ನನಗೆ ಇರತಕ್ಕಂತಹ ಮಾಹಿತಿ ಪ್ರಕಾರ ಸಾಕಷ್ಟು ಎಥನಾಲ್ ಬರುತ್ತಿದೆ. ಅಂದರೆ 73 ಸಕ್ಕರೆ ಕಾರ್ಖಾನೆಗಳಲ್ಲಿಯೂ ಎಥನಾಲ್ ಮಾಡುತ್ತಿದ್ದಾರೆ.

ಏಕೆಂದರೆ, ಒಂದು ಟನ್‌ಗೆ ಎಥನಾಲ್ ಮಾಡುವುದರಿಂದ 5,500 ರೂಪಾಯಿಗಳ ಲಾಭ ಇದೆ. ಒಂದು ಟನ್‌ಗೆ ಸಕ್ಕರೆಯನ್ನು ಮಾಡುವುದಾದರೆ, ಕೇವಲ 3,100 ರೂಪಾಯಿಗಳು ಬರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಪ್ರಶ್ನೆಯನ್ನು ಕೇಳದವರೆ, ಉತ್ತರ ಕೊಟ್ಟರೆ, ಸಚಿವರು ಏನು ಹೇಳಲಿಕ್ಕೆ ಸಾಧ್ಯ ಇದೆ. ನೀವು ಪ್ರಶ್ನೆಯನ್ನು ಕೇಳಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ನಾನು ಇದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ, ಅಷ್ಟೆ. ನನ್ನ ಹತ್ತಿರ ಇರತಕ್ಕಂತಹ ಮಾಹಿತಿಯನ್ನು ಹೇಳುತ್ತಿದ್ದೇನೆ. ಆದರೆ, ಇವತ್ತು ರೈತರಿಗೆ ಕೊಡುತ್ತಿರುವಂತಹ ಹಣ ಬಹಳ ಕಡಿಮೆ. ಮಾನ್ಯ ಸಚಿವರು ಇಷ್ಟೊಂದು ಸಮಯ ಹೇಳಿದ್ದಾರೆ. ಕಬ್ಬಿನ ಬೆಳೆ ಬಹಳಷ್ಟು ಲಾಭದಾಯಕ ಎಂದು ಹೇಳಿದ್ದಾರೆ. ಈ ಲಾಭದಾಯಕ ಕಬ್ಬಿನ ಬೆಳೆಗಾರರಿಗೆ ಅಲ್ಲ. ಅವರಿಗೆ ಕಬ್ಬನ್ನು ಅಳತೆ ಮಾಡುವುದರಲ್ಲಿ ಮೋಸ ಮಾಡುತ್ತಿದ್ದಾರೆ. ಆದರೆ, ಇವತ್ತು ಕಾರ್ಖಾನೆಯ ಮಾಲೀಕರಿಗೆ ಲಾಭದಾಯಕವಾಗಿರುವಂತಹದ್ದು. ನೀವು ಸುಗರ್ ತೆಗೆದುಕೊಂಡು ಬರುವಂತಹದ್ದು ಸೌಧಿ ಅರೇಬೀಯಾದಿಂದ...

**(ಗೊಂದಲ)**

**ಸಭಾಪತಿಯವರು:** ನೀವು ಪ್ರಶ್ನೆಯನ್ನು ಕೇಳಿ. ನೀವು ಪ್ರಶ್ನೆಗೆ ಬನ್ನಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಇಷ್ಟೆ. ಈ ಒಂದು ಲಾಭದಾಯಕ ಎನ್ನುವುದು ಏನಿದೆ, ಅದು ನ್ಯಾಯಬದ್ಧವಾಗಿ ರೈತರಿಗೆ ಏತಕ್ಕೆ ಕೊಡುತ್ತಿಲ್ಲ ಎನ್ನುವುದಾಗಿದೆ.

**ಸಭಾಪತಿಯವರು:** ಈ ಖಾತೆಯ ಮಂತ್ರಿಗಳು ಇದ್ದು ಅವರು ಉತ್ತರವನ್ನು ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ರೈತರಿಗೆ 3,100 ರೂಪಾಯಿಗಳನ್ನು ಕೊಟ್ಟರೆ ಎಥನಾಲ್‌ಗೆ 5,500 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಶಂಕರ್ ಬ. ಪಾಟೀಲ್ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೆ, ಈಗತಾನೆ ನಮ್ಮ ಹಿರಿಯ ಸದಸ್ಯರು ಒಂದೆರಡು ಪ್ರಶ್ನೆಯನ್ನು ಕೇಳಿದ್ದಾರೆ. ಇವತ್ತು ಇಳುವರಿ ಆಧಾರದ ಮೇಲೆ ಇವತ್ತು ಸಕ್ಕರೆ ಉತ್ಪನ್ನವಾಗುತ್ತಿದೆ . ಏಕೆಂದರೆ, ಕಬ್ಬು ಇಳುವರಿ ಕಡಿಮೆಯಾದಾಗ ಸಾಮಾನ್ಯವಾಗಿ ಎಲ್ಲಾ ರೀತಿಯ ಉತ್ಪನ್ನಗಳಲ್ಲೂ ಇಳುವರಿ ಕಡಿಮೆಯಾಗುತ್ತದೆ ಎನ್ನುವ ವಿಚಾರ ತಮಗೂ ಗೊತ್ತಿರುವ ವಿಚಾರ. ಮತ್ತೆ ತಾವು ಏನು ಕೇಳುತ್ತಿದ್ದೀರಿ. ಇವತ್ತು ಎಥನಾಲ್ 92 ಕಾರ್ಖಾನೆಗಳ ಪೈಕಿ 73 ಕಾರ್ಖಾನೆಗಳಲ್ಲಿ ಇವತ್ತು ಕಬ್ಬನ್ನು ನುರಿಸುವಂತಹ ಕೆಲಸವನ್ನು ರಾಜ್ಯದಲ್ಲಿ ಮಾಡುತ್ತಿದ್ದೇವೆ. ಎಥನಾಲ್ ಕಾರ್ಖಾನೆಗಳ ಪೈಕಿ 34 ಕಾರ್ಖಾನೆಗಳು ಮಾತ್ರ ಲೈಸೆನ್ಸ್ ಪಡೆದಿವೆ. ಎಥನಾಲ್ ಪ್ರೊಡಕ್ಷನ್ ಇಲ್ಲದೆ ಎಥನಾಲ್ ಮಾಡಲಿಕ್ಕೆ ಅವಕಾಶ ಇಲ್ಲ. ಹೀಗಾಗಿ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಏಕೆಂದರೆ, ನಾವು ಎಥನಾಲ್‌ಗೆ ಲೈಸೆನ್ಸ್ ಅನ್ನು ಕೊಟ್ಟಿರುವುದಿಲ್ಲ. ಎಥನಾಲ್‌ಗೆ ಲೈಸೆನ್ಸ್ ಕೊಟ್ಟಿಲ್ಲವೆಂದರೆ ಅವರು ಉತ್ಪಾದನೆ ಮಾಡಲಿಕ್ಕೆ ಅವಕಾಶವೇ ಬರುವುದಿಲ್ಲ. ನಾವು ಎಥನಾಲ್ ಉತ್ಪಾದನೆ ಮಾಡುವುದು ಕೇವಲ 34 ಕಾರ್ಖಾನೆಗಳು ಮಾತ್ರ. ಎಥನಾಲ್‌ಗೆ ಹೆಚ್ಚಿನ ಬೇಡಿಕೆ ಇದೆ. ದೊಡ್ಡ ಪ್ರಮಾಣದಲ್ಲಿ ದೇಶದಲ್ಲಿ ಅಮದು ಮಾಡಿಕೊಳ್ಳುವುದು ಕಡಿಮೆಯಾಗಬೇಕೆನ್ನುವ ದೃಷ್ಟಿ ಇಟ್ಟುಕೊಂಡು, ಎಥನಾಲ್‌ಗೆ ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ನರೇಂದ್ರ ಮೋದಿಜೀಯವರು ಒಂದು ಹೊಸ ಪಾಲಿಸಿಯನ್ನು ತಂದ ಪರಿಣಾಮವಾಗಿ ಇವತ್ತು ಎಥನಾಲ್ ಕಾರ್ಖಾನೆಗಳಿಗೆ ರಾಜ್ಯದಲ್ಲಿ ಬಹಳ ದೊಡ್ಡ ಬೇಡಿಕೆ ಇದೆ. ಅದಕ್ಕಾಗಿ ಎಥನಾಲ್ ಕಾರ್ಖಾನೆ ಪ್ರಾರಂಭ ಮಾಡಲು ಈಗಾಗಲೇ 41 ಅರ್ಜಿಗಳು ನಮ್ಮ ಕಚೇರಿಗೆ ಬಂದಿವೆ. ಅದನ್ನು ಸರ್ವೆ ಆಫ್ ಇಂಡಿಯಾಗೆ

ನಾವು ನಿಯಮದ ಆಧಾರದ ಮೇಲೆ ಕಾನೂನಿನ ಪರಿಮಿತಿಯನ್ನು ನೋಡಿಕೊಂಡು ನಾವು ಅದಕ್ಕೆ ಶಿಫಾರಸ್ಸು ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಸವದಿ ಲಕ್ಷ್ಮಣ:-** ಮಾನ್ಯ ಸಭಾಪತಿಯವರೆ,

**ಡಾ: ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ಮುರುಗೇಶ್ ನಿರಾಣಿಯವರೆ, ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಸವದಿ ಲಕ್ಷ್ಮಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಇವತ್ತು ಬಹಳ ಗಂಭೀರವಾದ ಪ್ರಶ್ನೆಯನ್ನು ಗೌರವಾನ್ವಿತ ಮಾನ್ಯ ಸದಸ್ಯರು ಕೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಸಕ್ಕರೆ ಸಚಿವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಮಾನ್ಯ ಸದಸ್ಯರು ಕಬ್ಬಿನ ತೂಕದಲ್ಲಿ ಬಹಳ ಮೋಸವಾಗುತ್ತಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಜೊತೆಗೆ ಈ ವಿಚಾರವಾಗಿ ನಾನು ಪತ್ರಿಕೆಯಲ್ಲಿಯೂ ಸಹ ನೋಡಿದ್ದೇನೆ. "**21 ಸಕ್ಕರೆ ಕಾರ್ಖಾನೆಗಳ ಮೇಲೆ ಹಠಾತ್ ದಾಳಿ**" ಧಾಳಿಯಲ್ಲಿ ಏನು ಸಿಕ್ಕಿದೆ ಎನ್ನುವುದನ್ನು ನಂತರ ನೋಡೋಣ. ಆದರೆ, ಒಂದು ಧೈರ್ಯವಂತೂ ಮಾಡಿದರು. ಸಕ್ಕರೆ ಸಚಿವರು ಒಂದು ಧೈರ್ಯವನ್ನು ಮಾಡಿಕೊಂಡು ಈ ಸಕ್ಕರೆ ಕಾರ್ಖಾನೆಗಳ ಮೇಲೆ ಧಾಳಿ ಮಾಡಿದ್ದಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಈ ಕ್ರಮವನ್ನು ಮಾನ್ಯ ಸಚಿವರು ಕ್ರಮ ಕೈಗೊಂಡಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದು ಒಂದು ವಿಚಾರ. ಆದರೆ, ಗುಡ್ಡ ಸುತ್ತಿ ಹಾಕಿ ಮೈಲಾರಲಿಂಗವನ್ನು ಹುಡುಕಲಿಕ್ಕೆ ಹೋದಂತಾಗಿದೆ. ಆದರೆ, ಎಲ್ಲಿಯೂ ಕೂಡ ತೂಕದಲ್ಲಿ ಮೋಸ ಆಗಿರುವಂತಹ ಎನ್ನುವ ಒಂದು ಮಾಹಿತಿಯೂ ಮಾನ್ಯ ಸಚಿವರಿಗೆ ಸಿಕ್ಕಿಲ್ಲವೆಂದು ನನಗೆ ಗೊತ್ತಿದೆ. ಇದು ಒಂದು ದೊಡ್ಡ ಪ್ರಶ್ನೆ ಇದೆ. 21 ಕಡೆಗಳಲ್ಲಿ ನೀವು ಧಾಳಿ ಮಾಡಿದ್ದೀರಿ. ಹೋಗಿ ನೋಡಿದಾಗ ಎಲ್ಲಿಯೂ ಸಿಕ್ಕಿಲ್ಲ.

ಮಾನ್ಯ ಸಭಾಪತಿಯವರೆ, ನಿಜವಾಗಿಯೂ ಸಹ ಹೋಗಿ ನೋಡಿದರೆ ಎಂತಹ ಕಟುಕನ ಕಣ್ಣಿನಲ್ಲಿ ನೀರು ಬರುತ್ತದೆ. ಯಾವ ರೀತಿಯಲ್ಲಿ ಮೋಸ ಆಗುತ್ತಿದೆ ಎಂದರೆ...ರೈತ ದೊಡ್ಡವನು ಇದ್ದಾನೆ. ಸ್ವಲ್ಪಮಟ್ಟಿಗೆ ದೊಡ್ಡವನಾಗಬೇಕು. ಆ ಟ್ರ್ಯಾಕ್ಟರ್ ಮತ್ತೀತರ ವಾಹನಗಳದ್ದು ಆಗಲಿ ಪರವಾಗಿಲ್ಲ. ಮೊನ್ನೆ ಒಂದು ಸೋಷಿಯಲ್ ಮೀಡಿಯಾ, ವಾಟ್ಸ್‌ಫ್ ನಲ್ಲಿ ಒಂದು ಸತ್ಯ ಘಟನೆ ಬಂದಿತ್ತು. 9 ತಿಂಗಳ ಗರ್ಭಿಣಿ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕಬ್ಬು ಕಡಿಲಿಯಕ್ಕೆಂದು ಬರುತ್ತಾಳೆ. ಗಂಡ-ಹೆಂಡತಿ ಕೂಡಿಕೊಂಡು ಬರುತ್ತಾರೆ. 8 ತಿಂಗಳ ಗರ್ಭಿಣಿ ಇದ್ದಾಗ ಇಲ್ಲಿಗೆ ಬರುತ್ತಾಳೆ. ಅವಳು ಕಬ್ಬು ಕಡಿದು ಅದನ್ನು ಹೊರುತ್ತಾಳೆ. ಟ್ರ್ಯಾಲಿ ಮೇಲೆ ಏರುತ್ತಾಳೆ. ಅಲ್ಲಿಯೇ ಅವಳಿಗೆ ಹೆರಿಗೆಯಾಗುತ್ತದೆ. ಅವಳಿಗೆ ಆಸ್ಪತ್ರೆ, ಮನೆಯಲ್ಲಿ ಹೆರಿಗೆ ಆಗುವುದಿಲ್ಲ. ಕಬ್ಬಿನ ಜಾಗದಲ್ಲಿ ಆಗುತ್ತದೆ. ಅವಳಿಗೆ 3 ದಿನಗಳು ಮಾತ್ರ ಸೂಟಿ(ರಜೆ). ಆ ಮಗುವನ್ನು ಆ ತಪ್ಪಲಿನಲ್ಲಿ ಹಾಕಿ ಅಂದರೆ 4 ದಾರವನ್ನು ಕಟ್ಟಿ ಜೋಗುಳ ಮಾಡಿ ಅದರಲ್ಲಿ ಹಾಕಿ, ಬಟ್ಟೆ ಹೊದಿಸಿ ಮತ್ತೆ ಕಬ್ಬನ್ನು ಕಡಿಯಲಿಕ್ಕೆ ಹೋಗುತ್ತಾಳೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಅಂದು ಅದನ್ನು ನೋಡಿ ನನ್ನ ಕಣ್ಣಿನಲ್ಲಿ ನೀರು ಬಂದಿದೆ. ಆ ಹೆಣ್ಣು ಮಗಳು ಕಡಿದಂತಹ ಒಂದು ಟನ್ ಕಬ್ಬಿಗೆ 320 ರಿಂದ 350 ರೂಪಾಯಿಯವರೆಗೆ ಇವರು ಅವರಿಗೆ ಕೊಡುತ್ತಾರೆ. ಅಂತಹ ಬಡವರು ತಮ್ಮ ರಕ್ತ, ಬೆವರನ್ನು ಚೆಲ್ಲಿ ಕೆಲಸ ಮಾಡಿರತಕ್ಕಂತಹ ಆ ತಾಯಿಯ ಕೂಲಿ, ಅದರಲ್ಲಿ ಒಂದೆರಡು ಟನ್ ಕಬ್ಬು ಹೊಡೆದರೆ ನಿಮಗೆ ಅಂದರೆ ಸಕ್ಕರೆ ಕಾರ್ಖಾನೆಯವರಿಗೆ ಪುಣ್ಯ ತಟ್ಟುತ್ತದೆಯೇ? ನಾನು ಯಾವ ಪಕ್ಷದವರು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಮತ್ತೆ ಇಂತಹವರು ಎಂದು ಹೇಳುವಂತಿಲ್ಲ. ಯಾರು ಈ ಪಾಪದ ಕೆಲಸವನ್ನು ಮಾಡುತ್ತಾರಲ್ಲಾ, ಅಂತಹ ಕಾರ್ಖಾನೆಯ ಮಾಲೀಕರಿಗೆ ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬೇಕಾದರೆ, ನಾನು ಆ ಒಂದು ವಿಡಿಯೋವನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಆ ವಿಡಿಯೋ ನೋಡಿಯಾದರೂ ನಿಮಗೆ ಕರುಣೆ ಬಂದು ಆ ತೂಕದಲ್ಲಿ 20 ಟನ್ ಕಬ್ಬು ಟ್ರ್ಯಾಕ್ಟರ್‌ನಲ್ಲಿ ಬಂದಿದ್ದನ್ನು ನೀವು 18 ಟನ್‌ಗೆ ತೂಕ ಮಾಡುತ್ತೀರಲ್ಲಾ, ನಿಮಗೆ ಏನು ಎಂದು ಕರೆಯಬೇಕು? ನಮ್ಮ ಪಾಲಿನ ದೇವರು ಎಂದು ಕರೆಯಬೇಕಾ ಅಥವಾ ನೀವು ನಮ್ಮ

ಪಾಲಿನ ವರ ಎಂದು ಕರೆಯಬೇಕಾ ಅಥವಾ ನಿಮ್ಮ ಎಲ್ಲಾ ಪೋಟೋಗಳನ್ನು ನಮ್ಮ ಮನೆಯಲ್ಲಿ ಹಾಕಿಕೊಂಡು ನಿಮ್ಮನ್ನು ಪೂಜೆ ಮಾಡಬೇಕಾ, ಯಾರು ಏನೆಂದು ತಿಳಿದುಕೊಳ್ಳಬೇಕು?

**ಡಾ: ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಮಾನ್ಯ ಸಚಿವರು ಸ್ವಲ್ಪ ಕುಳಿತುಕೊಳ್ಳಬೇಕು. ನಾನು ನಿಮಗೆ ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿಯವರು ದಯವಿಟ್ಟು ಕುಳಿತುಕೊಳ್ಳಬೇಕು.

**ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಸಚಿವರು):** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಏನಾಗಿದೆ ಎಂದರೆ. . .. . .

**ಸಭಾಪತಿಯವರು:-** ಮಾನ್ಯ ಸಚಿವರು ಸ್ವಲ್ಪ ಕುಳಿತುಕೊಳ್ಳಬೇಕು. ನಾನು ನಿಮಗೆ ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿಲ್ಲ.

**ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಸಚಿವರು):** ಮಾನ್ಯ ಸಭಾಪತಿಯವರೆ, ಎಲ್ಲರೂ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರು ಸ್ವಲ್ಪ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಈ ಬಗೆಗಿನ ಚರ್ಚೆಯನ್ನು ಕನ್‌ಕ್ಲೂಡ್ ಮಾಡಬೇಕು.

**ಶ್ರೀ ಸವದಿ ಲಕ್ಷ್ಮಣ:** ಯಾರು ಇಂತಹ ಮೋಸ ಮಾಡುತ್ತಾರೆ, ನಾನು ನಿಮಗೆ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಿಮಗೆ ಕಾಲಿಗೆ ಬೇಕಾದರೆ ಬೀಳುತ್ತೇನೆ. ಇಂತಹ ಮೋಸ ಮಾಡುವಂತಹವರು ಯಾರಿದ್ದಾರೆ, ಅದನ್ನು ನಿಲ್ಲಿಸುವಂತಹ ಕೆಲಸ ಮಾಡಬೇಕೆಂದು ನನ್ನ ಕಳಕಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಇದ್ದಾರೆ, ಅವರಿಗೂ ಅವಕಾಶ ಕೊಡಿ. ಅವರು ಈ ವಿಚಾರದಲ್ಲಿ ಏನು ಹೇಳುತ್ತಾರೆಂದು ನಾವು ಕೇಳೋಣ.

**ಸಭಾಪತಿಯವರು:-** ಈ ಪೀಠದಲ್ಲಿ ಕುಳಿತಿರುವ ನನಗೆ ಯಾರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಗೊತ್ತಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಅವರಿಗೂ ಅವಕಾಶ ಕೊಡಿ. ಇದು ಸರಿಯಲ್ಲ. **(ಗೊಂದಲ)**

**ಸಭಾಪತಿಯವರು:-** ತಾವು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಅವರು ಸಹ ಮಂತ್ರಿಗಳಿದ್ದು, ಅವರ ಅಭಿಪ್ರಾಯವನ್ನು ಹೇಳಬೇಕಲ್ಲವೇ ?

**ಸಭಾಪತಿಯವರು:-** ಶ್ರೀಯುತ ಮರಿತಿಬ್ಬೇಗೌಡರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಇದು ಪ್ರಶ್ನೋತ್ತರವಾಗಿದೆ. ಮಾನ್ಯ ಸಕ್ಕರೆ ಮಂತ್ರಿಗಳು ತಾವು ಮುಂದುವರಿಸಿ.

**(ಗೊಂದಲ)**

**(ಮುಂದು)**

**(1053) 20.12.2022 12.30 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ನಿರಾಣಿಯವರೂ ಸಹ ಒಳ್ಳೆಯ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಅವರು ಮಂತ್ರಿಗಳೂ ಇದ್ದಾರೆ. ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಹುಕ್ಕೇರಿಯವರೇ, ನೀವೆಲ್ಲಾ ಹಿರಿಯ ಸದಸ್ಯರು. ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಹಿರಿಯ ಸದಸ್ಯರು 3-4 ಜನರು ಒಟ್ಟಿಗೆ ಮಾತನಾಡಲು ಎದ್ದು ನಿಂತರೆ ಹೇಗೆ? ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುರುಗೇಶ್ ನಿರಾಣಿಯವರು ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಅವರ ಅನಿಸಿಕೆಗಳೇನೆಂದು ನಾವೂ ಸ್ವಲ್ಪ ತಿಳಿದುಕೊಳ್ಳುತ್ತೇವೆ. ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಒಬ್ಬ ಸಚಿವರಿಗೆ ಮಾತನಾಡಲು ಅವಕಾಶವನ್ನು ನಿರಾಕರಣೆ ಮಾಡುವುದು ಸಂವಿಧಾನ ವಿರೋಧಿಯಾಗಿದೆ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಹಾಗೂ ಕಾಂಗ್ರೆಸ್ ಪಕ್ಷದ ಕೆಲವು ಮಾನ್ಯ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಂಕರ ಪಾಟೀಲ ಮುನೇನಕೊಪ್ಪರವರೇ, ನೀವು ಉತ್ತರವನ್ನು ಕೊಡಿ. ನಾನು ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಮಾನ್ಯ ಮರಿತಿಬ್ಬೇಗೌಡರೇ, ನೀವು ದಯವಿಟ್ಟು ಬಾವಿಯಿಂದ ಹೊರಗೆ ಬನ್ನಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಸಮಯ ಹಾಳಾಗುವುದು ಬೇಡ. ದಯಮಾಡಿ ಸಮಯ ವ್ಯರ್ಥ ಮಾಡುವುದು ಬೇಡ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಹಾಗೂ ಇತರ ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**ಸಭಾಪತಿಯವರು:-** ಮಾನ್ಯ ನಿರಾಣಿಯವರು ಹಿರಿಯ ಸಚಿವರಿದ್ದಾರೆ. ಮಾನ್ಯ ಮುನೇನಕೊಪ್ಪ ಅವರೇ, ತಾವು ಮಾತನಾಡಿ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಕಬ್ಬಿನ ತೂಕದಲ್ಲಿ ಮೋಸವಾಗುತ್ತಿದ್ದು ಇದರ ಬಗ್ಗೆ 23 ಕಡೆಗಳಲ್ಲಿ ದಾಳಿಯನ್ನು ಮಾಡಲಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಹುಕ್ಕೇರಿಯವರೇ, ನೀವು ಪೀಠದಲ್ಲಿ ಕುಳಿತಂತಹ ಸಂದರ್ಭದಲ್ಲಿ ನೀವು ಆ ರೀತಿಯ ನಿರ್ಣಯವನ್ನು ಕೊಡಿ. ನಾನು ಈಗ ಪೀಠದಲ್ಲಿ ಕುಳಿತು ಹೇಳುತ್ತಿದ್ದೇನೆ. ಮಾನ್ಯ ಮುನೇನಕೊಪ್ಪ ಅವರೇ ನೀವು ಮಾತನಾಡಿ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸವದಿಯವರು ಹೇಳಿದಂತೆ ಕಬ್ಬು ತೂಕ ಮಾಡುವಲ್ಲಿ ಮೋಸವಾಗುತ್ತಿದೆ ಎನ್ನುವುದು ರಾಜ್ಯದ ರೈತರ ಬಹುಕಾಲಗಳ ಬೇಡಿಕೆಯಾಗಿದೆ. ಇಂದು ಸಕ್ಕರೆ ಕಾರ್ಖಾನೆಗಳ ಮೇಲೆ ದಾಳಿ ಮಾಡುವಂತಹ ಮೊದಲನೆಯ ಹೆಜ್ಜೆಯನ್ನು ಸರ್ಕಾರ ಇಟ್ಟಿದೆ. ಅದಕ್ಕಾಗಿ ಮಾನ್ಯ ಸವದಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಸಕ್ಕರೆ ಇಲಾಖೆಗೆ ಅಭಿನಂದನೆಯನ್ನು ಸಲ್ಲಿಸಿದರು. ಜೊತೆಗೆ ಅವರು ಒಂದು ನೋವನ್ನೂ ಹಂಚಿಕೊಂಡರು. ಕಬ್ಬನ್ನು ಕಟಾವು ಮಾಡುವ ಕೂಲಿ ಕಾರ್ಮಿಕರ ಕಷ್ಟವನ್ನು ಅವರು ಹೇಳಿದರು. ಕಬ್ಬಿನ ತೂಕದಲ್ಲಿ ಕಾರ್ಖಾನೆ ಮಾಲೀಕರು ಮಾಡುತ್ತಿರುವ ಮೋಸದ ಬಗ್ಗೆಯೂ ಅವರು ಹೇಳಿದರು. ನಾನು ಒಬ್ಬ ಸಚಿವನಾಗಿದ್ದರೂ ನನ್ನ ಸರ್ಕಾರಿ ವಾಹನವನ್ನು ಬೇರೆ ಕಡೆ ಬಿಟ್ಟು, ರಾಜ್ಯದ ವಿವಿಧ ಭಾಗಗಳಲ್ಲಿ ಒಬ್ಬ ಸಾಮಾನ್ಯ ರೈತನ ಮಗನಾಗಿ ಅನೇಕ ಹೊಲಗಳಿಗೆ ಹೋಗಿ ಬಂದಿದ್ದೇನೆ. ಕಬ್ಬು ಕಟಾವು ಮಾಡುವಂತಹ ರೈತ ಮಹಿಳೆಯರು ಹಾಗೂ ಕೂಲಿ ಕಾರ್ಮಿಕರ ಜೊತೆ ನಾನು ಮಾತನಾಡಿ ಬಂದಿದ್ದೇನೆ. ಅವರ ಒಂದು ಶ್ರಮದಿಂದ ಕಾರ್ಖಾನೆ ಮಾಲೀಕರಿಗೂ ಧಕ್ಕೆಯಾಗಬಾರದು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಕೊಡುವುದನ್ನು ಬಿಟ್ಟು ಮಾನ್ಯ ಸಚಿವರು ಬೇರೆ ಏನೋ ಮಾತನಾಡುತ್ತಿದ್ದಾರೆ. ನಮಗೆ ಮೊದಲು ಉತ್ತರವನ್ನು ಕೊಟ್ಟು ಆಮೇಲೆ ಏನಾದರೂ ಮಾತನಾಡಲಿ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸವದಿಯವರು ಕೂಲಿ ಕಾರ್ಮಿಕ ಮಹಿಳೆಯ ಬಗ್ಗೆ ಮಾತನಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಮುನೇನಕೊಪ್ಪ ಅವರೇ, ಎಲ್ಲರೂ ಮಾತನಾಡಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಉತ್ತರವನ್ನು ಹೇಳಿಬಿಡಿ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಆಗಲಿ ಮಾನ್ಯ ಸಭಾಪತಿಯವರೇ. ಸಕ್ಕರೆ ಕಾರ್ಖಾನೆಗಳ ಮೇಲೆ ನಡೆದಿರುವ ದಾಳಿಯಿಂದ ಸರ್ಕಾರಕ್ಕೆ ಯಾವುದೇ ಒಂದು ಲಾಭವಾಗಿಲ್ಲ ಎಂದು ಹೇಳಿದ್ದಾರೆ. ಸರ್ಕಾರ ಇಂದು ಮೊದಲನೆಯ ಹೆಜ್ಜೆಯನ್ನು ಇಟ್ಟಿದೆ. ಸರ್ಕಾರದ ಬಳಿ ಸಂಪೂರ್ಣವಾದ ಮಾಹಿತಿ ಇದೆ. ಸಕ್ಕರೆ ಕಾರ್ಖಾನೆಗಳ ಮೇಲೆ ದಾಳಿ ನಡೆದಿದ್ದರೂ ಏನೂ ಸಿಕ್ಕಿರುವುದಿಲ್ಲ ಎಂದು ತಮಗೆ ಒಂದು ಮಾಹಿತಿ ಬಂದಿರಬಹುದು. ಇನ್ನೂ ಇದು ನಿರಂತರವಾಗಿ ನಡೆಯುವಂಥದ್ದು. ಅವೆಲ್ಲವನ್ನೂ ನಾನು ಪರಿಶೀಲನೆ ಮಾಡಿದ್ದೇನೆ. ತೂಕದಲ್ಲಿ ಮೋಸ ಮಾಡುತ್ತಿರುವ ಸಕ್ಕರೆ ಕಾರ್ಖಾನೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಾನು ತಮ್ಮ ಮೂಲಕ ರಾಜ್ಯದ ರೈತರಿಗೆ ಭರವಸೆಯನ್ನು ಕೊಡುತ್ತೇನೆ. ಅದೇ ಸಂದರ್ಭದಲ್ಲಿ ಮೋಸ ಮಾಡುತ್ತಿರುವ ಕಾರ್ಖಾನೆಗಳಿಗೆ ಪಕ್ಷಾತೀತವಾಗಿ ಅವರು ಎಷ್ಟೇ ದೊಡ್ಡವರಾಗಿದ್ದರೂ ಸಹ ಅವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎನ್ನುವಂತಹ ಭರವಸೆಯನ್ನು ಕೊಡುತ್ತೇನೆ. ಅನೇಕ ಹಿರಿಯರು ಸಕ್ಕರೆ ಕಾರ್ಖಾನೆಗಳ ಮಾಲೀಕರಿದ್ದಾರೆ. ಅವರು ಕೂಡ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಒಂದೆಡೆ ಉದ್ಯೋಗ ಸೃಷ್ಟಿಯಾಗಬೇಕು. ಇನ್ನೊಂದೆಡೆ ರೈತರ ಹಿತವನ್ನು ಕಾಪಾಡುವಂತಹ ಕೆಲಸವನ್ನು ನಮ್ಮ ರಾಜ್ಯ ಸರ್ಕಾರ ಮಾಡುತ್ತದೆ ಎನ್ನುವುದನ್ನು ನಿಮ್ಮ ಮೂಲಕ ಹೇಳಬಯಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಒಂದೂ ಉಪ ಪ್ರಶ್ನೆಯನ್ನು ಕೇಳಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿ.ಆರ್.ರಮೇಶ್ ಅವರು ಎದ್ದು ನಿಂತರು)**

**ಸಭಾಪತಿಯವರು:-** ಮಾನ್ಯ ರಮೇಶ್ ಅವರೇ, ಸಾಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನೀವು ಬೇರೆಯವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟು ನಮಗೆ ಸಾಕು ಎಂದರೆ ಹೇಗೆ? ನನ್ನ ಪ್ರಶ್ನೆಗೆ ಉತ್ತರವೇ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್ ಅವರೇ, ನೀವು ಸಮಯವನ್ನು ವ್ಯರ್ಥ ಮಾಡಬೇಡಿ. ಪ್ರಶ್ನೆಯನ್ನು ಕೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಬೇರೆ ರಾಜ್ಯಗಳಿಗಿಂತಲೂ ನಮ್ಮ ರಾಜ್ಯದಲ್ಲಿ ರೈತರಿಗೆ ಹೆಚ್ಚು ಹಣ ಕೊಟ್ಟು ಖರೀದಿ ಮಾಡುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಸರ್ಕಾರ ಕಾರ್ಖಾನೆಗಳ ಮಾಲೀಕರಿಗೆ ಅಲ್ಲ, ಕಬ್ಬು ಬೆಳೆಗಾರರಿಗೆ ರಕ್ಷಣೆಯನ್ನು ಕೊಡಬೇಕು. ಸರ್ಕಾರವೇ ಹಣವನ್ನು ನಿಗದಿ ಪಡಿಸಿ, ಬೇರೆ ರಾಜ್ಯಗಳಲ್ಲಿ ನೀಡುತ್ತಿರುವಷ್ಟು ಹಣವನ್ನು ನೀಡಬೇಕು ಎಂದು ನಾವು ಕೇಳುತ್ತಿದ್ದೇವೆ. ಮಾನ್ಯ ಸಚಿವರು ದಾಳಿ ಮಾಡಿದುದನ್ನು ಹೇಳಿದ್ದಕ್ಕೆ ಮಾನ್ಯ ಲಕ್ಷ್ಮಣ ಸವದಿಯವರು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ಆದರೆ ವ್ಯತ್ಯಾಸ ಏನಾಗಿದೆ ಎಂದರೆ ಕ್ರಮ ಏನು ತೆಗೆದುಕೊಂಡಿದ್ದಾರೆ ಎಂಬುದು. ಈ ವ್ಯತ್ಯಾಸ ಬಂದಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಯಾವ ಮಾಲೀಕರ ಮೇಲೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಈ ಹಿಂದೆ ಮಾನ್ಯ ನಿರಾಣಿಯವರು ಪರಿಹಾರವನ್ನು ಕೊಡಿಸುವುದಾಗಿ ಹೇಳಿದ್ದರು. ಇದು ಸದನದಲ್ಲಿಯೂ ಚರ್ಚೆಯಾಗಿತ್ತು. ಇಂದಿನವರೆಗೂ ಏನೂ ಕ್ರಮ ಆಗಿಲ್ಲ. 15 ದಿನಗಳೊಳಗೆ ಹಣ ಕೊಡಬೇಕೆಂದು ನಿಗದಿಯಾಗಿದೆ. ಕೊಡಲಿಲ್ಲ ಎಂದರೆ ಶೇ.15ರಷ್ಟು ಬಡ್ಡಿ ಕೊಡಬೇಕು ಎಂದು ಇದೆ. ಆದರೆ ಯಾವುದೇ ಸಕ್ಕರೆ ಕಾರ್ಖಾನೆ ಮಾಲೀಕರು ರೈತರಿಗೆ ಬಡ್ಡಿಯನ್ನು ಕೊಡುತ್ತಿಲ್ಲ. ಮೂರು-ನಾಲ್ಕು

ತಿಂಗಳು ಕಟಾವು ಮಾಡಿದರೂ ಅವರಿಗೆ ಹಣ ಬರುತ್ತಿಲ್ಲ. ಅವರು ಹೇಗೆ ಜೀವನ ನಡೆಸಬೇಕು ಎಂದ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೇಂದ್ರ ಸರ್ಕಾರದ FRP (Fair and Remunerative Price) ಆಧಾರದ ಮೇಲೆ ನಿಗದಿ ಪಡಿಸಲಾಗಿದೆ ಎಂದು ಹೇಳಿದರು. ಬೇರೆ ರಾಜ್ಯಗಳಲ್ಲಿ SAP (State Advised Price) ಯನ್ನು ಮಾಡಿರುವುದನ್ನು ಹೇಳಿದರು. ಆದರೆ ಅದನ್ನು ನಮ್ಮ ರಾಜ್ಯದಲ್ಲಿ ಏಕೆ ಮಾಡಿಲ್ಲ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಎರಡನೆಯದಾಗಿ ಕಬ್ಬು ಅರೆಯುವುದಕ್ಕಾಗಿ 34 ಕಾರ್ಖಾನೆಗಳಿಗೆ ಪರವಾನಗಿಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಅವರು ಎಥೆನಾಲ್ ಮಾಡುತ್ತಿದ್ದಾರೆ. ಎಥೆನಾಲ್‌ಗೆ ಹೋಗುವಂತಹ ಕಬ್ಬಿಗೆ ವಿಶೇಷ ಬೆಲೆ ನಿಗದಿ ಪಡಿಸಬೇಕಾಗುತ್ತದೆ. ಕಾರಣ ಏನೆಂದರೆ ಒಂದು ಟನ್‌ಗೆ ಅವರು ಎರಡರಷ್ಟು ಹಣವನ್ನು ಮಾಡುತ್ತಾರೆ. ಎರಡರಷ್ಟು ಹಣವನ್ನು ಮಾಡುವಂತಹ ಸಂದರ್ಭದಲ್ಲಿ ಎಥೆನಾಲ್‌ಗೆ ಕೊಟ್ಟಿರುವಂತಹ ಲೈಸೆನ್ಸ್‌ನ ಆಧಾರದ ಮೇಲೆ ಆ ಕಬ್ಬಿಗೆ ಬೇರೆಯದೇ ಆದಂತಹ ಹಣವನ್ನು ನಿಗದಿ ಪಡಿಸಬೇಕು. ಏಕೆ ಅದನ್ನು ಕಟ್ಟುತ್ತಿಲ್ಲ? ಎರಡಕ್ಕೂ ದಯವಿಟ್ಟು ಉತ್ತರವನ್ನು ಕೊಡಬೇಕು.

**ಸಭಾಪತಿಯವರು:-** ಮಾನ್ಯ ಮಂತ್ರಿಗಳೇ, ಇದೊಂದು ಪ್ರಶ್ನೆಗೆ 20 ನಿಮಿಷಗಳಾಯಿತು. ಉಳಿದ ಅಜೆಂಡಾ ಅನ್ನು ತೆಗೆದುಕೊಳ್ಳಬೇಕು. ಎಲ್ಲಾ ಸೇರಿಸಿ ಉತ್ತರವನ್ನು ಕೊಟ್ಟುಬಿಡಿ.

**(ಮುಂದು)**

**(1054) 20.12.2022 12.30 ಕೆಜಿ/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಂಕರ ಬ.ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ನಮ್ಮ ರಾಜ್ಯದಲ್ಲಿ SAP (State Advised Prices) ಕಾನೂನನ್ನು ಏಕೆ ಜಾರಿ ಮಾಡುವುದಿಲ್ಲವೆಂಬ ವಿಷಯವನ್ನು ಕೇಳಿದ್ದಾರೆ. ಈಗ FRP (Fair and Remunerative Prices) ಗಿಂತ ಹೆಚ್ಚಿನ ಬೆಲೆಯನ್ನು ಸಕ್ಕರೆ ಕೈಗಾರಿಕೆಗಳ ಮಾಲೀಕರು ರೈತರಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ನಾವು ಅದರ ಜೊತೆಗೆ ಉಪ ಉತ್ಪನ್ನದಲ್ಲಿ ರೈತರಿಗೆ ಲಾಭವನ್ನು ಕೊಡುವಂತಹ

ನಿರ್ಣಯವನ್ನು ಮಾಡಿದ್ದೇವೆ. ಇದಕ್ಕೆ ನಮ್ಮ ದೇಶದಲ್ಲಿರುವಂತಹ ಅನೇಕ ಸಂಶೋಧನೆಗಳನ್ನು ನಡೆಸುವಂತಹ ಸಂಸ್ಥೆಗಳ ಪರಿಣಿತರನ್ನು ಕಮಿಟಿಯಲ್ಲಿಟ್ಟುಕೊಂಡು, ಪ್ರತಿಟನ್‌ಗೆ 50 ರೂಪಾಯಿಗಳನ್ನು ಮೊದಲನೇ ಹಂತದಲ್ಲಿ, ಉಪ ಉತ್ಪನ್ನದಲ್ಲಿ ಎಷ್ಟು ಲಾಭವಾಗುತ್ತದೆಂಬ ಅಂಕಿ-ಅಂಶಗಳನ್ನು ತೆಗೆದುಕೊಂಡು 202 ಕೋಟಿ ರೂಪಾಯಿಗಳನ್ನು ಮೊದಲನೇ ಕಂತಿನಲ್ಲಿ ರೈತರಿಗೆ ಕೊಡಬೇಕು ಎನ್ನುವಂತಹ ಆದೇಶವನ್ನು ಸರ್ಕಾರ ಮಾಡಿದೆ.

ಇನ್ನು SAP ಕಾನೂನನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಜೊತೆಗೆ ಮಾತನಾಡಿ ವಿನಂತಿ ಮಾಡಿಕೊಂಡಿದ್ದೇನೆ. ಈಗ crushing ಮುಗಿದ ಮೇಲೆ, ನಮ್ಮ 70:30 ratio ಏನಿದೆ, ಲಾಭದಲ್ಲಿ ನಮ್ಮ ರಾಜ್ಯದ ರೈತರಿಗೆ ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಜೊತೆಗೆ ಮಾತನಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡಲಿಲ್ಲ.,

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಮುರುಗೇಶ್ ನಿರಾಣಿ ರವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

**ಸಭಾಪತಿಯವರು:-** ಶ್ರೀ ಮರಿತಿಬ್ಬೇಗೌಡರವರೇ, ತಮ್ಮ ಮನಸ್ಸಿನಲ್ಲಿ ಏನಿದೆ? ಈ ಪ್ರಶ್ನೆಯನ್ನು ಮುಗಿಸಬೇಕೋ ಅಥವಾ ಬೇಡವೋ?

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವೇ ಪೀಠದಿಂದ ಏನು ಹೇಳಿದ್ದೀರಿ, ಆ ಪ್ರಕಾರ ನಡೆಯಿರಿ. ಶ್ರೀ ಮುರುಗೇಶ್ ನಿರಾಣಿರವರು ಹಿರಿಯ ಸಚಿವರು ಇದ್ದಾರೆ.

**(ಈ ಹಂತದಲ್ಲಿ ಎರಡೂ ಕಡೆಯ ಬಹಳಷ್ಟು ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದೇ ಬಾರಿಗೆ ಮಾತನಾಡತೊಡಗಿದರು)**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಕ್ಕರೆ ಸಚಿವರು ಸಮರ್ಥರಿದ್ದಾರೆ. ಅವರು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಬೇರೆಯವರು ಉತ್ತರ ಕೊಡಬೇಕೆಂದು ಎಲ್ಲಿದೆ?

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ.,

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿದ ಸದಸ್ಯರಿಗೆ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇದೆ. ಆದರೆ, ಇದು ಚರ್ಚೆಯ ಸಮಯ ಅಲ್ಲ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಕ್ಕರೆ ಸಚಿವರ ಸಾಮರ್ಥ್ಯವನ್ನು ಪ್ರಶ್ನೆ ಮಾಡುತ್ತಿಲ್ಲ. ಸರ್ಕಾರದಲ್ಲಿ ಇರುವಂತಹ ಮಂತ್ರಿಯವರು ಕೆಲವು ವಿಚಾರಗಳನ್ನು ಹೇಳುವಾಗ, ನಾವು ಸಹ ಅದನ್ನು ಸ್ವಲ್ಪ ಕೇಳುತ್ತೇವೆ..

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಏನನ್ನು ಹೇಳಿಲ್ಲ. ಅವರು ಹೇಳುವುದಕ್ಕೆ ಎದ್ದು ನಿಂತರಷ್ಟೇ, ಆದರೆ, ನಾನು ಅವರಿಗೆ allow ಮಾಡಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಹೇಳಬಾರದೆಂದು ಎಲ್ಲೂ ಇಲ್ಲ.

(ಗೊಂದಲ)

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಅವರು ಹೇಳಬೇಕೆಂದು ಎಲ್ಲೂ ಕಡ್ಡಾಯ ಇಲ್ಲ.,

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಬೇರೆ ಸಚಿವರು ಮಾತನಾಡಬಾರದೆಂದು ಯಾವ ನಿಯಮದಲ್ಲಿದೆ ಹೇಳಿ?

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಇದನ್ನು ಬೇರೆ ನಿಯಮದಡಿ ತಂದು ಚರ್ಚೆ ಮಾಡಲಿ. ಇದನ್ನು ಪ್ರಶ್ನೋತ್ತರ ವೇಳೆಯಲ್ಲಿ ತರಬಾರದು. ಒಂದು ಪ್ರಶ್ನೆಗೆ ಸುಮಾರು 25 ನಿಮಿಷಗಳು ತೆಗೆದುಕೊಂಡರೆ, ಬೇರೆ ಸದಸ್ಯರಿಗೆ ಅವರ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಸಿಗುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಎದ್ದು ನಿಂತಾಗ, ನನಗೆ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಡಿ. ಆ ಮೇಲೆ ಬೇರೆಯವರು ಮಾತನಾಡಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ಹಾಗೂ ಶ್ರೀ ಪಿ.ಆರ್.ರಮೇಶ್‌ರವರು ಮೂಲ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಸಂಪೂರ್ಣವಾದ ಉತ್ತರ ಬರಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸವದಿಯವರು ಹೇಳಿದ ಉಪ ಪ್ರಶ್ನೆಗೆ ಅವರು ಸಂಪೂರ್ಣವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ, ಮೂಲ ಪ್ರಶ್ನೆ ಕೇಳಿದವರಿಗೆ ಸಂಪೂರ್ಣವಾದ ಉತ್ತರವನ್ನು ಕೊಡಬೇಕು. ಆದರೆ, ಇದರ ಮಧ್ಯದಲ್ಲಿ ಸರ್ಕಾರದಲ್ಲಿ ಇರುವಂತಹ ಒಬ್ಬ ಹಿರಿಯ ಸಚಿವರು ಎದ್ದು ಕೆಲವು ವಿಚಾರಗಳನ್ನು ಇದರ ಬಗ್ಗೆ ಹೇಳಬೇಕು ಎನ್ನುವಾಗ ಅವರಿಗೆ ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಅದು ಜನ ಸಾಮಾನ್ಯರಿಗೆ ತಲುಪಬೇಕು.

ಇವತ್ತಿನ ದಿವಸ ಕಬ್ಬು ಬೆಳೆಗಾರರು ಯಾವ ಪರಿಸ್ಥಿತಿಯಲ್ಲಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರ ಸೂಸೈಟಿ ಇದೆ, ಅವರು ಮಾಲೀಕರು ಇರಬಹುದು ಹಾಗೂ ಅವರು ಬೆಳೆಗಾರರು ಇರಬಹುದು, ಅದು ಏನೇ ಇರಬಹುದು ಅದು ಬೇರೆ ಪ್ರಶ್ನೆ. ಆದರೆ, ದಯವಿಟ್ಟು ಅವರ ಹೇಳಿಕೆ ಏನೆಂದು ನಮ್ಮ ರಾಜ್ಯದ ಜನರಿಗೆ ಗೊತ್ತಾಗಲಿ. ಏಕೆಂದರೆ, ನಮ್ಮ ರಾಜ್ಯದ ಕಬ್ಬು ಬೆಳೆಗಾರರು ಯಾವ ರೀತಿಯ ನಷ್ಟವನ್ನು ಅನುಭವಿಸುತ್ತಿದ್ದಾರೆ, ಯಾವ ರೀತಿ ಶೋಷಣೆಗೆ ಒಳಗಾಗಿದ್ದಾರೆ ಎನ್ನುವುದು ರಾಜ್ಯದ ಜನತೆ ಗೊತ್ತಾಗಬೇಕಾಗಿದೆ. ಹಾಗಾಗಿ, ತಾವು ದಯವಿಟ್ಟು ಅವರಿಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಕ್ಕರೆ ಸಚಿವರು ಉತ್ತರ ಕೊಡುವುದಕ್ಕೆ ಸಮರ್ಥರಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವವರೆಗೆ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ದಯವಿಟ್ಟು ಕುಳಿತುಕೊಳ್ಳಲಿ. ಆಮೇಲೆ ಅವರು ಮಾತನಾಡಲಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ,

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಆಮೇಲೆ ಮಾತನಾಡಲಿ. He is not a whip to me. ನಾನು ಮಾತನಾಡಿ ಇನ್ನೂ ಮುಗಿದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸುವವರೆಗೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಕ್ಕರೆ ಸಚಿವರ ಸಾಮರ್ಥ್ಯವನ್ನು ಯಾರು ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ, ಅವರು ಉತ್ತರ ಕೊಡಲಿ. ಮಾನ್ಯ ಮುರುಗೇಶ ನಿರಾಣಿಯವರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಡಾ। ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೆ 25 ನಿಮಿಷಗಳು ಆಗಿದೆ. ಮಾನ್ಯ ಸಕ್ಕರೆ ಸಚಿವರು ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಸಮರ್ಥವಾಗಿ ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಇನ್ನು ಅವರಿಗೆ clarification ಬೇಕೆಂದರೆ, ಇದನ್ನು ಬೇರೆ ನಿಯಮದಡಿ ತರಲಿ. ಆಗ ಚರ್ಚೆ ಮಾಡೋಣ. ಅದಕ್ಕೆ ಅವಕಾಶ ಇದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಪ್ರಶ್ನೋತ್ತರ ಅವಧಿ. ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ. ನಾನು ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದ ತಕ್ಷಣ ತಮಗೆ ಉತ್ಸಾಹದ ಮಾತುಗಳು ಜಾಸ್ತಿ ಆಯಿತೇ? ದಯವಿಟ್ಟು ಒಂದು ನಿಮಿಷ ಸುಮ್ಮನಿರಿ. ಪೀಠದಿಂದ ಮಾತನಾಡುವಂತಹ ಸಂದರ್ಭದಲ್ಲಿ ಅದನ್ನು ಕೇಳುವಂತಹ ಸಹನೆ ತಮಗೆ ಇಲ್ಲವೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯ ಮಂತ್ರಿಯವರು ಸದನದಕ್ಕೆ ಬಂದ ಮೇಲೆ ಈ ಬಗ್ಗೆ ಮಾತನಾಡುತ್ತಿದ್ದೇನೆಯೇ? ತಾವು ಪೀಠದಿಂದ ಈ ಮಾತನ್ನು ಹೇಳುತ್ತಿದ್ದೀರಾ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದು ಪ್ರಶ್ನೋತ್ತರ ಅವಧಿ. ಮಾನ್ಯ ಸದಸ್ಯರುಗಳಾದ ಪ್ರಕಾಶ್ ಕೆ ರಾಥೋಡ್‌ರವರು ಮತ್ತು ಶ್ರೀ ಪಿ.,ಆರ್.ರಮೇಶ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಹೋದ್ಯೋಗಿ ಸಚಿವರು ಉತ್ತರ ಕೊಡುತ್ತಿದ್ದರು. ಈ ಮಧ್ಯದಲ್ಲಿ ರಾಜ್ಯದ ಉಪ ಮುಖ್ಯಮಂತ್ರಿಯಾಗಿದ್ದ ಶ್ರೀ ಲಕ್ಷ್ಮಣ ಸವದಿಯವರು ಒಂದು ವಿಷಯವನ್ನು ಕೇಳಿದರು. ಆ ಸಂದರ್ಭದಲ್ಲಿ

ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಏನೋ ಒಂದು ವಿಷಯವನ್ನು ಹೇಳುವುದಕ್ಕೆ ಬಂದರು, ಆದರೆ, ನಾನು ಅವರಿಗೆ ಹೇಳುವುದಕ್ಕೆ ಅನುಮತಿ ಕೊಡಲಿಲ್ಲ. ಅವರು ಯಾವುದೇ ವಿಷಯವನ್ನು ಹೇಳಿಲ್ಲ ಹಾಗೂ ಯಾವುದು ದಾಖಲೆಗೆ ಹೋಗಿಲ್ಲ. ಆದರೆ, ಇದಕ್ಕೆ ಸಂಬಂಧಪಟ್ಟ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಹಾಗಾಗಿ, ದಯವಿಟ್ಟು ಈ ಪ್ರಶ್ನೆಯ ಚರ್ಚೆಯನ್ನು ಇಲ್ಲಿಗೆ ಮುಗಿಸೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರತಿ ಅಧಿವೇಶನದಲ್ಲಿಯೂ ಒಂದು ಪ್ರಶ್ನೆಗೆ 20 ನಿಮಿಷಗಳು ಬೇಕಾ, ಒಂದು ಪ್ರಶ್ನೆಗೆ 30 ನಿಮಿಷಗಳು ಬೇಕಾ ಎಂದು ಹೇಳುತ್ತಿರುತ್ತಾರೆ, ಜನ ಸಾಮಾನ್ಯರ ವಿಷಯಗಳು ಬಂದಂತಹ ಸಂದರ್ಭದಲ್ಲಿ 25 ದಿವಸಗಳಾದರೂ ಅಥವಾ ಮೂವತ್ತು ದಿವಸಗಳಾದರೂ ಸಹ ಚರ್ಚೆಯಾಗಬೇಕಾಗುತ್ತದೆ. ಇದು ಸರ್ಕಾರದ ಜವಾಬ್ದಾರಿ. ಇದಕ್ಕೆ ಆಡಳಿತ ಪಕ್ಷದ ಸದಸ್ಯರು ಸಹಕಾರ ಕೊಡಬೇಕು. ಅವರೇ ಪ್ರಶ್ನೆ ಕೇಳಿ ಅವರೇ ಉತ್ತರ ತೆಗೆದುಕೊಳ್ಳುವುದಿಲ್ಲ. ಅವರು ಆಮೇಲೆ ಹೋಗಿ ಸಚಿವರನ್ನು ಕೇಳಬಹುದು. ನಮ್ಮ ವಿರೋಧ ಪಕ್ಷದ ಸದಸ್ಯರು ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ಅದಕ್ಕೆ ಸಮರ್ಪಕವಾದಂತಹ ಉತ್ತರ ಬಂದಿಲ್ಲ. ಅದರ ಜೊತೆಗೆ ಮಾನ್ಯ ಹಿರಿಯ ಸಚಿವರು ಏನೋ ಹೇಳುವುದಕ್ಕೆ ಎದ್ದು ನಿಂತರು. ಹಾಗಾಗಿ, ಅವರ ಅನಿಸಿಕೆಗಳನ್ನು ಹೇಳುವುದಕ್ಕೆ ಬಿಡಿ. ಅದಕ್ಕೆ ತೊಂದರೆ ಏನು? ಅವರು ರಾಜ್ಯ ಸರ್ಕಾರದ ಸಚಿವರಾಗಿದ್ದಾರೆ. ತಾವು ಶ್ರೀ ಲಕ್ಷ್ಮಣ ಸವದಿಯವರು ಉಪ ಮುಖ್ಯಮಂತ್ರಿಯಾಗಿದ್ದರು ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆಂದು ಹೇಳಿದ್ದೀರಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಉತ್ತರ ಕೊಡಲಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಮಂತ್ರಿಯಾದವರಿಗೆ ಅವರ ಅನಿಸಿಕೆಗಳನ್ನು ಹೇಳುವುದಕ್ಕೆ ಅವರಿಗೆ ಹಕ್ಕು ಇಲ್ಲವೇ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಉತ್ತರ ಹೇಳಿಲ್ಲ. ಅವರ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ ಅಷ್ಟೇ ಯಾವುದೋ ಒಂದು ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಒಬ್ಬ ಮಹಿಳೆಗೆ ನೋವಾಗಿದೆ ಎಂಬ ಸಂಗತಿಯನ್ನು ಹಂಚಿಕೊಂಡರಷ್ಟೇ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಸರ್ಕಾರದ ಸಚಿವರು, ಅವರು ಅವರ ಅನಿಸಿಕೆಯನ್ನು ಹೇಳಬೇಕೆಂದು ಇದ್ದಾರೆ. ಹಾಗಾಗಿ, ಅವರಿಗೆ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇವತ್ತು ಪ್ರಶ್ನೋತ್ತರ ಕಾಲದಲ್ಲಿ ಎತ್ತಿರುವಂತಹ ವಿಚಾರ, ನನ್ನ ಅನುಭವದಲ್ಲಿ ಇದರ ವಿಷಯ ವ್ಯಾಪ್ತಿ ಬಹಳ

ದೊಡ್ಡದಿದೆ. ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆಯನ್ನು ಮತ್ತು ಉತ್ತರವನ್ನು ಮಾಡುವುದಕ್ಕೆ ಸಾಧ್ಯತೆ ಇಲ್ಲ. ಹಾಗಾಗಿ, ಈ ವಿಷಯದ ಗಂಭೀರತೆಯನ್ನು ಅರಿತುಕೊಳ್ಳಬೇಕು. ಇದಕ್ಕೆ ಹತ್ತಾರು ಆಯಾಮಗಳಿವೆ. ಹಾಗಾಗಿ, ಇದಕ್ಕೆ ಪ್ರತ್ಯೇಕವಾದಂತಹ ಒಂದು ಸಮಯವನ್ನು ನಿಗದಿ ಮಾಡಿ ಎರಡೂ ಕಡೆಯ ಸದಸ್ಯರಿಗೆ ಮಾತನಾಡವುದಕ್ಕೆ ಅವಕಾಶ ಮಾಡಿಕೊಡಿ. ಅದಕ್ಕೆ ಸರ್ಕಾರ ಸಂಪೂರ್ಣವಾದ ಉತ್ತರವನ್ನು ಕೊಡುತ್ತದೆ.

**ಸಭಾಪತಿಯವರು:-** ಆಯಿತು. ಯಾರಾದರೊಂದು ಸದಸ್ಯರು ನೋಟೀಸ್ ಕೊಡಲಿ.,

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನೋಟೀಸ್ ಬೇಡ. ತಾವೇ ತೆಗೆದುಕೊಳ್ಳಿ.

**ಸಭಾಪತಿಯವರು:-** I will allow it.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, half an hour discussion ಗೆ ಅವಕಾಶ ಕೊಡಿ.

**ಸಭಾಪತಿಯವರು:-** ಆಯಿತು, ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ತಾವು ಇದಕ್ಕೆ half an hour discussion ಗೆ ಅವಕಾಶ ಕೊಡಿ. ಇದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ. ಇದಕ್ಕೆ ಪರಿಹಾರ ಕೊಡೋಣ.

**ಸಭಾಪತಿಯವರು:-** ಸರ್, ಸರಿ. ಮಾನ್ಯ ಗೋವಿಂದರಾಜುರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಮಾನ್ಯ ಸಕ್ಕರೆ ಸಚಿವರು ಉತ್ತರವನ್ನು ಕೊಡುತ್ತಿದ್ದರು.,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮತ್ತೆ ಅದೇ ವಿಷಯಕ್ಕೆ ಹೋಗುತ್ತಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿದಂತಹ ಸದಸ್ಯರಿಗೆ ಸಮರ್ಪಕವಾದಂತಹ ಉತ್ತರ ಬರಲಿಲ್ಲವೆಂದು ಪದೇ ಪದೇ ಕೇಳುತ್ತಿದ್ದಾರೆ. ಈ ನಡುವೆ ಮಾಜಿ

ಸಚಿವಾರದಂತಹ ಶ್ರೀ ಲಕ್ಷ್ಮಣ ಸವದಿಯವರಿಗೂ ಸಹ ಒಂದು ಅವಕಾಶವನ್ನು ಕೊಟ್ಟಿದ್ದೀರಿ. ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಈ ವಿಷಯವನ್ನು ಇಲ್ಲಿಗೆ ಮುಗಿಸೋಣ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಈ ವಿಷಯವನ್ನು ಅರ್ಧಗಂಟೆ ಕಾಲದ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಆಗ ತಾವು ಏನು ಮಾತನಾಡುತ್ತೀರೋ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ಮಧ್ಯೆ ಮಾನ್ಯ ಸಚಿವರಾದಂತಹ ಮುರುಗೇಶ್ ನಿರಾಣಿಯವರು ಈ ಬಗ್ಗೆ ಮಾತನಾಡುತ್ತೇನೆಂದು ಎದ್ದು ನಿಂತರು. ಆದರೆ, ತಾವು ಅವರಿಗೆ ಅವಕಾಶ ಕೊಡುವುದಿಲ್ಲವೆಂದು ಸಂಪೂರ್ಣ ನಿರಾಕರಿಸಿದ್ದೀರಿ. ಈ ಸದನದ ನಿಯಮಾಳಿಯ ಪ್ರಕಾರ ಒಬ್ಬ ಸಚಿವರು ಒಂದು ವಿಷಯದ ಬಗ್ಗೆ ಹೇಳಿಕೆ ಮಾಡುತ್ತೇನೆಂದು ಹೇಳಿದರೆ, ತಾವು ಅದನ್ನು ಪೀಠದಿಂದ ನಿರಾಕರಿಸುತ್ತೀರಿ ಎಂದರೆ,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಲ್ಲ. ತಾವು ಅವರಿಗೆ ಹೇಳಿಕೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವರು ಸರ್ಕಾರದಲ್ಲಿ ಸಚಿವರಾಗಿರುವಂತಹವರು ಹೇಳಿಕೆ ಕೊಡುತ್ತೇನೆಂದರೆ.,

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಅವರಿಗೆ ಅವಕಾಶ ಕೊಡಿ. ಮಾನ್ಯ ಸಚಿವರು ಏನು ಹೇಳುತ್ತಾರೆ ಎನ್ನುವುದನ್ನು ತಿಳಿದುಕೊಂಡು ನಾವು ಚರ್ಚೆ ಮಾಡುತ್ತೇವೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಅವರ ಸ್ಥಾನದಿಂದ ಬಾವಿಗೆ ಬಂದು ಧರಣಿ ನಿರತರಾದರು)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ದಯವಿಟ್ಟು ಬಾವಿಯಿಂದ ಹೊರಗೆ ಬನ್ನಿ. ತಾವು ಹಿರಿಯ ಸದಸ್ಯರು ಇದ್ದೀರಿ. ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ತಮಗೆ ಇನ್ನೇನು ಹೇಳಬೇಕು? ದಯವಿಟ್ಟು ಬಾವಿಯಿಂದ ಹೊರಗೆ ಬನ್ನಿ. ಮಾನ್ಯ ಸದಸ್ಯರಾದ ವೆಂಕಟೇಶ್‌ರವರೇ, ತಾವು ಮಾತನಾಡಿ. ನಾನು ಇದನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**(ಮುಂದು)**

**(1055) 20-12-2022 (12.50) ಎಂವಿ-ಬಿಎನ್‌ಎಸ್**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವುಗಳು ನಾನು ಹೇಳಿದ ಹಾಗೆ ಕೇಳಬೇಕೆಂದು ಏನೂ ಇಲ್ಲ. ಅದೇ ರೀತಿ ನಾವು ಕೂಡ ಸರ್ಕಾರ ಹೇಳಿದ್ದನ್ನು ಕೇಳಬೇಕೆಂದು ಏನೂ ಇಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ನೀಡುತ್ತಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರಿಗೆ ತಿಳಿಸಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ half an hour discussion ಗೆ ಇವತ್ತೆ ತೆಗೆದುಕೊಳ್ಳಲಿ, ಅದಕ್ಕೆ ನಮ್ಮ ತಕರಾರು ಏನೂ ಇಲ್ಲ. ಚರ್ಚೆಯ ಸಂದರ್ಭದಲ್ಲಿ ಮಾನ್ಯ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರು ಉತ್ತರ ನೀಡುತ್ತಾರೆ. ತಾವು ಯಾವಾಗ half an hour discussion ಗೆ fix ಮಾಡುತ್ತೀರಿ, ಆಗ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮಾವಳಿಯಲ್ಲಿ ಆ ರೀತಿಯ ಅವಕಾಶವಿಲ್ಲ. **(ಮಾನ್ಯ ಸದಸ್ಯರು ಸದನದ ಬಾವಿಯಿಂದ ಮಾತನಾಡಿದರು)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ ತಾವು ಪೀಠಕ್ಕೆ ಪ್ರಶ್ನೆ ಮಾಡುವಂತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆ ರೀತಿಯ ಅವಕಾಶ ಏಕೆ ಇಲ್ಲ? ಮಾನ್ಯ ಸದಸ್ಯರು ಹೇಳಿದ ಹಾಗೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮದ ಪ್ರಕಾರ ಸದನ ನಡೆಯಲಿ.

**ಡಾ||ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರ ಪ್ರಶ್ನೆಯಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಸದನ ಯಾರ ಸ್ವತ್ತಲ್ಲ. ಸದನ ನಿಯಮದ ಅನುಸಾರ ನಡೆಯುತ್ತದೆ. ಈಗ ಅರ್ಧಗಂಟೆ ಚರ್ಚೆ ಮಾಡುವುದು ಬೇರೆ. ಅದು ಯಾವ ನಿಯಮದ ಅಡಿಯಲ್ಲಿ ಇದೆ ಎಂದು ಹೇಳಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ಮತ್ತು ಶ್ರೀ ಮರಿತಿಬ್ಬೇಗೌಡರೆ ತಾವುಗಳು ಸ್ವಲ್ಪ ಇರಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾವುಗಳು ಸದನದ ಬಾವಿಗೆ ಬರುವಂತಹ ಕೆಲಸಕ್ಕೆ ತಾವು ಅವಕಾಶ ಮಾಡಿಕೊಡಬೇಡಿ, ಅಷ್ಟೆ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಿಂದ ನಿರ್ಗಮಿಸಿದರು)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ರೈತರ ಸಮಸ್ಯೆ. **(ಮಾನ್ಯ ಸದಸ್ಯರು ಸದನದ ಬಾವಿಯಿಂದ ಮಾತನಾಡಿದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಚರ್ಚೆಗೆ ಅವಕಾಶ ಮಾಡಿಕೊಡಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಪೀಠದಿಂದ ತಾವೇ ಆದೇಶ ಮಾಡಿದ್ದೀರಿ. ಆದರೂ ತಾವು ಏಕೆ ರೀತಿ ಮಾಡುತ್ತಿದ್ದೀರಿ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಇದಕ್ಕೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನನಗೆ ಹಕ್ಕಿಲ್ಲವೆ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ನಮ್ಮ ಕಳಕಳಿಯ ಮನವಿ ಏನೆಂದರೆ, ಮಾನ್ಯ ಸಚಿವರು ಒಬ್ಬ ಹಿರಿಯ ಸಚಿವರು, ಅವರು ಕಬ್ಬು ಬೆಳೆಗಾರರ ಮತ್ತು ಉತ್ಪಾದಕರ ಸ್ಥಿತಿಗತಿಗಳ ಬಗ್ಗೆ ತಿಳಿಸುತ್ತಿದ್ದಾರೆ.

**ಸಭಾಪತಿಯವರು:-** ನಾನು ತೀರ್ಮಾನವನ್ನು ತೆಗೆದುಕೊಳ್ಳಬೇಕು ಅಲ್ಲವೆ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹೌದು ತಾವು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ದಯವಿಟ್ಟು ಮಾನ್ಯ ಸಚಿವರಿಗೆ ಅವಕಾಶ ಮಾಡಿಕೊಡಿ ಎಂದು ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಆದುದರಿಂದ ದಯವಿಟ್ಟು ತಾವು ಮಾನ್ಯ ಸಚಿವರಿಗೆ ಅವಕಾಶ ಮಾಡಿಕೊಡಬೇಕು. ಮತ್ತೆ ತಾವು ನಾವು ಹೇಳಿದ ಹಾಗೆ ಕೇಳಬೇಕೆಂದು ಹೇಳುತ್ತಿಲ್ಲ. ಅದೇ ರೀತಿ ನಾವು ಕೂಡ ಸರ್ಕಾರ ಹೇಳಿದ್ದನ್ನೆಲ್ಲಾ ಕೇಳಬೇಕೆಂದು ಏನೂ ಇಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಹೇಳುತ್ತಿರುವುದೆಲ್ಲಾ ಸರಿಯಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸದನ ನಡೆಯುವುದಕ್ಕೆ ಸಂಬಂಧಪಟ್ಟಂತೆ ನಿಯಮವಿದೆ, ಅದರ ನಿಯಮಕ್ಕನುಗುಣವಾಗಿ ಸದನ ನಡೆಯಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ವಿಷಯವನ್ನು ನನಗೆ ಬಿಡಿ, ನಾನು ಅದಕ್ಕೆ ಸಂಬಂಧಪಟ್ಟಂತೆ ನಿರ್ಣಯ ತೆಗೆದುಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋದ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಪ್ರಶ್ನೆ ಕೇಳಿದ್ದೇನೆ. ಆದರೆ, ನನ್ನ ಪ್ರಶ್ನೆಗೆ ಸರ್ಕಾರ ಉತ್ತರ ನೀಡಿಲ್ಲ. ಸರ್ಕಾರ ಕಬ್ಬು ಬೆಳೆಗಾರರ ವಿರುದ್ಧವಿದೆ ಎಂದು ಹೇಳುತ್ತಿದ್ದೇನೆ. ಸರ್ಕಾರ ಸಕ್ಕರೆ ಕಾರ್ಖಾನೆಯ ಮಾಲೀಕರಿಗೆ ಆಸ್ಪದ ನೀಡುತ್ತಿದ್ದಾರೆ. ಸರ್ಕಾರ ಕಬ್ಬು ಬೆಳೆಗಾರರ ವಿರುದ್ಧವಿದೆ ಎಂದು ಪ್ರಶ್ನೆ ಕೇಳಿದ್ದೇನೆ. ನನಗೆ ಸಮಂಜಸವಾದಂತಹ ಉತ್ತರ ಬಂದಿಲ್ಲ. ನನ್ನ ಪ್ರಶ್ನೆಗೆ ಉತ್ತರ ನೀಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಸದನದ ಬಾವಿಯಲ್ಲಿರುವ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಬರುವುದಕ್ಕೆ ತಿಳಿಸಿ. ನಾನು ಮಾನ್ಯ ಸಚಿವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ತಾವು ಅವಕಾಶ ಮಾಡಿಕೊಡುತ್ತೀರಾ?

**ಸಭಾಪತಿಯವರು:-** ಹೌದು, ನಾನು ಮಾನ್ಯ ಸಚಿವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**(ಈ ಹಂತದಲ್ಲಿ ಧರಣಿ ನಿರತ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಿಂದ ತಮ್ಮ ಸ್ಥಾನಗಳಿಗೆ ತೆರಳಿದರು)**

**ಸಭಾಪತಿಯವರು:-** ಮಾನ್ಯ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವಿರೋಧ ಪಕ್ಷದ ಸಚೇತಕರಾದ ಶ್ರೀ ಪ್ರಕಾಶ್ ಕೆ.

ರಾಥೋಡ್‌ರವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ದಯವಿಟ್ಟು ಕೇಳಬೇಕು. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರೆ, ಪ್ರಶ್ನೋತ್ತರ ವೇಳೆಯಲ್ಲಿ ತಾವು ಈ ರೀತಿ ಮಾಡಿದರೆ, ನಾನು ಸದನವನ್ನು ನಡೆಸುವುದು ಹೇಗೆ? ತಾವು ನನ್ನ ಪರಿಸ್ಥಿತಿಯನ್ನು ಸಹ ಅರ್ಥ ಮಾಡಿಕೊಳ್ಳಿ. ತಾವು ಈ ಹಿಂದೆ ಉಪಸಭಾಪತಿಗಳಾಗಿ ಈ ಪೀಠದ ಮೇಲೆ ಕುಳಿತು ಕರ್ತವ್ಯ ನಿರ್ವಹಿಸಿದಂತಹವರು. ತಾವೇ ಈ ರೀತಿ ಮಾಡಿದರೆ, ನಮ್ಮ ಗತಿ ಏನೆಂದು ಹೇಳಿ. ಮಾನ್ಯ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರು ಸಚಿವ ಸಂಪುಟದ ಒಬ್ಬ ಹಿರಿಯ ಸಚಿವರು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಬಹಳ ಗೌರವ ನೀಡುತ್ತೇನೆ. ಇದು ಕಬ್ಬು ಬೆಳೆಗಾರರ ಸಮಸ್ಯೆ. ಇದು ಈ ಭಾಗದ ಮತ್ತು ಆ ಭಾಗದ ಕಬ್ಬು ಬೆಳೆಗಾರರ ದೊಡ್ಡ ಜ್ವಲಂತ ಸಮಸ್ಯೆ. ಅದಕ್ಕೆ ನಾವೆಲ್ಲರೂ ಕೂಡ, ಅಂದರೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರೆಲ್ಲರೂ ಕೂಡ ಕಬ್ಬು ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ಮಾನ್ಯ ಸಚಿವರು ಸಕ್ಕರೆ ಕಾರ್ಖಾನೆಯ ಯಶಸ್ವಿ ಮಾಲೀಕರಾಗಿ, ಇಂತಹ issue ನಲ್ಲಿ ಹೇಳಿಕೆ ನೀಡುವಾಗ, ತಾವು ಅವರು ಹೇಳಿಕೆ ಮಾಡಕೂಡದು ಎಂದು ನಿರಾಕರಣೆ ಮಾಡಿದ್ದೀರಲ್ಲ, ಆ ಕಾರಣಕ್ಕೋಸ್ಕರ. ಇವತ್ತು ಮಾನ್ಯ ಸಚಿವರಿಂದ ಪರಿಹಾರಕ್ಕೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಒಂದು ಒಳ್ಳೆಯ ಸಲಹೆ ಸಿಗುತ್ತದೆ. ಇದರಿಂದ ರಾಜ್ಯದ ರೈತರಿಗೆ ಒಳ್ಳೆಯದಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಹೇಳಿಕೆ ನೀಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರು ಸಚಿವ ಸಂಪುಟದ ಒಬ್ಬ ಹಿರಿಯ ಸಚಿವರು. ನಾನು ಈ ಸದನವನ್ನು ನಡೆಸಬೇಕು. ಅದಕ್ಕೆ ತಾವು ಸಹಕಾರ ನೀಡಬೇಕು. ಸಂಬಂಧಪಟ್ಟಂತಹ ಇಲಾಖೆಯ ಸಚಿವರು ಸಮರ್ಪಕವಾದಂತಹ ಉತ್ತರ ನೀಡುತ್ತಿದ್ದಾರೆ. ಅದರ ಮಧ್ಯದಲ್ಲಿ ತಾವು ಹೇಳಿಕೆ ನೀಡಬೇಕು ಎಂದು ಕಡ್ಡಾಯವಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಆದರೂ ಕೂಡ ತಾವು ಎದ್ದು ನಿಂತಿದ್ದೀರಿ. ಅದಕ್ಕೆ ಎಲ್ಲಾ ಸದಸ್ಯರು ಇದರ ಬಗ್ಗೆ ಕೇಳುತ್ತಿದ್ದಾರೆ. ಆದುದರಿಂದ ತಾವು ದಯವಿಟ್ಟು ತಮ್ಮ ಹೇಳಿಕೆಯನ್ನು ಬೇಗ ಮುಗಿಸಿಬಿಡಿ.

**ಡಾ|| ಮುರುಗೇಶ್ ಆರ್. ನಿರಾಣಿ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಮಧ್ಯದಲ್ಲಿ ಮಾತನಾಡುವುದಕ್ಕೆ ಎದ್ದು ನಿಂತಿದ್ದು ಏಕೆಂದರೆ, ಮಾನ್ಯ ಸಕ್ಕರೆ ಸಚಿವರು ಬಹಳ ಸಮರ್ಪಕವಾಗಿ ಉತ್ತರ ನೀಡುತ್ತಿದ್ದರು, ಆದರೆ, ಅವರು ಈ

ವಿಷಯವನ್ನು touch ಮಾಡಲಿಲ್ಲ. ಮಾನ್ಯ ಸಕ್ಕರೆ ಸಚಿವರು ಬಹಳ ಚೆನ್ನಾಗಿ ಉತ್ತರ ನೀಡಿದರು. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ, ತಾವು ಏಕೆ ನನಗೆ ಮಾತನಾಡುವ ಅವಕಾಶವನ್ನು deny ಮಾಡಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸಕ್ಕರೆ ಸಚಿವರು ಸಮರ್ಪಕವಾಗಿ ಉತ್ತರ ನೀಡುತ್ತಿದ್ದರು. ಆದುದರಿಂದ ಮಧ್ಯದಲ್ಲಿ ತಾವು ಏಕೆ ಈ ರೀತಿ ಮಾಡುತ್ತಿದ್ದೀರಿ ಎಂದು ಅಷ್ಟೆ, ಬೇರೆ ಏನೂ ಇಲ್ಲ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಪ್ರಶ್ನೆ ಕೇಳಿದರು, ಅದಕ್ಕೆ ಮಾನ್ಯ ಸಕ್ಕರೆ ಸಚಿವರು ಏನು ಉತ್ತರ ನೀಡಿದರು, ಅದರ ಮಧ್ಯದಲ್ಲಿ ಬಿಟ್ಟು ಹೋಗಿರುವುದನ್ನು ಹೇಳುವುದಕ್ಕೆ ಮಾತ್ರ ನಾನು ಎದ್ದು ನಿಂತೆ. ಆದರೆ, ನನಗೆ ಆ ರೀತಿ ಏಕೆ ಮಾಡಿದಿರಿ ಎಂದು ಗೊತ್ತಾಗಲಿಲ್ಲ. ನಾನು ಸಹ ಸಣ್ಣ ಸಣ್ಣ ಕಾರ್ಖಾನೆಗಳನ್ನು ನಡೆಸುತ್ತಿದ್ದೇನೆ. ನನಗೆ ಪ್ರಾಕ್ಟಿಕಲ್ ಆಗಿ ಅನುಭವವಿದೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ನನಗೆ ತಮ್ಮ ಬಗ್ಗೆ ಸಂಪೂರ್ಣ ಅರಿವು ಇದೆ. ಈಗ ತಾವು ತಮ್ಮ ಹೇಳಿಕೆಯನ್ನು ನೀಡಿ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಏನಾದರೂ ಇದ್ದರೆ, ತಾವು ನನಗೆ ಅವಕಾಶ ಮಾಡಿಕೊಡುತ್ತಿದ್ದಿರಿ. ಮಾನ್ಯ ಸದಸ್ಯರುಗಳಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಮತ್ತು ಶ್ರೀ ಪಿ.ಆರ್.ರಮೇಶ್‌ರವರು ಕೇಳಿರುವಂತಹ ಪ್ರಶ್ನೆಯಲ್ಲಿ ಒಂದು ಟನ್ ಕಬ್ಬಿಗೆ ಎಷ್ಟು ಎಥೆನಾಲ್ ಬರುತ್ತದೆ ಎಂದು ಒಂದು ಸಿಂಪಲ್ ಪ್ರಶ್ನೆ ಇತ್ತು. ಅದಕ್ಕೆ ಮಾನ್ಯ ಸಕ್ಕರೆ ಸಚಿವರು ಉತ್ತರ ನೀಡುತ್ತಿದ್ದರು. ಆಗ ನಾನು ಅವರ ಅನುಮತಿ ಪಡೆದು ಮಾತನಾಡುವುದಕ್ಕೆ ಎದ್ದು ನಿಂತೆ. ನಾನು ಎಥೆನಾಲ್ ಉತ್ಪಾದನೆ ಮಾಡುವುದರಲ್ಲಿ ಭಾರತ ದೇಶದಲ್ಲಿ ಅಷ್ಟೆ ಅಲ್ಲ, ಇಡೀ ಏಷ್ಯಾದಲ್ಲಿಯೇ highest ಎಥೆನಾಲ್ ಉತ್ಪಾದನೆಯನ್ನು ನಿರಾಣಿ ಗ್ರೂಪ್ ಮಾಡುತ್ತಿದೆ. ಒಂದು ದಿವಸಕ್ಕೆ ಸುಮಾರು 25 ಲಕ್ಷ ಲೀಟರ್ ಉತ್ಪಾದನೆಯಾಗುತ್ತದೆ. ಆದುದರಿಂದ ಅದರ ಬಗ್ಗೆ ನನಗೆ ಅಲ್ಪಸ್ವಲ್ಪ ಜ್ಞಾನವಿದೆ. ಅದಕ್ಕೆ ನಾನು ಮಧ್ಯ ಪ್ರವೇಶ ಮಾಡಿ, ನಾನು ಮಾನ್ಯ ಸಕ್ಕರೆ ಸಚಿವರ ಪರವಾಗಿ ಮಾತನಾಡುತ್ತೇನೆಂದು, ಅವರ ಅನುಮತಿ ಪಡೆದು ಎದ್ದು ನಿಂತೆ. ಇದು ಕೇವಲ ಒಂದು ನಿಮಿಷದ ಉತ್ತರವಿತ್ತು. ಇಷ್ಟೆಲ್ಲಾ ಆಗುತ್ತಿರಲಿಲ್ಲ. ಇದರ ಸಲುವಾಗಿ ತಾವು ಏಕೋ ಗಮನ ಹರಿಸಲಿಲ್ಲ, ಅದು ಹೋಗಲಿ ಬಿಡಿ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಏನನ್ನು ಹೇಳುವುದಕ್ಕೆ ಹೊರಟ್ಟಿದ್ದೀರಿ, ನನಗೆ ಕಪೋಲಕಲ್ಪಿತವಾದ ವಿಚಾರ ಏನೂ ಇಲ್ಲ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ನನ್ನ ಬಳಿ ಒಂದು ದಿವಸ ಪೂರ್ತಿ ಮಾತನಾಡುವಷ್ಟು ವಿಷಯವಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಸಚಿವರು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ.

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ ಆಗಿರುವುದು ಏನೆಂದರೆ, ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಮಾತನಾಡುವಾಗ, ಮಾನ್ಯ ಸಚಿವರು ಮಾತನಾಡುವುದಕ್ಕೆ ಹೋಗಿದ್ದ ವಿಷಯವನ್ನು ಮರೆತುಬಿಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಈಗ ಮಾನ್ಯ ಸಚಿವರು ಏನು ಹೇಳಬೇಕು ಎಂಬುದನ್ನು ತಾವು ಹೇಳುತ್ತೀರಾ? ಈಗ ಮಾನ್ಯ ಸಚಿವರು ಮಾತನಾಡಲಿ ಬಿಡಿ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಈಗ ಇರುವ ಪ್ರಶ್ನೆ ಇಷ್ಟೆ. ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಒಂದು ಟನ್ ಕಬ್ಬಿಗೆ ಎಷ್ಟು ಎಥೆನಾಲ್ ಬರುತ್ತದೆಂದು ಪ್ರಶ್ನಿಸಿದರು. ಮಾನ್ಯ ಸಕ್ಕರೆ ಸಚಿವರಾದ ಶ್ರೀ ಶಂಕರ್ ಬಿ. ಪಾಟೀಲ ಮುನ್ನೇನಕೊಪ್ಪ ರವರು ಉತ್ತರ ನೀಡುವಾಗ ಎಥೆನಾಲ್‌ಗೆ ಸಂಬಂಧಪಟ್ಟಂತೆ ಅವರಿಂದ ಉತ್ತರ ಬರಲಿಲ್ಲ. ಅದಕ್ಕೋಸ್ಕರ ಮಾನ್ಯ ಸಕ್ಕರೆ ಸಚಿವರಿಂದ ಮಾತನಾಡುವುದಕ್ಕೆ ಅನುಮತಿ ಪಡೆದುಕೊಂಡೆ. ಅದಕ್ಕೆ ಅವರು 'yes' ಎಂದು ಹೇಳಿದರು. ಆದರೆ, ತಾವು ನನಗೆ ಮಾತನಾಡಲು ಅನುಮತಿ ಕೊಡಲಿಲ್ಲ.

ಈಗ ಒಂದು ಟನ್ ಕಬ್ಬಿಗೆ ಶೇಕಡಾ 10ರಷ್ಟು ರಿಕವರಿ. ಏಕೆಂದರೆ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಶೇಕಡಾ 9ರಷ್ಟು ರಿಕವರಿ ಇರುವುದರಿಂದ, ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಭಾಗಗಳಿಂದ ಶೇಕಡಾ 13.5 ರವರೆಗೆ ಬರುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ low ರಿಕವರಿ ಇರುವಂತಹ ಬೆಲ್ಟ್, ಮಧ್ಯ ಕರ್ನಾಟಕದಲ್ಲಿ ಮೀಡಿಯಂ ರಿಕವರಿ ಇದೆ. ಅದೇ ರೀತಿ ಬೆಳಗಾವಿ ಜಿಲ್ಲೆಯಲ್ಲಿ ಜಾಸ್ತಿ ಇದೆ. ಕಲಬುರಗಿ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಮಧ್ಯ ಕರ್ನಾಟಕದಷ್ಟು ಸಮಾನ ಇರುತ್ತದೆ. ಅಂದರೆ, ನಾವು ಎಲ್ಲಾ ಕಡೆಗಳಲ್ಲೂ ಸಹ ಒಂದು ಟನ್ ಕಬ್ಬಿಗೆ ಸಮಾನ ಬೆಲೆ ಕೊಡುವುದಕ್ಕೆ ಆಗುವುದಿಲ್ಲ. ಅದರ ಸಲುವಾಗಿ average ಆಗಿ ಶೇಕಡಾ 10ರಷ್ಟು ರಿಕವರಿಗೆ ಎಫ್.ಆರ್.ಪಿ.ಯಲ್ಲಿ

ಇಡೀ ದೇಶದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ವರ್ಷ ಒಂದು ಸಮಿತಿಯಾಗುತ್ತದೆ. ಈ ಸಮಿತಿಯಲ್ಲಿ ಡಾ॥ರಂಗರಾಜನ್ ರವರು ಇಡೀ ದೇಶವನ್ನು ಸುತ್ತಿ, ಅಲ್ಲೆಲ್ಲಾ ನಿವೃತ್ತಿ ಹೊಂದಿದ ಐ.ಎ.ಎಸ್. ಅಧಿಕಾರಿಗಳು, ಕಬ್ಬು ಬೆಳಗಾರರು, ರೈತ ಸಂಘದವರು, National Sugar Institute, Kanpur, Vasantdada Sugar Institute, Pune, ಇವರೆಲ್ಲರೂ ಸೇರಿಕೊಂಡು ಅದರ ಬಗ್ಗೆ ಒಂದು ವರ್ಷ ಸ್ಟಡಿ ಮಾಡಿ, ಒಂದು conclusion ಗೆ ಬಂದರು. ಒಟ್ಟು ಇರುವಂತಹ ಆದಾಯ ಅಂದರೆ, ಮೂಲ ಸಕ್ಕರೆಯ ಆದಾಯವನ್ನು ತೆಗೆದುಕೊಂಡರೆ, ಎಷ್ಟು percentage ಅನ್ನು ಕೊಡಬೇಕು; ಮತ್ತೆ by-product ಇರುವಂತಹ cogeneration, distillery ಅದರ ಜೊತೆಗೆ CNG, CO2, ಬಹಳಷ್ಟು by-product ಬರುತ್ತದೆ. ಅವುಗಳೆಲ್ಲಾ ಬಂದಾಗ ಎಷ್ಟು ಕೊಡಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಒಂದು ವರದಿ ಇದೆ. ಆ ವರದಿಯನ್ನು ರೈತ ಸಂಘದವರು ಒಪ್ಪಿದ್ದಾರೆ, ಕಬ್ಬು ಬೆಳೆಗಾರರು ಒಪ್ಪಿದ್ದಾರೆ ಮತ್ತು ಕಾರ್ಖಾನೆಯ ಮಾಲೀಕರು ಒಪ್ಪಿದ್ದಾರೆ. ಅದೇ ರೀತಿ ಸರ್ಕಾರ ಸಹ ಒಪ್ಪಿದೆ. ಈ ರೀತಿ ಇದ್ದಾಗ, ಇವತ್ತು ಅದೇ ಅಂತಿಮ ಎಂದು ಇದೆ. ಈಗ ಎಫ್.ಆರ್.ಪಿ. ರೇಟ್ ಕೊಡುತ್ತಿರುವುದು ಅಂತಿಮ. ಅದರಲ್ಲಿ ಶೇಕಡಾ 10ರಷ್ಟು ರಿಕವರಿಗಿಂತ ಕೆಳಗೆ ಬಂದರೂ ಸಹ ಅವರಿಗೆ ಶೇಕಡಾ 10ರಷ್ಟನ್ನೇ ಕೊಡಬೇಕು. ಈಗ ಮೈಸೂರು ಭಾಗದಲ್ಲಿ ಶೇಕಡಾ 9ರಷ್ಟು ಬಂದರೂ ಸಹ, FRP cut off 10% ಇರುತ್ತದೆ. ಅದರ ಮೇಲೆ ಅದನ್ನು add ಮಾಡಿಕೊಂಡು ಹೋಗುತ್ತಾರೆ. ಆಮೇಲೆ ಶೇಕಡಾ 10ರಷ್ಟು ರಿಕವರಿ ಬಂದ ಮೇಲೆ, ಈಗ ಮಾನ್ಯ ಸದಸ್ಯರು ರೂ.5,500/- ಎಂದು ಹೇಳಿದರು. ಈಗ ಎಥೆನಾಲ್ ಬೆಲೆ ರೂ.3,200/- ಬರುತ್ತದೆ ಎಂದು ಹೇಳಿದರು. ಆದರೆ, ಅಷ್ಟು ವ್ಯತ್ಯಾಸವಿಲ್ಲ. ಆ ರೀತಿ calculation ಮಾಡುವುದರಿಂದ...

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಸುಮಾರು 75 ರಿಂದ 80 ಲೀಟರ್ ಬರುತ್ತದೆ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಒಂದು ನಿಮಿಷ ಇರುವುದಕ್ಕೆ ಹೇಳಿ. ಏಕೆಂದರೆ, ನಾನು ಪ್ರಾಕ್ಟಿಕಲ್ ಆಗಿ ಕಾರ್ಖಾನೆಯನ್ನು ನಡೆಸುತ್ತಿದ್ದೇನೆ. ಅದರ ಬಗ್ಗೆ ಯಾರಿಗಾದರೂ ಸಂಶಯ ಬಂದರೆ, ನಾನು ಅವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗುತ್ತೇನೆ. ಇವತ್ತು ಒಂದು ಕೆ.ಜಿ. ಸಕ್ಕರೆಗೆ 32/- ರೂಪಾಯಿ ಬೆಲೆ ಇದೆ. ಅದೇರೀತಿ ಒಂದು ಕ್ವಿಂಟಲ್ ಸಕ್ಕರೆ ಬೆಲೆ 3,250/- ರೂಪಾಯಿ ಇದೆ. ಆದರೆ, ಎಥೆನಾಲ್

ಬೆಲೆಯನ್ನು ಶೇಕಡಾ 10ರಷ್ಟು ರಿಕವರಿಗೆ ಮೂರು ಭಾಗದಲ್ಲಿ ವಿಂಗಡಣೆ ಮಾಡಿದ್ದಾರೆ. ಒಂದು molasses ನಿಂದ ಮಾಡಿದರೆ, ಪ್ರತಿ ಲೀಟರ್‌ಗೆ 48/- ರೂಪಾಯಿಗಳು. ಸ್ವಲ್ಪ molasses ಮತ್ತು ಸಕ್ಕರೆ ಅಂಶವನ್ನು ಕೂಡಿಸಿ ಕೊಟ್ಟರೆ B heavy molasses ಎಂದು ಕರೆಯುತ್ತೇವೆ ಅದರ ಬೆಲೆ ಪ್ರತಿ ಲೀಟರ್‌ಗೆ 63/- ರೂಪಾಯಿ ಇದೆ.

**(ಮುಂದು)**

**(1056) 20.12.2022 01.00 LL-GR** (ಸಭಾಪತಿಯವರ ಉಪಸ್ಥಿತಿ)

**ಡಾ: ಮುರುಗೇಶ್ ಆರ್. ನಿರಾಣಿ (ಮುಂದು):**

ಆಮೇಲೆ pure ಕಬ್ಬಿನ ಜ್ಯೂಸ್‌ನಿಂದಲೇ ಎಥೆನಾಲ್ ಮಾಡಿದರೆ, ಅದಕ್ಕೆ ರೂ.65.00 ಇದೆ. ಹೌದು, 61 ಪೈಸೆ ಇದೆ. ಇದರಲ್ಲಿ ರೂ.65X10 ಮಾಡಿದರೆ ಎಷ್ಟಾಗುತ್ತದೆ ಎಂಬುದನ್ನು ನೋಡಿರಿ. ಅದರ ಜೊತೆಗೆ, ಶೇಕಡ 10ರಷ್ಟು ರಿಕವರಿ ಬಂದಾಗ, ರೂ.32.00 ಬಂದು ಅದಕ್ಕೆ ಶೇಕಡ 4ರಷ್ಟು molasses ಇರುತ್ತದೆ. 2 ಕೆ.ಜಿ.ಯಷ್ಟು ಎಥೆನಾಲ್ ಮಾಡಿದಾಗ, ಅಲ್ಲಿ molasses ಬರುವುದಿಲ್ಲ. ಅದರಂತೆ, ಒಂದು ಟನ್ ಕಬ್ಬಿಗೆ ಶೇಕಡ 10ರಷ್ಟು ರಿಕವರಿ ಮಾಡಿ, ರೂ.3,250.00 ಮತ್ತು ಅದರ ಜೊತೆಗೆ 40 ಕೆ.ಜಿ. molasses ಎಂದರೆ ಅದು ರೂ.400.00 ಸೇರಿದರೆ, ಅದು ರೂ.3,650.00 ಆಗುತ್ತದೆ. ಅದರಲ್ಲಿ ಎರಡೂ ವ್ಯತ್ಯಾಸಗಳನ್ನು ತೆಗೆದರೆ ರೂ.3.00 ವ್ಯತ್ಯಾಸ ಆಗುತ್ತದೆ. ಅಂದರೆ, ಪ್ರತಿ ಟನ್‌ಗೆ ರೂ.300.00 ಆಗುತ್ತದೆ. ಎಥೆನಾಲ್ ಮತ್ತು ಶುಗರ್ ಮಾಡುವುದಕ್ಕೆ ಇಷ್ಟು ವ್ಯತ್ಯಾಸಗಳು ಇರುತ್ತವೆ. ಒಂದು ವೇಳೆ ತಾವು ಬಯಸಿದರೆ ನನ್ನ ಫ್ಯಾಕ್ಟರಿಗೆ ನಾನು ಕರೆದುಕೊಂಡು ಹೋಗುತ್ತೇನೆ.

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ, ತಾವು ವಿಷಯ ಪ್ರಾರಂಭ ಮಾಡಿದ್ದು, ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸವದಿಯವರು ಫ್ಯಾಕ್ಟರಿ ಮಾಲೀಕರು ತೂಕದಲ್ಲಿ ಮೋಸ ಮಾಡುತ್ತಿದ್ದಾರೆಂದು ಶುರು ಮಾಡಿರುತ್ತೀರಿ. ಅದನ್ನು ಬಿಟ್ಟು ತಾವು ಬೇರೆ ವಿಷಯದ ಕಡೆ ಏತಕ್ಕೆ ಹೋಗುತ್ತಿದ್ದೀರಿ?

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಈ ವಿಷಯ ಮುಕ್ತಾಯವಾದ ನಂತರ ನಾನು ಆ ವಿಷಯಕ್ಕೆ ಬರುತ್ತೇನೆ.

**ಸಭಾಪತಿಯವರು:-** ಮಾನ್ಯ ಮಂಜೇಗೌಡರವರೇ ತಾವು ಮಾತನಾಡುವುದಕ್ಕೆ ನಾನು ಅವಕಾಶ ನೀಡಿರುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಎಥೆನಾಲ್ ಮತ್ತು ಶುಗರ್ ಫ್ಯಾಕ್ಟರಿ ಕೋ ಜನರೇಷನ್ ಬಗ್ಗೆ ಒಂದು ದಿವಸ ಮಾತನಾಡಬಹುದು.

**ಸಭಾಪತಿಯವರು:-** ತಾವು ದಯಮಾಡಿ ಬೇಗ ಮುಗಿಸಿ.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸವದಿಯವರು, "ಶುಗರ್ ಫ್ಯಾಕ್ಟರಿಯವರು ಎರಡೆರಡು ಟನ್ ಕಬ್ಬಿನ ಹಣವನ್ನು ಹೊಡೆಯುತ್ತಾರೆ" ಎಂದು ಹೇಳಿರುತ್ತಾರೆ. ಅದರ ಬಗ್ಗೆ ನಾನು ಹೇಳುವುದೇನೆಂದರೆ, ಇವೊತ್ತಿನ ದಿವಸ ಎಲ್ಲಾ ರೈತರು ಪ್ರಜ್ಞಾವಂತರಿದ್ದಾರೆ. ಅಲ್ಲದೇ, ಎಲ್ಲಾ ಶುಗರ್ ಫ್ಯಾಕ್ಟರಿಗಳ ಮುಂದೆ ಕನಿಷ್ಠ 10 ರಿಂದ 15 ವೇ ಬ್ರಿಡ್ಜ್ ಇರುತ್ತವೆ. ಉದಾಹರಣೆಗೆ ನಮ್ಮ ಮುಧೋಳದಲ್ಲಿ ಕನಿಷ್ಠ 10 ವೇ ಬ್ರಿಡ್ಜ್ ಇದೆ. ಅಲ್ಲಿ ಯಾವ ದಿಕ್ಕಿಗೆ ಹೋದರೂ ಸಹ ಅಲ್ಲಿ ಒಂದೊಂದು ವೇ ಬ್ರಿಡ್ಜ್ ಇದೆ. ಆ ವೇ ಬ್ರಿಡ್ಜ್‌ಗೆ ಹೋದರೆ, ಅಲ್ಲಿ ರೈತರಿಗೆ ಉಚಿತವಾಗಿ ತೂಕ ಮಾಡಿ ಕೊಡುತ್ತಾರೆ. ಅಲ್ಲಿ ಯಾವುದೇ ರೀತಿಯ ಹಣ ಪಡೆಯುವುದಿಲ್ಲ. ಬೇರೆ ವಾಹನಗಳಲ್ಲಿ ಕಬ್ಬನ್ನು ತಂದರೆ ಮಾತ್ರ ಹಣ ಪಡೆಯುತ್ತಾರೆ. ಅದರ ಜೊತೆಗೆ, ಮಾನ್ಯ ಸತೀಶ್ ಜಾರಕಿಹೊಳಿಯವರು ಎಲ್ಲಾ ಶುಗರ್ ಫ್ಯಾಕ್ಟರಿಗಳ ಸುತ್ತಮುತ್ತಲೂ ತಮ್ಮ ಸ್ವಂತ ಹಣದಲ್ಲಿಯೇ ಸುಮಾರು 10 ವೇ ಬ್ರಿಡ್ಜ್‌ಗಳನ್ನು ಹಾಕಿಸಿರುತ್ತಾರೆ. ಅಲ್ಲಿ ಯಾವುದೇ ರೈತರು ಸಹ ಉಚಿತವಾಗಿ ತೂಕ ಮಾಡಿಸಿಕೊಳ್ಳಬಹುದು. ನಾವು ಕೂಡ ಇದೇ ನಾಡಿನ ರೈತರ ಮಕ್ಕಳಿದ್ದೇವೆ. ನಾವು ಕೂಡ ಸುಮಾರು 500 ಟನ್ ಕಬ್ಬು ಬೆಳೆಯುತ್ತೇವೆ. ನಾನು ಸರ್ಕಾರದ ಮಂತ್ರಿಯಾಗಿ ಸಹ ಕೆಲಸ ಮಾಡುವುದರ ಜೊತೆಗೆ, ಸುಮಾರು 11 ಶುಗರ್ ಫ್ಯಾಕ್ಟರಿಯನ್ನು ನಡೆಸುತ್ತೇನೆ. ಮುಧೋಳ ಎಂಬ ನಮ್ಮ ಗ್ರಾಮದಲ್ಲಿ ಕೇವಲ 100 ರಿಂದ 200 ಕೆ.ಜಿ. ಕಬ್ಬು ತೂಕದಲ್ಲಿ ವ್ಯತ್ಯಾಸ ಕಂಡುಬಂದರೆ, ರೈತರು ನಮ್ಮನ್ನು

ಅಡ್ಡಾಡುವುದಕ್ಕೆ ಬಿಡುವುದಿಲ್ಲ. ಈ ರೀತಿಯ ಸಮಸ್ಯೆಗಳು ಬರಬಾರದು ಎನ್ನುವ ಉದ್ದೇಶಕ್ಕೆ ನಾವು ಏನು ಮಾಡುತ್ತೇವೆಂದರೆ, ಪ್ರತಿ ದಿವಸ ನಮ್ಮಲ್ಲಿ ಸುಮಾರು 10 ಟನ್‌ವರೆಗೆ ತೂಕ ಅಳೆಯುವ ಮಾಪನ ಇರುತ್ತದೆ. ಅಲ್ಲಿ ನಾವು ಒಂದು ರಿಜಿಸ್ಟರ್ ಇಟ್ಟಿದ್ದೇವೆ. ಪ್ರತಿ ದಿವಸ ಬೆಳಗ್ಗೆ 08-00 ಗಂಟೆಗೆ ನಮ್ಮ ಫ್ಯಾಕ್ಟರಿಗೆ ಕಬ್ಬು ತುಂಬಿದ ಬೇರೆ ಬೇರೆ ವಾಹನಗಳು ಬರುತ್ತವೆ. ಪ್ರತಿ ದಿವಸ ಬಂದಂತಹವರೇ ಬರುವುದಿಲ್ಲ. ಅಷ್ಟು ವಾಹನಗಳಲ್ಲಿ ಬಂದಿರುವಂತಹ ಕಬ್ಬನ್ನು ತೂಕ ಮಾಡಿಸಿ, ನಂತರ ಖಾಲಿ ವಾಹನಗಳ ತೂಕ ಮಾಡಿಸಿ, ಆ ಸಮಯದಲ್ಲಿ ಸ್ಥಳದಲ್ಲಿ ಯಾರು ಹಾಜರಿದ್ದರು ಎಂಬ ಸಾಕ್ಷಿ ಪಡೆದು ಅವರಿಂದ ರಿಜಿಸ್ಟರ್‌ನಲ್ಲಿ ಸಹಿ ಪಡೆಯುತ್ತೇವೆ. ಈ ಪ್ರಕ್ರಿಯೆ ಪ್ರತಿ ದಿವಸ ನಡೆಯುತ್ತದೆ. ಏಕೆಂದರೆ, "ನಿರಾಣಿಯವರು ಈ ರೀತಿ ಮಾಡಿದರು ಅಥವಾ ಮತ್ತೊಂದು ಶುಗರ್ ಫ್ಯಾಕ್ಟರಿಯವರು ಈ ರೀತಿ ಮಾಡಿದರು" ಎಂದು ರೈತರು ನಮ್ಮ ಮೇಲೆ ಆರೋಪ ಬರಬಾರದು ಎನ್ನುವ ಉದ್ದೇಶದಿಂದ ನಾವು ಕನಿಷ್ಠ 15 ವರ್ಷಗಳ ರಿಜಿಸ್ಟರ್ ನ್ನು ನಮ್ಮ ಫ್ಯಾಕ್ಟರಿಯಲ್ಲಿ ನಿರ್ವಹಣೆ ಮಾಡಿರುತ್ತೇವೆ. ಮೊನ್ನೆಯ ದಿವಸ ನಮ್ಮ ಫ್ಯಾಕ್ಟರಿಗೂ ಸಹ ಬಂದಿರುತ್ತಾರೆ. ನಾನು ಅವರಿಗೆ ಸರ್ಟಿಫಿಕೇಟ್ ಕೊಟ್ಟು ಹೋಗಿ ಎಂದು ಹೇಳಿರುತ್ತೇನೆ. ತಾವು ಯಾವಾಗ ಬೇಕಾದರೂ ಬನ್ನಿ ಅಥವಾ ಸರ್‌ಪ್ರೈಸ್ ಆಗಿ ಬನ್ನಿ.

**Mr. CHAIRMAN:-** Yes sir, thank you.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಇವೊತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ತೂಕದಲ್ಲಿ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ನಮ್ಮ ಫ್ಯಾಕ್ಟರಿಗೆ ಸೀಮಿತವಾಗಿ ನಾನು ಹೇಳುವುದಿಲ್ಲ. ಏಕೆಂದರೆ, ಎಲ್ಲಾ ಶುಗರ್ ಫ್ಯಾಕ್ಟರಿ ಸುತ್ತ-ಮುತ್ತಲೂ ಸಹ ಖಾಸಗಿ ವೇ ಬ್ರಿಡ್ಜ್‌ಗಳು ಇರುತ್ತವೆ. ಅಲ್ಲಿ ರೈತರಿಗೆ ಉಚಿತವಾಗಿ ತೂಕ ಮಾಡಿಕೊಡುವುದರಿಂದ, ರೈತರು ಅಲ್ಲಿಯೂ ಸಹ ತೂಕ ಮಾಡಿಸುತ್ತಾರೆ ಮತ್ತು ನಮ್ಮ ಫ್ಯಾಕ್ಟರಿಗಳಲ್ಲಿಯೂ ಸಹ ತೂಕ ಮಾಡಿಸುತ್ತಾರೆ. ಆದಾಗ್ಯೂ, ಸುಮಾರು 200 ರಿಂದ 300 ಕೆ.ಜಿ. ವ್ಯತ್ಯಾಸ ಬರುವುದು ಸ್ವಾಭಾವಿಕವಾಗಿರುತ್ತದೆ. ಏಕೆಂದರೆ, ಕಬ್ಬು ಒಣಗಿರುತ್ತದೆ, ವಾಹನದಿಂದ ಸ್ವಲ್ಪ ಕೆಳಗಡೆ ಬಿದ್ದಿರುತ್ತದೆ ಅಥವಾ ಮತ್ತೆ ಏನಾದರೂ ಕಾರಣ ಇರಬಹುದು. ಅದರಿಂದಾಗಿ, 200 ರಿಂದ 300 ಕೆ.ಜಿ. ವ್ಯತ್ಯಾಸ ಬರುತ್ತದೆ. ಈ ಬಗ್ಗೆ ವಾಹನದ ಚಾಲಕ ಮತ್ತು ಕಬ್ಬು ಬೆಳೆಗಾರರಿಗೆ ಇದರ ಬಗ್ಗೆ

ಅರಿವು ಇರುವುದರಿಂದ ಅವರು ಫ್ಯಾಕ್ಟರಿಯವರ ಜೊತೆ ಜಗಳಕ್ಕೆ ಬರುವುದಿಲ್ಲ. ನಾನು ಹೇಳುವುದೇನೆಂದರೆ, ಯಾರು ಬೇಕಾದರೂ ಸಹ ಯಾವುದೇ ಸಮಯದಲ್ಲಿ ಅಥವಾ ಸರ್‌ಪ್ರೈಸ್ ಆಗಿ ಬೇಕಾದಂತಹ ಶುಗರ್ ಫ್ಯಾಕ್ಟರಿಗೆ ಹೋಗಿ ಪರಿಶೀಲಿಸಿದರೂ ಸಹ ಅಲ್ಲಿ ತೂಕದಲ್ಲಿ ವ್ಯತ್ಯಾಸ ಆಗುವುದಕ್ಕೆ ಸಾಧ್ಯವಿರುವುದಿಲ್ಲ.

**Mr. CHAIRMAN:-** Thank you.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾಗರಾಜ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ. ಇಲ್ಲವಾದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸವದಿಯವರು ಹೇಳಿದಂತಹ ವಿಷಯ ತಪ್ಪು ಎಂದಾಯಿತು.

**ಸಭಾಪತಿಯವರು:-** ನಾನು ಈ ಪ್ರಶ್ನೆಯನ್ನು ಇಲ್ಲಿಗೆ ಮುಗಿಸುತ್ತಿದ್ದೇನೆ. ಮಾನ್ಯ ನಾಗರಾಜ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳುತ್ತಿರೋ ಅಥವಾ ಇಲ್ಲವೋ?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಪ್ರತಿ ಟನ್ ಕಬ್ಬು ಬೆಳೆಗೆ ರೂ.೩,೦೫೦.೦೦ ಇರುವುದನ್ನು ಜಾಸ್ತಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಪ್ರಶ್ನೆ ಕೇಳಿರುತ್ತೇನೆ.

**ಸಭಾಪತಿಯವರು:-** ಮಾನ್ಯ ಕೆ. ಗೋವಿಂದರಾಜ್‌ರವರ ಪರವಾಗಿ ಮಾನ್ಯ ಯು.ಬಿ. ವೆಂಕಟೇಶ್ ಮತ್ತು ಮಾನ್ಯ ಎಂ. ನಾಗರಾಜು ರವರ ಜಂಟಿ ಪ್ರಶ್ನೆ ಇದೆ. ಇದರಲ್ಲಿ ಯಾರು ಮೊದಲು ಪ್ರಶ್ನೆ ಕೇಳುತ್ತೀರಿ?

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:211+265+244 ಅನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಸಾಕು ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಕಬ್ಬು ಬೆಳೆಗಾರರ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಮಾನ್ಯ ಸಚಿವರು ಪ್ರತಿ ಟನ್ ಕಬ್ಬು ಬೆಳೆಗೆ ರೂ.3,050.00 ಕೊಡುತ್ತೇವೆಂದು ಹೇಳಿರುತ್ತಾರೆ. ಆದರೆ, ನಾನು ನನ್ನ ಮೂಲ ಪ್ರಶ್ನೆಯಲ್ಲಿ ಸದರಿ ಬೆಲೆಯನ್ನು ರೂ.3,500.00 ಏರಿಕೆ ಮಾಡುತ್ತಾರೆಯೇ ಎಂದು ಕೇಳಿರುತ್ತೇನೆ. ಅದನ್ನು ಹೆಚ್ಚು ಮಾಡುತ್ತಾರೋ ಅಥವಾ ಇಲ್ಲವೋ? ಒಂದು ವೇಳೆ ಅವರು ಅದನ್ನು ಜಾಸ್ತಿ ಮಾಡುತ್ತೇನೆಂದರೆ, ನಾವು ಒಪ್ಪುತ್ತೇವೆ. ಇಲ್ಲವಾದರೆ, ಏನು ಎಂಬುದನ್ನು ಸರ್ಕಾರ ಉತ್ತರ ಕೊಡಲಿ.

**ಶ್ರೀ ಲಕ್ಷ್ಮಣ ಸವದಿ:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ,...

**ಸಭಾಪತಿಯವರು:-** ಮಾನ್ಯ ಲಕ್ಷ್ಮಣ ಸವದಿಯವರೇ ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅದು ನನ್ನ ಮೂಲ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡಲಿ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಒಂದು ನಿಮಿಷ ಕೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಕಬ್ಬು ಬೆಳೆಗಾರರಿಗೆ ಬೇರೆ ರಾಜ್ಯಗಳಲ್ಲಿ ಕೊಡುತ್ತಿರುವ ದರವನ್ನು ನಮ್ಮ ರಾಜ್ಯದ ಕಬ್ಬು ಬೆಳೆಗಾರರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಇಲ್ಲವೋ? ಒಂದು ವೇಳೆ ಆ ದರ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಅಥವಾ ಸಾಧ್ಯವಾಗುತ್ತದೆ ಎಂದರೆ ಸರ್ಕಾರ ಅದನ್ನು ಹೇಳಲಿ.

**ಸಭಾಪತಿಯವರು:-** ಒಂದು ನಿಮಿಷ ಮಾನ್ಯ ರಾಥೋಡ್‌ರವರೇ, ಒಂದು ನಿಮಿಷ ನಾನು ಮಾತನಾಡುವುದಕ್ಕೆ ತಾವು ಅವಕಾಶ ನೀಡುವುದಿಲ್ಲವೇ?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಕಬ್ಬು ಬೆಳೆಗಾರರ ರಕ್ಷಣೆಗೆ ತಾವು ಬರಬೇಕು.

**ಸಭಾಪತಿಯವರು:-** ನನಗೂ ಮಾತನಾಡುವುದಕ್ಕೆ ತಾವು ಬಿಡುವುದಿಲ್ಲವೇ?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಬಿಡುತ್ತೇನೆ. ಆದರೆ, ನನ್ನ ಮೂಲ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ತಾವು ಹೇಳಬೇಕು.

**ಶ್ರೀ ಲಕ್ಷ್ಮಣ ಸವದಿ:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ,..

**ಸಭಾಪತಿಯವರು:-** ಮಾನ್ಯ ಲಕ್ಷ್ಮಣ ಸವದಿಯವರೇ, ಒಂದು ನಿಮಿಷ.

**ಶ್ರೀ ಲಕ್ಷ್ಮಣ ಸವದಿ:-** ಮಾನ್ಯ ಸಭಾಪತಿಯವರೇ, ನನ್ನದು ಪ್ರಶ್ನೆಯಲ್ಲ. ನಾನು ಹೇಳುವುದೇನೆಂದರೆ,..

**ಸಭಾಪತಿಯವರು:-** ಸರ್, ಒಂದು ನಿಮಿಷ. ಪ್ಲೀಸ್. ಇದು ಬಹಳ ಮಹತ್ವವಾದಂತಹ ಒಂದು ವಿಷಯವಾಗಿದೆ. ಆಗಲೇ ಮಾನ್ಯ ಮುಖ್ಯಮಂತ್ರಿಗಳು ಸಹ ವಿನಂತಿ ಮಾಡಿರುತ್ತಾರೆ. ಹಾಗಾಗಿ, ಈ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇನೆ. ಅದರಂತೆ, ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತಿದ್ದೇನೆ. ಮುಂದಿನ ಪ್ರಶ್ನೆ ಶ್ರೀ ಯು.ಬಿ. ವೆಂಕಟೇಶ್‌ರವರದ್ದು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿರುತ್ತಾರೆ.

**ಸಭಾಪತಿಯವರು:-** ಈ ವಿಷಯವನ್ನು ನಾನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ. You cannot dictate, I say.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, I am not dictating.

**Mr. CHAIRMAN:-** You cannot dictate like that. ನಾನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, I want only answer. ಅಷ್ಟೇ.

**Mr. CHAIRMAN:-** This is not good.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, Hon'ble Minister is willing to give the answer.

**ಸಭಾಪತಿಯವರು:-** ಒಂದು ನಿಮಿಷ ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವೆಂಕಟೇಶ್‌ರವರೇ ತಾವು ತಮ್ಮ ಪ್ರಶ್ನೆ ಕೇಳಿ. **(ಗೊಂದಲ)** ನಾನು ಅಲೋ ಮಾಡಿರುವುದಿಲ್ಲ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸಂಖ್ಯೆ: 211+265+244ನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಗೆ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

**ಸಭಾಪತಿಯವರು:-** ಈಗಾಗಲೇ ಒಂದು ತಾಸು ಆಗಿರುತ್ತದೆ.

**ಶ್ರೀ ಲಕ್ಷ್ಮಣ ಸವದಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಕೇಳಿ. ಇವೊತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು  ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸಾಧ್ಯವಾದರೆ, ಇವೊತ್ತಿನ ದಿವಸ ಇದನ್ನು ಚರ್ಚೆಗೆ ತೆಗೆದುಕೊಳ್ಳಲಿ ಅಥವಾ ನಾಳೆಯ ದಿವಸ ತೆಗೆದುಕೊಳ್ಳಿ. ಮಾನ್ಯ ಮುರುಗೇಶ್ ನಿರಾಣಿಯವರು ತಮ್ಮ ಜಿಲ್ಲೆಯ ಬಗ್ಗೆ ಹೇಳಿದರು. ಅದರಂತೆ, ಅವರ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರಿಗೆ ತೂಕದಲ್ಲಿ ಮೋಸ ಆಗುತ್ತಿಲ್ಲವೆಂದರೆ, ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಸಾರಸಗಟಾಗಿ ಮೋಸ ಆಗುತ್ತಿಲ್ಲವೆಂದು ಅವರು ಏನು ಹೇಳುತ್ತಿದ್ದಾರೆ, ಅದನ್ನು ನಾನು ಒಪ್ಪುವುದಿಲ್ಲ.

**ಸಭಾಪತಿಯವರು:-** ಅದಕ್ಕಾಗಿಯೇ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇವಲ್ಲವೇ?

**ಶ್ರೀ ಲಕ್ಷ್ಮಣ ಸವದಿ:-** ಮಾನ್ಯ ಸಭಾಪತಿಯವರೇ, ತಾವು ಅದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಿ. ಆ ಚರ್ಚೆಯಲ್ಲಿ ನಾನು ಪಾಲ್ಗೊಂಡು ಯಾವ ರೀತಿ ಮೋಸ ಆಗುತ್ತಿದೆ ಎಂಬುದನ್ನು ನಾನು ತಮಗೆ ತಿಳಿಸಿಕೊಡುತ್ತೇನೆ.

**ಸಭಾಪತಿಯವರು:-** ಈ ವಿಷಯವನ್ನು ನಾನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ:- 211+265+244**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. G.I.M., (Global Investors Meet) ಬಗ್ಗೆ ನಾನು ಒಂದು ಪ್ರಶ್ನೆಯನ್ನು ನಾನು ಕೇಳಿದ್ದೆನು. ಅದಕ್ಕೆ ಉತ್ತರ ಕೊಟ್ಟಿರುವುದೇ ತಪ್ಪಾಗಿರುತ್ತದೆ. ನಮಗೆಲ್ಲಾ ಪತ್ರಿಕಾ ಮಾಧ್ಯಮದಲ್ಲಿ ಸುಮಾರು 9 ಲಕ್ಷ ಕೋಟಿ ರೂಪಾಯಿ ಹೂಡಿಕೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಕೊಟ್ಟಿರುವ ಉತ್ತರದಲ್ಲಿ ಕೇವಲ 9 ಲಕ್ಷ ರೂಪಾಯಿ ಇರುತ್ತದೆ. ಇದರಲ್ಲಿ ಲಕ್ಷ ಕೋಟಿ ರೂಪಾಯಿ ಎಲ್ಲಿ ಹೋಯಿತೆಂದು ಗೊತ್ತಿರುವುದಿಲ್ಲ.

**ಸಭಾಪತಿಯವರು:-** ಇದರಲ್ಲಿ ಟೈಪಿಂಗ್ ಮಿಸ್ಟೇಕ್ ಏನಾದರೂ ಆಗಿದೆಯೇ ಎಂಬುದನ್ನು ನೋಡಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಆ ಉತ್ತರ ತಪ್ಪಾಗಿದೆ ಅಥವಾ ನಾವು ಕರೆಕ್ಟಾ ಅಥವಾ ಸರ್ಕಾರ ಕರೆಕ್ಟಾ ಎಂಬುದನ್ನು ಮಾನ್ಯ ಸಚಿವರು ಮೊದಲು ಹೇಳಬೇಕು.

**ಸಭಾಪತಿಯವರು:-** ಆಯಿತು. ತಾವು ಮುಂದಿನ ಪ್ರಶ್ನೆ ಕೇಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅದು 9 ಲಕ್ಷ ರೂಪಾಯಿ ಅಥವಾ 9 ಲಕ್ಷ ಕೋಟಿ ರೂಪಾಯಿ ಎಂಬ ಬಗ್ಗೆ ಸ್ಪಷ್ಟೀಕರಣ ಬೇಕಲ್ಲವೇ?

**ಸಭಾಪತಿಯವರು:-** ಅದನ್ನು ಮಾನ್ಯ ಸಚಿವರು ಉತ್ತರ ನೀಡುವಾಗ ಹೇಳುತ್ತಾರೆ. ತಾವು ಮುಂದಿನ ಉಪ ಪ್ರಶ್ನೆ ಕೇಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, G.I.M., ಎಂದು ಪ್ರತಿ ಬಾರಿ ಮಾಡುತ್ತಾರೆ, ಆದರೆ, ಈ ವರ್ಷ ನಡೆದಂತಹ G.I.M., ಗೆ ಎಷ್ಟು ಹಣ ಖರ್ಚು ಆಗುತ್ತದೆ

ಎಂದು ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಸುಮಾರು 75 ಕೋಟಿ ರೂಪಾಯಿ ಖರ್ಚಾಗಿರುತ್ತದೆ ಎಂದು ಉತ್ತರ ನೀಡಿರುತ್ತಾರೆ. ಮಾನ್ಯ ಸಚಿವರು ಬಹಳ ಹಿರಿಯ ಸಚಿವರಾಗಿರುತ್ತಾರೆ. ನನಗೆ ಜ್ಞಾಪಕ ಇದ್ದ ಹಾಗೆ 2010ರಲ್ಲಿಯೂ ಸಹ ಮಾನ್ಯ ಸಚಿವರೇ ಒಂದು G.I.M., ಮಾಡಿರುತ್ತಾರೆ. ಈಗ ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀ ಬಸವರಾಜ ಬೊಮ್ಮಾಯಿಯವರಿಂದ ಯಾವ ರೀತಿ ಮಾತನಾಡಿಸಿರುತ್ತಾರೋ ಅದೇ ರೀತಿ, ಈ ಹಿಂದೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರಿಂದ ಮಾತನಾಡಿಸಿರುತ್ತಾರೆ. ಅಲ್ಲವೇ ಸರ್? If I am right, ಜೂನ್ 4,5 ಮತ್ತು 6ನೇ ತಾರೀಖಿನಂದು ಮಾಡಿರುತ್ತಾರೆ. ಆಗ ಸುಮಾರು ನಾಲ್ಕೂವರೆ ಲಕ್ಷ ಕೋಟಿ ರೂಪಾಯಿ ಹೂಡಿಕೆ ಹಣ ಬರುತ್ತದೆ. ಅದರಿಂದಾಗಿ, ಸುಮಾರು 4 ಲಕ್ಷ ಕೋಟಿಯಷ್ಟು ಉದ್ಯೋಗ ಕೊಡುತ್ತೇವೆಂದು ಹೇಳಿದ್ದರು. ಆದರೆ, ಅದರ achievement ಏನು ಸರ್? ಇವೊತ್ತಿನ ದಿವಸ ನಾವು statistics ತೆಗೆದರೆ, 2010ರಲ್ಲಿ 3.94 ಲಕ್ಷ ಕೋಟಿ ಒಪ್ಪಂದ, ಅನುಷ್ಠಾನ ಕೇವಲ ಶೇಕಡ 14 ರಷ್ಟು. ಆ ಸಂದರ್ಭದಲ್ಲಿಯೂ ಇವರೇ ಮಾನ್ಯ ಸಚಿವರಾಗಿರುತ್ತಾರೆ. ಏತಕ್ಕೆ ಇದನ್ನು ಅವರು ಪರಿಷ್ಕರಣೆ ಮಾಡಲಿಲ್ಲ? 2010ರಲ್ಲಿ G.I.M., ಬಗ್ಗೆ ಮಾನ್ಯ ಬಿ.ಎಸ್. ಯಡಿಯೂರಪ್ಪ ನವರಿಂದ ಏನು ಹೇಳಿಸಿರುತ್ತಾರೆ, ಆಗ ಕೊಟ್ಟಂತಹ ಫಿಗರ್ ನಲ್ಲಿ ಶೇಕಡ 14 ರಷ್ಟು ಮಾತ್ರ ಅನುಷ್ಠಾನ ಆಗಿರುತ್ತದೆ.

**ಸಭಾಪತಿಯವರು:-** ತಮ್ಮ ಪ್ರಶ್ನೆ ಮುಗಿದಿದೆಯೇ?

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಏಕೆಂದರೆ ಒಂದೊಂದು ಬಾರಿ ಮಾನ್ಯ ಮಂತ್ರಿಗಳು ಭಾವುಕರಾಗುತ್ತಾರೆ. ಮತ್ತೊಂದು ಬಾರಿ ಅವರು ಅಸಹಾಯಕರಾಗುತ್ತಾರೆ. ಏಕೆಂದರೆ, ಕಳೆದ ಬಾರಿ ಸದನದಲ್ಲಿ ಮಾನ್ಯ ಸಚಿವರ ಕಡತವೇ ಮೂವ್ ಆಗಲಿಲ್ಲವೆಂದು ಹೇಳಿದರು. ಆ ಸಂದರ್ಭದಲ್ಲಿ ನಮಗೆಲ್ಲಾ ಬಹಳ ಬೇಜಾರು ಆಯಿತು. ಅದೇ ರೀತಿ, ನಾನು ತಮಗೆ ಒಂದು ಪತ್ರ ಕೊಟ್ಟು ಸುಮಾರು ಎರಡೂವರೆ ವರ್ಷ ಕಳೆದಿರುತ್ತದೆ. ಶ್ರೀ ಜಗದೀಶ್ ಶೆಟ್ಟರ್‌ರವರಿಗೆ ಕೊಟ್ಟಿದ್ದೇನೆ. ಇದುವರೆವಿಗೂ ಸಹ ಅದು ಪ್ರೋಸೆಸ್ ಆಗಿರುವುದಿಲ್ಲ. ಆ ಇಲಾಖೆ ಏನು ಕೆಲಸ ಮಾಡುತ್ತಿದೆ. ಇಲ್ಲವಾದರೆ ಕಾರಣ ಕೊಟ್ಟು ರಿಜೆಕ್ಟ್ ಆದರೂ ಮಾಡಬೇಕು. ಬದಲಾಗಿ, ಕೇವಲ ಸುಳ್ಳು ಹೇಳಿಸುತ್ತಾರೆ. ಏತಕ್ಕೆ ಈ ರೀತಿ ಮಾಡುತ್ತಾರೆ? ಯಾರಿಗೆ ಉದ್ಯೋಗ ಕೊಡುತ್ತಾರೆ? ಈಗ ಹೇಳಿರುವಂತಹ

ಬಂಡವಾಳ ಹೂಡಿಕೆ ಸುಮಾರು 9 ಲಕ್ಷ ಕೋಟಿ ರೂಪಾಯಿ ಎಂದು ಹೇಳುತ್ತಾರೆ. ಆದರೆ, ಉತ್ತರದಲ್ಲಿ 9 ಲಕ್ಷ ರೂಪಾಯಿ ಎಂದು ಕೊಟ್ಟಿರುತ್ತಾರೆ. ಜೊತೆಗೆ, ಇದು ಆಗುವುದಕ್ಕೆ 7 ವರ್ಷ ಸಮಯ ಬೇಕು ಎಂದು ಹೇಳುತ್ತಾರೆ. ಇದು ಆಗುವಂತಹ ಕೆಲಸವೇ? ಸುಮ್ಮಸುಮ್ಮನೆ ಇಂತಹವುಗಳನ್ನು ಮಾಡಿ ಜನರಿಗೆ ಉದ್ಯೋಗ ಕೊಡುತ್ತೇವೆಂದು ಸರ್ಕಾರ ಸುಮಾರು 75 ಕೋಟಿ ರೂಪಾಯಿ ಖರ್ಚು ಮಾಡಿ...

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ಉತ್ತರದಲ್ಲಿ ಹೇಳುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅದನ್ನು ಉತ್ತರದಲ್ಲಿ ಹೇಳಲಿ. ಮಾನ್ಯ ಸಚಿವರು ಹೇಳಿದಂತೆ, ಅಷ್ಟು ಬಂಡವಾಳ ಹೂಡಿಕೆಯಾಗಿ ಉದ್ಯೋಗಾವಕಾಶಗಳು ಬಂದರೆ, ನಾನು ಮಾನ್ಯ ಸಚಿವರಿಗೆ ಎಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಅವರಿಗೆ ಸನ್ಮಾನ ಮಾಡುತ್ತೇನೆ. ಆದರೆ, ಈ ಹಿಂದೆ ಏನಾಗಿದೆ, ಅವರ statistics ಮತ್ತು ರೆಕಾರ್ಡ್ ಏನಾಗಿದೆ ಎಂಬುದನ್ನು ನೋಡಲಿ. 2010ರಲ್ಲಿ ಮಾನ್ಯ ಸಚಿವರೇ ಹೇಳಿರುವಂಥದ್ದರಲ್ಲಿ ಶೇಕಡ 14 ರಷ್ಟು ಮಾತ್ರ ಅನುಷ್ಠಾನ ಆಗಿರುತ್ತದೆ.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಮುಗಿಸಿದರೆ ನಾನು ಉತ್ತರ ನೀಡುತ್ತೇನೆ.

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ. ಮಾನ್ಯ ಸಚಿವರೇ ಈ ವಿಷಯದ ಬಗ್ಗೆ ಮೂರು ಜನ ಸದಸ್ಯರು ಪ್ರಶ್ನೆ ಕೇಳಿದ್ದು, ಅವರು ತಮ್ಮ ಪ್ರಶ್ನೆಯನ್ನು ಕೇಳಿದ ನಂತರ ಒಟ್ಟಿಗೆ ಎಲ್ಲರಿಗೂ ಉತ್ತರ ನೀಡಲಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕಾಗಿ ಧನ್ಯವಾದಗಳು.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಪ್ರಾರಂಭ ಮಾಡಿ ಸುಮಾರು ಒಂದು ಗಂಟೆ ಆಯಿತು. ಹಾಗಾಗಿ, ತಮ್ಮ ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ. ಏಕೆಂದರೆ, ಪ್ರಶ್ನೋತ್ತರ ಅವಧಿ ಪೂರ್ಣಗೊಳಿಸಬೇಕು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾವು ಕೇಳಿರುವಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಲಿಖಿತ ಉತ್ತರಗಳನ್ನು ನೀಡಿರುತ್ತಾರೆ. ಆದರೆ, ಸಮಾವೇಶದಲ್ಲಿ ಭಾಗವಹಿಸಿದಂತಹ ಪ್ರಮುಖ ಉದ್ಯಮಿಗಳು ಮತ್ತು ಕಂಪನಿಗಳು ಎಂದರೆ, 205 ಕಂಪನಿಗಳು ಎಂದು ಹೇಳಿರುತ್ತಾರೆ. ಒಡಬಂಡಿಕೆ ಅಥವಾ MoU ಮಾಡಿಕೊಂಡಿರುವಂತಹದ್ದು ಕೇವಲ 57 ಕಂಪನಿಗಳ ಜೊತೆಯಲ್ಲಿ ಮಾತ್ರ. ಬೇರೆ ಕಂಪನಿಗಳು ಯಾವ ಕಾರಣಕ್ಕೋಸ್ಕರ ಏತಕ್ಕಾಗಿ ನಮ್ಮ ಜೊತೆ ಒಡಂಬಡಿಕೆ ಮಾಡಿಕೊಳ್ಳಲಿಲ್ಲ ಎಂಬುದನ್ನು ಸಹ ಸ್ಪಷ್ಟಪಡಿಸಬೇಕು.

**(ಮುಂದು)**

(1057) 20.12.2022 YL-GR 1.10 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):-**

ಅದರ ಜೊತೆಗೆ ಕಂಪನಿಗಳು ಎಲ್ಲೆಲ್ಲಿ ಹಣವನ್ನು ಹೂಡಿಕೆ ಮಾಡುತ್ತವೆ ಎನ್ನುವಂಥ ಪ್ರಶ್ನೆಯನ್ನು ಕೇಳಿದಾಗ ಸುಮಾರು 57 ಕಂಪನಿಗಳಲ್ಲಿ ಸುಮಾರು 20 ಕಂಪನಿಗಳು Outside Bengaluru ಇವೆ ಎಂದು ಹೇಳುತ್ತಾರೆ. Outside Bengaluru ಎಂದರೆ, ಬೆಳಗಾವಿಯಲ್ಲಿ ಎಷ್ಟು ಕಂಪನಿಗಳಿವೆ, ಉತ್ತರ ಕರ್ನಾಟಕದಲ್ಲಿ ಎಷ್ಟು ಕಂಪನಿಗಳಿವೆ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿಲ್ಲ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಜೊತೆಗೆ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ energy sector ನಲ್ಲಿ investment ಮಾಡಲಿಕ್ಕೆ ತುಂಬಾ ಜನರನ್ನು ತೋರಿಸಲಾಗಿದೆ. ಆ energy sector ನಾನು appreciate ಮಾಡುತ್ತೇನೆ. ನೀವು ಮಾಡಿರುವ ಸಮಾವೇಶದಲ್ಲಿ ಸುಮಾರು ರೂ.10 ಲಕ್ಷ ಕೋಟಿ, ರೂ.9.00 ಲಕ್ಷ ಕೋಟಿಗಳಷ್ಟು ಹೆಚ್ಚು ಬರುತ್ತಿದ್ದರೆ ಪ್ರಶಂಸೆಯನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಈಗಾಗಲೇ ಹೇಳಿದಂತೆ ಖಂಡಿತವಾಗಿಯೂ

ಈ ರಾಜ್ಯ ಅದಕ್ಕೆ ಅಭಿನಂದನೆಯನ್ನು ವ್ಯಕ್ತಪಡಿಸುತ್ತದೆ. ಆದರೆ, ಇಷ್ಟು ವರ್ಷಗಳ ಕಾಲ ನಡೆದಂಥ ಎಲ್ಲಾ ಸಮಾವೇಶದಲ್ಲಿ ಹೂಡಿರುವಂಥ ಹೂಡಿಕೆಯನ್ನು ನೋಡಿದಾಗ actual investment ನೋಡಿದಾಗ it has not crossed more than 20%. ಶೇಕಡ 20 ರಷ್ಟು ರಿಯಾಲಿಟಿ ಇಲ್ಲದಂಥ ಸಂದರ್ಭದಲ್ಲಿ ಇದು ಕೇವಲ ತೋರಿಕೆಗೆ ಹಾಗೂ ರಾಜ್ಯಕ್ಕೆ ಮೋಸ ಮಾಡಿರುವಂಥ ಸಮಾವೇಶವಾಗಿರುತ್ತದೆ. ರೂ.74,99,58,947/- ಕೋಟಿ ಖರ್ಚು ಮಾಡಿರುವಂಥ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಸಾಧನೆ ಎಷ್ಟೆಂಬುದನ್ನು ನೋಡಿದಾಗ ಶೇಕಡ 20 ರಷ್ಟು ತಂದಿದೆಯಾದರೆ ಖರ್ಚು ಮಾಡಿರುವಂಥ ಮೊತ್ತವೇ ಜಾಸ್ತಿಯಾಗಿದ್ದು, ಎಲ್ಲರ ಸಮಯವನ್ನು ವ್ಯರ್ಥ ಮಾಡಿದಂತಾಗಿದೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ರಾಜ್ಯ ಸರ್ಕಾರಕ್ಕೆ ಬಂಡವಾಳ ಬರಲೇಬೇಕು ಎನ್ನುವಂಥ ಮಾತನ್ನು ಹೇಳುವುದಾದರೆ, ನಮ್ಮ ಪಕ್ಷವು ಸಹ ಮುಂಚೂಣಿಯಲ್ಲಿ ನಿಲ್ಲುತ್ತದೆ. ಹಾಗಾಗಿ ತಾವು outside Bengaluru ಎನ್ನುವಂಥ ಮಾತಿಗೆ ಅರ್ಥ ಬರುವುದಿಲ್ಲ.

ಬೆಳಗಾವಿಯಲ್ಲಿ ಒಂದು ಕಡೆ ಮಾತ್ರ ಕಂಪನಿ ಇರುವುದನ್ನು ತೋರಿಸಿದ್ದಾರೆ. ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕು ಎನ್ನುವುದಾದರೆ ಏತಕ್ಕೆ ನಿರ್ದಿಷ್ಟವಾಗಿ ಉತ್ತರದಲ್ಲಿ ತೋರಿಸಿಲ್ಲ ಎನ್ನುವುದು ನನ್ನ ಮೊದಲ ಅಂಶವಾಗಿದೆ. ಅದರ ಜೊತೆಗೆ ಯಾವ್ಯಾವ sector ಗಳಲ್ಲಿ ಹೂಡಿಕೆ ಮಾಡಲು ಸರ್ಕಾರ ಹೊರಟಿದ್ದಾರೆ, ಅದರಲ್ಲಿ ಆರೋಗ್ಯದಿಂದಾಗಲಿ, ಶಿಕ್ಷಣದಿಂದಾಗಲಿ, ಕೃಷಿಯಿಂದಾಗಲಿ ಅಷ್ಟು ಹೂಡಿಕೆ ಮೊತ್ತ ಬರುತ್ತಿಲ್ಲ. ಯಾವ ಕಾರಣದಿಂದ ಸುಮಾರು ಎಪ್ಪತ್ತೈದು ಕೋಟಿ ರೂಪಾಯಿ ಖರ್ಚು ಮಾಡಿ, campaign ಮಾಡಿದ್ದಾರೆ, ಬೇರೆ ಬೇರೆ ಕಡೆಗಳಲ್ಲಿ ರೋಡ್ ಶೋ ಮಾಡಿಕೊಂಡು ಬಂದಿದ್ದಾರೆ. ಈ ಸೆಕ್ಟಾರ್‌ಗಳನ್ನು ಅಂದರೆ Agriculture sector ಇರಬಹುದು ಅಥವಾ ಶಿಕ್ಷಣ ಸೆಕ್ಟಾರ್ ಇರಬಹುದು ಅಥವಾ ಆರೋಗ್ಯ ಸೆಕ್ಟಾರ್ ಇರಬಹುದು. ಅದರಿಂದ ಹೆಚ್ಚು ಬಂಡವಾಳ ಹೂಡಿಕೆಯಾಗಿಲ್ಲ. ಕೇವಲ ಎನರ್ಜಿ ಸೆಕ್ಟರ್‌ಗೆ, ಕೆಲವು ಸಿಮೆಂಟ್ ಕಂಪನಿಗಳಿಗೆ ಒತ್ತು ನೀಡಲಾಗಿದೆ. ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಆಗಬೇಕಾದರೆ, ಎಲ್ಲಾ ಸೆಕ್ಟಾರ್ಸ್‌ಗಳಿಂದ ಇನ್ವೆಸ್ಟ್‌ಮೆಂಟ್ ತರುವಂಥ ಕೆಲಸ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ತಾವು ಪ್ರಶ್ನೆಯನ್ನು ಕೇಳುತ್ತಿದ್ದಿರಾ ಅಥವಾ ಉತ್ತರವನ್ನು ನೀಡುತ್ತಿದ್ದಿರಾ? ಪ್ರಶ್ನೆ ಮಾತ್ರ ಕೇಳಿ. ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಕೊನೆಯ ಪ್ರಶ್ನೆಯೇನೆಂದರೆ, ಮೂರ್ನಾಲ್ಕು ವರ್ಷಗಳು ಕಳೆದ ನಂತರ ಎಷ್ಟು ಉದ್ಯೋಗ ಸೃಜನೆಯಾಗುತ್ತದೆ ಎನ್ನುವಂಥ ಉತ್ತರವನ್ನು ನೀಡಿದ್ದಾರೆ. ಇಂತಹ ಉತ್ತರವನ್ನು ಒಪ್ಪಲು ಸಾಧ್ಯವಿಲ್ಲ. ಇದು ಮೊದಲನೆ ಬಾರಿ ಮಾಡುತ್ತಿರುವಂಥ ಬಂಡವಾಳ ಸಮಾವೇಶವಾಗಿಲ್ಲ. ಕಳೆದ ನಾಲ್ಕು ಬಾರಿ ಅವರ ಸರ್ಕಾರವೇ ಸಮಾವೇಶ ಮಾಡಿರುವುದರಿಂದ ಆ ಪ್ರಶ್ನೆಗೆ ಸಮಂಜಸ ಉತ್ತರವನ್ನು ನೀಡಬೇಕು. ಜೊತೆಗೆ ಮಾನ್ಯ ಸಚಿವರು ಅನುಬಂಧ-3 ರಲ್ಲಿ ನೀಡಿರುವಂಥ ಉತ್ತರವು ಆಂಗ್ಲ ಭಾಷೆಯಲ್ಲಿಯೇ ಬೆರಳಚ್ಚು ಮಾಡಲಾಗಿದ್ದು, ಅದು ಎಷ್ಟರ ಮಟ್ಟಿಗೆ ಸರಿ? ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡವಾದರೂ ಸಹ ನೀಡಿರುವಂಥ ಉತ್ತರ ಆಂಗ್ಲ ಭಾಷೆಯದಾಗಿದೆ. ಏತಕ್ಕಾಗಿ ಈ ರೀತಿ ಕನ್ನಡ ವಿರೋಧಿ ನಿಲುವು ಎನ್ನುವಂಥ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಉತ್ತರ ನೀಡಿದ್ದು, ಅದಕ್ಕೆ ಸಂಬಂಧಿಸಿದಂತೆ ನನಗೆ ಒಂದು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ರಾಜ್ಯದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ 608 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ರೂ.2,83,415 ಕೋಟಿ ಬಂಡವಾಳ ಹೂಡಿಕೆ ಬರುತ್ತದೆ. ಹಾಗೆಯೇ 57 ಒಡಂಬಡಿಕೆಗಳ ಯೋಜನೆಗೆ ರೂ.5,41,369 ಕೋಟಿ ಬಂಡವಾಳ ಹೂಡಿಕೆ ಬರುತ್ತದೆ. ಜೊತೆಗೆ ಸಮಾವೇಶದಲ್ಲಿ ಪ್ರಮುಖ ಕೈಗಾರಿಕೋದ್ಯಮಿಗಳಿಂದ ರೂ.1,57,000 ಕೋಟಿ ಬಂಡವಾಳ ಹೂಡಿಕೆ ಬರುತ್ತದೆ ಎಂದು ಉತ್ತರದಲ್ಲಿ ತಿಳಿಸಲಾಗಿದ್ದು, ತಾವು ನೀಡಿರುವಂಥ ಯೋಜನೆಯ ಬಂಡವಾಳ ಹೂಡಿಕೆ ಸರಿಯಾಗಿದೆಯೇ? ಏಕೆಂದರೆ, ಕೇವಲ 57 ಒಡಂಬಡಿಕೆಗಳ ಯೋಜನೆಗೆ ರೂ.5,41,369 ಕೋಟಿ ಬಂಡವಾಳ ಹೂಡಿಕೆಯಾಗುತ್ತದೆ, 608 ಯೋಜನೆಗಳಿಗೆ ರೂ.2,83,415 ಕೋಟಿ ಹೂಡಿಕೆಯಾಗುತ್ತದೆ ಎಂದು ತಿಳಿಸಲಾಗಿದೆ. ಎರಡನೆಯದಾಗಿ, ಉದ್ಯೋಗ ಸೃಜನೆಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಿದ್ದು, ರೂ.5,41,369 ಕೋಟಿಗೆ 2,81,411 ಉದ್ಯೋಗ ಸೃಜನೆ

ಮಾಡುತ್ತೇವೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಜೊತೆಗೆ ನಾಲ್ಕು ಲಕ್ಷದ ನಲವತ್ತೊಂದು ಸಾವಿರ ಕೋಟಿ ರೂಪಾಯಿಗೆ ಸಂಬಂಧಿಸಿದಂತೆ ಉದ್ಯೋಗ ಸೃಜನೆ ಬಗ್ಗೆ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ. ಈ ರೀತಿಯಾಗಿ ಯಾವ ಅಧಿಕಾರಿ ಮಾನ್ಯ ಸಚಿವರಿಗೆ ಉತ್ತರ ನೀಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, MGR Educational & Research Institute University ಯವರು ಸುಮಾರು ರೂ.800.00 ಕೋಟಿ ಇನ್ವೆಸ್ಟ್ ಮಾಡುತ್ತಿದ್ದು, 10,000 ಉದ್ಯೋಗ ಸೃಜನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಯಾವ ರೀತಿಯಾಗಿ ಉದ್ಯೋಗ ಸೃಜನೆ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ವೇದಾಂತ ಕಂಪನಿಯವರು ರೂ.80,000 ಕೋಟಿ investment ಮಾಡುತ್ತೇವೆ ಎಂದು ಹೇಳಿದ್ದು, ಅವರು job ಅನ್ನು disclose ಮಾಡಿಲ್ಲ. ಬಹಳ ಆಶ್ಚರ್ಯವಾದ ವಿಚಾರವೇನೆಂದರೆ, ವೀಣಾ ಎನರ್ಜಿ ಇಂಡಿಯಾರವರು ರೂ.1,550 ಕೋಟಿ ಇನ್ವೆಸ್ಟ್ ಮಾಡುತ್ತಿದ್ದು, 40 ಉದ್ಯೋಗ ಸೃಜನೆ ನೀಡುತ್ತಿದ್ದಾರೆ. Whether all these things are possible?

**ಸಭಾಪತಿಯವರು:-** ದಯವಿಟ್ಟು ಬೇಗ ಮಾತನಾಡಿ ತಮ್ಮ ಮಾತನ್ನು ಮುಗಿಸಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವನ್ನು ಹೇಳ ಬಯಸುತ್ತೇನೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಆಯೋಜನೆಗೆ ಒಟ್ಟು ರೂ.74,99,58,947/- ವೆಚ್ಚವಾಗಿರುತ್ತದೆ ಎಂದು ಉತ್ತರದಲ್ಲಿ ತೋರಿಸಿದ್ದಾರೆ. ಅದರಲ್ಲಿ publicity ಗಾಗಿ ರೂ.14,000 ಕೋಟಿ ನೀಡಿದ್ದು, basic facility ಗೆ ರೂ.50.00 ಕೋಟಿ ಖರ್ಚು ಮಾಡಲಾಗಿದೆ. basic facility ಗೆ ರೂ.50.00 ಕೋಟಿ ಖರ್ಚು ಮಾಡುವುದಾದರೆ, basic infrastructure ಗೆ ಎಷ್ಟು ಕೋಟಿ ಖರ್ಚು ಮಾಡಬೇಕೆಂದು ಇದ್ದಾರೆ? ರೈತರ ಭೂಮಿಗೆ ಇದರಿಂದ ಏನಾದರೂ ತೊಂದರೆಯಾಗುತ್ತದೆಯೇ? ಇಷ್ಟು ಕಂಪನಿಗಳು ಇಷ್ಟು ಉದ್ಯೋಗ ಸೃಜನೆ ನೀಡುವುದಾದರೆ, what is your thought on the road to development ಬಗ್ಗೆ ಏನು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಮೂರು ಸದಸ್ಯರಿಗೂ ಒಳಗೊಂಡಂತೆ ಉತ್ತರವನ್ನು ನೀಡಿ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, 2010, 2012, 2022 ರಲ್ಲಿ ಮೂರು ಬಾರಿ ನಮ್ಮ ಸರ್ಕಾರ ಜಾಗತಿಕ ಸಮಾವೇಶ ಬಂಡವಾಳ ಹೂಡಿಕೆಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿದ್ದೆ. ಮೂಲತಃ 2012 ರಲ್ಲಿ ಟಾಟಾ ನ್ಯಾನೋ ಕಂಪನಿ ಕರ್ನಾಟಕಕ್ಕೆ ಬಂದಿತ್ತು. ಅದು ಧಾರವಾಡವಾಡದಲ್ಲಿ ಟಾಟಾ ಮೋಟಾರ್ಸ್, ಟೆಲಿಕಾಂ ಎಂದು ಮೂರು ಯೂನಿಟ್‌ಗಳನ್ನು ಪ್ರಾರಂಭ ಮಾಡಿದ್ದರು. ಅದರ ಪಕ್ಕದಲ್ಲಿಯೇ ಟಾಟಾ ನ್ಯಾನೋ ಕಂಪನಿ ಎನ್ನುವಂಥದು ಬಹಳ ಪ್ರಸಿದ್ಧವಾಗಿತ್ತು ಮತ್ತು ಹೆಸರುವಾಸಿಯಾಗಿತ್ತು. ಅವರು ಕರ್ನಾಟಕದಲ್ಲಿ investment ಮಾಡಲು ಮುಂದೆ ಬಂದಿದ್ದರು. ಆ ಸಂದರ್ಭದಲ್ಲಿ ಶ್ರೀ ಮುತ್ತುರಾಮನ್ ಎಂಬುವವರು ಟಾಟಾ ನ್ಯಾನೋ ಕಂಪನಿಯಲ್ಲಿ ಸಿನಿಯರ್ ವೈಸ್ ಪ್ರೆಸಿಡೆಂಟ್ ಆಗಿದ್ದು, ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರಿಂದ ಅವರಿಗೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಹಾಗೂ ನಮ್ಮೆಲ್ಲರ ಮನವಿ ಮೇರೆಗೆ ಧಾರವಾಡದಲ್ಲಿಯೇ ಅವರು ಕಂಪನಿ ಪ್ರಾರಂಭ ಮಾಡುತ್ತೇನೆ ಎನ್ನುವಂಥ ತೀರ್ಮಾನ ಕೈಗೊಂಡರು. ಹಾಗಾಗಿ ಅವರಿಗೆ ಒಂದು ಸಾವಿರ ಎಕರೆ ಭೂಮಿ ಬೇಕಾಗಿತ್ತು. ಏಕೆಂದರೆ, ನಮ್ಮ ರಾಜ್ಯದಲ್ಲಿ ಈ plant ಬೇಡ, ಬೇರೆ ಕಡೆ plant ತೆಗೆದುಕೊಳ್ಳಿ ಎಂದು ಹೇಳಿದಾಗ ವೆಹಿಕಲ್‌ನಲ್ಲಿಯೇ ಎಲ್ಲಾ equipment and machineries ಲೋಡ್ ಆಗಿತ್ತು. ಆಗ ನಾವು ಎಲ್ಲಾ ಕಡೆ ಹುಡುಕಿದರೂ ಕರ್ನಾಟಕ ರಾಜ್ಯದಲ್ಲಿ ಒಂದು ಸಾವಿರ ಎಕರೆ ಭೂಮಿ ಸಿಗಲಿಲ್ಲ. ಆ ಸಂದರ್ಭದಲ್ಲಿ ಟಾಟಾ ನ್ಯಾನೋ ಕಂಪನಿಯನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಉದ್ಭವಿಸಿದ್ದು, ಅದು ಗುಜರಾತ್‌ಗೆ ಹೋಗಿತ್ತು. ಅದೇ ನಮಗೆ ಒಂದು ಪಾಠ ಎನ್ನುವ ಸಲುವಾಗಿ ಲ್ಯಾಂಡ್ ಬ್ಯಾಂಕ್ concept ತೆಗೆದುಕೊಂಡು ಬಂದು, ಇಡೀ ಕರ್ನಾಟಕ ರಾಜ್ಯದಾದ್ಯಂತ ರೈತರ ಒಪ್ಪಿಗೆ ಮೇರೆಗೆ ನಾಲ್ಕು ವರ್ಷ ಪ್ರಯತ್ನ ಪಟ್ಟು, ಒಂದು ಲಕ್ಷ ಇಪ್ಪತ್ತೈದು ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಂಡಿದ್ದೆವು.

2012 ರಲ್ಲಿ Steel sector ನಲ್ಲಿ Arcelor Mittal, ParsCo, ಟಾಟಾ, ಕಿರ್ಲೋಸ್ಕರ್ ಇರಬಹುದು. ನಮ್ಮ ಬಳ್ಳಾರಿ ಸಚಿವರು ಒಂದೊಂದು ಪ್ಲಾಂಟ್‌ಗೆ ಮೂರು ಸಾವಿರದಿಂದ ನಾಲ್ಕು ಸಾವಿರ ಎಕರೆ ಭೂಮಿಯನ್ನು ತೆಗೆದುಕೊಳ್ಳಲು K.I.A.D.B., ನಲ್ಲಿ ಹಣವನ್ನು ಹೂಡಿಕೆ ಮಾಡಿದ್ದರು. ಅದಕ್ಕೆ

ರೈತರು ಒಪ್ಪಿಗೆ ನೀಡಿದ್ದು, ಹಣವೂ ಹೂಡಿಕೆಯಾಗಿತ್ತು. 2013ರ ನಂತರ ನಮ್ಮ ಸರ್ಕಾರ ಅಧಿಕಾರಕ್ಕೆ ಬರಲಿಲ್ಲ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಅಂದಿನ ಮುಖ್ಯಮಂತ್ರಿಯಾಗಿದ್ದರು. ಮೊದಲನೆ ಸಚಿವ ಸಂಪುಟ ಸಭೆಯಲ್ಲಿ ಒಂದು ಲಕ್ಷ ಎಕರೆ ಭೂಮಿಯನ್ನು denotify ಮಾಡಿದ್ದರು. ನಾಲ್ಕು ವರ್ಷದಿಂದ ಶ್ರಮಪಟ್ಟು, ರೈತರಿಂದ ತೆಗೆದುಕೊಂಡ ಭೂಮಿ ಏನಿದೆ, ಅದು ಒಂದು ನಿಮಿಷದಲ್ಲಿ "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎನ್ನುವಂತಾಗಿತ್ತು. ನಮ್ಮಲ್ಲಿ ಹೂಡಿಕೆ ಮಾಡಿದಂತಹ ರೂ.2,200 ಕೋಟಿ ಏನಿದೆ, ಅದರ ಬಡ್ಡಿಯಲ್ಲಿಯೇ ನಾವು ಅವೆರಡೂ G.I.M., ಗಳನ್ನು ಮಾಡಿದ್ದೆವು. K.I.A.D.B., ಯಿಂದಾಗಲಿ ಅಥವಾ ಸರ್ಕಾರದಿಂದಾಗಲಿ ಹಣವನ್ನು ತೆಗೆದುಕೊಂಡು ವೆಚ್ಚ ಮಾಡಿರುವುದಿಲ್ಲ. ಎರಡನೆಯದಾಗಿ, denotify ಮಾಡಿದ ಮೇಲೆ 2013 ರಿಂದ 2018 ರವರೆಗೆ ಲ್ಯಾಂಡ್ ಬ್ಯಾಂಕ್ ಇರಲಿಲ್ಲ. ಯಾವುದೇ ಮೇಜರ್ ಪ್ರಾಜೆಕ್ಟ್ ಬರಲಿಲ್ಲ. ಏಕೆಂದರೆ, ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು division ನಲ್ಲಿ ಒಂದೊಂದು ಸ್ಟೀಲ್ ಪ್ಲಾಂಟ್‌ಗಳನ್ನು ಸ್ಥಾಪಿಸಲು ಉದ್ದೇಶ ಮಾಡಲಾಗಿತ್ತು. ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಿದ್ದು, ಕೇಂದ್ರ ಸರ್ಕಾರದ ಮೊರೆ ಹೋಗಿತ್ತು. ಕೇಂದ್ರ ಸರ್ಕಾರದಿಂದ ಆದೇಶವಾದ ನಂತರ iron ore ಬಗ್ಗೆ ಸರ್ವೋಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿತ್ತು. ಜೊತೆಗೆ ನಮ್ಮ ಕಡೆ ಭೂಮಿಯೇ ಇರಲಿಲ್ಲ. 2018 ರವರೆಗೂ ನಮ್ಮಲ್ಲಿ percentage ಕಡಿಮೆಯಾಗಲು ಮುಖ್ಯವಾದ ಕಾರಣವೇ ಭೂಮಿ ಇಲ್ಲದೇ ಇರುವಂಥದಾಗಿದೆ. ತಮ್ಮಗೆಲ್ಲಾ ತಿಳಿದಿರುವಂತೆ ಯಾವುದಾದರೂ ಕೈಗಾರಿಕೆ ಪ್ರಾರಂಭವಾಗಬೇಕೆಂದರೆ, ಮೊದಲನೆಯದಾಗಿ ಭೂಮಿ ಬೇಕಾಗಿದೆ. ಎರಡನೆಯದಾಗಿ, ವಿದ್ಯುತ್ ಮತ್ತು ನೀರು. ಇನ್ನುಳಿದಂತೆ infrastructure ಹಾಗೂ ಸರ್ಕಾರ ಕೊಡುವಂಥ ಸವಲತ್ತು ಆಗಿದೆ. ಇವುಗಳೆಲ್ಲಾ ಇದ್ದಾಗ ಮಾತ್ರ ಕೈಗಾರಿಕೆ ಸ್ಥಾಪನೆ ಮಾಡಲು ಸಾಧ್ಯವಾಗುತ್ತದೆ.

ಆದಾದ ಬಳಿಕ ಇನ್ನು ಮುಂದೆ ಈ ರೀತಿಯಾಗಬಾರದೆಂದು 2020 ರಲ್ಲಿ 50 ಸಾವಿರ ಎಕರೆ ಭೂಮಿಯನ್ನು ಇಡೀ ಕರ್ನಾಟಕ ರಾಜ್ಯದಾದ್ಯಂತ ಗುರುತಿಸಿ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ 20 ಸಾವಿರ ಎಕರೆ ಭೂಮಿ ಹಾಗೂ ಇನ್ನುಳಿದಂತೆ tier-II city

division wise 30 ಸಾವಿರ ಎಕರೆ acquisition ಮಾಡಿದ್ದೇವೆ. ಕೆಲವೊಂದಕ್ಕೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿ, ಪೇಮೆಂಟ್ ಮಾಡಲಾಗಿದ್ದು, ನಮ್ಮ ಹಂತದಲ್ಲಿಯೇ ಇದೆ, ಇನ್ನು ಕೆಲವೊಂದಕ್ಕೆ ಸಂಬಂಧಿಸಿದಂತೆ Preliminary Notification ಆಗಿದೆ. ಮಾನ್ಯ ಸದಸ್ಯರು ಕೇಳಿರುವಂಥ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ರೂ.2,83,415 ಕೋಟಿಗಳಿಗೆ G.I.M., ಆಗುವ ಒಂದು ತಿಂಗಳ ಮೊದಲೇ ಸಿಂಗಲ್ ವಿಂಡೋ ಮತ್ತು ಹೈ ಲೆವೆಲ್ ಕಮಿಟಿನಲ್ಲಿ ಆ ಪ್ರಾಜೆಕ್ಟನ್ನು ಕ್ಲಿಯರ್ ಮಾಡಿ,...

ಹೈ ಲೆವೆಲ್ ಕಮಿಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷತೆ ವಹಿಸಿರುತ್ತಾರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸದಸ್ಯ ಕಾರ್ಯದರ್ಶಿಯಾಗಿದ್ದು, ಸಂಬಂಧಪಟ್ಟ ಎಲ್ಲಾ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಆ ಕಮಿಟಿಯಲ್ಲಿ ಇರುತ್ತಾರೆ. ಅವರು ಕೇಳಿರುವಂಥ ಎಲ್ಲಾ ಸವಲತ್ತುಗಳು ನಮ್ಮಲ್ಲಿಯೇ ಇದೆಯೇ ಎಂಬುದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿದ ನಂತರ ರೂ.2,83,415 ಕೋಟಿಗೆ ಅನುಮೋದನೆ ನೀಡಲಾಗಿದೆ. ನಂತರ ರೂ.5,41,369 ಕೋಟಿಗೆ ಅನುಮೋದನೆ ಮಾಡಿದ್ದೇವೆ. ನಂತರ ರೂ.1,57,000.00 ಕೋಟಿ ಅಂದರೆ ರೂ.2.00 ಲಕ್ಷ ಕೋಟಿಗೆ ಘೋಷಣೆ ಮಾಡಿದ್ದರು. ಖ್ಯಾತ ಉದ್ಯಮಿಯಾದ ಗೌತಮ್ ಅದಾನಿಯವರು ಮತ್ತು ಅವರ ಮಗ ಕರಣ್ ಅದಾನಿಯವರು ರೂ.1.00 ಲಕ್ಷ ಕೋಟಿಯನ್ನು ಏಳು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಹಂತ ಹಂತವಾಗಿ ಹೂಡಿಕೆ ಮಾಡುತ್ತೇವೆ ಎಂದು ಹೇಳಿದ್ದರು. ಎರಡನೆಯದಾಗಿ, Jindal Steel Works ನವರು ರೂ. ರೂ.1.00 ಲಕ್ಷ ಕೋಟಿ ಹೂಡಿಕೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ, ಅಲ್ಲಿ ಏನಾಗಿತ್ತೆಂದರೆ, ಜಾಗತಿಕ ಬಂಡವಾಳ ಹೂಡಿಕೆ ಪೂರ್ವದಲ್ಲಿ ನಡೆದಂತಹ ಸಭೆಯಲ್ಲಿ Jindal Steel Works ನವರ ರೂ.42,000.00 ಕೋಟಿಯಷ್ಟು ಹೂಡಿಕೆ ರೂ.2,83,415.00 ಕೋಟಿ ಹೂಡಿಕೆಯಲ್ಲಿಯೇ ಬಂದಿರುತ್ತದೆ.

(ಮುಂದು)

(1058) 20.12.2022/1.20 ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಡಾ. ಮುರುಗೇಶ ಆರ್. ನಿರಾಣಿ (ಮುಂದು):-**

ಆ Global Investors Meet (GIM) ಆಗುವುದಕ್ಕಿಂತ ಪೂರ್ವದಲ್ಲಿ ಒಂದು ಸಭೆ ಆಯಿತು. ಅದರಲ್ಲಿ ಬಂದಿರುವುದರಿಂದ ಹಣ ರೂ.1.57 ಲಕ್ಷ ಕೋಟಿಯನ್ನು ಮೂರನೇ ಕಾಲಂನಲ್ಲಿ ತೋರಿಸಿದ್ದೇವೆ. ಇದೆಲ್ಲವೂ ಸೇರಿ Rs. 9.81 lakh crores ಬಂದಿದೆ. Rs. 2.83 lakh crores ಬಿಟ್ಟು ಇನ್ನುಳಿದಿರುವಂತಹದ್ದನ್ನು ಮೂರು ತಿಂಗಳೊಳಗಾಗಿ ಅಂದರೆ 90 ದಿನಗಳೊಳಗಾಗಿ ಇದನ್ನು High Level Committee ಯ ಮುಂದೆ ತೆಗೆದುಕೊಂಡು ಬಂದು, ಇದರ ಬಗ್ಗೆ ಚರ್ಚೆ ಮಾಡಿ, ಇದರ ಸಾಧಕ-ಬಾಧಕವನ್ನು ನೋಡಿಕೊಂಡು, ಯಾವ ಯಾವ ಜಿಲ್ಲೆಗಳಿಗೆ ಕೊಡಬೇಕು. ಅಂದರೆ sector specific and availability of raw material ಇರುವಂಥಾದ್ದು, 'one district one product' ಎಲ್ಲವನ್ನು ಗಮನಹರಿಸಿ, ಒಂದು ಸಭೆಯನ್ನು ಮಾಡೋಣವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಅಧಿವೇಶನ ಮುಗಿದ ಕೂಡಲೇ ಒಂದು ಮೀಟಿಂಗ್ ಕರೆದು ಉಳಿದಿರುವುದನ್ನು ಕ್ಲಿಯರ್ ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಎಷ್ಟು ಜನ ಕಾರ್ಮಿಕರು ಬರಬಹುದು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಕಾರ್ಯಕ್ರಮದಡಿಯಲ್ಲಿ ಸುಮಾರು ಆರು ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸುವಂತಹ ಉದ್ದೇಶವನ್ನು ಹೊಂದಿದ್ದೇವೆ. 2010 ಮತ್ತು 2012ನೇ ಇಸವಿಯಲ್ಲಿ ಆಗಿರುವಂತಹ ಲೋಪದೋಷಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ 2022ರಲ್ಲಿ ನಡೆದಂತಹ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಿದ್ದೇವೆ. ಕನಿಷ್ಠ 75 percent and above ಇದರಲ್ಲಿ ಬರುತ್ತಿದೆ. ಬೆಂಗಳೂರು ನಗರದಲ್ಲಿ ನಡೆದಂತಹ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಸುಮಾರು ಶೇಕಡಾ 10 ರಷ್ಟು ಮಾತ್ರ ಬೆಂಗಳೂರಿನಲ್ಲಿ ಹೂಡಿಕೆ ಮಾಡುವುದಕ್ಕೆ ಮುಂದೆ ಬಂದಿದ್ದರು. ಉಳಿದಂತೆ ಶೇಕಡಾ 90 ರಷ್ಟು ಹೂಡಿಕೆದಾರರರು tier-2 cities ಗಳಲ್ಲಿ ಹೂಡಿಕೆ ಮಾಡುವುದಕ್ಕೆ ಆಸಕ್ತಿಯನ್ನು ವಹಿಸಿದ್ದೇನೆ. ನಾವು ಎಲ್ಲಾ ಜಿಲ್ಲೆಗಳಲ್ಲಿ division wise ವಿಭಾಗ ಮಾಡಿ ಅವರನ್ನು convince ಮಾಡಿ, request ಮಾಡಿ,

ಕೊಡುತ್ತಿದ್ದೇವೆ. ಬೆಂಗಳೂರಿನಲ್ಲಿ ಬರುತ್ತಿರುವ ಯಾವುದೇ ಪ್ರಾಜೆಕ್ಟ್‌ಗಳಿಗೆ incentives and concession ಕೊಡುತ್ತಿಲ್ಲ. Tier-2 cities ಗಳಲ್ಲಿ ಬರುತ್ತಿರುವುದಕ್ಕೆ concession ಕೊಡುತ್ತಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುತ್ತಿರುವುದಕ್ಕೆ ಸ್ವಲ್ಪ ಹೆಚ್ಚು concession ಕೊಡುತ್ತಿದ್ದೇವೆ. ಈ ರೀತಿ ವಿಭಾಗವಾರು ಮಾಡಿ, ಎಲ್ಲವನ್ನು ಸಮಾನವಾಗಿ ಮಾಡುವುದರ ಕಡೆ ನಾವು ಗಮನಹರಿಸಿದ್ದೇವೆ. ಮಾನ್ಯ ಸದಸ್ಯರು expenditure ಬಗ್ಗೆ ಕೇಳಿದ್ದಾರೆ. ನಾನಂತೂ ಬಹಳಷ್ಟು control ಮಾಡಿ, ಸುಮಾರು ಎಪ್ಪತ್ತೈದು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. 2010ರಲ್ಲಿ 32.5 ಕೋಟಿ ರೂಪಾಯಿ ಖರ್ಚಾಗಿದೆ ಮತ್ತು 2012 ರಲ್ಲಿ 33.75 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ ಈ ಹಿಂದೆ ಮಾನ್ಯ ಆರ್.ವಿ ದೇಶಪಾಂಡೆರವರು ಸಚಿವರಾಗಿದ್ದಾಗ, 2016 ರಲ್ಲಿ ನಲವತ್ತು ಕೋಟಿ ಖರ್ಚು ಮಾಡಿದ್ದಾರೆ. ಈ ಬಾರಿ ಸುಮಾರು ಎಪ್ಪತ್ತೈದು ಕೋಟಿ ರೂಪಾಯಿಗಳು ಖರ್ಚಾಗಿದೆ. ಇದನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ, ನಮ್ಮ ರಾಜ್ಯದಲ್ಲಿ ಅರ್ಧದಷ್ಟು ಖರ್ಚಾಗಿಲ್ಲ. ಇದರ ಬಗ್ಗೆ ಅಂಕಿ-ಅಂಶಗಳನ್ನು ಪ್ರತ್ಯೇಕವಾಗಿ ಕೊಡುತ್ತೇನೆ. ಇದರಲ್ಲಿ ಸುಮಾರು ಎಪ್ಪತ್ತೈದು ಕೋಟಿ ರೂಪಾಯಿಗಳಷ್ಟು ಖರ್ಚು ಆಗಬೇಕೆಂದರೆ, ಬಹಳಷ್ಟು ದೇಶಗಳಿಗೆ ನಾವು ಓಡಾಡಿ, ಅವರ ಕಡೆಯಿಂದ concession ಅನ್ನು ತೆಗೆದುಕೊಂಡು ಬಂದಿದ್ದೇವೆ. ಇದು ಒಂದು ಭಾಗವಾದರೆ, ಎರಡನೆಯದಾಗಿ, Agriculture Sector ಮತ್ತು ಬೇರೆ ಬೇರೆ sector ಗಳಿಗೆ ಇದು ಬಂದಿಲ್ಲ ಎನ್ನುವುದು ಇರುತ್ತದೆ.

ಮಾನ್ಯ ಸಭಾಪತಿಯವರೇ, ಇದು ಇಷ್ಟಾನೆ, ನಾವು ಮನೆಯಲ್ಲಿರುವಂತಹ ಕನ್ಯೆಯನ್ನು ವರನಿಗೆ ತೋರಿಸುವಂತಹ ಕೆಲಸವನ್ನು ಮಾಡುತ್ತೇವೆ. ಆದರೆ ಆ ಹುಡುಗ ಒಪ್ಪಿಕೊಳ್ಳಬೇಕಲ್ಲ. ಅದಂತೂ ಅಷ್ಟೇ ಸತ್ಯವಿದೆ. ನಮ್ಮಲ್ಲಿ ಈ ತರಹ agricultural products ಗೂ ನಾವು ಗಮನವನ್ನು ಹರಿಸುತ್ತೇವೆ ಮತ್ತು ಬೇರೆ ಬೇರೆ products ಗಳ ಬಗ್ಗೆಯೂ ಹೇಳುತ್ತೇವೆ. ನಮ್ಮ ರಾಜ್ಯದಲ್ಲಿ ಏನೇನು ಮೂಲಭೂತ ಸೌಕರ್ಯಗಳು ಮತ್ತು ಯಾವುದು raw material available ಇದೆ ಎನ್ನುವ ಬಗ್ಗೆ ಎಲ್ಲವುಗಳ ಬಗ್ಗೆ ಹೇಳಿರುತ್ತೇವೆ. ನಮಗೆ ಯಾವುದೇ ರೀತಿ ಮಲತಾಯಿ ಧೋರಣೆ ಇಲ್ಲ. Agricultural sector ಬರಬಾರದು ಮತ್ತು ಬರೀ Energy Sector ಅಥವಾ Aero Space

and Defence ಮಾತ್ರ ಬರಬೇಕು ಇನ್ನುಳಿದಂತವೂ ಬರಬಾರದು ಎನ್ನುವಂತಹದ್ದಿಲ್ಲ. ನಾವು ಎಲ್ಲದರ ಕಡೆ ಗಮನಹರಿಸಿ, ಎಲ್ಲವೂ ಕಡೆ ತಿಳುವಳಿಕೆಯಿಂದ ಮಾಡುವಂತಹದ್ದರ ಬಗ್ಗೆ ಮಾಡುತ್ತಿದ್ದೇವೆ. ನಾವು ಮಾಡಿದ್ದೇ ಅಂತಿಮವಿಲ್ಲ. ಎಲ್ಲರೂ ಕೂಡ ಹಿರಿಯ ಸಚಿವರಿದ್ದೀರಿ ಹಾಗೂ ಅದರ ಸದಸ್ಯರಿದ್ದೀರಿ. ತಾವು ಅದರ ಬಗ್ಗೆ ನಮಗೆ ಮಾರ್ಗದರ್ಶನ ಮಾಡಿ. ತಮ್ಮ ಕಡೆಯಿಂದ ಈ ರೀತಿಯ ಒಂದು ಸಮಸ್ಯೆಯಿದೆ, ಇದು ತಪ್ಪು ಎನ್ನಿಸುತ್ತದೆ ಮತ್ತು ಈ ರೀತಿ ಮಾಡಿದರೆ ಒಳ್ಳೆಯದು ಎಂದು ಅನುಭವಿಯುಳ್ಳವಂತಹವರು ನಮಗೆ ಮಾರ್ಗದರ್ಶನ ಮಾಡಿದರೆ, ನಿಶ್ಚಿತವಾಗಿ ಇದನ್ನು ಅನುಷ್ಠಾನ ಮಾಡುವುದರ ಕಡೆ ನಾನು ಗಮನಹರಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ತಾವು ಪ್ರಶ್ನೆ ಕೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹತ್ತು ಲಕ್ಷ ಕೋಟಿ ಯಾವ ರೀತಿ ಬರುತ್ತದೆ ಎಂದು ಮಾನ್ಯ ಸಚಿವರು ವಿಸ್ತಾರವಾಗಿ ಹೇಳಿದ್ದಾರೆ. ಇದು ನನ್ನ statement ಅಲ್ಲ. Economic Times ಪತ್ರಿಕೆಯನ್ನು ತಾವು ನೋಡಿರುತ್ತೀರಿ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

*"Figures put out by different ministries at different times however betray these claims of the Chief Minister.*

*Recent assessments of investor confidence and the global economic situation by the Finance Ministry of the Government of India, the SBI's own economic review, the RBI and the IMF to name only a few show how the claims of Bommai Government just falls flat."*

ಅಂದರೆ, ಈ ಹಿಂದೆ ಮಾನ್ಯ ಸಚಿವರು statement ಮಾಡಿದ್ದಾರೆ. ಈ ಹಿಂದೆ ಮಾನ್ಯ ಸಚಿವರು 2022ನೇ ಇಸವಿಯವರೆಗೂ ಎಂಟು ಲಕ್ಷ ಕೋಟಿ ರೂಪಾಯಿಗಳಷ್ಟು ಬಂದಿದೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರ ಪ್ರಕಾರ 8.25 ಲಕ್ಷ ಕೋಟಿ ರೂಪಾಯಿಗಳು investment assurance was

made prior to GIM. ಅದರ ಜೊತೆಗೆ ಎರಡೂವರೆ ಕೋಟಿ ಲಕ್ಷ ರೂಪಾಯಿ ಸೇರಿಸಿ ಹತ್ತು ಲಕ್ಷ ಕೋಟಿ ರೂಪಾಯಿಗಳು ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಕೇಂದ್ರ ಸರ್ಕಾರದ model ನ್ನು ಕೂಡ ಮಾನ್ಯ ಸಚಿವರು follow ಮಾಡುತ್ತಿದ್ದಾರೆ. ಮಾನ್ಯ ಸಚಿವರು ಹೇಳಿರುವಂತೆ, Tata Nano plant ಅದನ್ನು ಪಶ್ಚಿಮ ಬಂಗಾಳದ ನಂದಿ ಗ್ರಾಮದಿಂದ ಓಡಿಸಿದರು. ಹಾಗಾಗಿ, ತಮ್ಮ ಪಕ್ಷ ಸೋತಿದ್ದು. ಆನಂತರ ಇದು ಗುಜರಾತ್ ರಾಜ್ಯದ ಆನಂದ್ ಎಂಬ ಊರಲ್ಲಿ ಸುಮಾರು 1200 ಎಕರೆ ಜಾಗವನ್ನು ಸ್ವಾಧಿನಪಡಿಸಿಕೊಂಡರು. ಸರ್ಕಾರ ಸುಮಾರು 9,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ನೀಡಿತ್ತು. ಈಗ ಅದು ಮುಚ್ಚಿ ಹೋಗಿದೆ. ಇದರಿಂದಾಗಿ ಗುಜರಾತ್ ರಾಜ್ಯದ ಪ್ರತಿಯೊಬ್ಬ ಪ್ರಜೆಯ ಮೇಲೆ ಸುಮಾರು ನಲವತ್ತೊಂದು ಸಾವಿರ ರೂಪಾಯಿಗಳಷ್ಟು ಸಾಲದ ಹೊರೆ ಇದೆ. ಈ ರೀತಿ ಜನತೆಯ ಮೇಲೆ ಹೊರೆಯಾಗುವ ಹೂಡಿಕೆ ಮಾಡುವುದು ಕರ್ನಾಟಕ ರಾಜ್ಯಕ್ಕೆ ಬೇಕಾಗಿಲ್ಲ. ಈಗಾಗಲೇ ಮಾನ್ಯ ಸಚಿವರು ಹೇಳಿರುವಂತೆ, ಇಡೀ ಭಾರತದಲ್ಲಿ Unicorn Companies 53 ಮತ್ತು ಕರ್ನಾಟಕ ರಾಜ್ಯದಲ್ಲಿ 14 ಇದೆ. ಆದರೆ ಇದರಲ್ಲಿ ಯಾರು one billion ಗಳು ಹೂಡಿಕೆ ಮಾಡಿರುತ್ತಾರೋ, ಅದಕ್ಕೆ Unicorn Company ಎಂದು ಹೇಳುತ್ತೇವೆ. ಆದರೆ, ಎಷ್ಟು ಹೂಡಿಕೆಯಾಗಿದೆ? ಮಾನ್ಯ ಸಚಿವರು ಹೇಳುವ ಪ್ರಕಾರ Rs. 2.5 lakh cores are received in principle. ಅದರಲ್ಲಿ ಮಾನ್ಯ ಸಚಿವರು ಹೇಳಿರುವಂತೆ, Rs. 8.25 lakh crore was assured since January this year, a whopping 60% around Rs. 5.50 lakh crore has not even crossed MOU stage. ಹತ್ತು ಲಕ್ಷ ಕೋಟಿ ರೂಪಾಯಿ ಬರುತ್ತಿದೆ ಎಂದು ಮಾನ್ಯ ಸಚಿವರು ದೊಡ್ಡ ಹೇಳಿಕೆಯನ್ನು ನೀಡಿದ್ದಾರೆ. ಆದರೆ ಬೆಂಗಳೂರು ನಗರ it is a city of opportunities. Highest Multi-national Companies ಇರುವಂತಹದ್ದು. ಇದಕ್ಕೆ ಎಷ್ಟು ಹೂಡಿಕೆಯಾಗಿದೆ? ಇದಕ್ಕೆ ಏನೇನು ಮೂಲಭೂತ ಸೌಕರ್ಯವನ್ನು ಕೊಟ್ಟಿದೆ? ಮಾರ್ಕೆಟಿಂಗ್ ಮಾಡುವುದಕ್ಕೆ ಒಳ್ಳೆಯ ಬಾಕ್ಸ್ ಇಟ್ಟುಬಿಟ್ಟು, ಪ್ಯಾಕೆಟ್‌ಯೊಳಗಡೆ ಕಳಪೆ ಇಟ್ಟರೆ ಆಗುವುದಿಲ್ಲ. ಆದ್ದರಿಂದ, ಸುಳ್ಳು ಸಂಪೂರ್ಣವಾಗಿದೆ ಎಂದು Economic Times ಪತ್ರಿಕೆಯಲ್ಲಿ ವರದಿಯಾಗಿದೆ. ಮಾನ್ಯ ಸಚಿವರ Economic Times ಪತ್ರಿಕಾ ವರದಿಗೂ ಮತ್ತು statement

ಗೂ ಏನು ವ್ಯತ್ಯಾಸವಿದೆ ಎಂದು ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದರೆ ಚೆನ್ನಾಗಿರುತ್ತದೆ.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, Foreign Direct Investment (FDI) ಪ್ರತಿ ಮೂರು ತಿಂಗಳಿಗೆ ಒಂದು ಬಾರಿ ಇಡೀ ದೇಶದಲ್ಲಿ ಸರ್ವೇ ಮಾಡಿ, ಯಾವ ರಾಜ್ಯಕ್ಕೆ ಹೆಚ್ಚು ಆ quarter ನಲ್ಲಿ ಬಂತು ಎಂದು ಹೇಳುತ್ತಾರೆ. ಕಳೆದ ಐದು quarter ನಲ್ಲಿ Foreign Direct Investment ಅತಿ ಹೆಚ್ಚು ಬಂದಿರುವಂತಹದ್ದು ಕರ್ನಾಟಕ ರಾಜ್ಯ. ಇದನ್ನು ನಾನು ಹೇಳುತ್ತಿಲ್ಲ. ಇದನ್ನು Economic Times ಪತ್ರಿಕೆಯವರು ಅದರ global survey ಏನೂ ಮಾಡುತ್ತಾರೆ. ಅದರಲ್ಲಿ ಶೇಕಡಾ ಮೂವತ್ತೆಂಟು ಪರ್ಸೆಂಟ್ ಕಳೆದ ವರ್ಷದಲ್ಲಿ ಕರ್ನಾಟಕ ರಾಜ್ಯಕ್ಕೆ ಬಂದಿದೆ. ಮಹಾರಾಷ್ಟ್ರಕ್ಕೆ ಶೇಕಡಾ ಇಪ್ಪತ್ತೆರಡು ಪರ್ಸೆಂಟ್ ಬಂದಿದೆ. ಇನ್ನುಳಿದಿರುವಂತಹದ್ದು, ಬೇರೆ ಬೇರೆ ರಾಜ್ಯಗಳಿಗೆ ಬಂದಿದೆ. ಇದು ಕರ್ನಾಟಕ ರಾಜ್ಯದಲ್ಲಿರುವ ಕೈಗಾರಿಕೆಗಳಿಗೆ ಒಂದು investors friendly state ಎನ್ನುವುದಕ್ಕೆ ಇದೊಂದು ಸಾಕ್ಷಿ. Ease of doing business ಇಡೀ ದೇಶದಲ್ಲಿ ಮೊದಲನೇ ಸ್ಥಾನದಲ್ಲಿರುವಂತಹದ್ದು, ಅದು ಕರ್ನಾಟಕ ರಾಜ್ಯವಾಗಿದೆ. Tata Nano ಅಂತಹ ಕಂಪನಿಗಳು ಕರ್ನಾಟಕ ರಾಜ್ಯಕ್ಕೆ ಬರಬಾರದೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆದರೆ ಅದು ಬರುವುದಕ್ಕಿಂತ ಪೂರ್ವದಲ್ಲಿ ಪರಿಸ್ಥಿತಿ ಹೀಗಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, Toyota Plant ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಆದರೆ Toyota ದಿಂದ ನಮಗೆ ಬರುವಂತಹ ಆದಾಯವೆಷ್ಟು? ಅದೇ ರೀತಿ ನಾವು Tata Nano ಬಗ್ಗೆ ಇವತ್ತು ಏನಾಯಿತು? ಅವೊತ್ತು ಏನಾಯಿತು? ಅದನ್ನೇ ಕಲ್ಪಿಸಿಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರು automobile sector ನಮ್ಮ ಕರ್ನಾಟಕ ರಾಜ್ಯಕ್ಕೆ ಬೇಡವೆಂದು ಹೇಳಿದರೆ, ಆ ರೀತಿ ಹೇಳುವುದಕ್ಕಾಗುವುದಿಲ್ಲ. ನಾವೆಲ್ಲ ಅದರ ಸಾಧಕ-ಬಾಧಕವನ್ನು ನೋಡಿಕೊಂಡು, ಒಬ್ಬರೇ ನಿರ್ಧಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಯಾವುದೇ ಒಂದು ದೊಡ್ಡ ಪ್ರಾಜೆಕ್ಟ್ ಬಂದಾಗ, ಮಾನ್ಯ ಮುಖ್ಯಮಂತ್ರಿಗಳು, ಮೆಂಬರ್ ಸೆಕ್ರೆಟ್ರರಿಯಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮತ್ತು

ಹಿರಿಯ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಇದ್ದಾರೆ. ಅವರುಗಳ ಒಪ್ಪಿಗೆ ಪಡೆದುಕೊಂಡೇ ಮುಂದೆ ಹೋಗುತ್ತೇವೆ.

**ಸಭಾಪತಿಯವರು:-** ಈ ಪ್ರಶ್ನೆಯನ್ನು ಮುಗಿಸೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತುಂಬಾ ಮಹತ್ವವಾದ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ರಾಜ್ಯದ ಅಭಿವೃದ್ಧಿ ಬಗ್ಗೆ ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ಮಾನ್ಯ ಸಚಿವರು ಹೇಳುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದೇ Automobile Industry ಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ಹೆಚ್.ಎಂ.ಟಿ. ಕಾರ್ಖಾನೆ ಕ್ಲೋಸ್ ಮಾಡಿಲ್ಲ. ಬೆಂಗಳೂರು city of public sector, ಅಲ್ಲಿ ಇದ್ದಂತಹ ಒಂದೊಂದೇ ಕಂಪನಿಯನ್ನು ಕ್ಲೋಸ್ ಮಾಡಿಕೊಂಡಿ ಬಂದಿದ್ದಾರೆ. ಇದಕ್ಕೆಲ್ಲಾ ಯಾರು ಕಾರಣ?

**ಡಾ: ಮುರುಗೇಶ್ ಆರ್. ನಿರಾಣಿ:-** ನಮ್ಮ ಸರ್ಕಾರ ಯಾವುದನ್ನು ಕ್ಲೋಸ್ ಮಾಡಿಲ್ಲ. ಅದರ ಇತಿಹಾಸ ಹೇಳುವುದಾದರೆ, ಅದರ ಬಗ್ಗೆ ಪೂರ್ತಿ ಹೇಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ತಾವು privatization ಮಾಡಿಕೊಂಡು ಹೋಗುತ್ತಿದ್ದೀರಾ. ಕಂಪನಿಗಳು ಒಂದೊಂದಾಗಿ ಮುಚ್ಚುತ್ತಿರುವ ಸಂದರ್ಭದಲ್ಲಿ Automobile Sector invite ಮಾಡಿಲ್ಲವೆಂದು ನಮಗೆ ಹೇಳುವುದು ಬೇಡ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸ್ವಲ್ಪ ದೂರದೃಷ್ಟಿ ಇಟ್ಟುಕೊಳ್ಳಬೇಕು. Tata Nano project ಅನ್ನು ಪಶ್ಚಿಮ ಬಂಗಾಳದ ನಂದಿ ಗ್ರಾಮದಲ್ಲಿ reject ಮಾಡಿದರು. ಇದನ್ನು ಅವರು ಏತಕ್ಕೋಸ್ಕರ reject ಮಾಡಿದರು ಎನ್ನುವುದರ ಬಗ್ಗೆ ಯೋಚನೆ ಮಾಡುವುದು ಬಿಟ್ಟು, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಕರೆದು, ಸುಮಾರು 9,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ಕೊಟ್ಟಿರುವ ಬಗ್ಗೆ ನನ್ನ ಪ್ರಶ್ನೆಯಷ್ಟೆ. ಅದ್ದರಿಂದ conversion rate ತೆಗೆದುಕೊಳ್ಳಿ. Economic Times ಪತ್ರಿಕೆಯಲ್ಲಿ ಹತ್ತು ಲಕ್ಷ ಕೋಟಿ ರೂಪಾಯಿಗಳು ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅವರ

ಪ್ರಕಾರ realization of this investment is not beyond 5 to 10 percent ಎಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೀರಾ?

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‍ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‍ರವರೇ, ತಮ್ಮ ಪ್ರಶ್ನೆಯನ್ನು ಕೇಳಿ. ಮಾನ್ಯ ಸದಸ್ಯರೇ, ದಯವಿಟ್ಟು, ಆಗುವುದಿಲ್ಲ.

**(ಗೊಂದಲ)**

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದು ಪ್ರಶ್ನೋತ್ತರ ವೇಳೆ.

**(ಗೊಂದಲ)**

**Mr.CHAIRMAN:-** Please cooperate. ಮಾನ್ಯ ಸಲೀಂ ಅಹಮದ್‍ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಇದು ಉದ್ಯೋಗದ ಪ್ರಶ್ನೆಯಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ ದಯವಿಟ್ಟು, ಒಂದು ನಿಮಿಷ. ಮಾನ್ಯ ಸಲೀಂ ಅಹಮದ್‍ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಉದ್ಯೋಗವನ್ನು ಯುವಕರಿಗೆ ಕೊಡುವುದಿಲ್ಲವೆಂದು ಹೇಳಿದರೆ, ...

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಲೀಂ ಅಹಮದ್‌ರವರೇ, ಒಂದು ನಿಮಿಷ. ....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ಮಾನ್ಯ ಸದಸ್ಯರಿಗೆ ಎದುರಿಸುತ್ತೀದ್ದೀರಾ. ಮಾನ್ಯ ಸಲೀಂ ಅಹಮದ್‌ರವರೇ, ತಮ್ಮ ಪ್ರಶ್ನೆಯನ್ನು ಕೇಳಲಿಲ್ಲವೆಂದರೆ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**(ಗೊಂದಲ)**

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ನನಗೆ ಉತ್ತರ ಬರಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ತಮ್ಮ ಪ್ರಶ್ನೆಯನ್ನು ಕೇಳಲಿಲ್ಲವೆಂದರೆ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ವೇಳೆಯನ್ನು ನಡೆಸುವುದೇ ಬೇಡ. ನಾವು ಪ್ರಶ್ನೆಯನ್ನು ಕೇಳುವುದೇ ಬೇಡ.

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ಪ್ರಶ್ನೋತ್ತರ ವೇಳೆಯನ್ನು ಮುಗಿಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು ಹೇಳಿ. ನಾನು ಇಲ್ಲವೆಂದು ಹೇಳುತ್ತಿಲ್ಲ. ನಾನು ತಾವು ಹೇಳಿರುವ ಬಗ್ಗೆ ಒಪ್ಪುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಸ್ವಲ್ಪ ಕೇಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಪ್ರಶ್ನೋತ್ತರ ವೇಳೆಯನ್ನು ಮುಗಿಸಬೇಕಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹತ್ತು ಲಕ್ಷ ಕೋಟಿ ರೂಪಾಯಿ Global Investors Meet (GIM) ನಲ್ಲಿ ಬಂದಿದೆ ಎಂದಾಗ, ಎಷ್ಟು ಲಕ್ಷ ಕೋಟಿ ರೂಪಾಯಿ practical ಆಗಿ invest ಆಗಿದೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಸಭಾಪತಿಯವರು:-** ನನ್ನ ಪರಿಸ್ಥಿಯನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ನಾನು ಸದನವನ್ನು ನಡೆಸಬೇಕಲ್ಲ. ಮಾನ್ಯ ಸಲೀಂ ಅಹಮದ್‌ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಸದನ ಗದ್ದಲದಲ್ಲಿದ್ದಾಗ, ಮಾನ್ಯ ಸಲೀಂ ಅಹಮದ್‌ರವರೇ ಎಂದರೆ ಹೇಗೆ ಸ್ವಾಮಿ? **(ಗೊಂದಲ)** ನಮ್ಮಲ್ಲಿ ಇಮಾಮ್ ಸಾಬ್ ಇದ್ದಾರೆ. ಇವರನ್ನು ಕೇಳಿ.

**ಸಭಾಪತಿಯವರು:-** ಮೂರು ಜನ ಸದಸ್ಯರು ಒಂದು ಪ್ರಶ್ನೆಗೆ ಸ್ವಲ್ಪ ಸ್ವಲ್ಪ ಕೇಳಬೇಕು. ಅದಕ್ಕೆ ಮೂರು ಜನ ಸದಸ್ಯರಿಗೆ ಉತ್ತರವನ್ನು ಕೊಡುವುದಕ್ಕೆ ಹೇಳಿದೆ. ನಾನು ಏನು ಮಾಡುವುದಕ್ಕಾಗುತ್ತದೆ ಹೇಳಿ? **(ಗೊಂದಲ)** ಅದರ ಮಧ್ಯೆ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಮಾತನಾಡುತ್ತಿದ್ದೀರಿ. ಒಂದು ಪ್ರಶ್ನೆಯ ಬಗ್ಗೆ ಎಷ್ಟು ಬಾರಿ ಚರ್ಚೆ ಮಾಡುವುದಕ್ಕಾಗುತ್ತದೆ ಹೇಳಿ? ದಯವಿಟ್ಟು ಎಲ್ಲರೂ ಅರ್ಥ ಮಾಡಿಕೊಳ್ಳಿ. **(ಗೊಂದಲ)** ಯಾರಾದರೂ ಒಬ್ಬ ಸದಸ್ಯರು ಕೇಳಿ.

**(ಗೊಂದಲ)**

**(ಮುಂದು)**

(1059) 20.12.2022 1.30 TCH-MD (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಯಾರಾದರು ಒಬ್ಬರು ಮಾತನಾಡಿ. ಮಾನ್ಯ ಯು.ಬಿ.ವೆಂಕಟೇಶ್‌ರವರೇ ತಾವು ಕುಳಿತುಕೊಳ್ಳಿ. ಮಾನ್ಯ ಮಂಜುನಾಥ್ ಭಂಡಾರಿಯವರೇ ತಾವು ಪ್ರಶ್ನೆ ಕೇಳಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಅವರು 2.81 ಲಕ್ಷ ಜನಕ್ಕೆ ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ನಾನು ಅವರಿಗೆ ಕೇಳುವುದೇನೆಂದರೆ, ರೂ.1550ಕೋಟಿಗಳಿಗೆ 40 ಜನಕ್ಕೆ ಉದ್ಯೋಗ ಕೊಡುತ್ತೇವೆಂದು ಹೇಳುತ್ತಿದ್ದಾರೆ. Research Institutional Institute ನವರು ರೂ.800 ಕೋಟಿಗಳನ್ನು ಕೊಟ್ಟು 10,000 ಜನಕ್ಕೆ ಉದ್ಯೋಗವನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಸರ್, ಇದು ಯಾವ ನ್ಯಾಯ?

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಇದು investment proportionate ಆಗಿ employment ಬರುವುದಿಲ್ಲ. ಉದಾಹರಣೆಗೆ ಟೆಕ್ಸ್‌ಟೈಲ್ಸ್‌ನಲ್ಲಿ ರೂ.1000 ಕೋಟಿಗಳನ್ನು investment ಮಾಡಿದರೆ, Textile Industry ನಲ್ಲಿ labour oriented ಇರುವುದರಿಂದ ಅಲ್ಲಿ ಅತಿ ಹೆಚ್ಚು job create ಆಗುತ್ತದೆ. ಆದರೆ Automobile Sector ನಲ್ಲಿ ಇವತ್ತಿನ ದಿವಸ ನಾವು Aero Space and Defence ಗೆ ಹೋದಾಗ ಅಥವಾ Data Centres ಗೆ ಹೋದಾಗ ಅಥವಾ Semi-Conductor Policy ಗೆ ಹೋದಾಗ ಅಲ್ಲಿ investment ಜಾಸ್ತಿ ಇರುತ್ತದೆ, ಲೇಬರ್ ಕಡಿಮೆ ಇರುತ್ತಾರೆ. Fully automation ಇರುತ್ತದೆ. ಈ ರೀತಿಯ ವ್ಯತ್ಯಾಸಗಳು ಇರುತ್ತದೆ. ಹಾಗಾಗಿ ರೂ.1,000 ಕೋಟಿಗಳು investment ಮಾಡಿದಾಗ ಇಷ್ಟು ಉದ್ಯೋಗ ಇದೆ, ರೂ.10,000 ಕೋಟಿಗಳು ಕೊಟ್ಟಾಗ ಇಷ್ಟು ಉದ್ಯೋಗ ಕೊಟ್ಟಿದ್ದಾರೆ ಎಂಬ ಅಳತೆಗೋಲು ಇದರಲ್ಲಿ ಆಗುವುದಿಲ್ಲ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವ ರೀತಿ ಕಂಪನಿ ನಡೆಸುತ್ತಿದ್ದಾರೋ ಅದೇ ರೀತಿ ನಾನು ಕೂಡ Educational Institution ನಡೆಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಮಂಜುನಾಥ್ ಭಂಡಾರಿಯವರೇ, ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಏನೆಂದರೆ, ರೂ.೮೦೦ ಕೋಟಿಗಳು Educational Institution ಗೆ invest ಮಾಡಿದಾಗ 10,000 ಜನಕ್ಕೆ ಉದ್ಯೋಗ ಹೇಗೆ ಕೊಡಲು ಸಾಧ್ಯ? That is my simple question.

**Dr. MURUGESH R.NIRANI:-** Sir, I will study and come back to you.

**ಸಭಾಪತಿಯವರು:-** ಶ್ರೀ ಮಂಜುನಾಥ್ ಭಂಡಾರಿಯವರೇ, ತಾವು ದಯಮಾಡಿ ಬೇಗ ಮಾತನಾಡಿ ಮುಗಿಸಿ.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುತ್ತೇನೆ.

**ಸಭಾಪತಿಯವರು:-** ಡಾ.ಮುರುಗೇಶ ಆರ್.ನಿರಾಣಿಯವರೇ, ತಾವು ಉತ್ತರ ಹೇಳಿ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:-** ಯು.ಬಿ.ವೆಂಕಟೇಶ್ ರವರೇ, ತಾವೇಕೆ ಮಧ್ಯೆ ಮಾತನಾಡುತ್ತಿದ್ದೀರಿ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಕೇಳಿದರು. ನನ್ನದು ಒಂದು ಚಿಕ್ಕ ಪ್ರಶ್ನೆ ಇದೆ ಕೇಳಿಬಿಡುತ್ತೇನೆ.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮೊದಲು ಕೇಳಿದ ಪ್ರಶ್ನೆಗೆ ಉತ್ತರ ಹೇಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಕೇಳಲಿ. ನೀವು ಪ್ರಶ್ನೋತ್ತರದಲ್ಲಿ debate ಮಾಡಲು ಅವಕಾಶ ಕೊಟ್ಟರೆ ಹೇಗೆ? ಮಾನ್ಯ ಸದಸ್ಯರಿಗೆ ಏನಾದರೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಬೇರೆ ನಿಯಮಾವಳಿಯಲ್ಲಿ ಅವಕಾಶ ಕೊಡಿ. ತಾವು ಪ್ರಶ್ನೋತ್ತರದ format ನಿಂದ ಎಷ್ಟು ವಿಸ್ತಾರವಾಗಿ ಹೋಗಬಹುದು. ಇದಕ್ಕೆ ನಿಯಮಾವಳಿಗಳು ಅನ್ವಯ ಆಗುವುದಿಲ್ಲವೆ?

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೇ, ಸಾಧ್ಯವೇ ಇಲ್ಲ. ಈ ರೀತಿಯಾದಲ್ಲಿ ಸದನ ನಡೆಸುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ಅವಧಿ ಪ್ರಾರಂಭವಾಗಿ ಸುಮಾರು 1 ಗಂಟೆ 45 ನಿಮಿಷ ಆಗಿದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಹೇಳಿದ್ದು ಸರಿ ಇದೆ. ಆದರೆ ಮಾನ್ಯ ಸಚಿವರು ಉತ್ತರ ಕೊಟ್ಟರತಕ್ಕಂಥದ್ದರಲ್ಲಿ clarity ಇಲ್ಲವೆಂದರೆ, ನಾನು ಅದರಿಂದ satisfy ಆಗದಿದ್ದರೆ ಅದನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಪೀಠದ ಜೊತೆ ಮಾತನಾಡಬಾರದೇ? ಈಗ ಇಲ್ಲಿ ಪ್ರಶ್ನೋತ್ತರದ ನಿಯಮಾವಳಿಯನ್ನು ಅನ್ವಯ ಮಾಡಿ.

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್ ರವರೇ, ತಾವು ಹೇಳುತ್ತಿರುವುದು ಸರಿ ಇದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗೆ ಉತ್ತರ ಕೊಟ್ಟ ನಂತರ ಅದು ಮುಗಿಯಿತು. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದು ಸಮಂಜಸವಾಗದಿದ್ದರೆ ಮತ್ತೊಂದು ನಿಯಮಾವಳಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕು. ಗಂಟೆಗಟ್ಟಲೇ debating ಮಾಡುತ್ತಿದ್ದರೆ, ಯಾರ ತಾಳ್ಮೆಯನ್ನು ಪರೀಕ್ಷೆ ಮಾಡಬೇಕೆಂದು ಪೀಠ ಬಯಸಿದೆ?

**ಸಭಾಪತಿಯವರು:-** ಡಾ.ಮುರುಗೇಶ ನಿರಾಣಿಯವರೇ, ದಯಮಾಡಿ ತಾವು ಬೇಗ ಮಾತನಾಡಿ ಮುಗಿಸಿ.

**ಡಾ.ಮುರುಗೇಶ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾಗರಾಜು ರವರು ಕೇಳಿರುವ ಪ್ರಶ್ನೆಗೆ ಹೇಳುವುದಾದರೆ, ರೂ.2.83,415 ಕೋಟಿ ಬಂಡವಾಳ ಹೂಡಿಕೆಯಾಗಲಿದೆ.

**ಸಭಾಪತಿಯವರು:-** ಡಾ.ಮುರುಗೇಶ ಆರ್.ನಿರಾಣಿ ಯವರೇ, ತಾವು ರೂ.2.83,415 ಕೋಟಿ ಬಂಡವಾಳ ಹೂಡಿಕೆ ಕುರಿತು ಉತ್ತರ ಕೊಡಿ.

**ಡಾ.ಮುರುಗೇಶ ಆರ್.ನಿರಾಣಿ:-** ಮಾನ್ಯ ಸದಸ್ಯರು ಉತ್ತರ ಕರ್ನಾಟಕದಲ್ಲಿ ಎಷ್ಟು ಪ್ರಾಜೆಕ್ಟ್ ಬರುತ್ತದೆ ಹಾಗೂ ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪ್ರಾಜೆಕ್ಟ್‌ಗಳು ಬರುತ್ತವೆ ಎಂದು ಮೂಲ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಅದರಲ್ಲಿ ನಾವು High Level Committee ಯಲ್ಲಿ 1/3ರಷ್ಟು project approval ಮಾಡಿದ್ದೇವೆ. ಮುಂದಿನ 90 ದಿನಗಳಲ್ಲಿ ಇನ್ನುಳಿದಿರುವಂತಹ ರೂ.7 ಲಕ್ಷ ಕೋಟಿಗಳಷ್ಟು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು, ಯಾವ್ಯಾವ ಜಿಲ್ಲೆಗಳಲ್ಲಿ ಅವರು ಮಾಡುವಂತಹ ಪ್ರಾಜೆಕ್ಟ್‌ಗೆ ಎಲ್ಲಿ raw material available ಇದೆಯೋ, ಎಲ್ಲಿ land and project ಇದೆಯೋ ಅಲ್ಲಿಗೆ distribute ಮಾಡುತ್ತಿದ್ದೇವೆ. ಏಕೆಂದರೆ ಅವರು ಕೂಡ equal ಆಗಿ ಒಪ್ಪಬೇಕಲ್ಲವೇ? ಅವರು ದೊಡ್ಡ ಮಟ್ಟದಲ್ಲಿ investment ಮಾಡುವಾಗ ಅವರದ್ದು ಕೂಡ confidence ತೆಗೆದುಕೊಳ್ಳಬೇಕಾಗುತ್ತದೆ. **ಈ ಅಧಿವೇಶನ ಮುಗಿದ ನಂತರ ನಾವು ಇನ್ನೊಂದು ಸಭೆ ಮಾಡುತ್ತಿದ್ದೇವೆ. ಉಳಿದಿರುವಂತಹ project clearance ಮಾಡುವಾಗ ಯಾವ್ಯಾವ ತಾಲ್ಲೂಕು ಮತ್ತು ಯಾವ್ಯಾವ ಜಿಲ್ಲೆಗಳಲ್ಲಿ ಬರುತ್ತದೆ ಎನ್ನುವಂತಹ ವಿವರವಾದ ಮಾಹಿತಿಯನ್ನು ತಮಗೆ ಕಳುಹಿಸಿ ಕೊಡುತ್ತೇನೆ**.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕಕ್ಕೆ ಸುಮಾರು ರೂ.9,81,784 ಕೋಟಿಗಳ ಬಂಡವಾಳ ಹೂಡಿಕೆಯಾಗುತ್ತಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇನ್ವೆಸ್ಟ್‌ಮೆಂಟ್ ಕರ್ನಾಟಕ 2022 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಆಯೋಜನೆಗೆ ರೂ.74,99,58,947 ಗಳಷ್ಟು ಸರ್ಕಾರ ಖರ್ಚು ಮಾಡಿದೆ. ವಿದ್ಯಾರ್ಥಿಗಳಿಗೆ scholarship, freeship ಸರ್ಕಾರ ಕೇವಲ ರೂ.100ಕೋಟಿಗಳು ಕೊಡುವುದಕ್ಕೆ

ಹಣ ಇಲ್ಲ. ಆದರೆ ಈ ಸಮಾವೇಶ ಆಯೋಜನೆಗೆ ಯಾವ ಮೂಲದಿಂದ ಖರ್ಚು ಮಾಡಿದ್ದೀರಿ ಎಂದು ಸದನಕ್ಕೆ ತಿಳಿಸಿದರೆ ಬಹಳ ಚೆನ್ನಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದನ್ನು ಈಗಾಗಲೇ savings amount ನಲ್ಲಿ ಮಾಡಿದ್ದೇವೆಂದು ಹೇಳಿದರು.

**ಡಾ: ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ನಾನು ಹೇಳಿದ್ದನ್ನು ಕೇಳಿಸಿಕೊಳ್ಳಲಿಲ್ಲವೆನಿಸುತ್ತದೆ. 2010-12ರಲ್ಲಿ ಕೆ.ಐ.ಎ.ಡಿ.ಬಿ., ಅಥವಾ ಸರ್ಕಾರದಿಂದ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. ಆ ಪ್ರಾಜೆಕ್ಟ್ ಮಾಡುವಾಗ ಅವರು ಭೂಮಿ ಸಲುವಾಗಿ ಹಣವನ್ನು deposit ಮಾಡಿದ್ದರು. ಆ ಹಣವನ್ನು ನಾವು ಬ್ಯಾಂಕಿನಲ್ಲಿ deposit ಮಾಡಿದ್ದೆವು. ಅದರಿಂದ ಬಂದಿರತಕ್ಕಂಥ ಬಡ್ಡಿ ಹಣ ಉಳಿತಾಯ ಆಯಿತು. ಎರಡೂ GIM (Global Investors Meet) ಅದರಲ್ಲೇ ಖರ್ಚು ಮಾಡಲಾಗಿದೆ. 2022ರಲ್ಲೂ ಕೂಡ ಅದೇ ರೀತಿ ಮಾಡಲಾಗಿದೆ. ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ, ಅದಕ್ಕೆ ತಾವೆಲ್ಲರೂ appreciate ಮಾಡಬೇಕು. ನಾವು ಪ್ರಯತ್ನ ಮಾಡದಿದ್ದರೆ ಪ್ರಾಜೆಕ್ಟ್ ಹೇಗೆ ಬರಲು ಸಾಧ್ಯ? ನಾವು ಬೇರೆ ದೇಶದ ಬಂಡವಾಳ ಹೂಡಿಕೆದಾರರನ್ನು ಕರೆಯದಿದ್ದರೆ ಹೇಗೆ ಬರಲು ಸಾಧ್ಯ? Economics Times ಪತ್ರಿಕೆಯಲ್ಲಿ ಶೇ.5 ರಷ್ಟು ಎಂದು ಬರೆದಿದ್ದಾರೆಂದು ಹೇಳಿದಿರಿ. ಈಗಾಗಲೇ ಶೇ.5 ರಷ್ಟನ್ನು JSW Group ರವರು ಒಬ್ಬರೆ ಹೂಡಿಕೆ ಮಾಡಿದ್ದಾರೆ. ಅವರಿಗೆ ಕಳೆದ ತಿಂಗಳು ಒಂದೇ ಪ್ರಾಜೆಕ್ಟ್‌ಗೆ ಒಟ್ಟು ರೂ.10 ಲಕ್ಷ ಕೋಟಿಗಳಲ್ಲಿ ರೂ.50,000 ಕೋಟಿಗಳಿಗೆ approval ಕೊಟ್ಟು ಕೆಲಸ ಪ್ರಾರಂಭವಾಗಿದೆ. ಇನ್ನೂ ಸಾಕಷ್ಟು ಕಂಪನಿಗಳು ಬರುತ್ತವೆ.

**ಸಭಾಪತಿಯವರು:-** ಡಾ.ಮುರುಗೇಶ ಆರ್.ನಿರಾಣಿ ರವರೇ, ಈಗಾಗಲೇ ತಾವು specific ಉತ್ತರವನ್ನು ಕೊಟ್ಟಿದ್ದೀರಿ. ಮಾನ್ಯ ಸಲೀಂ ಅಹಮದ್ ರವರೇ, ತಾವು ನೇರವಾಗಿ ಪ್ರಶ್ನೆ ಕೇಳಿ. ಮಾನ್ಯ ಸಚಿವರು ನೇರವಾಗಿ ಉತ್ತರ ಕೊಡುತ್ತಾರೆ.

**ಪ್ರಶ್ನೆ ಸಂಖ್ಯೆ.218**

**(ಉತ್ತರ ಲಗತ್ತಿಸಿದೆ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ 2017ರಲ್ಲಿ ಸ್ಥಾಪನೆಯಾದಂಥ ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಇದನ್ನು ಯಾವಾಗ complete ಮಾಡುತ್ತೀರಿ. ಎರಡನೆಯದಾಗಿ, ಒಟ್ಟು ಕಾಮಗಾರಿಗಳಲ್ಲಿ ಮುಕ್ತಾಯಗೊಂಡಿರುವ ಕಾಮಗಾರಿಗಳ ಸಂಖ್ಯೆ 51. ಒಟ್ಟು ಅದಕ್ಕೆ ರೂ.429.04 ಕೋಟಿಗಳು ಖರ್ಚಾಗಿದೆ. ಪ್ರಗತಿಯಲ್ಲಿರುವ ಕಾಮಗಾರಿ ಸಂಖ್ಯೆ.13. ಒಟ್ಟು ರೂ.540.92 ಕೋಟಿಗಳು ಖರ್ಚಾಗಬೇಕೆಂದು ಉತ್ತರ ಕೊಟ್ಟಿದ್ದಾರೆ. ಮೊದಲನೆಯದಾಗಿ, ಕಾಮಗಾರಿ ಏಕೆ ವಿಳಂಬವಾಗಿದೆ? ರೂ.540.92 ಕೋಟಿಗಳ ಕಾಮಗಾರಿಯನ್ನು ಯಾವಾಗ ಮುಗಿಸುತ್ತೀರಿ? ಈಗಾಗಲೇ ಒಂದು ದಿನಪತ್ರಿಕೆಯಲ್ಲಿ "ಸ್ಮಾರ್ಟ್ ಸಿಟಿ ಯೋಜನೆ ರಾಜ್ಯಕ್ಕೆ ತಪರಾಕಿ ಕರ್ನಾಟಕದ ವಿವಿಧ ನಗರಗಳಲ್ಲಿ ಕೈಗೊಂಡಿರುವ ಸ್ಮಾರ್ಟ್ ಸಿಟಿ ಕಾಮಗಾರಿಗಳು ತೆವಳುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. "ಈ ತೆವಳುತ್ತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು, ಒಂದು ವೇಳೆ ನೀವು ಅದನ್ನು ಪೂರ್ಣಗೊಳಿಸದಿದ್ದರೆ ಅದನ್ನು ಕೈಬಿಡುತ್ತೇವೆ" ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ಕೊಟ್ಟಿದೆ. ಏಕೆ ಎಚ್ಚರಿಕೆ ಕೊಟ್ಟಿದೆ? ದಯವಿಟ್ಟು ಮಾಹಿತಿ ಕೊಡಬೇಕು.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಮಾರ್ಟ್ ಸಿಟಿ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ನಾನು ವಿವರವಾದ ಉತ್ತರವನ್ನು ಒದಗಿಸಿದ್ದೇನೆ. ಕೇಂದ್ರ ಸರ್ಕಾರ ರೂ.500 ಕೋಟಿಗಳು ಮತ್ತು ರಾಜ್ಯ ಸರ್ಕಾರ ರೂ.500 ಕೋಟಿಗಳ ಅನುದಾನ ಕೊಡುತ್ತಿದೆ. ಒಟ್ಟು ರೂ.1000 ಕೋಟಿಗಳ ಪ್ರಾಜೆಕ್ಟ್. ಅದರಲ್ಲಿ ಕೇಂದ್ರ ಸರ್ಕಾರ ರೂ.392 ಕೋಟಿಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ರೂ.414 ಕೋಟಿಗಳನ್ನು ಬಿಡುಗಡೆ ಮಾಡಿದೆ. ವಿಶೇಷವಾಗಿ Green Mobility Corridor ಯೋಜನೆಯನ್ನು ಸನ್ಮಾನ್ಯ ಪ್ರಹಲ್ಲಾದ್ ಜೋಶಿಯವರು ರೂ.80 ಕೋಟಿಗಳನ್ನು ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ತಂದಿದ್ದಾರೆ. ಒಟ್ಟು ರೂ.1080 ಕೋಟಿಗಳ

ಪ್ರಾಜೆಕ್ಟ್. ಈಗಾಗಲೇ ರೂ.846 ಕೋಟಿ ಬಿಡುಗಡೆ ಮಾಡಲಾಗಿದೆ. ಉಳಿದ ಹಣ ಕೂಡ ಬಿಡುಗಡೆಯಾಗುತ್ತದೆ. ಈ ಯೋಜನೆ ವಿಳಂಬವಾಗುವುದಕ್ಕೆ ಕಾರಣ ಏನೆಂದರೆ, ರಸ್ತೆಗಳನ್ನು modern ರಸ್ತೆಗಳನ್ನಾಗಿ ಮಾಡಲು ಹೋದಂಥ ಸಂದರ್ಭದಲ್ಲಿ ಆ ರಸ್ತೆಯಲ್ಲಿ ಇದ್ದಂತಹ pipeline, gas pipeline, electric lines, ನೀರಿನ ಕೊಳವೆ ಬಾವಿಗಳು ಮತ್ತು ಇನ್ನಿತರೆ ತೊಡಕು ಇತ್ತು. ಇವೆಲ್ಲವನ್ನೂ ಕೂಡ ತೆಗೆದು ಮಾಡಲು ಸ್ವಲ್ಪ ವಿಳಂಬವಾಗಿರತಕ್ಕಂಥದ್ದು ನಿಜ. 2023 ಜೂನ್ ಅಂತ್ಯದವರೆಗೆ ಈ ಕಾಮಗಾರಿಯನ್ನು ಪೂರ್ಣಗೊಳಸಬೇಕೆಂದು ಈಗಾಗಲೇ ನಿರ್ಧಾರ ಮಾಡಲಾಗಿದೆ. ಆ ಸಮಯದೊಳಗೆ ಪೂರ್ಣಗೊಳಸುತ್ತೇವೆ. ಮತ್ತೆ ಇನ್ನೂ 13 ಕಾಮಗಾರಿಗಳು ಏಕೆ ಪ್ರಗತಿಯಲ್ಲಿವೆ ಎಂದರೆ, ದೊಡ್ಡ ದೊಡ್ಡ Sports Complex ಗೆ ರೂ.176 ಕೋಟಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆಸ್ಪತ್ರೆಗಳಿಗೆ ಖರ್ಚು ಮಾಡುತ್ತಿದ್ದೇವೆ. ಬಸ್ ನಿಲ್ದಾಣಗಳನ್ನು ಮಾಡುತ್ತಿದ್ದೇವೆ. ಈ infrastructures ಗೆ ಉಳಿದಂತಹ ಹಣವನ್ನು ಮೀಸಲಿಟ್ಟುಕೊಂಡಿದ್ದೇವೆ. ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿದೆ. ಇವೆಲ್ಲವೂ ನಿಗದಿತ ಸಮಯಕ್ಕೆ ಮುಗಿಯಬೇಕು. <u>ಆದಷ್ಟು ಬೇಗನೆ ಮುಗಿಸಿ ಸಾರ್ವಜನಿಕರಿಗೆ ಮುಕ್ತ ಅವಕಾಶ ಮಾಡಿಕೊಡುವಂಥ ಕೆಲಸವನ್ನು ಖಂಡಿತವಾಗಿಯು ಮಾಡುತ್ತೇವೆ.</u>

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ತಮ್ಮ ಪ್ರಶ್ನೆ ಕೇಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನ ಪ್ರಶ್ನೆ ಇನ್ನೂ ಮುಗಿದಿಲ್ಲ. ಈಗ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದೆಯೋ, ಇಲ್ಲವೋ?

**ಸಭಾಪತಿಯವರು:-** ಮಾನ್ಯ ಸಲೀಂ ಅಹ್ಮದ್ ರವರೇ, ತಾವು ನೇರವಾಗಿ ಪ್ರಶ್ನೆ ಕೇಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಸಮಯಕ್ಕೆ ಸರಿಯಾಗಿ ಕಾಮಗಾರಿ ಮುಗಿಸದಿದ್ದರೆ ಇನ್ನು ಮುಂದೆ ಹಣವನ್ನು ಬಿಡುಗಡೆ ಮಾಡುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾವು ಕೂಡ ಕೇಂದ್ರ ಸರ್ಕಾರದ ಜೊತೆ ನಿಕಟ ಸಂಪರ್ಕದಲ್ಲಿದ್ದೇವೆ. ಕೋವಿಡ್-19 ಬಂದಿದ್ದರಿಂದ ನಾವು ಸುಮಾರು ಒಂದು ವರ್ಷಗಳ ಕಾಲ

ಕಾಮಗಾರಿ ಮಾಡುವುದಕ್ಕೆ ಆಗಿಲ್ಲ. ಆ ಅವಧಿಯನ್ನು ನಮಗೆ ಹೆಚ್ಚಿಗೆ ಕೊಡಬೇಕೆಂದು ಮನವಿಯನ್ನು ಮಾಡಿ ಪತ್ರವನ್ನೂ ಕೂಡ ಬರೆದಿದ್ದೇವೆ. **ನಾವು ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ.**

**ಪ್ರಶ್ನೆ ಸಂಖ್ಯೆ.239**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಹುಶಃ ಅಪೂರ್ಣವಾದಂಥ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ. ಕಾರಣ ಇಷ್ಟೆ. ರಾಜ್ಯದಲ್ಲಿರುವ ಮಹಿಳೆಯರ ಮಾಲೀಕತ್ವ/ಒಡೆತನದಲ್ಲಿ ನಡೆಯುತ್ತಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳೆಷ್ಟು ಎಂಬ ಬಗ್ಗೆ ಜಿಲ್ಲಾವಾರು ಮತ್ತು ಉದ್ಯಮವಾರು ಮಾಹಿತಿಯನ್ನು ಕೇಳಿದ್ದೆನು. ಈ ಮಾಹಿತಿಯನ್ನು ಸರ್ಕಾರ ಇದುವರೆಗೂ ಕಲೆಹಾಕಿಲ್ಲ. ಕೇವಲ ಕೇಂದ್ರ ಸರ್ಕಾರದ ಪೋರ್ಟಲ್‌ನಿಂದ ಮಾಹಿತಿಯನ್ನು ಪಡೆದುಕೊಂಡು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಬಜೆಟ್ ಮಂಡನೆ ಮಾಡುವುದಕ್ಕಿಂತ ಮುಂಚಿತವಾಗಿ ಆರ್ಥಿಕ ಸಮೀಕ್ಷೆ ಮಾಡಲಾಗುತ್ತದೆ. ಮತ್ತೆ 'ಕೈಗಾರಿಕಾ ಮಿತ್ರ'ದಲ್ಲೂ ಕೂಡ ಸಾಕಷ್ಟು ದತ್ತಾಂಶ ಬರುತ್ತದೆ. ಸರ್ಕಾರ ಅದನ್ನು ಸೇರಿಸಿಕೊಂಡು ಏಕೆ ಮಾಡಲಿಲ್ಲ. ಈಗ ತಾವು Centre for Smart Governance ಸಂಸ್ಥೆಗೆ ರೂ.3.94 ಕೋಟಿ ಕೊಟ್ಟು, ಅಲ್ಲಿಂದ ನಾವು ದತ್ತಾಂಶ ತಯಾರು ಮಾಡುತ್ತೇವೆಂದು ಹೇಳುತ್ತಿದ್ದಾರೆ.

**(ಮುಂದು)**

**(1060)20.12.2022/1.40/ಎಂ.ಎಂ-ಎ.ಕೆ**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು):-**

ಅದಕ್ಕೆ ಎಷ್ಟು ಸಮಯ ಹಿಡಿಯುತ್ತದೆ? ಎಷ್ಟು ಸಮಯದಲ್ಲಿ ಇದನ್ನು ಮಾಡುತ್ತೀರಿ ಎಂದು ಕೇಳಬಯಸುತ್ತೇನೆ. ಎರಡನೆಯದಾಗಿ ತಮಗೆ ಗೊತ್ತಿರಬಹುದು. ಕೇಂದ್ರ ಸರ್ಕಾರದ ಆತ್ಮನಿರ್ಭರ ಕಾರ್ಯಕ್ರಮದಲ್ಲಿ MSMEs (Micro, Small and Medium Enterprises) ಗೆ ಸಾಕಷ್ಟು ಅನುದಾನ ಬಂದಿದೆ. ಇದರಲ್ಲಿ ಮಹಿಳಾ ಉದ್ಯಮಿಗಳಿಗೆ ರಾಜ್ಯವು ಪಡೆದಿರುವುದು ಕೇವಲ 426 ಕೋಟಿ ರೂಪಾಯಿಗಳು ಮಾತ್ರ. ತಮ್ಮಲ್ಲಿ ದತ್ತಾಂಶ ಇಲ್ಲದಿದ್ದಾಗ ಯಾವ ರೀತಿ ಇಷ್ಟನ್ನು ಕೊಟ್ಟಿದ್ದೇವೆಂದು ಹೇಳುವುದಕ್ಕೆ ಆಗುತ್ತದೆ? ಆತ್ಮನಿರ್ಭರ ಕಾರ್ಯಕ್ರಮದಲ್ಲಿ ಲಕ್ಷಾಂತರ ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದಾರೆ. ತಾವು ಯಾವಾಗ ಈ ಮಹಿಳಾ ಉದ್ಯಮಿಗಳಿಗೆ ಕೊಡುತ್ತಿದ್ದೀರಿ? ತಮಗೆ ಗೊತ್ತಿದ್ದ ಹಾಗೆ ಇದೊಂದು ಮಹತ್ವವಾದಂತಹ ಪ್ರಶ್ನೆಯಾಗಿದೆ. ಬಹುತೇಕ ಮಹಿಳಾ ಉದ್ಯಮಿಗಳು ಗಾರ್ಮೆಂಟ್ ಇಂಡಸ್ಟ್ರಿ ನಡೆಸುತ್ತಾರೆ. ಅಲ್ಲಿ ಸಾಕಷ್ಟು ಮಾಲೀಕತ್ವ ನಗರ, ಪಟ್ಟಣಗಳಲ್ಲಿ ಅಲ್ಲ ಜಿಲ್ಲಾ ಕೇಂದ್ರಗಳಲ್ಲಿ ಇರುತ್ತದೆ. ಗಾರ್ಮೆಂಟ್ ಇಂಡಸ್ಟ್ರಿಯಲ್ಲಿ ಸಿಕ್ಕಾಪಟ್ಟೆ ಸ್ಪರ್ಧೆ ಇದೆ. ಅದು ಬಾಂಗ್ಲಾದೇಶ, ಫಿಲಿಫೈನ್ಸ್ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಸಾಕಷ್ಟು ಇದೆ. ಉದ್ಯೋಗನಿರತವಾಗಿರುವ ಸಿದ್ಧ ಉಡುಪು ತಯಾರಿಕೆಯ ಘಟಕಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಪ್ರೋತ್ಸಾಹ ಕೊಡಬೇಕಾದರೆ ಅಲ್ಲಿ ಉಚಿತವಾಗಿ ಬಸ್ಸುಗಳ ವ್ಯವಸ್ಥೆಯನ್ನು ಸರ್ಕಾರ ಮಾಡಬಹುದೇ? ಇದರಿಂದ ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗುತ್ತದೆ. ಅಲ್ಲಿ ಕ್ಯಾಂಟೀನ್ ಅನ್ನು ನಡೆಸುತ್ತಾರೆ ಅಲ್ಲಿಗೇನಾದರೂ ಸಹಾಯಧನ ಕೊಡುತ್ತೀರಾ? ಅದೇ ರೀತಿ ಕಾರ್ಮಿಕ ಕಾಯಿದೆಯಲ್ಲಿ ಸಾಕಷ್ಟು ಇ.ಎಸ್.ಐ., ಇ.ಪಿ.ಎಫ್. ಇರಬಹುದು, ಅದರಲ್ಲಿ ಸಾಕಷ್ಟು ಸಹಾಯಧನ ಕೊಡುವುದಕ್ಕೆ ಸರ್ಕಾರ ಸಪೋರ್ಟ್ ಮಾಡುತ್ತದೆಯೇ ಎಂಬ ಬಗ್ಗೆ ಮಾಹಿತಿ ಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೋರಿರುವ ಪ್ರಶ್ನೆಗೆ ನಾವು ಬಹಳ ವಿವರವಾದ ಉತ್ತರವನ್ನು ಕೊಟ್ಟಿದ್ದೇವೆ. ಈ ರಾಜ್ಯದಲ್ಲಿ 7,21,722 ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಇವೆ. ಅದರಲ್ಲಿ ಮಹಿಳಾ ಮಾಲೀಕತ್ವದ ಕೈಗಾರಿಕೆಗಳು ಪ್ರತ್ಯೇಕವಾಗಿ ಒಟ್ಟಾರೆ ಸೇರಿ ಇರುವ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಅವರು ಜಿಲ್ಲಾವಾರು ಇರುವಂತಹ ಕೈಗಾರಿಕೆಗಳ ಬಗ್ಗೆ ಕೇಳರುವುದಕ್ಕೆ ಸಿ.ಡಿ. ಮಾಡಿ ಉತ್ತರವನ್ನು ಕೊಟ್ಟಿದ್ದೇವೆ. ಕೋವಿಡ್ ಸಂದರ್ಭದಲ್ಲಿ ಮುಚ್ಚಿಹೋದ ಕಾರ್ಖಾನೆಗಳೆಷ್ಟು ಎಂದು ಕೇಳಿದ್ದಾರೆ. ಕೋವಿಡ್ ಬಂದ ಒಂದೂವರೆ ವರ್ಷಗಳಲ್ಲಿ ಬಹಳಷ್ಟು ಕಾರ್ಮಿಕರು ಸಾವು-ನೋವುಗಳನ್ನು ನೋಡಿ ಭಯಭೀತರಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಕೆಲಸ ಮಾಡುವಂತಹ ಕಾರ್ಮಿಕರು ಕಾರ್ಖಾನೆಗಳನ್ನು ಬಿಟ್ಟು ಅವರ ಊರುಗಳಿಗೆ ಹೋಗಿದ್ದಾರೆ. ಹಾಗೆಯೇ ರಾಜ್ಯಗಳಲ್ಲಿ ಕೆಲವರು ಕೆಲಸಕ್ಕೆ ಬರದೇ ಅವರವರ ಜಿಲ್ಲೆಗಳಿಗೆ ಹೋಗಿದ್ದಾರೆ. ಆ ಸಂದರ್ಭದಲ್ಲಿ ಬಹಳಷ್ಟು ಕೈಗಾರಿಕೆಗಳು ಮುಚ್ಚಿವೆ. ಅದು ಆರ್ಥಿಕ ಪರಿಸ್ಥಿತಿಯಿಂದ ಇರಬಹುದು ಅಥವಾ ಕಾರ್ಮಿಕರಿಲ್ಲದೇ ಇರಬಹುದು ಬೇರೆ ಬೇರೆ ಕಾರಣಗಳಿಂದ ಬಹಳಷ್ಟು

ಕಾರ್ಖಾನೆಗಳು ಮುಚ್ಚಿವೆ. ನಮಗೆ ನಿಖರವಾಗಿ ತಿಳಿಸಲು ಈಗಾಗಲೇ ಒಂದು ಕಂಪನಿಗೆ ವಹಿಸಿದ್ದೇವೆ. ಈಗ ಸರ್ವೆ ಕಾರ್ಯ ಪ್ರಾರಂಭವಾಗಿದೆ. ಆದಷ್ಟು ಬೇಗನೆ ಅದರಲ್ಲಿ ಎಷ್ಟು sick industries ಆಗಿವೆ, ಯಾವ ಯಾವ ಕಾರಣಗಳಿಗಾಗಿ ಕೈಗಾರಿಕೆಗಳನ್ನು ಇಡೀ ರಾಜ್ಯದಲ್ಲಿ ಮುಚ್ಚಿದ್ದಾರೆ ಅವುಗಳ ಬಗ್ಗೆ ನಿಖರವಾದ ಮಾಹಿತಿ ಪಡೆಯುವುದಕ್ಕೆ ಈಗಾಗಲೇ ಸರ್ಕಾರ ಆದೇಶ ಹೊರಡಿಸಿ ಒಂದು ಕಂಪನಿಗೆ ವಹಿಸಲಾಗಿದ್ದು ಆ ಸಂಸ್ಥೆ ಈಗಾಲೇ ಸರ್ವೆ ಕಾರ್ಯವನ್ನು ಪ್ರಾರಂಭ ಮಾಡಿದೆ. 2017-18 ರಿಂದ 2021-22 ಸಾಲಿನವರೆಗೆ 1117 ಮಹಿಳೆಯರ ಮಾಲೀಕತ್ವದಲ್ಲಿ ನಡೆಯುತ್ತಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಕೈಗಾರಿಕಾ ನೀತಿ ಮತ್ತು ಕೃಷಿ ನೀತಿಯನ್ವಯ ಮಂಜೂರಾಗಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ವಯ ಕೈಗಾರಿಕೆಗಳು ಸ್ಥಾಪನೆಗೊಂಡಿರುತ್ತವೆ. ಜಿಲ್ಲಾವಾರು ಘೋಷ್ವಾರೆಯನ್ನು ಅನುಬಂಧ-1ರಲ್ಲಿ ವಿವರವಾಗಿ ನೀಡಲಾಗಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಚಿವರೇ, ನಾನು ಅದನ್ನು ಕೇಳುತ್ತಿಲ್ಲ. ನಾನು ಮಹಿಳಾ ಉದ್ಯಮಿಗಳಿಗೆ ಸಂಬಂಧಪಟ್ಟಂತೆ ಸರ್ಕಾರದಲ್ಲಿ ಮಾಹಿತಿ ಇಲ್ಲ. ಅದನ್ನು ಕಲೆ ಹಾಕುವುದಕ್ಕೆ ಹೊರಟಿದ್ದೀರಿ. ಅದನ್ನು ಆದಷ್ಟು ಬೇಗ ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ):-** ಅದನ್ನು ಆಮೇಲೆ ಮಾಡುತ್ತೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ನನ್ನ ಪ್ರಶ್ನೆ ಇಷ್ಟೇ. ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದಲ್ಲಿ ಸಾಕಷ್ಟು ಅನುದಾನ ಸಿಗುತ್ತಿದೆ. ಅವರು ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಗ್ಯಾರಂಟಿ ಕೊಡಿ. Mortgage ಮಾಡಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಮುಂದೆ ಬರಲಿ. ಇದು ನನ್ನ ಪ್ರಶ್ನೆ. ನೀವು ಅದನ್ನು ಮಾಡುತ್ತಿಲ್ಲ. ಇವತ್ತು ಸಾಕಷ್ಟು ಮಹಿಳಾ ಉದ್ಯಮಿಗಳು ಗಾರ್ಮೆಂಟ್ಸ್ ಇಂಡಸ್ಟ್ರಿಯಲ್ಲಿದ್ದಾರೆ. ಅವು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಕಾಂಪಿಟೇಷನ್ ಇದೆ. ಅದು viable units ಅಲ್ಲ. ಅದನ್ನು ಮಾಡುವುದಕ್ಕೆ ಸರ್ಕಾರ ಮುಂದೆ ಬರಬೇಕು. ಉಚಿತವಾಗಿ ಸಾಲ ಕೊಡಬೇಕು, ಅಲ್ಲಿ ಬಸ್ ವ್ಯವಸ್ಥೆ ಆಗಬೇಕು, ಉಚಿತ ಕ್ಯಾಂಟೀನ್ ಕೊಡಬೇಕು. ಆಗ ಕಾರ್ಖಾನೆಗಳು ನಡೆಯುತ್ತವೆ, ಜನರು ಉದ್ಯೋಗಕ್ಕೆ ಬರುತ್ತಾರೆ. ನಾವು ಮಹಿಳಾ ಉದ್ಯಮಿಗಳಿಗೆ ಸಪೋರ್ಟ್ ಮಾಡಿ ಎಂದು ಹೇಳುತ್ತಿಲ್ಲ. ಅದು ರನ್ ಆದರೆ ಉದ್ಯೋಗ ಸಿಗುತ್ತದೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಗಾರ್ಮೆಂಟ್ ಇಂಡಸ್ಟ್ರೀಸ್ ಕಳೆದ ಐದು ವರ್ಷಗಳಲ್ಲಿ ಬಹಳಷ್ಟು ಸಂಕಷ್ಟದಲ್ಲಿವೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದಕ್ಕೆ ಬರಬೇಕಾದಂತಹ ಲಾಭದಾಯಕ ಪರ್ಸೆಂಟೇಜ್ ಬಹಳ ಕಡಿಮೆಯಾಗಿದೆ. ಬಹಳಷ್ಟು ಇಂಡಸ್ಟ್ರಿಗಳನ್ನು ಮುಚ್ಚಲಾಗಿದೆ. ಬಹಳ ದೊಡ್ಡ ಕೈಗಾರಿಕೋದ್ಯಮಿಯೊಬ್ಬರು ಇಲ್ಲಿ ನಮ್ಮ ಮುಂದೆಯೇ ಕುಳಿತಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ಇಂಡಸ್ಟ್ರಿಗಳಲ್ಲಿ ಲಕ್ಷಾನುಗಟ್ಟಲೆ ಮಹಿಳೆಯರು ಕಾರ್ಮಿಕರಾಗಿ ಅಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಅದರಲ್ಲಿ ಸುಮಾರು 75 ಭಾಗದಷ್ಟು ಉದ್ಯೋಗ ಇವರಿಗೆ ಕಡಿತವಾಗಿದೆ. ಸುಮಾರು ಶೇಕಡ 25ರಷ್ಟು ಮಾತ್ರ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗದಿಂದ ಸಂಕಷ್ಟಕ್ಕೊಳಗಾದ ಸಂದರ್ಭದಲ್ಲಿ ನಮ್ಮ ಸರ್ಕಾರ . . .

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, women entrepreneurs ಗೆ ಏನಾದರೂ ಕೊಡುವುದಕ್ಕೆ ಸರ್ಕಾರ ಏನಾದರೂ ಪಾಲಿಸಿ ಮಾಡುತ್ತದೆಯೇ ಎಂಬುದನ್ನು ತಿಳಿಸಬೇಕು. ಅದು ಸಾಕಷ್ಟು ರೀತಿಯಲ್ಲಿ ಆಗುತ್ತಿಲ್ಲ. ಕಾರ್ಖಾನೆಗಳು ಮುಚ್ಚಿ ಹೋದರೆ ಅದರಲ್ಲಿರುವ ಹುದ್ದೆಗಳು ಹೋಗುತ್ತವೆ. ಇವತ್ತು ಹಳ್ಳಿಗಾಡು ಇರಬಹುದು, ತಾಲ್ಲೂಕು, ಜಿಲ್ಲೆ ಅಥವಾ ನಗರ ಪಟ್ಟಣ ಪ್ರದೇಶಗಳಿರಬಹುದು ಸಿದ್ಧ ಉಡುಪು ತಯಾರು ಮಾಡುವಂತಹ ಘಟಕಗಳಲ್ಲಿಯೇ ಸಾಕಷ್ಟು employment generation ಆಗುತ್ತದೆ, ಉದ್ಯೋಗ ಸಿಗುವುದಾಗಿದೆ. ಅವರಿಗೆ ಸಪೋರ್ಟ್ ಕೊಡಬೇಕು. ಇದರ ಬಗ್ಗೆ ಒಂದು ಪ್ಯಾಕೇಜ್ ಅಥವಾ ಪಾಲಿಸಿ ತರುತ್ತೇವೆಂದು ತಾವು ಏನಾದರೂ ಭರವಸೆ ಕೊಡಿ. ಮಹಿಳಾ ಉದ್ಯಮಿಗಳಿಗೆ ಉತ್ತೇಜನ ಕೊಡುವುದಕ್ಕೆ ಇದನ್ನು ತರುತ್ತೀರಾ ಎಂದು ಕೇಳುತ್ತಿದ್ದೇನೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಮ್ಮ ಇಲಾಖೆ ಮತ್ತು ಮುಖ್ಯಮಂತ್ರಿಗಳ ಜೊತೆ ಅವರಿಗೆ ಏನಾದರೂ ಕೊಡುವುದಕ್ಕೆ ಅವಕಾಶ ಇದೆಯೇ ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ತಾವು at least ಪರಿಶೀಲನೆ ಮಾಡುತ್ತೇವೆ ಎಂದಾದರೂ ಹೇಳಿ ಇದು ಭರವಸೆಯಾದರೂ ಆಗುತ್ತದೆ.

**ಸಭಾಪತಿಯವರು:-** ಈಗ ಮಾನ್ಯ ಸದಸ್ಯರಾದ ಗೋಪಿನಾಥ್‌ರವರ ಪ್ರಶ್ನೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿ . . .

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಅದನ್ನು pass over ಮಾಡಬೇಡಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಲಿ.

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೇ, ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಮಾಡುತ್ತೇನೆಂದು ಹೇಳಿದ್ದಾರಲ್ಲವೇ?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಚರ್ಚೆ ಮಾಡಿದರೆ ಆಗುವುದಿಲ್ಲ (ಗೊಂದಲ)

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):-** ಆ ಭರವಸೆಗಳನ್ನು ಈಡೇರಿಸುವಂತಹ ಕೆಲಸ ಆಗಬೇಕು. ಅದನ್ನು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಪರಿಶೀಲನೆ ಮಾಡುವಂತಹ ಕೆಲಸ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 250**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಹೆಚ್.ಎಸ್. ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೇವಲ ಎರಡು ಬ್ಯಾಂಕುಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಕುರುಹಿನಸೆಟ್ಟಿ ಸೌಹಾರ್ದ ಬ್ಯಾಂಕ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಅದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಉಳಿದಂತೆ ಅವರು ಯಾವುದನ್ನು ಕೇಳುತ್ತಿದ್ದಾರೆ ಅದರ ಮಾಹಿತಿ ತೆಗೆದುಕೊಂಡು ಅವರಿಗೆ ಕೊಡುವ ಕೆಲಸ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 232**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವ ಪ್ರಶ್ನೆ ಬೆಳಗಾವಿ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ನಿಟ್ಟಿನಲ್ಲಿ ಟೆಕ್ಸ್‌ಟೈಲ್ ಪಾರ್ಕ್‌ನ್ನು ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಸಮಗ್ರವಾಗಿ, ದೊಡ್ಡ industrial zone ಆಗಿ ಮಾಡುವುದಕ್ಕೆ ಸರ್ಕಾರಕ್ಕೆ ಏತಕ್ಕೆ ಆಗುತ್ತಿಲ್ಲ? ಇದು ಮೊದಲನೆಯದು. ಎರಡನೆಯದಾಗಿ ಕರ್ನಾಟಕ ಸರ್ಕಾರ ಸಮರ್ಪಕ ಸವಲತ್ತು ಕೊಡದೇ ಇಲ್ಲಿಯ ಕೈಗಾರಿಕೋದ್ಯಮಿಗಳೇನಿದ್ದಾರೆ ಅವರು ಗಡಿ ದಾಟಿ ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಿದ್ದಾರೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ? ಮೂರನೆಯದಾಗಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡವನ್ನು ಹೇರಿ ಬೆಳಗಾವಿಗೆ ಪ್ರಧಾನಮಂತ್ರಿಯವರನ್ನು comprehensive textile…

**ಸಭಾಪತಿಯವರು:-** ಮಾನ್ಯ ಶರವಣರವರೇ, ಪ್ರಶ್ನೆ ಕೇಳಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಏತಕ್ಕೆ ಅಷ್ಟೊಂದು ಕೋಪ ಮಾಡಿಕೊಳ್ಳುತ್ತೀರಿ?

**ಡಾ:ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಕೋಪ ಎಲ್ಲಿಂದ ಬಂತು? ಪ್ರಶ್ನೆ ಕೇಳಿ ಎಂದು ಹೇಳುತ್ತಿದ್ದೇನೆ.

**ಶ್ರೀ ಟಿ.ಎ. ಶರವಣ:-** ನಾನು ಈಗ ಪ್ರಶ್ನೆ ಕೇಳುವುದಕ್ಕೆ ನಿಂತಿದ್ದೇನೆ. ಮೂರು ಪ್ರಶ್ನೆಗಳನ್ನು ಕೇಳುತ್ತೇನೆ. ಅವರು ಉತ್ತರ ಕೊಡಲಿ.

**ಡಾ:ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ 02 ಗಂಟೆ 10 ನಿಮಿಷಗಳಾಯಿತು. ನಾನು ತಮಗೆ ರಿಕ್ವೆಸ್ಟ್ ಮಾಡುತ್ತಿದ್ದೇನೆ. ಇದನ್ನು ನೋಡಿದರೆ ಪ್ರಶ್ನೋತ್ತರ ಅವಧಿಯನ್ನು ಊಟ ಆದಮೇಲೆ ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:-** 5-10 ನಿಮಿಷದಲ್ಲಿ ಪ್ರಶ್ನೋತ್ತರಗಳನ್ನು ಮುಗಿಸಿಬಿಡೋಣ.

**ಡಾ:ವೈ.ಎ. ನಾರಾಯಣಸ್ವಾಮಿ:-** ನಾನು ಮನವಿ ಮಾಡುತ್ತಿದ್ದೇನೆ. ದಯವಿಟ್ಟು ಪ್ರಶ್ನೆಗಳಿಗೆ ಉತ್ತರವನ್ನು lay ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಅವರು ನಿಲುವಳಿ ಸೂಚನೆಯನ್ನು ಪ್ರಾರಂಭ ಮಾಡುತ್ತಾರೆ. ಅದಕ್ಕೆ ಉತ್ತರ ಕೊಟ್ಟು ಮುಂದಕ್ಕೆ ಹೋಗುತ್ತಾರೆ.

**(ಮುಂದು)**

**(1061) 20-12-2022 1-50 KH/AK (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, Apparel Park ಅನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕು.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಇನ್ನು 4 ಪ್ರಶ್ನೆಗಳು ಇವೆ. ಇನ್ನು 5 ನಿಮಿಷಗಳಲ್ಲಿ ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ತಾವು ಜವಳಿ ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಏಕೆ ಪ್ರಪೋಸಲ್ ಕಳುಹಿಸಲಿಲ್ಲ? ಇದರಿಂದ ಸಾಕಷ್ಟು ಜನರು ಉದ್ಯೋಗ ಕಳೆದುಕೊಳ್ಳುವವರು ಇದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ಬೆಳಗಾವಿ ಜಿಲ್ಲೆಗೆ ಸೀಮಿತವಾಗಿ ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. 2013 ರಲ್ಲಿ ಬೋರಗಾಂವ ಟೆಕ್ಸ್‌ಟೈಲ್ ಪಾರ್ಕ್ ಎಂದು ಘೋಷಣೆಯಾಗಿದೆ. 2017 ರಲ್ಲಿ ಕುರ್ಣೆ ಟೆಕ್ಸ್‌ಟೈಲ್ ಪಾರ್ಕ್ ಒಂದು Public-Private Partnership ಮಾದರಿಯಲ್ಲಿ ಪ್ರಾರಂಭವಾಗಿರುವಂತಹದ್ದಾಗಿದೆ. ಇವತ್ತು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿಗೆ ಕಾನೂನು ಬಂದ ಮೇಲೆ ನಮ್ಮ ರಾಜ್ಯದಲ್ಲಿ ಟೆಕ್ಸ್‌ಟೈಲ್‌ನಲ್ಲಿ ಉದ್ಯೋಗಾವಕಾಶಗಳು ಸಿಗುವಂತಹದ್ದಾಗಿದೆ. ಇವತ್ತು ಈ ಜವಳಿ ಪಾರ್ಕ್‌ಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಸುಮಾರು 217 ಕೈಗಾರಿಕಾ ನಿವೇಶನಗಳನ್ನು ಮಾಡಿ ಈಗಾಗಲೇ ಸುಮಾರು 57 ಕೋಟಿ 55 ಲಕ್ಷದ 846 ರೂಪಾಯಿಗಳು ಆ ಪಾರ್ಕ್‌ಗೆ ಹೂಡಿಕೆ ಮಾಡಲಾಗಿದೆ. ಇವತ್ತು ಆ ಪಾರ್ಕ್ ತಯಾರಾದರೆ ಸುಮಾರು 4 ರಿಂದ 4½ ಸಾವಿರ ಜನರಿಗೆ ಉದ್ಯೋಗ ಸಿಗುವಂತಹದ್ದಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಜವಳಿ ಪಾರ್ಕ್ ಅನ್ನು ಹೆಚ್ಚಿನ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡುವಂತಹದ್ದನ್ನು ಮಾಡುತ್ತಿದ್ದೇವೆ. ಇವತ್ತು ಹಾವೇರಿ ಜಿಲ್ಲೆ ಇರಬಹುದು, ಧಾರವಾಡ ಜಿಲ್ಲೆ ಇರಬಹುದು, ರಾಯಚೂರು ಜಿಲ್ಲೆ ಇರಬಹುದು, ಚಿಕ್ಕಮಗಳೂರು ಜಿಲ್ಲೆ ಇರಬಹುದು. ಎಲ್ಲೆಲ್ಲಿ ಉದ್ಯೋಗಾವಕಾಶಗಳು ಸಿಗುತ್ತವೋ ಅಲ್ಲಲ್ಲಿ ಮಾಡುತ್ತೇವೆ. ಇವತ್ತು ನಾವು ರಾಯಚೂರು ಜಿಲ್ಲೆಯನ್ನು ಗಡಿಭಾಗ ಎಂದು ಏನು ಕರೆಯುತ್ತೇವೆ. ನಾನು ಅಲ್ಲಿ ಉಸ್ತುವಾರಿ ಸಚಿವನಾಗಿದ್ದೇನೆ. ಕಳೆದ ವರ್ಷ ಇದರ ಬಗ್ಗೆ ಘೋಷಣೆ ಕೂಡ ಆಗಿರಲಿಲ್ಲ. ಉದ್ಯೋಗ ಸೃಷ್ಟಿಯಾಗಬೇಕೆಂಬ ಕಾರಣಕ್ಕೆ ಅಲ್ಲಿ ಜವಳಿ ಪಾರ್ಕ್ ಅನ್ನು P.P.P (Public-Private Partnership) ಮಾದರಿಯಲ್ಲಿ ಪ್ರಾರಂಭ ಮಾಡುವಂತಹ ಕೆಲಸವನ್ನು ಇವತ್ತು ನಮ್ಮ ರಾಜ್ಯದಲ್ಲಿ ಮಾಡುತ್ತಿದ್ದೇವೆ. ಅದೇ ರೀತಿ ಇವತ್ತು ನೇಕಾರರನ್ನು ಉಳಿಸಬೇಕೆಂಬ ನಿಟ್ಟಿನಲ್ಲಿ ಅವರಿಗೆ "ನೇಕಾರ ಸಮ್ಮಾನ್ ಯೋಜನೆ" ಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದೇ ರೀತಿ ಇವತ್ತು ನೇಕಾರರ ಮಕ್ಕಳಿಗೆ "ವಿದ್ಯಾ ನಿಧಿ" ಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಒಂದು ಕಡೆ ಉದ್ಯೋಗಗಳು ಸೃಷ್ಟಿಯಾಗಬೇಕು. ಈ ಭಾಗದಲ್ಲಿರುವಂತಹ ನೇಕಾರರು ಮತ್ತು ಜವಳಿ ಪಾರ್ಕ್ ಅನ್ನು ಒಂದೇ ಸೂರಿನಡಿಯಲ್ಲಿ ತರುವಂತಹ ಕೆಲಸವನ್ನು ನಮ್ಮ ರಾಜ್ಯದಲ್ಲಿ ಮಾಡುತ್ತಿದ್ದೇವೆ. ಇವತ್ತು ಮಾನ್ಯ ಸದಸ್ಯರು ಕೇಳಿರುವಂತಹ 2 ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ, ಒಂದು ಕಡೆ 4 ಸಾವಿರ ಹುದ್ದೆಗಳು ಸಿಗುವಂತಹದ್ದು ಆಗಬೇಕು. ಇನ್ನೊಂದು ಕಡೆ ಆದಷ್ಟು ಬೇಗ ಸುಮಾರು 1500 ಉದ್ಯೋಗವನ್ನು ಕೊಡುವುದರಲ್ಲಿ ಆ ಎರಡು ಪಾರ್ಕ್‌ಗಳನ್ನು ನಿರ್ಮಾಣ ಮಾಡಿ, ಅಲ್ಲಿಗೆ ಹೊಸ ಹೊಸ ಕಂಪನಿಗಳನ್ನು ಆಹ್ವಾನ ಮಾಡಿ, ಆ ಒಂದು ಕಾರ್ಯವನ್ನು ತ್ವರಿತಗತಿಯಲ್ಲಿ ನಮ್ಮ ಸರ್ಕಾರ ಮಾಡುತ್ತದೆ ಎನ್ನುವುದನ್ನು ತಮ್ಮ ಮೂಲಕ ಭರವಸೆಯನ್ನು ಕೊಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೇಂದ್ರ ಸರ್ಕಾರಕ್ಕೆ ಬೆಳಗಾವಿ ಜಿಲ್ಲೆಯನ್ನು Textile Zone ಆಗಿ ಮಾಡಲು ಒಂದು ಪ್ರಪೋಸಲ್ ಕಳುಹಿಸಿಕೊಟ್ಟು, ಅಲ್ಲಿಂದ ಅನುಮೋದನೆ ಪಡೆಯುವುದಕ್ಕೆ ಪ್ರಯತ್ನ ಪಡೆಯಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಇಲ್ಲಿ ದೊಡ್ಡ ಮಟ್ಟದಲ್ಲಿ ಜವಳಿ ಪಾರ್ಕ್‌ಗಳು ಇವೆ. ಅದರಿಂದ, ಉದ್ಯೋಗ ಮತ್ತು ಉದ್ಯಮ ಎರಡು ಕೂಡ ಬೆಳೆಯುತ್ತದೆ. ಆ ಹಾದಿಯಲ್ಲಿ ತಾವು ಯೋಚನೆ ಮಾಡಿ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸಿ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 213**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಜೇಂದ್ರ ರಾಜಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2018 ರಲ್ಲಿ ಯು.ಜಿ.ಡಿ. ಕಾಮಗಾರಿ ಪ್ರಾರಂಭವಾಗಿದ್ದು, ಈಗಾಗಲೇ ಇದು ಪ್ರಾರಂಭವಾಗಿ 4 ವರ್ಷಗಳಾದರೂ ಇದನ್ನು ಇನ್ನು ಪೂರ್ಣಗೊಳಿಸಿಲ್ಲ. ಕಳೆದ ಅಧಿವೇಶನದಲ್ಲಿಯೂ ಕೂಡ ನಾನು ಇದೇ ವಿಚಾರದ ಬಗ್ಗೆ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಇನ್ನು 4-5 ತಿಂಗಳಿನಲ್ಲಿ ಮುಗಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಆದರೆ, ಗುರುಒಡೆಯರಹಳ್ಳಿ ಸರ್ವೆ ನಂ.58 ರಲ್ಲಿ ವೆಟ್ ವೆಲ್-1ರನ್ನು ನಿರ್ಮಾಣ ಮಾಡುವುದಕ್ಕೆ ಪ್ರಾರಂಭ ಮಾಡಲಾಗಿತ್ತು. ಅದನ್ನು ಲೋಕಲ್ ರೈತರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ಮೇಲೆ ಅದನ್ನು ನಿಲ್ಲಿಸಲಾಯಿತು. ಆದರೆ, ಇವತ್ತು ಅಗಸರಹೊಳೆ ಸರ್ವೆ ನಂ.58ರಲ್ಲಿ ಅದೇ ಜಾಗವನ್ನು ವೆಟ್ ವೆಲ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದರೆ, ಅಲ್ಲಿ ಕೆಲಸ ಪ್ರಾರಂಭವಾದರೂ 4-5 ಮೀಟರ್‌ನಷ್ಟು ಕಲ್ಲಿನ ಬಂಡೆ ಸಿಕ್ಕಿದೆ ಎಂದು ಕಳೆದ 3-4 ತಿಂಗಳಿನಿಂದ ಕೆಲಸ ನಿಂತಿರುವಂತಹದ್ದು ಇದೆ. ಟೌನ್‌ನಲ್ಲಿ ಎಲ್ಲಾ ಚರಂಡಿ ಮತ್ತು ರಸ್ತೆಗಳನ್ನು ಅಗೆದು ಪೈಪ್‌ಲೈನ್ ಹಾಕಿ ಮಣ್ಣು ಮುಚ್ಚಿದ್ದಾರೆ. ಈಗ ಮಳೆ ಬರುತ್ತಿದೆ. ಮುಂದೆ ಬೇಸಿಗೆ ಕಾಲ ಪ್ರಾರಂಭವಾಗುತ್ತದೆ. ಮಳೆಯಿಂದ ಟೌನ್‌ನಲ್ಲಿ ಎಲ್ಲಾ ಕೆಸರು ಗದ್ದೆಯಾಗಿರುತ್ತದೆ. ಬಿಸಿಲು ಬಂದರೆ ಟೌನ್‌ನಲ್ಲಿ ಕೇವಲ ಧೂಳಿನಿಂದ ಕೂಡಿರುತ್ತದೆ. ಅದರಿಂದ, ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ತಾವು 8 ತಿಂಗಳು ಕಾಲಾವಕಾಶ ಕೇಳಿದ್ದೀರಿ. ಈ 8 ತಿಂಗಳು ಬಹಳ ನಿಧಾನವಾಗುತ್ತದೆ. ಅಲ್ಲಿ ಬಂಡೆಯನ್ನು ಹೊಡೆದರೆ ಆದಷ್ಟು ಬೇಗ ಈ ಕಾರ್ಯಕ್ರಮ ಪ್ರಾರಂಭವಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿದ್ದರು. ಇಲ್ಲಿ ಭೂಮಿಯ ಲಭ್ಯತೆ ಇರಲಿಲ್ಲ. ಭೂಮಿಯ ಲಭ್ಯತೆ ಇಲ್ಲದೆ ಇರುವುದರಿಂದ, ಕಾಮಗಾರಿ ಎಲ್ಲಿಯೋ ಒಂದು ಕಡೆ ವಿಳಂಬವಾಗಿತ್ತು. ಈಗ ಜಿಲ್ಲಾಧಿಕಾರಿಗಳು

ಭೂಮಿಯನ್ನು ಕೊಟ್ಟಿದ್ದಾರೆ. ಈಗ ಕಾಮಗಾರಿ ಚಾಲನೆಯಾಗಿದೆ. ಮಾನ್ಯ ಸದಸ್ಯರು ಅಲ್ಲಿ ಬಂಡೆ ಇದೆ ಎಂದು ಹೇಳಿದ್ದಾರೆ. ಈಗಾಗಲೇ ಬೆಳಗ್ಗೆ ಎಂ.ಡಿ.ಯವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ ಆದಷ್ಟು ಬೇಗ ಇತ್ಯರ್ಥ ಮಾಡಿ ೮ ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಬೇಕೆಂದು ಸೂಚನೆ ಕೊಟ್ಟಿದ್ದೇನೆ. ಹಾಗಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದನ್ನು ಮಾಡಿಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 258**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಜಿಲ್ಲೆಯಲ್ಲಿ ನಗರೋತ್ಥಾನ ಫೇಸ್ I, II, III ರಲ್ಲಿ ಯು.ಜಿ.ಡಿ ಹಾಗೂ 24 x 7 ಯೋಜನೆ ಅಡಿಯಲ್ಲಿ ಎಷ್ಟು ಕಿಲೋಮೀಟರ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಎಷ್ಟು ಕಿ.ಮೀ. ಪೂರ್ಣಗೊಂಡಿದೆ; ಎಷ್ಟು ಬಾಕಿ ಉಳಿದಿದೆ ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಬಾಕಿ ಏನು ಉಳಿದಿಲ್ಲ ಎಂದು ವಿಸ್ತೃತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, 2011 ಮತ್ತು 2015 ರಲ್ಲಿ ಪ್ರಾರಂಭವಾಗಿರುವಂತಹ ಕಾಮಗಾರಿಗಳು ಇಲ್ಲಿಯವರೆಗೆ ಇನ್ನು ಪ್ರಾರಂಭವಾಗಿಲ್ಲ. ಎಲ್ಲಾ ರಸ್ತೆಗಳು ಹಾಳಾಗಿದ್ದು, ಆದರೆ, ಮಾನ್ಯ ಸಚಿವರು ಯಾವ ರಸ್ತೆಗಳು ಹಾಳಾಗಿಲ್ಲ, ಎಲ್ಲಾ ರಸ್ತೆಗಳು ಒಳ್ಳೆಯ ಗುಣಮಟ್ಟದಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಉದಾಹರಣೆಗೆ ನಾನು ಹಲವು ಭಾವಚಿತ್ರಗಳನ್ನು ತಮಗೆ ಕೊಡುತ್ತೇನೆ. ನಾವು ಎಲ್ಲಾ ರಸ್ತೆಗಳನ್ನು ಪೂರ್ಣಗೊಳಿಸಿದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ, ನನಗೆ ಇದರ ಬಗ್ಗೆ ಅನುಮಾನ ಮೂಡುತ್ತಿದೆ. ನಮ್ಮಲ್ಲಿ 35 ವಾರ್ಡ್‌ಗಳು ಇದ್ದು, ಅದರಲ್ಲಿ 28 ವಾರ್ಡ್‌ಗಳಲ್ಲಿ 24 x 7 ಕುಡಿಯುವ ನೀರು ಯೋಜನೆಯನ್ನು ಮಾಡಿ 27400 ಮನೆಗಳಿಗೆ ಸಂಪರ್ಕ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಇನ್ನು 8 ವಾರ್ಡ್‌ಗಳಲ್ಲಿ ಕುಡಿಯುವ ನೀರು ಯೋಜನೆಯನ್ನು ಏಕೆ ಮಾಡಿಲ್ಲ? 27400 ಮನೆಗಳಿಗೆ ಸಂಪರ್ಕವಾಗಿ ನೀರು ಬರುತ್ತಿಲ್ಲ. ಇದರ ಬಗ್ಗೆ ಹಲವು ದೂರುಗಳು ಬರುತ್ತಿವೆ. ಇದನ್ನು ಯಾವಾಗ ಸರಿಪಡಿಸಲಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸುಮಾರು 12 ಪುಟಗಳ ಮಾಹಿತಿಯನ್ನು ಸಂಪೂರ್ಣವಾಗಿ ಕೊಟ್ಟಿದ್ದೇನೆ. ಸಣ್ಣ ಪುಟ್ಟ ರಸ್ತೆಗಳನ್ನು ಅಗೆದಿದ್ದಾರೆ. ಅದನ್ನು ಸರಿಪಡಿಸಿಕೊಡಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸೂಚನೆ ಕೊಟ್ಟಿದ್ದೇನೆ. ನಾನು ಕೂಡ 3-4 ಬಾರಿ ಬೀದರ್ ನಗರಕ್ಕೆ ಭೇಟಿ

ನೀಡಿದ್ದೇನೆ. ಬೀದರ್ ಜಿಲ್ಲೆಗೆ ಪ್ರವಾಸ ಮಾಡಿದ್ದೇನೆ. ಎಲ್ಲೆಲ್ಲಿ ನ್ಯೂನತೆಗಳು ಇವೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. ನಾನು ಮುಂದಿನ ತಿಂಗಳು ಬೀದರ್ ಜಿಲ್ಲೆಗೆ ಬರುತ್ತೇನೆ. ಮಾನ್ಯ ಸದಸ್ಯರನ್ನು ಕರೆದು ಎಲ್ಲಿ ಈ ರೀತಿ ರಸ್ತೆಗಳನ್ನು ಅಗೆದಿದ್ದಾರೆ. ಅಲ್ಲಲ್ಲಿ ಏನೇನು ಆಗಬೇಕೋ ಅದನ್ನೆಲ್ಲಾ ಮಾಡಿಸಿಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಎರಡು ವಿಷಯಗಳ ಬಗ್ಗೆ ವಿಶೇಷವಾಗಿ ತಮ್ಮಲ್ಲಿ ವಿನಂತಿ ಮಾಡಿದ್ದಾರೆ. ಮೊದಲನೆಯದು ಯುಜಿಡಿ ಮಾಡಬೇಕಾದರೆ ರಸ್ತೆಗಳನ್ನು ಕಿತ್ತು ಹಾಕಿದ್ದು, ಇದು ಸಮರ್ಪಕವಾಗಿ ಆಗಿಲ್ಲ. ಎರಡನೆಯದು, . . .

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಯಾರು ಗುತ್ತಿಗೆದಾರರು ಇದನ್ನು ಮಾಡಿದ್ದಾರೆ, ಅವರೇ ಇದನ್ನು ಸರಿಪಡಿಸಬೇಕೆಂದು ನಮ್ಮ ಕರಾರಿನಲ್ಲಿ ಇದೆ. ಹಾಗಾಗಿ, ಅದನ್ನು ಖಂಡಿತವಾಗಿಯೂ ಅವರೇ ಸರಿಪಡಿಸುತ್ತಾರೆ. ಸಮರ್ಪಕವಾಗಿ ಎಲ್ಲೆಲ್ಲಿ ಆಗಿಲ್ಲ ಎನ್ನುವುದು ಈಗ ಮಾನ್ಯ ಸದಸ್ಯರು ಫೋಟೋಗಳನ್ನು ತೋರಿಸಿ ಹೇಳಿದ್ದಾರೆ. ಇದನ್ನು ತರಿಸಿಕೊಂಡು ತಕ್ಷಣವೇ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ರಸ್ತೆಗಳನ್ನು ಅಗೆದು ಮತ್ತೆ relay ಮಾಡುವುದನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ. ಇದರ ಬಗ್ಗೆ ವರದಿ ಕೂಡ ಕೊಟ್ಟಿದ್ದಾರೆ. ಆದರೆ, ಇದು 10 ದಿವಸದಲ್ಲಿಯೇ ಹಾಳಾಗಿವೆ. ಈಗ ನಡೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ಮಳೆಗಾಲದಲ್ಲಿ ನೀರು ತುಂಬಿ ಮಕ್ಕಳೆಲ್ಲಾ ಬಿದ್ದು ಹೋಗಿರುವಂತಹ ಉದಾಹರಣೆಗಳು ಇವೆ. ಕಳೆದ ಬಾರಿ ಈ ರೀತಿಯ ಯಾವುದೇ ಘಟನೆಗಳು ಆಗಿಲ್ಲ. ಇದರ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಸಣ್ಣ ಪುಟ್ಟ ವಿಷಯಕ್ಕೆಲ್ಲಾ ಯಾರೂ ಹೋಗಿ ದೂರುಗಳು ಕೊಡುತ್ತಾರೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸದಸ್ಯರೇ, ತಾವು ಅಲ್ಲಿದ್ದಾಗ ನಾನು ಕೂಡ ಬಂದಿದ್ದೇನೆ. ನಾನು ಅಲ್ಲಿಗೆ ಬಂದಂತಹ ಸಂದರ್ಭದಲ್ಲಿ . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಸದನ ಮುಗಿದ ಮೇಲೆ ಮತ್ತೊಂದು ಬಾರಿ ಬೀದರ್ ಜಿಲ್ಲೆಗೆ ಭೇಟಿ ಕೊಟ್ಟು ಅವರನ್ನು ಕರೆಸಿ ಮಾತನಾಡಿ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಅನೇಕ ಭಾಗಗಳಲ್ಲಿ ಹೋರಾಟ ಮಾಡಿದ್ದೇನೆ. ನಾನು ಎಲ್ಲಿಯೂ ಮನೆಯಲ್ಲಿ ಕುಳಿತುಕೊಂಡಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಸದನ ಮುಗಿದ ಮೇಲೆ ಆದಷ್ಟು ಬೇಗ ಬೀದರ್ ಜಿಲ್ಲೆಗೆ ಬಂದು ಅವರನ್ನು ಕರೆಯಿಸಿ ಅದನ್ನು attend ಮಾಡಿ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಕರೆದುಕೊಂಡು ಎಲ್ಲೆಲ್ಲಿ ನ್ಯೂನತೆಗಳು ಇವೆ. ಖಂಡಿತವಾಗಿ ಅದನ್ನು ಸರಿಪಡಿಸುವಂತಹದ್ದು ಮತ್ತು ಸಮರ್ಪಕವಾಗಿ ಕೆಲಸವಾಗುವುದಕ್ಕೆ ಸೂಚನೆ ಕೊಡುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಮುನಿರಾಜು ಗೌಡರವರ ಪರವಾಗಿ ಮಾನ್ಯ ಡಿ.ಎಸ್. ಅರುಣ್‌ರವರು ಪ್ರಶ್ನೆಯನ್ನು ಕೇಳಬೇಕು.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಮಾನ್ಯ ಸಚಿವರು ಬೀದರ್ ಜಿಲ್ಲೆಗೆ ಬರುತ್ತಾರೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿರುವಂತಹ ಮಾನ್ಯ ಸಚಿವರಿಗೆಲ್ಲಾ ಅವರನ್ನು ಕರೆದು ಮಾತನಾಡಿ. ಅವರ ಜೊತೆಗೆ ಚರ್ಚೆ ಮಾಡಿ ಎಂದು ಹೇಳಿದ್ದೀರಿ. ಆದರೆ, ಇಲ್ಲಿಯವರೆಗೆ ಯಾವುದೇ ಸಚಿವರು ಕರೆದಿಲ್ಲ.

**ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಮಾನ್ಯ ಸಚಿವರು ಬರುತ್ತಾರೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ನಾನು ಬೆಂಗಳೂರಿನಲ್ಲಿ ಇದ್ದಾಗ ಮಾನ್ಯ ಸಚಿವರು ಬೀದರ್ ಜಿಲ್ಲೆಗೆ ಬರುವುದನ್ನು ಒಂದು ದಿವಸದ ಮುಂಚೆ ನನಗೆ ಮಾಹಿತಿ ಕೊಟ್ಟರೆ ಅದು ಸರಿಹೋಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಮಾನ್ಯ ಸಚಿವರಿಗೆ ಮಾಹಿತಿ ಕೊಟ್ಟು ಬೀದರ್ ಜಿಲ್ಲೆಗೆ ಬನ್ನಿ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ನನಗೆ ಇವರು ಬರುವುದು ಮಾಹಿತಿ ಇರುವುದಿಲ್ಲ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ತಮಗೆ ಮಾಹಿತಿ ಕೊಟ್ಟು ಬರುತ್ತೇನೆ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಚಿವರೇ, ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಸಾಕು.

(ಮುಂದು)

(1062)20-12-2022(02-00) **bsd-rn**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, 27,400 ಮನೆಗಳಿಗೆ ಕೊಟ್ಟಿರುವ ಬಗ್ಗೆ ಅಂಕಿ ಅಂಶಗಳನ್ನು ನೀಡಿದ್ದು, 1,798 chamber ಗಳನ್ನು ಮಾತ್ರ ಮಾಡಿದ್ದು,

ಇದರ difference ಏನು? ಮನೆಗೊಂದು chamber ಕೊಡಬೇಕಲ್ಲವೇ? ಹೋಗಲಿ, ಎರಡು ಮನೆಗಳಿಗೆ ಒಂದು chamber ಕೊಟ್ಟಿದ್ದರೂ ಇಷ್ಟು ಕಡಿಮೆ ಹೇಗೆ?

**ಶ್ರೀ ಬಿ.ಎ. ಬಸವರಾಜು:-** ಮಾನ್ಯ ಸಭಾಪತಿಯವರೇ, ಮನೆಗೊಂದು chamber ಅಲ್ಲ, ಅದಕ್ಕೆ ಏನು ಆಧಾರ ಇರುತ್ತದೆ ಮತ್ತು plan ನಲ್ಲಿ ಮಾಡಿಕೊಂಡಿರುವಂತೆ ಮಾಡುತ್ತೇವೆ. ಮಾನ್ಯ ಸದಸ್ಯರು ಸುಮಾರು 22,000 ಮನೆಗಳಿಗೆ ನೀರು ಬರುತ್ತಿಲ್ಲ ಎಂದು ತಿಳಿಸಿದ್ದು, **ಸದನ ಮುಕ್ತಾಯವಾದ ನಂತರ ಮುಂದಿನ ತಿಂಗಳು ನಾನು ಅಲ್ಲಿಗೆ ಭೇಟಿ ನೀಡುವ ಬಗ್ಗೆ ಹೇಳಿದ್ದೇನೆ. ಆ ಸಂದರ್ಭದಲ್ಲಿ ಅವರು ಕರೆದುಕೊಂಡು ಹೋಗುತ್ತೇನೆ. ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ.**

**ಶ್ರೀ ಅರವಿಂದ ಕುಮಾರ್ ಅರಳಿ:-** ಅವರು ನಾಳೆ ಬರುವ ಎಂದು ಇಂದು ಮಾಹಿತಿ ಕೊಟ್ಟರೆ ಹೇಗಾಗುತ್ತದೆ?

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ in-time ನಲ್ಲಿ ಮಾಹಿತಿ ಕೊಡಿ.

**ಪ್ರಶ್ನೆ ಸಂಖ್ಯೆ: 206**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಮುನಿರಾಜು ಗೌಡ ಪಿ.ಎಂ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಹಾರೋಹಳ್ಳಿಯ ಸರ್ವೆ ನಂ.74ರಲ್ಲಿ 9 ನಿವೇಶನಗಳಿಗೆ ಅಲ್ಲಿನ ಪಂಚಾಯಿತಿಯವರು ಖಾತೆ ಕೊಟ್ಟಿದ್ದಾರೆ. ಅದರ ಮಾಹಿತಿ ಕೇಳಿದಾಗ ಆ ನಿವೇಶನಗಳ ಪೈಕಿ 5 ನಿವೇಶನಗಳ ಮಾಹಿತಿಯನ್ನು ಅಲ್ಲಿನ ಕಾರ್ಯನಿರ್ವಹಣಾಧಿಕಾರಿ ಆಶ್ರಯ ನಿವೇಶನ ಸಭಾ ನಡಾವಳಿ, ಹಕ್ಕುಪತ್ರ, ಅನುಮೋದಿತ ನಕ್ಷೆಗಳ ಮಾಹಿತಿಯು ಲಭ್ಯವಿರುವುದಿಲ್ಲ. ಇದಕ್ಕೆ ಯಾರು ಖಾತೆ ಕೊಟ್ಟಿದ್ದಾರೆ. ಐದು ನಿವೇಶನಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ ಎಂದು ಹೇಳಿ ಉಳಿದ ನಾಲ್ಕು ನಿವೇಶನಗಳ ಬಗ್ಗೆ ಮಾಹಿತಿಯನ್ನು ಕೊಡುವುದಿಲ್ಲ. ಅಲ್ಲಿನ ಸಾರ್ವಜನಿಕರು ಕಾರ್ಯನಿರ್ವಹಣಾಧಿಕಾರಿಗೆ ದೂರು ಕೊಟ್ಟರೆ ಇಲ್ಲಿಯವರೆಗೂ ಉತ್ತರ ಕೊಟ್ಟಿಲ್ಲ. ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ ನಂತರ ಮಾಹಿತಿ ಕೊಡುತ್ತಾರೆ. ಆದರೂ ಪೂರ್ತಿ ಮಾಹಿತಿ ಕೊಟ್ಟಿರುವುದಿಲ್ಲ. ಸ.ನಂ.74ರಲ್ಲಿರುವ ನಿವೇಶನಗಳು ಕೋಟ್ಯಾಂತರ ರೂಪಾಯಿ ಬೆಲೆ ಬಾಳು ನಿವೇಶನಗಳಾಗಿವೆ. ಇದಕ್ಕೆ ಖಾತೆ ನೀಡಿರುವವರು ಯಾರು? ಯಾವ ದಾಖಲಾತಿ ಇದೆ ಮತ್ತು ಇದನ್ನು ಯಾವಾಗ ವಾಪಸ್ಸು ಪಡೆಯುತ್ತಾರೆ. ಇದರಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇದು ಬಹಳ ದೊಡ್ಡ ಹಗರಣವಾದ್ದರಿಂದ, ಇದರ ಬಗ್ಗೆ investigation ಆಗಬೇಕು. ಇದನ್ನು ಲೋಕಾಯುಕ್ತ ಅಥವಾ ಇನ್ಯಾವುದೇ ವಿಚಾರಣೆಗೆ ಒಳಪಡಿಸುತ್ತಾರೋ, ಕೂಡಲೇ ಕ್ರಮ ಜರುಗಬೇಕು.

**ಶ್ರೀ ಎನ್. ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೇ, ಹಾರೋಹಳ್ಳಿ ಒಂದು ಗ್ರಾಮ ಪಂಚಾಯಿತಿಯಾಗಿದ್ದು, ಇದರ ಸ.ನಂ.74 ರಲ್ಲಿ 9 ಫಲಾನುಭವಿಗಳಿಗೆ 9 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೆ ಏರಿದ ನಂತರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಗೆ ಎಲ್ಲಾ ದಾಖಲಾತಿಗಳನ್ನು ರವಾನಿಸಿದ್ದಾರೆ. ಅದಾದ ನಂತರ ಮಾನ್ಯ ಸದಸ್ಯರು 9 ನಿವೇಶನಗಳಿಗೆ ಯಾವುದೇ ಮೂಲ ಮಂಜೂರಾತಿ ಇಲ್ಲದೇ ನಕಲಿಯಾಗಿ ಮಂಜೂರು ಮಾಡಿರುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ. **ಪೌರಾಡಳಿತ ಇಲಾಖೆಯ**

**ನಿರ್ದೇಶನಾಲಯದವರು ದಿನಾಂಕ 12-12-2022ರ ಪತ್ರದಲ್ಲಿ ಸ.ನಂ.74 ರಲ್ಲಿ ನಿವೇಶನಗಳ ನೈಜತೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಶೀಘ್ರವೇ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಯವರು ಪರಿಶೀಲನೆ ನೈಜತೆ ಪರಿಶೀಲನೆ ಮಾಡಿ ಕಾನೂನು ರೀತಿ ಕ್ರಮ ಜರುಗಿಸುತ್ತಾರೆ. ಮೂಲ ಮಂಜೂರಾತಿ ದಾಖಲೆಗಳು ಇಲ್ಲದಿದ್ದರೆ 9 ನಿವೇಶನಗಳನ್ನು ವಜಾ ಮಾಡುತ್ತೇವೆ.**

**ಶ್ರೀ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನದು ಮೊದಲನೆಯ ಪ್ರಶ್ನೆ ಇತ್ತು.

**ಸಭಾಪತಿಯವರು:-** ಅವರ ಪ್ರಶ್ನೆ ಬಂದಾಗ ಅವರು ಇರಲಿಲ್ಲ, ಸಾಕು.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 20ನೇ ಡಿಸೆಂಬರ್, 2022ರ ಸಮೂಹ 2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 114 ಪ್ರಶ್ನೆಗಳ ಪೈಕಿ ೮೦ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗಳಿಗೆ ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು:-** ಆಯಿತು, ನಾನು ನೋಡಿ ಉತ್ತರಗಳನ್ನು ಕೊಡಿಸುತ್ತೇನೆ.

**೩. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ವಿಷಯ: ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘವು ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ಅನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತು.**

- - - - -

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ ಕಳೆದ 10 ವರ್ಷಗಳಿಂದ ಹಲವಾರು ರೀತಿಯಲ್ಲಿ ಅನೇಕ ಹೋರಾಟಗಳನ್ನು ಮಾಡಿದ್ದರೂ ಸರ್ಕಾರ ಅದಕ್ಕೆ ಸ್ಪಂದಿಸದೇ ಇರುವುದರಿಂದ ಇಂದು ನಾನು ಫ್ರೀಡಂ ಪಾರ್ಕ್ ಚಲೋ ಅಭಿಯಾನ ಹಾಗೂ ಪ್ರತಿಭಟನೆಯನ್ನು ಸಹಸ್ರಾರು ನೌಕರರು ಸೇರಿ ನಡೆಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷರು ಹೇಳಿಕೆ ನೀಡಿರುವರು.

ಎನ್‌ಪಿಎಸ್ ಯೋಜನೆ ಜಾರಿಗೆ ತರುವಾಗ ಸರ್ಕಾರಿ ನೌಕರರು ಈ ಯೋಜನೆಯಿಂದ ಕೋಟ್ಯಾಧಿಪತಿಗಳಾಗುತ್ತಾರೆಂಬ ಭ್ರಮೆಯನ್ನು ಮೂಡಿಸಿದ್ದು, ಆದರೆ ಇಂದು ಭಿಕ್ಷಾಧಿಪತಿಗಳಾಗುತ್ತಾರೆಂದು ಇಲ್ಲಿಯವರೆಗೆ ನಡೆಸಿದ ಹಲವಾರು ವಿಚಾರ ಸಂಕಿರಣಗಳಿಂದ ಅರ್ಥವಾಗಿರುವುದು. ಎನ್‌ಪಿಎಸ್ ಯೋಜನೆ ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳ ಹಾಗೂ ಸ್ವಾಯತ್ತ ಸಂಸ್ಥೆಗಳ ಲಕ್ಷಾಂತರ ನಿವೃತ್ತ ನೌಕರರಿಗೆ ಹಾಗೂ ಅವರ ಕುಟುಂಬದವರಿಗೆ ಮಾರಕವಾದ ಯೋಜನೆಯಾಗಿರುವುದು. ಈ ವಿಚಾರದ ಹಿನ್ನೆಲೆಯಲ್ಲಿ ಈಗಾಗಲೇ ರಾಜಸ್ಥಾನ, ಛತ್ತೀಸಗಡ, ಜಾರ್ಖಂಡ್ ಮತ್ತು ಪಂಚಾಬ್ ರಾಜ್ಯಗಳಲ್ಲಿ ಎನ್‌ಪಿಎಸ್ ರದ್ದುಪಡಿಸಿ ಓಪಿಎಸ್ ಜಾರಿ ಮಾಡಿರುವರು.

ಈ ಎಲ್ಲ ರಾಜ್ಯಗಳು ಕ್ರಮ ಕೈಗೊಂಡಂತೆ ಕರ್ನಾಟಕ ಸರ್ಕಾರವೂ ಕೂಡ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ನಮ್ಮ ಸಂಘದ ಬೇಡಿಕೆ ಈಡೇರಿಸದಿದ್ದರೆ ನಾವು ಅನಿರ್ದಿಷ್ಟ ಹೋರಾಟ ನಡೆಸುವುದಾಗಿ ಸರ್ಕಾರವನ್ನು ಸಂಘದ ಅಧ್ಯಕ್ಷರು ಎಚ್ಚರಿಸಿದ್ದಾರೆ.

ಆದ್ದರಿಂದ, ಎನ್‌ಪಿಎಸ್ ಯೋಜನೆ ಸರ್ಕಾರಿ ಮತ್ತು ಅನುದಾನಿತ ನೌಕರರಿಗೆ ಮಾರಕವಾದ ಯೋಜನೆ ಆಗಿರುವುದರಿಂದ ಇದನ್ನು ರದ್ದುಪಡಿಸಿ ಈ ಹಿಂದೆ ಇದ್ದ ಓಪಿಎಸ್ ಯೋಜನೆಯನ್ನು ಜಾರಿ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಶೀಘ್ರ ಕ್ರಮ ಕೈಗೊಳ್ಳಲು ಒತ್ತಾಯಿಸುವೆನು.

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಉತ್ತರ ಕೊಡುವ ಮುನ್ನ ಇದು ಬಹಳ ಗಂಭೀರವಾದ ವಿಚಾರವಾದ್ದರಿಂದ ಚರ್ಚೆಗೆ ಅವಕಾಶ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಬಹಳ ಪ್ರಮುಖವಾದ ವಿಚಾರವಾಗಿರುವುದರಿಂದ ಸುಮಾರು 6 ಲಕ್ಷ ಸರ್ಕಾರಿ ನೌಕರರಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ದಯವಿಟ್ಟು ನಿಯಮ 330ರಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು. Zero Hour ನಲ್ಲಿ ಉತ್ತರ ಕೊಟ್ಟರೆ ಆಗುವುದಿಲ್ಲ ಎಂದು ವಿನಂತಿಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ: ಆರೋಗ್ಯ ಇಲಾಖೆಯ ಶುಚಿ ಯೋಜನೆ ಅಡಿಯಲ್ಲಿ 3 ವರ್ಷದಿಂದ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆ ಸ್ಥಗಿತ ಕುರಿತು.**

\- - - -

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ದಿನಾಂಕ 08-12-2022ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಶುಚಿ ಯೋಜನೆಗೆ ಗ್ರಹಣ-3 ವರ್ಷದಿಂದ ಸ್ಯಾನಿಟರಿ ನ್ಯಾಪ್ ಕಿನ್ ವಿತರಣೆ ಸ್ಥಗಿತ ವಿಚಾರವು ವರದಿಯಾಗಿರುತ್ತದೆ.

ರಾಜ್ಯದ ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಹದಿಹರೆಯದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸುವ ಶುಚಿ ಯೋಜನೆ ಜಾರಿಗೆ ತಂದಂಥ ಸರ್ಕಾರ ಕೆಲವೇ ವರ್ಷಗಳಲ್ಲಿ ಯೋಜನೆಯನ್ನು ತೆರೆಗೆ ಸರಿಸುತ್ತಿರುವ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಕೋವಿಡ್ ತರುವಾಯ ಶುಚಿ ಯೋಜನೆ ಸ್ಥಗಿತಗೊಂಡಿದೆ.

ಹೆಣ್ಣುಮಕ್ಕಳು ಮುಟ್ಟಿನ ಸಮಯದಲ್ಲಿ ನೈರ್ಮಲ್ಯ ಕಾಪಾಡಿಕೊಳಲಿ ಎಂಬ ಉದ್ದೇಶದಿಂದ ಜಾರಿಗೆ ತಂದಂಥ ಈ ಯೋಜನೆಯ ಜವಾಬ್ದಾರಿಯನ್ನು ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತವು ನ್ಯಾಪ್‌ಕಿನ್ ಖರೀದಿಸಿ ವಿತರಿಸುವ ಹೊತ್ತಿತ್ತು. ಅಂದಾಜು ರೂ.47 ಕೋಟಿ ವೆಚ್ಚದ ಯೋಜನೆಯಡಿ ಸುಮಾರು 20 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಇದ್ದಾರೆ. ಇದೀಗ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಯೋಜನೆ ಸ್ಥಗಿತಗೊಂಡಿರುವುದು ತಿಳಿದುಬಂದಿರುತ್ತದೆ. ಕಳೆದ ಮೂರು ವರ್ಷಗಳಿಂದ ಬರೀ ಟೆಂಡರ್ ಕರೆಯುವುದು ಮತ್ತು ರದ್ದು ಮಾಡುವ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಸಮಯ ವ್ಯರ್ಥ ಮಾಡುತ್ತಿದ್ದಾರೆ ಎಂಬ ಆರೋಪವೂ ಕೇಳಿ ಬಂದಿರುತ್ತದೆ.

ಈ ಹಿಂದೆ ಸತತ 5 ವರ್ಷಗಳಿಂದ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಲೈಫ್‌ಕೇರ್ ಲಿಮಿಟೆಡ್ ನ್ಯಾಪ್‌ಕಿನ್ ವಿತರಿಸುತ್ತಿತ್ತು. ಗ್ರಾಮೀಣ ಭಾಗದ ಹದಿಹರೆಯದ ಹೆಣ್ಣುಮಕ್ಕಳು ಸರ್ಕಾರದಿಂದ ಸ್ಯಾನಿಟರಿ ನ್ಯಾಪ್‌ಕಿನ್‌ಗಳು ಸಿಗದೇ, ಅತ್ತ ಹಣ ಕೊಟ್ಟು ಖರೀದಿಸಲೂ ಆಗದೇ, 3 ದಿನಗಳ ಕಾಲ ಶಾಲೆಗೆ ಬರುವುದನ್ನು ನಿಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ, ಶುಚಿತ್ವ

ಕಾಪಾಡಿಕೊಳ್ಳಲಾಗದೇ ಚರ್ಮರೋಗ, ಮೂತ್ರರೋಗ ಮತ್ತಿತರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ.

ಪ್ರಸ್ತುತ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಸರ್ಕಾರ ತಕ್ಷಣವೇ ಹದಿಹರೆಯದ ಸರ್ಕಾರಿ ಶಾಲಾ ಮತ್ತು ಕಾಲೇಜು ಹೆಣ್ಣುಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಬೇಕೆನ್ನುವ ವಿಷಯವನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಮುಂದು)**

**(1063) 20.12.2022/2.10/ಹೆಚ್‌ವಿ:ಆರ್‌ಎನ್**

**ಇ) ವಿಷಯ: ಆನ್‌ಲೈನ್ ಗೇಮಿಂಗ್ ನಿಯಂತ್ರಣ ಕುರಿತು ಶೀಘ್ರ ಕ್ರಮ ಕೈಗೊಳ್ಳುವ ಸಲುವಾಗಿ ಕಾಯಿದೆ ರೂಪಿಸುವ ಬಗ್ಗೆ.**

\- - - -

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:19.12.2022ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಆನ್‌ಲೈನ್ ಗೇಮಿಂಗ್ ನಿಯಂತ್ರಣಕ್ಕೆ ಶೀಘ್ರ ಕ್ರಮ ಕೈಗೊಳ್ಳುವ ಸಲುವಾಗಿ ಕಾಯಿದೆ ರೂಪಿಸಲು ಸಮಾಲೋಚನೆ ನಡೆಸುತ್ತಿರುವುದಾಗಿ ಮಾನ್ಯ ಕೇಂದ್ರ ಸಚಿವರು ಹೇಳಿರುವ ವಿಚಾರ ವರದಿಯಾಗಿರುವುದು ಸ್ವಾಗತಾರ್ಹವಾಗಿರುತ್ತದೆ.

ಪ್ರತಿ ದಿನವೂ ಹೊಸಹೊಸ ಅವಿಷ್ಕಾರಗಳೊಂದಿಗೆ ಮುನ್ನಡೆಯುತ್ತಿರುವ ಇಂದಿನ ಕಾಲಘಟ್ಟದಲ್ಲಿ ತಂತ್ರಜ್ಞಾನ ಬಳಕೆಯ ಬಗ್ಗೆ ನಾವೆಲ್ಲರೂ ಯೋಚಿಸಬೇಕಾದ ಅನಿವಾರ್ಯತೆ ಇದೆ. ಒಂದೆಡೆ ಉಪಗ್ರಹ ಸಂಪರ್ಕದಿಂದ ರೇಡಿಯೋ ತರಂಗಗಳ ಮೂಲಕ ಮೊಬೈಲ್ ಸೆಟ್ಟಿಗೆ ಬರುವ ಮೆಸೇಜ್, ಕಾಲ್

ನೋಟಿಫಿಕೇಶನ್‌ಗಳು ಇ-ವಿಕಿರಣವನ್ನು ಹೊರ ಹಾಕುತ್ತವೆ. ಮನುಷ್ಯನ ದೇಹಕ್ಕೆ ಇ-ವಿಕಿರಣಗಳು ತುಂಬಾ ಅಪಾಯಕಾರಿಯಾಗಿದ್ದು, ಇದರಲ್ಲಿ ಆನ್‌ಲೈನ್ ಬೆಟ್ಟಿಂಗ್ ಗೇಮಿಂಗ್ ಕಂಪನಿಗಳು ಬಿಸಿನೆಸ್ ರೂಪದಲ್ಲಿ ಮನುಷ್ಯರನ್ನು ಹಾಗೂ ಮನುಷ್ಯತ್ವವನ್ನು ನಾಶ ಮಾಡುತ್ತಿವೆ. ಮಾದಕ ವಸ್ತುಗಳ(ಡ್ರಗ್ಸ್) ದಾಸರಾಗುತ್ತಿರುವ ಯುವ ಸಮೂಹ ಆನ್‌ಲೈನ್ ಬೆಟ್ಟಿಂಗ್‌ಗೂ ದಾಸರಾಗುತ್ತಿದ್ದಾರೆ. ಇದೊಂದು ಮಾನಸಿಕ ರೋಗವಾಗಿ ಪರಿವರ್ತನೆಯಾಗುತ್ತಿದೆ.

ಈ ಆನ್‌ಲೈನ್ ಗೇಮ್‌ಗಳನ್ನು ಆಡಲು ಎಷ್ಟೋ ಸಿನಿಮಾ ಮತ್ತು ಕ್ರಿಕೆಟ್ ತಾರೆಯರು ನೇರವಾಗಿ ಮಾಧ್ಯಮ ಜಾಹೀರಾತು ನೀಡುತ್ತಿರುವುದರಿಂದ ಯುವ ಸಮೂಹ ಆಕರ್ಷಣೆಗೆ ಒಳಗಾಗಿದ್ದು, ಆನ್‌ಲೈನ್ ಗೇಮಿಂಗ್ ಅನ್ನು ಬದುಕಿನ ಭಾಗವಾಗಿ ಸ್ವೀಕರಿಸಿ ಮಾನಸಿಕ ಬೆಳವಣಿಗೆಗೆ ಸಾಕಷ್ಟು ಹಾನಿ ಮಾಡಿಕೊಂಡಿರುವುದು ತಿಳಿದು ಬಂದಿದೆ.

ಇಂದಿನ ಡಿಜಿಟಲ್ ಯುಗದಲ್ಲಿ ತ್ವರಿತ ಹಾಗೂ ಸುರಕ್ಷಿತ ಸೇವೆಗೆ ಅನುಕೂಲವಾಗುವಂತೆ ಹಳೆಯ ಕಾಯಿದೆಯಲ್ಲಿರುವಂತಹ ನಿಯಮಾವಳಿಗಳನ್ನು ಬದಲಾಯಿಸಬೇಕಾದ ಅವಶ್ಯಕತೆ ಇದೆ. ನಾನು ಇತ್ತೀಚೆಗೆ "ವಿಶ್ವವಾಣಿ" ಪತ್ರಿಕೆಯ "ಅಭಿಮತ" ವಿಶೇಷಾಂಕಣದಲ್ಲಿ ಜೂಜುಗಳ ಬಗ್ಗೆ; ಆನ್‌ಲೈನ್ ಜೂಜುಗಳ ಬಗ್ಗೆ ಮತ್ತು ಫ್ಯಾಂಟಸಿ ಸ್ಪೋರ್ಟ್ಸ್ ಆಪ್‌ಗಳ ಬಗ್ಗೆ ನನ್ನ ವಿಚಾರಗಳನ್ನು ಹಂಚಿಕೊಂಡಿದ್ದು, ಇಷ್ಟು ಜನಸಂಖ್ಯೆ ಹೊಂದಿರುವ ಭಾರತದಲ್ಲಿ ಕ್ರೀಡೆಗಳಲ್ಲಿ ತೊಡಗಬೇಕಾಗಿರುವ ಯುವ ಸಮೂಹ ಆನ್‌ಲೈನ್ ಗೇಮ್‌ಗಳಲ್ಲಿ ತೊಡಗಿರುವುದು ವಿಷಾದಕರವಾಗಿದ್ದು, ನಾವು ನೈಜ ಕ್ರೀಡಾಕೂಟಗಳಲ್ಲಿ ಗೆಲುವನ್ನು ಹುಡುಕಬೇಕಾಗಿದೆ. ಇದು ಭಾರತದಲ್ಲಿ ಆಚರಣೆಯಲ್ಲಿರುವಂತಹ ಬೆಟ್ಟಿಂಗ್ ಪದ್ಧತಿಯಿಂದಾಗಿ ಕ್ರೀಡೆಗಳ ಮೇಲೆ ನಕಾರಾತ್ಮಕ ಪರಿಣಾಮವುಂಟಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಕೇಂದ್ರ ಸಚಿವರು ಆನ್‌ಲೈನ್ ಗೇಮಿಂಗ್‌ಗೆ ಏಕರೂಪ ಕಾಯಿದೆ ತರಲು ಮುಂದಾಗಿರುವುದರಿಂದ ಸಾರ್ವಜನಿಕರು ಹಾಗೂ ಯುವ ಸಮೂಹದ ಹಿತದೃಷ್ಟಿಯಿಂದ ಇಂತಹ ಕಾಯಿದೆಯ ಅವಶ್ಯಕತೆ ಇರುವುದರಿಂದ ರಾಜ್ಯ ಸರ್ಕಾರ ಈ ಕಾಯಿದೆಯ ಅನುಷ್ಠಾನಕ್ಕೆ ಬೆಂಬಲ ಸೂಚಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಈ) ವಿಷಯ: ಬಂಗಾಳಕೊಲ್ಲಿಯ ಮ್ಯಾಂಡಸ್ ಚಂಡಮಾರುತದಿಂದ ಸುರಿದ ಮಳೆಯಿಂದಾಗಿ ಕೋಲಾರ ನಗರ ಸೇರಿದಂತೆ ಗ್ರಾಮೀಣ ಭಾಗದ ರಸ್ತೆಗಳು ಹಾಳಾಗಿರುವ ಕುರಿತು.**

**- - - -**

**ಶ್ರೀ ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಬಂಗಾಳಕೊಲ್ಲಿಯ ಮ್ಯಾಂಡಸ್ ಚಂಡಮಾರುತದಿಂದ ಸುರಿದ ಮಳೆಯಿಂದಾಗಿ ಕೋಲಾರ ನಗರ ಸೇರಿದಂತೆ ಗ್ರಾಮೀಣ ಭಾಗದ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಕೆಸರು ಗದ್ದೆಗಳಾಗಿ ನಿರ್ಮಾಣಗೊಂಡಿವೆ. ಈ ಮಳೆಗೆ ಮುಂಚಿತವೇ ಕೋಲಾರ ಜಿಲ್ಲೆಯಲ್ಲಿ ರಸ್ತೆಗಳು ಹಾಳಾಗಿದ್ದವು. ಆದರೆ, ಜಿಲ್ಲಾಡಳಿತ ರಸ್ತೆಗಳ ದುರಸ್ತಿಗೆ ಕ್ರಮ ಕೈಗೊಳ್ಳುತ್ತಿಲ್ಲ. ಅಲ್ಲದೇ ಜಿಲ್ಲೆಯಲ್ಲಿ ಪದೇಪದೇ ಸುರಿಯುತ್ತಿರುವ ಮಳೆಗೆ ಮತ್ತಷ್ಟು ರಸ್ತೆಗಳು ಹಾಳಾಗುತ್ತಲೇ ಇವೆ. ಎರಡು ತಿಂಗಳ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರು ಕೋಲಾರ ಜಿಲ್ಲೆಯ ರಸ್ತೆಗಳ ದುರಸ್ತಿಯ ಬಗ್ಗೆ ಎರಡು ದಿನಗಳ ಕಾಲ ಕೋಲಾರದಲ್ಲಿದ್ದು ಸರಿಪಡಿಸುವುದಾಗಿ ಹೇಳಿ ಹೋದವರು ಇದುವರೆಗೂ ರಸ್ತೆಗಳತ್ತ ತಿರುಗಿಯೂ ನೋಡಿಲ್ಲ. ಆದರೆ, ವಿವಿಧ ಸಂಘ ಸಂಸ್ಥೆಗಳು ರಸ್ತೆ ದುರಸ್ತಿಯನ್ನು ಮಾಡಿಸದಿದ್ದಲ್ಲಿ ಕೋಲಾರ ನಗರವನ್ನು ಬಂದ್ ಮಾಡುವುದಾಗಿ ಎಚ್ಚರಿಸಿದ್ದರೂ ಸಹ ಇದುವರೆಗೂ ಜಿಲ್ಲಾಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಗಮನಹರಿಸಿಲ್ಲ. ಜಿಲ್ಲೆಯಾದ್ಯಂತ ಪ್ರಮುಖ ರಸ್ತೆಗಳು ಹಾಗೂ ಗ್ರಾಮೀಣ ಭಾಗದ ಸಂಪರ್ಕ ರಸ್ತೆಗಳು ಸಂಪೂರ್ಣವಾಗಿ ಕೆಸರು ಗದ್ದೆಯಂತಾಗಿವೆ. ಯಾವುದೇ ರಸ್ತೆಗೆ ಹೋದರೂ ಸುಗಮವಾಗಿ ಓಡಾಡಲು ಸಾಧ್ಯವೇ ಇಲ್ಲ. ಕಳೆದೊಂದು ದಶಕದಿಂದ ನಡೆಯುತ್ತಿರುವ ಒಳಚರಂಡಿ ಯೋಜನೆಯ ದೆಸೆಯಿಂದ ನಗರದ ಸಂದಿಗೊಂದಿಗಳೆಲ್ಲ ಕೊರಕಲುಗಳಾಗಿವೆ. ಉಳಿದಂತೆ ಪ್ರಮುಖ ಕಡೆಗಳಲ್ಲೂ ಗುಂಡಿಗಳು ಇಲ್ಲದ ರಸ್ತೆಗೂ ದುರ್ಬಿನು ಹಾಕಿಕೊಂಡು ಹುಡುಕಿದರೂ

ಸಿಗುವುದಿಲ್ಲ ಅದರಲ್ಲೂ ಈಚೆಗೆ ಬಿದ್ದ ಜಡಿ ಮಳೆಯಿಂದ ರಸ್ತೆಗಳಲ್ಲಿದ್ದ ಸಣ್ಣ ಪ್ರಮಾಣದ ಹಳ್ಳಗಳು ಒಂದೆರಡು ಅಡಿ ಆಳದಷ್ಟು ಗುಂಡಿಗಳಾಗಿ ಪರಿವರ್ತನೆ ಆಗಿವೆ.

ಈ ಗುಂಡಿಗಳ ನಡುವೆಯೇ ರಸ್ತೆಯನ್ನು ಹುಡುಕಿಕೊಂಡು ಸುರಕ್ಷಿತವಾಗಿ ಸಾಗಬೇಕಾದ ಕಸರತ್ತು ನಾಗರಿಕರು ಮತ್ತು ವಾಹನ ಸವಾರರು ಮಾಡಬೇಕಾದ ಪರಿಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಗಮನಹರಿಸಿ ರಸ್ತೆ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಉ) ವಿಷಯ: ಬೆಂಗಳೂರು ನಗರಕ್ಕೆ ಪ್ರತಿದಿನ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ಇ-ಶೌಚಾಲಯ ನಿರ್ಮಿಸಿದ್ದು ಅವುಗಳ ಸಮರ್ಪಕ ನಿರ್ವಹಣೆ ಆಗದಿರುವ ಕುರಿತು.**

\- - -

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರಕ್ಕೆ ಪ್ರತಿದಿನ ಬರುವ ಪ್ರಯಾಣಿಕರ ಮತ್ತು ಯಾತ್ರಿಗಳ ಸೌಕರ್ಯಕ್ಕೆ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ನಗರದ ಆಯಕಟ್ಟಿನ ಜಾಗಗಳಲ್ಲಿ ಮತ್ತು ಜನನಿಬಿಡ ಸ್ಥಳಗಳಲ್ಲಿ 241 ಇ-ಶೌಚಾಲಯಗಳನ್ನು ಪ್ರತಿ ಇ-ಶೌಚಾಲಯಗಳ ಅಂದಾಜು ವೆಚ್ಚ ರೂ.50.56 ಲಕ್ಷದಲ್ಲಿ ನಿರ್ಮಿಸಿದೆ. ಇವುಗಳನ್ನು 2014 ಮತ್ತು 2017ರ ಅವಧಿಯಲ್ಲಿ ಸ್ವಚ್ಛ ಭಾರತ ಅಭಿಯಾನ ಅಡಿಯಲ್ಲಿ ನಿರ್ಮಿಸಲಾಗಿದೆ. ಆದರೆ, ಈ ಪೈಕಿ 169 ಇ-ಶೌಚಾಲಯಗಳ ವಾರ್ಷಿಕ ಕಾರ್ಯನಿರ್ವಹಣೆ ಮತ್ತು ನಿರ್ವಹಣೆ ಅವಧಿ ಮುಗಿದಿದ್ದು, ಇವು ಮುಚ್ಚಿಹೋಗಿ 6 ತಿಂಗಳು ಕಳೆದಿದೆ. ಇತ್ತೀಚೆಗೆ ನಿರ್ಮಿಸಿದ 72 ಇ-ಶೌಚಾಲಯಗಳನ್ನು ಮೂರು ವರ್ಷದ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಣೆಗೆ ನೀಡಲಾಗಿದೆ. ಬಹುತೇಕ ಇ-ಶೌಚಾಲಯಗಳಲ್ಲಿ ವಿದ್ಯುತ್ ದೀಪಗಳು ಇಲ್ಲ ಮತ್ತು ನೀರಿನ ಪೂರೈಕೆ

ಇರುವುದಿಲ್ಲ. ಇಂತಹ ಸಾರ್ವಜನಿಕ ಮಹತ್ವದ ವಿಷಯದ ಕಡೆಗೆ ಸರ್ಕಾರ ಕೂಡಲೇ ಗಮನಹರಿಸಬೇಕೆಂದು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಊ) ವಿಷಯ:- 2022-23ನೇ ಸಾಲಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕೌನ್ಸಿಲಿಂಗ್ ಸೀಟು ಹಂಚಿಕೆಯಾದ ನಂತರ ಉಳಿದ ಸೀಟುಗಳನ್ನು ಸರ್ಕಾರಿ ಕಾಲೇಜುಗಳ ಹಂತದಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸುವ ಕುರಿತು.**

\- - - -

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, 2022-23ನೇ ಸಾಲಿನಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ರಾಜ್ಯದಲ್ಲಿ ಒಟ್ಟು 3730 ಇಂಜಿನಿಯರಿಂಗ್ ಸೀಟುಗಳಿದ್ದು, ಕೆ.ಇ.ಎ. ಮುಖಾಂತರ 2142 ಸೀಟುಗಳು (ಶೇಕಡಾ 60-70) ಮಾತ್ರ ಭರ್ತಿ ಆಗಿದ್ದು, 1588 ಸೀಟುಗಳು (ಶೇಕಡಾ 30) ಉಳಿಕೆ ಆಗಿರುತ್ತದೆ. ಉಳಿದ ಸೀಟುಗಳನ್ನು ಕಾಲೇಜು ಹಂತದಲ್ಲಿ ನಿಯಮಾನುಸಾರ ಭರ್ತಿ ಮಾಡಲು ಅವಕಾಶ ನೀಡದೆ ಇರುವುದರಿಂದ ಅರ್ಹ ಸ್ಥಳೀಯ ಅಭ್ಯರ್ಥಿಗಳು ಅವಕಾಶ ವಂಚಿತರಾಗಿದ್ದಾರೆ. ಆದರೆ, ಖಾಸಗಿ ಕಾಲೇಜುಗಳಲ್ಲಿ ಕೆ.ಇ.ಎ. ಕೌನ್ಸಿಲಿಂಗ್ ಸೀಟು ಹಂಚಿಕೆಯಾದ ನಂತರ ಉಳಿದ ಸೀಟುಗಳನ್ನು ಕಾಲೇಜು ಹಂತದಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಸಗಿ ಕಾಲೇಜುಗಳಿಗೆ ನೀಡಿದ ಮಾದರಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿಯೂ ಕಾಲೇಜು ಹಂತದಲ್ಲಿ ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸುವಂತೆ ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗುತ್ತಿದೆ.

**(ಸದನವು ಮಧ್ಯಾಹ್ನ 2 ಗಂಟೆ 16 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**(1064) 20.12.2022 04.10 ಎಸ್‌ವಿ-ಜಿಆರ್**

**(ಸದನವು ಮಧ್ಯಾಹ್ನ 02 ಗಂಟೆ 16 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟು, ಪುನಃ ಸಂಜೆ 04 ಗಂಟೆ 11 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**04. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.**

\- - - -

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನದ ನಿಯಮ 59ರ ಅಡಿಯಲ್ಲಿ ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ನೀಡಿದ್ದೇನೆ. ಅದರ ಮೂಲ ಉದ್ದೇಶವೇನೆಂದರೆ ಇತ್ತೀಚೆಗೆ ಸುವರ್ಣ ವಿಧಾನ ಸೌಧದಲ್ಲಿ ಅಧಿವೇಶನ ನಡೆಯುವ

ಸಂದರ್ಭದಲ್ಲಿ ಪ್ರತಿಬಾರಿಯೂ ಮೇಳಾವ ಎಂದು ಮಾಡಿ ಎರಡು ಭಾಷೆಗಳ ಮಧ್ಯೆ, ಎರಡು ರಾಜ್ಯಗಳ ಮಧ್ಯೆ ಘರ್ಷಣೆ ಮಾಡುವಂತಹ ಪ್ರಯತ್ನ ಬಹಳ ನಿರಂತರವಾಗಿ ನಡೆಯುತ್ತಾ ಬರುತ್ತಿದೆ. ಕರ್ನಾಟಕದ ಏಕೀಕರಣ ಆದ ನಂತರ ನಾವೆಲ್ಲರೂ ನಮ್ಮದೇ ಆದ ಬೇಡಿಕೆಯಿದ್ದರೂ ಸಹ ಕೆಲವು ಸಮಿತಿಗಳು ನೀಡುವಂತಹ ತೀರ್ಮಾನಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೂ ನಡೆಯುತ್ತಿರುವ ಘಟನೆ ಗಡಿ ಭಾಗದಲ್ಲಿ ಕನ್ನಡ ಮಾತನಾಡುವವರಿರಬಹುದು ಅಥವಾ ಮರಾಠಿ ಮಾತನಾಡುವವರಿರಬಹುದು, ಅವರು ಬೇರೆ ಯಾರೂ ಅಲ್ಲ. ಎಲ್ಲರೂ ಭಾರತೀಯರೇ. ಅವರ ನಡುವೆ ಒಂದು ಭಯದ ವಾತಾವರಣ ಸೃಷ್ಟಿಯಾಗಿದೆ. ಈಗ ತ್ರಿಬಲ್ ಇಂಜಿನ್ ಸರ್ಕಾರ ಇದೆ, ಡಬಲ್ ಇಂಜಿನ್ ಸರ್ಕಾರ ಅಲ್ಲ. ಕರ್ನಾಟಕದಲ್ಲಿ ಬಿ.ಜೆ.ಪಿ., ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ., ಹಾಗೂ ಕೇಂದ್ರದಲ್ಲಿಯೂ ಬಿ.ಜೆ.ಪಿ. ಸರ್ಕಾರಗಳಿವೆ. ತ್ರಿಬಲ್ ಇಂಜಿನ್ ಇರುವಾಗ ಈ ಒಂದು ಸಮಸ್ಯೆ ಉದ್ಭವವಾಗುವುದನ್ನು ನೋಡಿದಾಗ ಯಾವುದೋ ರಾಜಕೀಯ ಕಾರಣಗಳು ನಮಗೆ ಬಹಳ ಸ್ಪಷ್ಟವಾಗಿ ಕಾಣುತ್ತಿವೆ. ಇತ್ತೀಚೆಗೆ ಕರ್ನಾಟಕ ರಾಜ್ಯಕ್ಕೆ ಬರುವ ಬಸ್‌ಗಳಿಗೆ ಅಲ್ಲಿ ಮಸಿ ಬಳಿಯುವುದು, ಮಹಾರಾಷ್ಟ್ರದ ಕಡೆ ಹೋಗುವಂತಹ ಬಸ್‌ಗಳಿಗೆ ಇಲ್ಲಿ ಮಸಿ ಬಳಿಯುವುದು ಇಂತಹ ಘಟನೆಗಳನ್ನು ನೋಡಿದಾಗ ನಿರಂತರವಾಗಿ ಗಡಿ ಭಾಗದಲ್ಲಿ ಕಾನೂನು ಸುವ್ಯವಸ್ಥೆ ಕುಸಿದು ಬಿದ್ದಿದೆ ಎಂದು ಕಾಣುತ್ತದೆ. ಗಂಭೀರವಾದ ಪರಿಸ್ಥಿತಿ ಇಲ್ಲದೆ. ಚುನಾವಣೆಯ ಸಂದರ್ಭದಲ್ಲಿ ಈ ಘಟನೆಗಳು ನಡೆಯುತ್ತಿರುವುದನ್ನು ನೋಡಿದಾಗ ಏನೋ ಒಂದು ಕಾರಣಗಳನ್ನು ಇಟ್ಟುಕೊಂಡು ಮಾಡುತ್ತಿದ್ದಾರೆ. ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿಯಲ್ಲಿ ನಾಲ್ಕು ವರ್ಷಗಳು ಮಹಾಮೇಳಾವ ಮಾಡಿದರು. ಐದನೇ ವರ್ಷ ಬಹಳ ಗಂಭೀರವಾದ ಪರಿಸ್ಥಿತಿಗೆ ಬಂದಿದೆ. ಬಸ್‌ಗಳಿಗೆ ಎರಡೂ ರಾಜ್ಯದವರು ಕೇಸರಿ ಬಣ್ಣವನ್ನು ಬಳಿಯಬೇಕಾಗಿತ್ತು. ಅದನ್ನು ಬಿಟ್ಟು ಕಪ್ಪು ಬಣ್ಣ ಬಳಿಯುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಸದನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ, ತಕ್ಷಣವೇ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ವಿಷಯವಾಗಿ ನಮ್ಮ ಪಕ್ಷದಿಂದಲೂ ಒಂದು ನಿಲುವಳಿ ಸೂಚನೆಯನ್ನು ತಮಗೆ ನೀಡಿದ್ದೇವೆ. ತಮಗೆ

ತಿಳಿದ ಮಟ್ಟಿಗೆ ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇರಳಕ್ಕೆ ಸಂಬಂಧಪಟ್ಟಂತೆ ಮೂರು ರಾಜ್ಯಗಳ ಗಡಿ ವಿವಾದವನ್ನು ಬಗೆ ಹರಿಸಲಿಕ್ಕೆ ಕೇಂದ್ರ ಸರ್ಕಾರ ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಕೋರಿಕೆಯ ಮೇರೆಗೆ ಮಹಾಜನ್ ಆಯೋಗವನ್ನು ನೇಮಕ ಮಾಡಿತ್ತು. ಮಹಾಜನ್ ಆಯೋಗದ ವರದಿಯು ಬರುವುದಕ್ಕಿಂತಲೂ ಮೊದಲೇ ಮಹಾರಾಷ್ಟ್ರದ ಅಂದಿನ ಮುಖ್ಯಮಂತ್ರಿ ಶ್ರೀ ವಿ.ಪಿ.ನಾಯಕ್ ಅವರು ಮಹಾಜನ್ ಆಯೋಗವು ನೀಡುವಂತಹ ವರದಿಯನ್ನು ನಾವು ಒಪ್ಪುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದರು. ತದನಂತರವಾಗಿ ಬಂದಂತಹ ವರದಿಯನ್ನು ಮಹಾರಾಷ್ಟ್ರ ಸರ್ಕಾರವಾಗಲೀ ಅಥವಾ ಕೇರಳ ಸರ್ಕಾರ ಆಗಲೀ ಒಪ್ಪಿರಲಿಲ್ಲ. ಮಹಾಜನ್ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಿದರೆ ಕರ್ನಾಟಕಕ್ಕೆ ದಕ್ಷಿಣ ಸೊಲ್ಲಾಪುರದ 65 ಹಳ್ಳಿಗಳು, ಅಕ್ಕಲಕೋಟೆ, ಜತ್ತ ತಾಲ್ಲೂಕಿನ ನಳಹಳ್ಳಿ, ಗಡಹಿಂಗ್ಲಜ.....

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೇ, ನಿಲುವಳಿ ಸೂಚನೆಯನ್ನು ಏಕೆ ತೆಗೆದುಕೊಳ್ಳಬೇಕು ಎಂಬುದನ್ನು ಸಂಕ್ಷಿಪ್ತವಾಗಿ ಹೇಳಿ. ಸಾಕು. ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎಂಬುದು ತೀರ್ಮಾನವಾದ ನಂತರ ಚರ್ಚೆಯಾಗಲಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಹಾಜನ್ ವರದಿ ಏನಿದೆ ಅದು ಅಂತಿಮವಾಗಿದೆ. ಅದನ್ನು ಎಲ್ಲಾ ಕಡೆಗಳಲ್ಲಿಯೂ ಹೇಳಿದ್ದೇವೆ. ಕೇಂದ್ರ ಸರ್ಕಾರ ಕೂಡ ಪಾರ್ಲಿಮೆಂಟ್‌ನಲ್ಲಿ ಕೇಳಿದ ಪ್ರಶ್ನೆಗೆ ಮಹಾಜನ್ ಆಯೋಗದ ವರದಿಯೇ ಅಂತಿಮ ಎಂದು ಹೇಳಿದೆ. ಇಂತಹ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಅರ್ಜಿಯನ್ನು ದಾಖಲು ಮಾಡಿ ಮಹಾಜನ್ ಆಯೋಗದ ವರದಿಯನ್ನು ತಿರಸ್ಕಾರ ಮಾಡಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಹೇಳುತ್ತಾರೆ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಪ್ರತಿಯೊಬ್ಬ ಕನ್ನಡಿಗನೂ ಇದನ್ನು ವಿರೋಧಿಸುತ್ತಾನೆ. ಆದರೆ ಸರ್ಕಾರ ಗಡಿ ವಿವಾದ ಬಂದ ಸಮಯದಲ್ಲಿ ಎಚ್ಚೆತ್ತುಕೊಳ್ಳಲಿಲ್ಲ. ಈ ವಿಷಯದಲ್ಲಿ ಮಹಾರಾಷ್ಟ ಸರ್ಕಾರ ಹಲವಾರು ವಿಷಯಗಳನ್ನು ಕಲೆಹಾಕಿ ಮಹಾರಾಷ್ಟ ಏಕೀಕರಣ ಸಮಿತಿಯ ಮುಖೇನ ಸುಪ್ರೀಂ ಕೋರ್ಟ್‌ನಲ್ಲಿ ದತ್ತಾಂಶವನ್ನು ನೀಡುವಂತಹ ಪ್ರಯತ್ನವನ್ನು ಕೂಡ ಮಾಡುತ್ತಿದೆ. ಈ ವಿಷಯ ಬಹಳ ಘನವಾಗಿದ್ದು, ತಂಟೆಗಳು ಆಗಿಂದಾಗ್ಗೆ

ನಡೆಯುತ್ತಲೇ ಇದೆ. ಇವುಗಳನ್ನು ಹತ್ತಿಕ್ಕಲಿಕ್ಕೆ ಸರ್ಕಾರ ವಿಫಲವಾಗಿದೆ. ಈ ದೃಷ್ಟಿಯಿಂದ ನಿರ್ಣಯವನ್ನು ಮಂಡನೆ ಮಾಡಿದ್ದು, ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಜೆ.ಡಿ.(ಎಸ್) ಪಕ್ಷದವರು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಇದಕ್ಕೆ ಉತ್ತರಿಸಲು ಸರ್ಕಾರ ಸಿದ್ಧವಿದೆ. ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದ್ದು, ಇದರ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ. ನ್ಯಾಯಾಲಯ ನಿಂದನೆಯಾಗದ ರೀತಿಯಲ್ಲಿ ಚರ್ಚೆ ಮಾಡಿದರೆ ಅದಕ್ಕೆ ಉತ್ತರಿಸಲು ಸರ್ಕಾರ ಸಿದ್ಧವಿದೆ. ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವ ವಿಚಾರ ತಮಗೆ ಬಿಟ್ಟದ್ದು. ನ್ಯಾಯಾಲಯದ ವಿಷಯಕ್ಕೆ ಒಳಪಟ್ಟು ನಾವು ಚರ್ಚೆಗೆ ಸಿದ್ಧರಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, sub judice ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಇದು ಏಕೆ ಚರ್ಚೆಯಾಗಬೇಕೆಂದು ಕೇಳುತ್ತಿದ್ದೇವೆಂದರೆ ರಾಜ್ಯದ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರೊಂದಿಗೆ ಚರ್ಚೆ ಮಾಡದೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರನ್ನು ಭೇಟಿ ಮಾಡಿದ್ದಾರೆ. ಆದರೆ ಕರ್ನಾಟಕ ಕೇವಲ ಭಾರತೀಯ ಜನತಾ ಪಕ್ಷದ ಆಸ್ತಿಯೇ? ನಾವೂ ಕೂಡ ಈ ನೆಲದಲ್ಲಿಯೇ ಹುಟ್ಟಿ ಬೆಳೆದಿದ್ದೇವೆ. ಆದ್ದರಿಂದ ಸರ್ವಪಕ್ಷಗಳ ನಿಯೋಗವನ್ನು ಕರೆದು ನಂತರ ಅಲ್ಲಿನ ಗೃಹ ಸಚಿವರೊಂದಿಗೆ ಮಾತನಾಡಬೇಕಿತ್ತು. ಅವರ ಮನಸ್ಸಿಗೆ ಬಂದಂತೆ ಮಾಡಲಿಕ್ಕಾಗುವುದಿಲ್ಲ. Sub judice ಎಂಬುದು ನಮಗೆ ತಿಳಿದಿದೆ. ಆ ವಿಚಾರವನ್ನು ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ರಾಜಕೀಯವಾಗಿ ಏನೇನು ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಅಲ್ಲಿನ ಗೃಹ ಸಚಿವರನ್ನು ಭೇಟಿ ಮಾಡುವುದಾಗಲೀ ಇಂತಹ ವಿಚಾರಗಳು ಇಲ್ಲಿ ಚರ್ಚೆಯಾಗಬೇಕು. ಏನಾಗಿದೆ ಎಂದು ಜನಸಾಮಾನ್ಯರಿಗೂ ಸಹ ತಿಳಿಯಬೇಕಾಗಿದೆ. ಏಕೆಂದರೆ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಂತಹ ವಿಚಾರ. ಗಡಿ ಭಾಗದಲ್ಲಿರುವ ಕನ್ನಡಿಗರು ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ಮರಾಠಿ

ಭಾಷಿಕರು ಇದ್ದಾರೆ. ಅವರು ನಮ್ಮ ಸಹೋದರ-ಸಹೋದರಿಯರು ಇದ್ದಹಾಗೆ. ಅವರು ಸಹ ಭಯಭೀತರಾಗಿದ್ದಾರೆ. ಆದಷ್ಟು ಬೇಗ ಇದಕ್ಕೆ ತೆರೆ ಎಳೆಯುವ ಸಲುವಾಗಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿ ವಿನಂತಿಸುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಇತಿಮಿತಿಯನ್ನು ಅರಿತು ನಾವು ಮಾತನಾಡುತ್ತೇವೆ. ಯಾವುದೇ ಕಾರಣಕ್ಕೂ ಸುಪ್ರೀಂ ಕೋರ್ಟ್ ನಿಂದನೆಯಾಗದಂತೆ ನಮ್ಮ ಇತಿ ಮಿತಿಯಲ್ಲಿ ನಾವು ಚರ್ಚೆ ಮಾಡುತ್ತೇವೆ ಎಂದು ನಾನು ನಮ್ಮ ಪಕ್ಷದಿಂದ ಹೇಳಬಯಸುತ್ತೇನೆ. ಅಲ್ಲದೆ ಸರ್ಕಾರ ಸರ್ವಪಕ್ಷ ನಿಯೋಗವನ್ನು ಕೇಂದ್ರ ಸರ್ಕಾರದ ಮುಂದೆ ತೆಗೆದುಕೊಂಡು ಹೋಗಲಿಲ್ಲ. ಕನ್ನಡ ಪರ ಸಂಘಟನೆಗಳೊಂದಿಗೆ ಕೂಡ ಚರ್ಚೆಯನ್ನು ಮಾಡಲಿಲ್ಲ. ಈ ಭಾಗದಲ್ಲಿ ಅಧಿವೇಶನ ನಡೆಯುತ್ತಿರುವ ಈ ಸಮಯದಲ್ಲಿ ದಯಮಾಡಿ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**(ಮುಂದು)**

(1065) 20-12-2022 (4.20) ಕೆಜಿ-ಜಿಆರ್ **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಕಾಂಗ್ರೆಸ್ ಪಕ್ಷದ ಸದಸ್ಯರು ನೀಡಿರುವಂತಹ ನಿಲುವಳಿ ಸೂಚನೆಯನ್ನು ಹಾಗೂ ಜೆ.ಡಿ.(ಎಸ್) ಪಕ್ಷದ ಉಪನಾಯಕರು ಮತ್ತು ಜೆ.ಡಿ.(ಎಸ್) ಪಕ್ಷದ ಇತರ ಸದಸ್ಯರು ನೀಡಿರುವಂತಹ ನಿಲುವಳಿ ಸೂಚನೆಯಲ್ಲಿರುವಂತಹ ಅಂಶಗಳನ್ನು ಗಮನಿಸಲಾಗಿದೆ ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ವಿಷಯವು ಪ್ರಸುತ್ತ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿ ಇರುತ್ತದೆ. ನಾಡಿನ ನೆಲ, ಜಲ ರಕ್ಷಿಸುವಂತಹದ್ದು ಸರ್ಕಾರದ ಜವಾಬ್ದಾರಿಯಾಗಿದ್ದು, **ನ್ಯಾಯಾಂಗ ನಿಂದನೆಯಾಗದ ರೀತಿಯಲ್ಲಿ ನಿಯಮ 68 ರಡಿಯಲ್ಲಿ ಚರ್ಚಿಸಲು ಅನುಮತಿ ನೀಡುತ್ತೇನೆ.** ಈಗ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಹಾಜರಿಲ್ಲ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಯವರನ್ನು

ಮತ್ತು ಸಂಸಂದೀಯ ವ್ಯವಹಾರಗಳ ಸಚಿವರನ್ನು ಕರೆಸಿ ಅವರ ಉಪಸ್ಥಿತಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**5. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿಯವರು (ಕ.ವಿ.ಪ.):-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿ/ರಾಜ್ಯಪಾಲರವರಿಂದ ಒಪ್ಪಿಗೆ ಪಡೆದಿರುವ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1 | ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022<br>The Karnataka Protection of Right to Freedom of Religion Bill, 2022. | 28-09-2022 | ರಾಜ್ಯಪಾಲರು |
| 2 | ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ,2022<br>The Karnataka Protection of interest of depositors in financial establishments (Amendment) Bill, 2022 | 27-09-2022 | ರಾಜ್ಯಪಾಲರು |
| 3 | ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2022<br>The Karnataka Land Revenue (Amendment) Bill, 2022 | 27-09-2022 | ರಾಜ್ಯಪಾಲರು |
| 4 | ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2022<br>The Karnataka Municipalities | 12-10-2022 | ರಾಜ್ಯಪಾಲರು |

| | | | |
|---|---|---|---|
| | (Amendment) Bill,2022 | | |
| 5 | ಕರ್ನಾಟಕ ರೇಷ್ಮೆಹುಳು ಬಿತ್ತನೆ ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ವಿನಿಯಮನ) (ತಿದ್ದುಪಡಿ) ವಿಧೇಯಕ, 2022<br>The Karnataka Silkworm Seed, Cocoon and Silk Yarn (Regulation of Production, Supply, Distribution and Sale) (Amendment) Bill, 2022 | 12-10-2022 | ರಾಜ್ಯಪಾಲರು |
| 6 | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2022<br>The Karnataka State Universities (Amendment) Bill,2022 | 10-10-2022 | ರಾಜ್ಯಪಾಲರು |
| 7 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2022<br>The Karnataka Goods and Services Tax (Amendment) Bill,2 Bill, 2022 | 17-10-2022 | ರಾಜ್ಯಪಾಲರು |
| 8 | ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ 2022<br>The Karnataka Land Grabbing Prohibition (Amendment) Bill, 2022. | 12-10-2022 | ರಾಜ್ಯಪಾಲರು |
| 9 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ 2022<br>The Bruhat Bengaluru Mahanagara Palike (Amendment) Bill, 2022 | 11-10-2022 | ರಾಜ್ಯಪಾಲರು |
| 10 | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2022 | 11-10-2022 | ರಾಜ್ಯಪಾಲರು |

| | | | |
|---|---|---|---|
| | The Karnataka Gram Swaraj and Panchayat Raj (Second Amendment) Bill, 2022 | | |
| 11 | ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ, 2022<br>The Karnataka Stamp (Third Amendment) Bill,2022 | 12-10-2022 | ರಾಜ್ಯಪಾಲರು |
| 12 | ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2022<br>The Karnataka Appropriation (No.3)Bill, 2022 | 17-10-2022 | ರಾಜ್ಯಪಾಲರು |
| 13 | ಕರ್ನಾಟಕ ಪ್ರೌಢ ಶಿಕ್ಷಣ ಮಂಡಲಿ (ತಿದ್ದುಪಡಿ) ವಿಧೇಯಕ, 2022<br>The Karnataka Secondary Education Examination Board (Amendment) Bill, 2022 | 11-10-2022 | ರಾಜ್ಯಪಾಲರು |
| 14 | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಮ (ತಿದ್ದುಪಡಿ) ವಿಧೇಯಕ, 2022<br>The Karnataka State Civil Services (Regulation of Transfer of Teachers) (Amendment) Bill, 2022 | 12-10-2022 | ರಾಜ್ಯಪಾಲರು |

**6. ವರದಿಯನ್ನೊಪ್ಪಿಸುವುದು**

**ಶ್ರೀ ಮಂಜುನಾಥ ಭಂಡಾರಿ (ಸದಸ್ಯರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ):-** ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯನಾದ ನಾನು ಸದರಿ ಸಮಿತಿಯ 2021-2022ನೇ ಸಾಲಿನ 06ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**07. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಮೊದಲನೆ ಪಟ್ಟಿ**

**I. ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 23(2)ರ ಮೇರೆಗೆ:**

1. 1985ರ ಕರ್ನಾಟಕ ಲೋಕಾಯುಕ್ತ (ಅಧಿಕಾರಿಗಳು ಮತ್ತು ನೌಕರರ ವೃಂದ, ನೇಮಕಾತಿ ಮತ್ತು ಷರತ್ತುಗಳು) (ತಿದ್ದುಪಡಿ) ನಿಯಮಗಳ ಅನುಬಂಧ-IIಕ್ಕೆ ತಿದ್ದುಪಡಿ ಮಾಡಿ, ದಿನಾಂಕ: 29.12.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 8 ಸೇಲೋಯು 2020.
2. 1988ರ ಕರ್ನಾಟಕ ಲೋಕಾಯುಕ್ತ (ಅಧಿಕಾರಿಗಳು ಮತ್ತು ನೌಕರರ ವೃಂದ, ನೇಮಕಾತಿ ಮತ್ತು ಷರತ್ತುಗಳು) ನಿಯಮಗಳ ಅನುಬಂಧ-IIಕ್ಕೆ ತಿದ್ದುಪಡಿ ಮಾಡಿ, ದಿನಾಂಕ: 04.05.2022 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 62 ಸೇಲೋಯು 2021.

3. 1985ರ ಕರ್ನಾಟಕ ಲೋಕಾಯುಕ್ತ ನಿಯಮಗಳ ನಿಯಮ 7ಕ್ಕೆ ತಿದ್ದುಪಡಿ ಮಾಡಿ, ದಿನಾಂಕ: 06.12.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 55 ಸೇಲೋಯು 2021.

**1978ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮದ 8 (1) ಮತ್ತು (2) ಅನ್ನು ಓದಿಕೊಂಡಂತೆ, (3)ರ ಪ್ರಕರಣ ಮೇರೆಗೆ:**

1. 1990ರ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 9 ಅನ್ನು ತಿದ್ದುಪಡಿ ಮಾಡಿ, ದಿನಾಂಕ: 07.07.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 252 ಸೇನೆನಿ 2020 (ಭಾಗ-1).

2. 1990ರ ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣೆ) (ತಿದ್ದುಪಡಿ) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ, ದಿನಾಂಕ: 19.04.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 153 ಸೇನೆನಿ 2020.

3. 1990ರ ಕರ್ನಾಟಕ ನಾಗರಿಕ ಸೇವಾ (ದೌರ್ಜನ್ಯದಿಂದ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳ ನಿಯಮ 2, 3, 4 ಹಾಗೂ ನಮೂನೆ-ಡಿ ಗೆ ದಿನಾಂಕ: 29.08.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 17 ಸೇಅನೇ 2019.

4. 1990ರ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳ ನಿಯಮ 3, 9, 16 ಹಾಗೂ 16-ಎ ಗೆ ತಿದ್ದುಪಡಿ ಮಾಡಿ, ದಿನಾಂಕ: 06.07.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನೆನಿ 2020.

5. 1990ರ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳ ನಿಯಮ 16ಕ್ಕೆ ತಿದ್ದುಪಡಿ ಮಾಡಿ, ದಿನಾಂಕ: 30.07.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನೆನಿ 2020.

6. 2012ರ ಕರ್ನಾಟಕ ನಾಗರಿಕ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳ ನಿಯಮ 2 ಮತ್ತು 3ಕ್ಕೆ ತಿದ್ದುಪಡಿಗೊಳಿಸಿ, ದಿನಾಂಕ: 05.05.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 13 ಸೇವನೆ 2022.

7. 1990ರ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳ ನಿಯಮ 5, 6, 9 ಹಾಗೂ 11ಕ್ಕೆ ಮತ್ತು ಉಳಸುವಿಕೆಯನ್ನು ತಿದ್ದುಪಡಿ ಮಾಡಿ, ದಿನಾಂಕ: 31.03.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 14 ಸೇವನೆ 2022.

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ (ಕರ್ನಾಟಕ ಅಧಿನಿಯಮದ 14) 320ರ ಪ್ರಕರಣದ ಮೇರೆಗೆ:**

1993ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಸೇವಾ) ನಿಯಮಗಳು, 2022 ಅನ್ನು ರಚಿಸಿ, ದಿನಾಂಕ: 14.11.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆರ್‌ಡಿಪಿಆರ್ /156/ಜಿಪಿಎ/2022(ಇ) ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

II. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಜೆ.ಸಿ. ಮಾಧುಸ್ವಾಮಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ):-**
ಮಾನ್ಯ ಸಭಾಪತಿಯವರೇ,

**ಭಾರತ ಸಂವಿಧಾನದ ಕಲಂ 213ರ ಅನುಚ್ಛೇದದ 1ನೇ ಖಂಡದ ಮೇರೆಗೆ ಹೊರಡಿಸಲಾಗಿರುವ ಆಧ್ಯಾದೇಶವನ್ನು ಅನುಚ್ಛೇದ 2ರ ಮೇರೆಗೆ:**

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅನ್ನು ದಿನಾಂಕ: 23.10.2022ರಂದು ಹೊರಡಿಸಲಾಗಿರುವ 2022ರ ಅಧ್ಯಾದೇಶ ಸಂಖ್ಯೆ 07 ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

III. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಡಾ: ಅಶ್ವತ್ಥ ನಾರಾಯಣ ಸಿ.ಎನ್, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಚಾಣಾಕ್ಯ ವಿಶ್ವವಿದ್ಯಾಲಯದ ಅಧಿನಿಯಮ 2021ರ 68(2)ನೇ ಪ್ರಕರಣದ ಮೇರೆಗೆ:-**

2022ರ ಚಾಣಾಕ್ಯ ವಿಶ್ವವಿದ್ಯಾಲಯದ ನಿಯಮಗಳನ್ನು ಹೊಸದಾಗಿ ರಚಿಸಿ, ದಿನಾಂಕ: 28.10.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಇಡಿ 85 ಯುಆರ್‌ಸಿ 2022.

**ವಿದ್ಯಾಶಿಲ್ಪ್ ವಿಶ್ವವಿದ್ಯಾಲಯದ ಅಧಿನಿಯಮ 2020ರ 62(2)ನೇ ಪ್ರಕರಣದ ಮೇರೆಗೆ:-**

2022ರ ವಿದ್ಯಾಶಿಲ್ಪ್ ವಿಶ್ವವಿದ್ಯಾಲಯದ ನಿಯಮಗಳನ್ನು ಹೊಸದಾಗಿ ರಚಿಸಿ, ದಿನಾಂಕ: 02.11.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಇಡಿ 135 ಯುಆರ್‌ಸಿ 2022.

**ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಅಧಿನಿಯಮ 2010ರ 25(2)ನೇ ಪ್ರಕರಣದ ಮೇರೆಗೆ:**

2020ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ನಿಯಮಗಳು ಎಂದು ಹೊಸದಾಗಿ ರಚಿಸಿ, ದಿನಾಂಕ: 21.04.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಇಡಿ 03 ಯುಆರ್‌ಸಿ 2019 ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

IV. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಕೆ. ಗೋಪಾಲಯ್ಯ, ಆರ್ಥಿಕ ಇಲಾಖೆಯಿಂದ ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಅಬಕಾರಿ ಅಧಿನಿಯಮದ 1965, ಪ್ರಕರಣ 71ರ ಮೇರೆಗೆ:**

1. 1965ರ ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟ ಹಕ್ಕಿನ ಗುತ್ತಿಗೆ) (ತಿದ್ದುಪಡಿ) ನಿಯಮಗಳ ನಿಯಮ 5 ಅನ್ನು ತಿದ್ದುಪಡಿ ಮಾಡಿ, ದಿನಾಂಕ: 29.10.2022ರಂದು ಹೊರಡಿಸಲಾಗಿರುವ ಅಧಿಸೂಚನೆ-I ಸಂಖ್ಯೆ: ಆಇ 5 ಪಿಇಎಸ್ 2022.

2. 1965ರ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) (ತಿದ್ದುಪಡಿ) ನಿಯಮಗಳ ನಿಯಮ 3 ಅನ್ನು ತಿದ್ದುಪಡಿ ಮಾಡಿ, ದಿನಾಂಕ: 29.10.2022ರಂದು ಹೊರಡಿಸಲಾಗಿರುವ ಅಧಿಸೂಚನೆ-II ಸಂಖ್ಯೆ: ಆಇ 5 ಪಿಇಎಸ್ 2022 ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಎರಡನೇ ಪಟ್ಟಿ**

I. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯಸಭಾಪತಿಯವರೇ,

**(1) ರಾಜ್ಯ ಹಣಕಾಸು ಸಂಸ್ಥೆಗಳ ಅಧಿನಿಯಮ, 1951ರ ಪರಿಚ್ಛೇದ 38(3)ರ ಪ್ರಕಾರ**

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2021-22ನೇ ಸಾಲಿನ ವಾರ್ಷಿಕ ವರದಿ.

**(2) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ, 1985ರ ಕಲಂ 16(3)ರನ್ವಯ**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2016-17 ರಿಂದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(3) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮದ 1961ರ ಕಲಂ 68 ಸಿ(4) ಮತ್ತು ಡಿ(2)ರನ್ವಯ

1. ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

2. ಕನಕಪುರ ಯೋಜನಾ ಪ್ರಾಧಿಕಾರದ 2010-11 ರಿಂದ 2013-14ನೇ ಸಾಲಿನ ವಾರ್ಷಿಕ ವರದಿಗಳು ಮತ್ತು ಲೆಕ್ಕಪರಿಶೋಧನಾ ವರದಿಗಳು ಹಾಗೂ 2009-10ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಮಾಗಡಿ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

4. ಆನೇಕಲ್ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

5. ನೆಲಮಂಗಲ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2019-20 ಮತ್ತು 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

6. ಗೋಕಾಕ್ ನಗರ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

7. ಶಿರಾ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

8. ಹೊಸಕೋಟೆ ಯೋಜನಾ ಪ್ರಾಧಿಕಾರದ 2010-11 ರಿಂದ 2013-14, 2017-18 ಮತ್ತು 2020-21, 2021-22ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2009-10 ರಿಂದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

9. ಇಳಕಲ್ ಯೋಜನಾ ಪ್ರಾಧಿಕಾರದ 2017-18 ರಿಂದ 2020-21ನೇ ಸಾಲಿನ ವಾರ್ಷಿಕ ವರದಿಗಳು.

10. ಕುಣಿಗಲ್ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

11. ಶಿರಸಿ ನಗರ ಯೋಜನಾ ಪ್ರಾಧಿಕಾರದ 2016-17, 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ವರದಿಗಳು.

12. ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ ಮತ್ತು 2016-17 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

13. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

14. ಕೃಷ್ಣರಾಜನಗರ ಯೋಜನಾ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು.

15. ನಿಪ್ಪಾಣಿ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

16. ಬಾದಾಮಿ ನಗರ ಯೋಜನಾ ಪ್ರಾಧಿಕಾರದ 2016-17 ರಿಂದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

17. ತಿಪಟೂರು ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

18. ರಾಮದುರ್ಗ ನಗರ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

19. ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ 2016-17 ರಿಂದ 2020-21ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2014-15 ರಿಂದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

20. ಜಮಖಂಡಿ ನಗರ ಯೋಜನಾ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ

21. ಪುತ್ತೂರು (ದಕ್ಷಿಣ ಕನ್ನಡ) ನಗರ ಯೋಜನಾ ಪ್ರಾಧಿಕಾರದ 2016-17 ರಿಂದ 2020-21ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳು.

22. ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 2016-17 ರಿಂದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**(4) ಕಂಪನಿ ಅಧಿನಿಯಮ 2013ರ ಸೆಕ್ಷನ್ 394(2) ಮತ್ತು 395ರನ್ವಯ**

1. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಶಿವಮೊಗ್ಗ ಸ್ಮಾರ್ಟ್‌ಸಿಟಿ ಸಂಸ್ಥೆಯ 2018-19 ರಿಂದ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಮಂಗಳೂರು ಸ್ಮಾರ್ಟ್‌ಸಿಟಿ ಸಂಸ್ಥೆಯ 2017-18 ರಿಂದ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**(5) ಕಂಪನಿ ಕಾಯ್ದೆ, 2013 ಪರಿಚ್ಛೇದ-394ರನ್ವಯ**

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**(6) ಕಂಪನಿ ಕಾಯ್ದೆ 2013ರ ಕಲಂ 395 (1) (ಬಿ)ರಡಿ**

1. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ಪಲ್ಫ್‌ವುಡ್ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**(7) ಜೀವ ವೈವಿಧ್ಯ ಅಧಿನಿಯಮ 2002ರ ಸೆಕ್ಷನ್19(4)ರ ಅನುಸಾರ**

ಕರ್ನಾಟಕ ಜೀವ ವೈವಿಧ್ಯ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(8) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 253(3) ಮತ್ತು 262(3) ರಂತೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 300ರ ಉಪ ಪ್ರಕರಣ(5)ರನ್ವಯ**

1. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2020- 21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ತಾಲ್ಲೂಕು ಪಂಚಾಯತಿಗಳ (ಕ್ರೋಢೀಕೃತ) 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಯಾದಗಿರಿ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ.
4. ಕೋಲಾರ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ.
5. ಉತ್ತರ ಕನ್ನಡ (ಕಾರವಾರ) 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ತುಮಕೂರು ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ.
8. ಮೈಸೂರು ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
9. ಕಲಬುರಗಿ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ.
10. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
11. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
12. ಕೊಡಗು (ಮಡಿಕೇರಿ) ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

II. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಗೋವಿಂದ ಮಕ್ತಪ್ಪ ಕಾರಜೋಳ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(1) ಕಾಡಾ ಅಧಿನಿಯಮ 1980 ಕಲಂ 25ರನ್ವಯ ಹಾಗೂ ಕಂಪನಿ ಕಾಯ್ದೆ 2013ರ ಸೆಕ್ಷನ್ 394/395ರನ್ವಯ.**

1. ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳ, ಮೈಸೂರು ಇದರ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತುಂಗಭದ್ರ ಯೋಜನೆ ಮುನಿರಾಬಾದ್ ಇದರ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

3. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

III. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ವಿ.ಸೋಮಣ್ಣ (ವಸತಿ, ಮೂಲ ಸೌಕರ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962ರ ಕಲಂ 52(3)ರನ್ವಯ**

ಕರ್ನಾಟಕ ಗೃಹ ಮಂಡಳಿಯ 2018-19ನೇ ಸಾಲಿನ ವಾರ್ಷಿಕ ವರದಿ.

**(2) ಕಂಪನಿ ಕಾಯ್ದೆ 2013ರ ಕಲಂ 394(2) ಮತ್ತು 396 ರನ್ವಯ**

1. ಕೊಂಕಣ ರೈಲ್ವೇ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯ 2018-19ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಕರ್ನಾಟಕ ಅಸೆಟ್ ಕಂಪನಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಬೆಂಗಳೂರು ಇದರ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

3. ಕರ್ನಾಟಕ ಟ್ರಸ್ಟಿ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥೆಯ ಬೆಂಗಳೂರು ಇದರ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

IV. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಡಾ. ಅಶ್ವತ್ಥ ನಾರಾಯಣ ಸಿ.ಎನ್. (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 47(4) ಮತ್ತು 50 (2)ರನ್ವಯ**

1. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇದರ 2021-22ನೇ ಸಾಲಿನ ವಾರ್ಷಿಕ ವರದಿ.

2. ತುಮಕೂರು ವಿಶ್ವವಿದ್ಯಾಲಯದ 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

3. ಮಂಗಳೂರು ವಿಶ್ವವಿದ್ಯಾಲಯದ 2020-21ನೇ ಸಾಲಿನ ವಾರ್ಷಿಕ ವರದಿ 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ.

4. ದಾವಣಗೆರೆ ವಿಶ್ವವಿದ್ಯಾಲಯದ 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

V. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ರಾಜ್ಯ ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧಿನಿಯಮ ಅಧ್ಯಾಯ-111 ಪ್ರಕರಣ 9 ಮತ್ತು ಅಧ್ಯಾಯ-1ರ ಪ್ರಕರಣ12(7)ರನ್ವಯ**

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ 2021-22ನೇ ಸಾಲಿನ ವಾರ್ಷಿಕ ವರದಿ ಮತ್ತು 2016-17 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(2) **ಕಂಪನಿ ಕಾಯ್ದೆ 2013ರ ಕಲಂ 394 (2) ಮತ್ತು 395(1)ರ ಪ್ರಕಾರ**

1. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತದ 2017-18 ರಿಂದ 2019-20ನೇಸಾಲಿನ ವಾರ್ಷಿಕ ವರದಿಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

VI. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಪ್ರಭು ಚವ್ಹಾಣ್ (ಪಶುಸಂಗೋಪನೆ ಸಚಿವರ ಪರವಾಗಿ):-**

**ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 2004ರ ಸೆಕ್ಷನ್ 43(3)ರನ್ವಯ**

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇದರ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

VII. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕಂಪನಿಗಳ ಕಾಯ್ದೆ 2013ರ ಕಲಂ 394 (2) ಪ್ರಕಾರ**

1. ಕರ್ನಾಟಕ ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಎನ್.ಜಿ.ಎಫ್., (ಹುಬ್ಬಳ್ಳಿ) ಲಿಮಿಟೆಡ್‌ನ 2012-13 ರಿಂದ 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

VIII. **ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಾಯ್ದೆ ಕಲಂ 33(11) ಹಾಗೂ ಸೌಹಾರ್ದ ಸಹಕಾರಿ ನಿಯಮಗಳ 2004ರ ನಿಯಮ 9(ಎ)ಯ ಪ್ರಾವಧಾನದಂತೆ**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮ ನಿಯಮಿತ ಬೆಂಗಳೂರು ಇದರ 2016-17 ರಿಂದ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(2) **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(11) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29(ಡಿ) ರನ್ವಯ**

ಕರ್ನಾಟಕ ಸಹಕಾರ ಕುಕ್ಕಟ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2016-17 ರಿಂದ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

IX **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಬಿ.ಸಿ ಪಾಟೀಲ್ (ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ರ ಕಲಂ 57ರಂತೆ**

1. ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 2021-22ನೇ ಸಾಲಿನ ವಾರ್ಷಿಕ ವರದಿ.

2. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಧಾರವಾಡ ಕೃಷಿ ವಿಶ್ವವಿದ್ಯಾಲಯದ 2020-21ನೇ ಸಾಲಿನ ವಾರ್ಷಿಕ ವರದಿ.

(2) **ಕಂಪನಿ ಕಾಯ್ದೆ 2013ರ ಸೆಕ್ಷನ್ 394(2)ರನ್ವಯ**

1. ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಬೆಂಗಳೂರು ಇದರ 2020-21ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ರಾಜ್ಯ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್‌ನ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

X **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಬಿ.ಎ. ಬಸವರಾಜ್ (ಭೈರತಿ) ನಗರಾಭಿವೃದ್ಧಿ ಮತ್ತು ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ., ಮತ್ತು ಕೆ.ಯು.ಐ.ಡಿ.ಎಫ್.ಸಿ., ಸೇರಿದಂತೆ, ಬೆಂಗಳೂರು ಅಭಿವೃದ್ಧಿ, ಬಿ.ಬಿ.ಎಂ.ಪಿ, ಬಿ.ಡಿ.ಎ, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬಿ.ಎಂ.ಆರ್.ಡಿ.ಎ., ಬಿ.ಎಂ.ಆರ್.ಸಿ.ಎಲ್., ಮತ್ತು ನಗರ ಯೋಜನೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆಯನ್ನು ಹೊರತುಪಡಿಸಿ) ಸಚಿವರ ಪರವಾಗಿ:-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48(5) ಮತ್ತು 49ರನ್ವಯ**

1. ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

2. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಚಾಮರಾಜನಗರ-ರಾಮಸಮುದ್ರ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

4. ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

5. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

6. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

8. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ ಮತ್ತು 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

10. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

11. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ..

XI. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಡಾ.ಕೆ. ಸುಧಾಕರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ರಾಜೀವ್ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ ಆಕ್ಟ್ 1994 (ಕರ್ನಾಟಕ ಆಕ್ಟ್ ನಂ.44 1994) ರ ಪ್ರಕರಣ 43 ಮತ್ತು 44ರನ್ವಯ**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 2018-19 ರಿಂದ 2020-21ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ..

XII. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ ಸೆಕ್ಷನ್ 135 ಮತ್ತು ಷೆಡ್ಯೂಲ್ VII ರನ್ವಯ ಕಂಪನಿಗಳ ನಿಬಂಧನೆಗಳ (ಕಾರ್ಪೋರೇಟ್, ಸಾಮಾಜಿಕ ಹೊಣೆಗಾರಿಕೆ ನೀತಿ) ನಿಯಮಗಳ, 2014(ಸಿ.ಆರ್.ಎಸ್.)**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2015-16 ಮತ್ತು 2016-17ನೇ ಸಾಲಿನ ವಾರ್ಷಿಕ ವರದಿ ಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

VIII. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ನಾರಾಯಣಗೌಡ (ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡೆಗಳು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕಂಪನಿಗಳ ಕಾಯ್ದೆ 1956 ಸೆಕ್ಷನ್ 619(ಎ)(2)ರನ್ವಯ.**

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

XIV. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) ಶ್ರೀ ವಿ. ಸುನೀಲ್ ಕುಮಾರ್ (ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಕಂಪನಿ ಕಾಯ್ದೆ 2013ರ ಸೆಕ್ಷನ್ 395(1)ರನ್ವಯ**

1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2021-22ನೇ ಸಾಲಿನ ವಾರ್ಷಿಕ ವರದಿ.

2. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇದರ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

XV. **ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಶ್ರೀ ಆಚಾರ್ ಹಾಲಪ್ಪ ಬಸಪ್ಪ (ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ**

**ಮತ್ತು ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಸೆಕ್ಷನ್ 65, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 83ರಂತೆ**

ರಾಜ್ಯ ಅಂಗವಿಕಲ ವ್ಯಕ್ತಿಗಳ (ಸಮಾನ ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಡಿಸುತ್ತಿರುವಂತಹ ಕಾಗದ ಪತ್ರಗಳು ಯಾವುವು ಎಂದು ನಮಗೆ ಅರ್ಥವಾಗುತ್ತಿಲ್ಲ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಮಗೆ ತಾವೇ ಕಾಗದ ಪತ್ರಗಳನ್ನು ಮಂಡಿಸಿಕೊಳ್ಳುವುದೇ;

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅವು ಯಾವುವು ಎಂದು ನಮ್ಮ ಟೇಬಲ್‌ನ ಮೇಲೆ ಇಡಬೇಕಲ್ಲವೇ; ಅವು ನಮ್ಮ ಸದಸ್ಯರ ಗಮನಕ್ಕೆ ಬರಬೇಕಲ್ಲವೇ;

**ಸಭಾಪತಿಯವರು:-** ಮಾನ್ಯ ಸದಸ್ಯರೇ, lay ಮಾಡುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಷ್ಟೊಂದು ವೇಗವಾಗಿ ಓದಿಕೊಂಡು ಹೋಗಿಬಿಟ್ಟರು?

**ಸಭಾಪತಿಯವರು:-** ಮಾನ್ಯ ಸದಸ್ಯರೇ, lay ಮಾಡುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಮಗೆ ಅವು ಬೇಕಲ್ಲವೇ?

**೮. <u>ಗಮನ ಸೆಳೆಯುವ ಸೂಚನೆಗಳು</u>**

**ಅ) ವಿಷಯ:-** ಕೋಲಾರ ಜಿಲ್ಲೆಯಲ್ಲಿ ಮಿನಿ ವಿಧಾನಸೌಧ ಇದ್ದರೂ ಕೂಡ ಉಪನೋಂದಣಾಧಿಕಾರಿ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುರಿತು

- - - - - -

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯಲ್ಲಿ ಮಿನಿ ವಿಧಾನಸೌಧ ಇದ್ದರೂ ಕೂಡ ಉಪನೋಂದಣಾಧಿಕಾರಿ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು 5 ಪತ್ರಗಳನ್ನು ಜಿಲ್ಲಾಧಿಕಾರಿಯವರಿಗೆ 2020 ಸಾಲಿನಿಂದೀಚೆಗೆ ಬರೆದಿದ್ದೇನೆ. ಆದರೆ, ಜಿಲ್ಲಾಧಿಕಾರಿಯವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೂ ಸಹ ಪತ್ರ ಬರೆದಿದ್ದೇನೆ. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದೇನೆ. I.G.R.,(Inspector General of Registration and Commissioner of Stamps ) ಮುದ್ರಾಂಕ ಇಲಾಖೆಗೆ ಬರುತ್ತದೆ. ಅವರಿಗೂ ಸಹ ಪತ್ರ ಬರೆದಿದ್ದೇನೆ. ಈ ಹಿಂದಿನ ಜಿಲಾಧಿಕಾರಿಯಾಗಿದ್ದ ಶ್ರೀಮತಿ ಸೆಲ್ವಮಣಿಯವರನ್ನು ವೈಯಕ್ತಿಕವಾಗಿ ಭೇಟಿಯಾಗಿ ಮನವಿಯನ್ನು ಸಲ್ಲಿಸಿದ್ದೇನೆ. ಆ ಸಂದರ್ಭದಲ್ಲಿ ಅವರೆಲ್ಲರೂ Class-I officers ಇರುತ್ತಾರೆ, ಹಾಗಾಗಿ, ನಾವು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂಬ ಅಸಹಾಯಕತೆಯನ್ನು ವ್ಯಕ್ತಿಪಡಿಸಿದ್ದಾರೆ. ಆದರೆ, ನನ್ನ ಕಳಕಳ ಏನೆಂದರೆ, ಇದರಲ್ಲಿ ನನಗೆ ವೈಯಕ್ತಿವಾಗಿ ಯಾವುದೇ ಲಾಭ ಇಲ್ಲ, ನಷ್ಟ ಇಲ್ಲ. ಕೋಲಾರ ತಾಲ್ಲೂಕು ಆಡಳಿತ ಸೌಧವನ್ನು 4-5 ವರ್ಷಗಳಿಂದ ಹಿಂದೆಯೇ ಸುಮಾರು 14 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿದ್ದಾರೆ. ಈ ಕಟ್ಟಡದಲ್ಲಿ 1 ರಿಂದ 3 ನೇ ಮಹಡಿಗಳು ಇವೆ. ಇದರ ಮೊದಲನೆ ಮಹಡಿಯನ್ನು ಉಪ ನೋಂದಣಾಧಿಕಾರಿ ಕಛೇರಿಯ ಅಧಿಕಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯವರು ಪ್ಲಾನ್ ಮಾಡಿ ಕಟ್ಟಿದ್ದಾರೆ. ಇದರಲ್ಲಿ ಏನಾದರೂ ಬದಲಾವಣೆ ಮಾಡುವಂತಿದ್ದರೆ, ಅವರಿಗೆ ಕಳೆದ ಎರಡು ವರ್ಷಗಳು ಬೇಕಾಗಿರಲಿಲ್ಲ. ಇವರ ಮೂಲ ಉದ್ದೇಶ ಏನೆಂದರೆ, ಲಕ್ಷಾಂತರ ರೂಪಾಯಿಗಳ ಬಾಡಿಗೆಯನ್ನು ಕಟ್ಟಿಕೊಂಡು ಅಲ್ಲಿಯೇ ಇದ್ದರೆ ಅವರ ಅವ್ಯವಹಾರಕ್ಕೆ ಒಂದು ದಾರಿ ಮಾಡಿಕೊಳ್ಳುವುದಕ್ಕಾಗಿ ಇವತ್ತಿಗೂ ಸಹ ಬಾಡಿಗೆ ಕಟ್ಟಡದಲ್ಲಿ ಇದ್ದಾರೆ, ಹೊರತು ತಾಲ್ಲೂಕು ಆಡಳಿತ ಸೌಧದಲ್ಲಿ ಸರ್ವೇ ಇಲಾಖೆ ಇರಬಹುದು, ಕಂದಾಯ ಇಲಾಖೆ ಇರಬಹುದು ಹಾಗೂ ಉಪ ನೋಂದಣಾಧಿಕಾರಿ ಕಛೇರಿ ಇರಬಹುದು ಈ ಮೂರು ಇಲಾಖೆಗಳು ಒಂದೇ ಕಟ್ಟಡದಲ್ಲಿ ಇರಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಸರ್ಕಾರ ಆದೇಶ ಸಹ ಮಾಡಿದೆ. ಇಡೀ ಕಟ್ಟಡವನ್ನು ಇವತ್ತಿಗೂ ಖಾಲಿ ಇಟ್ಟುಕೊಂಡು ಬೇರೆ ಖಾಸಗೀ ಕಟ್ಟಡಕ್ಕೆ ಬಾಡಿಗೆ ಕಟ್ಟುವಂತಹ ಅವಶ್ಯಕತೆ ಏನಿದೆ? ಇದರಲ್ಲಿರುವಂತಹ ಮೂಲ ಉದ್ದೇಶ ಏನು? ಇದನ್ನು ನಾನು ಎಷ್ಟೇ ವಿವರವಾಗಿ ಮಾತನಾಡಿದರೂ ಸಹ ಅಧಿಕಾರಿಗಳು ಇದಕ್ಕೆ ಸ್ಪಂದನೆ

ನೀಡುತ್ತಿಲ್ಲ. ಇವತ್ತಿನ ದಿವಸ ಅಷ್ಟು ದೂರದಲ್ಲಿ ಬಾಡಿಗೆ ಕಟ್ಟದಲ್ಲಿರುವಂತ ಉಪ ನೋಂದಣಾಧಿಕಾರಿಯವರ ಕಛೇರಿಯಿಂದ ಏನಾದರೂ ದಾಖಲೆಗಳು ಬೇಕೆಂದರೆ ಅಲ್ಲಿಗೆ ಹೋಗಬೇಕಾಗಿದೆ. ಇದರಿಂದ ಯಾರಿಗೆ ಲಾಭವಾಗುತ್ತಿದೆ ಎನ್ನುವುದು ನನ್ನ ಪ್ರಶ್ನೆ? ಉಪ ನೋಂದಣಾಧಿಕಾಯವರ ಕಛೇರಿ ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಅವರು ಯಾವ ರೀತಿ ವ್ಯವಹಾರ ಮಾಡುತ್ತಾರೆ, ಅದಕ್ಕೆ ಕಛೇರಿಯ ಒಳಗೆ ಒಂದು ಸ್ಥಳವಕಾಶದ ಅವಶ್ಯಕತೆ ಇದೆ. ಸಾಕಷ್ಟು ಬಾರಿ ಈ ಕಛೇರಿಯ ಮೇಲೆ ಲೋಕಾಯುಕ್ತ ದಾಳಿಯಾಗಿದೆ.

**(ಮುಂದು)**

**(1066) 20-12-2022 (4.30) ಎಂವಿ-ಎಂಡಿ(ವಿಕೆ)**

**ಶ್ರೀ ಗೋವಿಂದ ರಾಜು (ಮುಂದು):-**

ಒಂದು ವರ್ಷದ ಹಿಂದೆ 52 ಲಕ್ಷ ರೂಪಾಯಿಗಳನ್ನು ಬ್ಯಾಂಕ್‌ಗೆ ಕಟ್ಟಬೇಕಾಗಿತ್ತು. ಅದನ್ನು 'ಡಿ' ಗ್ರೂಪ್ ನೌಕರರ ಕೈಯಲ್ಲಿ ಹಣ ಕೊಟ್ಟು ಬ್ಯಾಂಕ್‌ಗೆ ಕಟ್ಟಲು ಹೇಳಿದ್ದಾರೆ. ಆದರೆ, ಅವರು ಆ ಹಣವನ್ನು ಬ್ಯಾಂಕ್‌ಗೆ ಕಟ್ಟಿಲ್ಲ. ಆ ವಿಷಯಕ್ಕೆ ಸಂಬಂಧಪಟ್ಟಂತೆ ಪೋಲೀಸ್ ಸ್ಟೇಷನ್‌ಗೆ ದೂರು ನೀಡಲಾಗಿದೆ. ಆದರೆ, ಇದುವರೆವಿಗೂ ಅದಕ್ಕೆ ಸಂಬಂಧಪಟ್ಟಂತೆ ಚಾರ್ಜ್‌ಶೀಟ್ ಸಹ ಹಾಕಿಲ್ಲ. ಈಗ ಉಪ ನೋಂದಣಾಧಿಕಾರಿಯ ಕಛೇರಿಯಲ್ಲಿ ಮತ್ತು ಜಿಲ್ಲಾ ನೋಂದಣಾಧಿಕಾರಿಯ ಕಛೇರಿಗಳಲ್ಲಿ ಜನಪ್ರತಿನಿಧಿಗಳು ಎನ್ನುವಂತಹ ಭಯ ಮತ್ತು ಗೌರವವಿಲ್ಲ. ನಾನು ಎಂ.ಎಲ್.ಸಿ.ಯಾಗಿ ಎರಡು ವರ್ಷ ನಾಲ್ಕು ತಿಂಗಳಾಗಿದೆ. ನಾನು ಜನಗಳ ಸಂಕಷ್ಟವನ್ನು ನೋಡಲಾರದೆ, ಸುಮಾರು ಬಾರಿ ವೈಯಕ್ತಿಕವಾಗಿ approach ಮಾಡಿ, ಪತ್ರಗಳನ್ನು ಸಹ ಬರೆದಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ. ನಾನು ಈ ವಿಷಯವನ್ನು ಮಾನ್ಯ ಕಂದಾಯ ಸಚಿವರಿಗೂ ಸಹ ತಿಳಿಸಿದ್ದೇನೆ. ಅದಕ್ಕೆ ಅವರು ಏನು ಮಾಡುವುದು ಅಲ್ಲಿನ ಎಲ್ಲಾ ವ್ಯವಸ್ಥೆ ಆ ರೀತಿಯಾಗಿದೆ ಎನ್ನುವಂತಹ ಮಾತನ್ನು ಹೇಳಿದರು. ಆದುದರಿಂದ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಕೂಡಲೇ ಇಷ್ಟು ವರ್ಷ ಸರ್ಕಾರಿ ಕಛೇರಿ ಬಾಡಿಗೆ ಕಟ್ಟಡದಲ್ಲಿ ಇದ್ದಂತಹ ಸಮಯದಲ್ಲಿ ಸರ್ಕಾರದ ಹಣವನ್ನು ಬಾಡಿಗೆಯವರಿಗೆ ಕಟ್ಟಿ, ಏನು ಹಣವನ್ನು ಪೋಲ್ ಮಾಡಿದ್ದಾರೆ. ಆ ಹಣವನ್ನು ಇದಕ್ಕೆ ಕಾರಣೀಭೂತರಾದಂತಹವರ ಕಡೆಯಿಂದ ವಸೂಲು ಮಾಡಬೇಕು ಹಾಗೂ ಕೂಡಲೇ ಅವರ

ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಇದು ನನ್ನ ಒತ್ತಾಯವಾಗಿದೆ. ಮತ್ತೆ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯನ್ನು ಬಾಡಿಗೆ ಕಟ್ಟಡದಲ್ಲಿ ಊರಿನ ಹೊರಗಡೆ ಮಾಡಿಕೊಂಡಿದ್ದಾರೆ. ಈಗ ಜಿಲ್ಲಾಡಳಿತ ಭವನವನ್ನು ಸುಮಾರು 68 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸದಾಗಿ ನಿರ್ಮಿಸಲಾಗಿದೆ. ಎಲ್ಲಾ ಜಿಲ್ಲಾ ಕಛೇರಿಗಳು ಒಂದೇ ಸೂರಿನಡಿ ಕೆಲಸ ನಿರ್ವಹಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅಲ್ಲಿ ಎಲ್ಲಾ ಇಲಾಖೆಗಳು ಕೆಲಸ ನಿರ್ವಹಿಸುತ್ತಿವೆ. ಆದರೆ, ಇವತ್ತಿನವರೆಗೆ ಅವರನ್ನು ಅಲ್ಲಿಗೆ ಶಿಫ್ಟ್ ಮಾಡಿಸುವುದಕ್ಕೆ ಆಗಿಲ್ಲ. ನನಗೆ ನೀಡಿರುವ ಉತ್ತರದಲ್ಲಿ ಸ್ಥಳಾವಕಾಶದ ಕೊರತೆ ಎನ್ನುವುದು ಸುಳ್ಳು. ಇದು ಅಧಿಕಾರಿಗಳು ನೀಡಿರುವಂತಹ ತಪ್ಪು ಮಾಹಿತಿಯಾಗಿದೆ. ನಾನು ಪರಿಪೂರ್ಣವಾದ ಮಾಹಿತಿ ನೀಡಿದ್ದೇನೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತಿನ ದಿವಸ ಈ ಎರಡೂ ಕಛೇರಿಗಳಿಗೆ ಸಂಬಂಧಪಟ್ಟಂತೆ ಕಾರಣೀಭೂತರಾದಂತಹವರಿಗೆ ಕೂಡಲೇ ಕ್ರಮ ಜರುಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಸ್ವಲ್ಪ ಮಾತನಾಡುತ್ತೇನೆ. ಕೋಲಾರ ಜಿಲ್ಲೆ ನೋಂದಣಾಧಿಕಾರಿಯವರ ಕಛೇರಿಯನ್ನು ಸರ್ಕಾರದ ಕಟ್ಟಡದಲ್ಲಿ ಸ್ಥಾಪಿಸುವುದು ಎಂದು ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜು ರವರು ತಂದಿರತಕ್ಕಂಥ ಗಮನ ಸೆಳೆಯುವ ಸೂಚನೆ ಏನೆಂದರೆ, ಈ ಕಛೇರಿ 2015 ರಿಂದ ಅಲ್ಲಿಗೆ ಹೋಗಿದೆ. ಅದಕ್ಕಿಂತ ಮುಂಚೆ ಆ ಕಛೇರಿ ಅಲ್ಲಿಯೇ ಇತ್ತು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಹಳೆ ಕಟ್ಟಡವನ್ನು demolish ಮಾಡಿ, ಅದನ್ನು ತಾಲ್ಲೂಕು ಸೌಧ ಎಂದು ಮಾಡಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈಗ ಒಂದು ಕಟ್ಟಡ ಕಟ್ಟಬೇಕಾದರೆ, ಅದಕ್ಕೆ ಒಂದು ಯೋಜನೆ ರೂಪಿಸುತ್ತಾರೆ. ಆ ಪ್ಲ್ಯಾನ್ ಪ್ರಕಾರ ಯಾರ್‍ಯಾರು ಏನೇನು ಎಂದು ಅದರಲ್ಲಿ ನಮೂದಿಸಿದ್ದಾರೆ. ಆ ರೀತಿ ನಮೂದಿಸಿರುವಂತಹ ಜಾಗವನ್ನು ಉಪ ನೋಂದಣಾಧಿಕಾರಿ ಕಛೇರಿಗೆ ಕೊಡುವಂಥದ್ದು ಸರ್ಕಾರದ ಕೆಲಸ. ಆದರೆ, ಸರ್ಕಾರದವರು ಅದನ್ನು deviate ಮಾಡಿದ್ದಾರೆ. ಅಂದರೆ, ಜಿಲ್ಲಾಧಿಕಾರಿಗಳ ಕಛೇರಿ, ಬೇರೆ ಕಛೇರಿಗಳು ಏನಿವೆ, ಅದರಲ್ಲಿ ಉಪ ನೋಂದಣಾಧಿಕಾರಿ ಕಛೇರಿಗೆ ಅಲ್ಲೇ ಇದ್ದಂತಹ ಜಾಗವನ್ನು ತೆರವುಗೊಳಿಸಿ, ಅ ಒಂದು ನಿವೇಶನದಲ್ಲಿಯೇ ಈ ಕಟ್ಟಡವನ್ನು ಕಟ್ಟಿದ್ದಾರೆ. ಆ ಕಟ್ಟಡ ಕಟ್ಟಿದ ಮೇಲೆ, ಆ ನಿವೇಶನದ ಕಟ್ಟಡದಲ್ಲಿ ಅವಕಾಶ

ಮಾಡಿಕೊಟ್ಟಂತಹ ಕೊಠಡಿಯ ಪ್ಲ್ಯಾನ್ ತೆಗೆದುಕೊಂಡರೆ, ಅದರಲ್ಲಿ ಅದು ಬರುತ್ತದೆ. ಅಂದರೆ, ಉಪ ನೋಂದಣಾಧಿಕಾರಿಗೆ ಇಷ್ಟು ಚದರ ಅಡಿ ಎಂದು ಇರುತ್ತದೆ. ಅವರು ಅಷ್ಟು ಚದರ ಅಡಿಯನ್ನು ಅದಕ್ಕೆ ಸೀಮಿತ ಮಾಡದೆ, ಅದನ್ನು ಬೇರೆಯ ಉದ್ದೇಶಕ್ಕೆ ಉಪಯೋಗಿಸುತ್ತಿದ್ದರೆ, ಅದಕ್ಕೆ ಅರ್ಥವಿಲ್ಲ. ಮತ್ತೊಂದು ಏನೆಂದರೆ, ಅವರು 2015ರಿಂದ ಬಾಡಿಗೆಯನ್ನು ಕಟ್ಟುತ್ತಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಈ ವಿಸ್ತೀರ್ಣದ ಕಟ್ಟಡವನ್ನು ಹಂಚಿಕೆ ಮಾಡಿದರೆ, ಹಂಚಿಕೆ ಯಾರು ಮಾಡುವುದು? ಇದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುವುದನ್ನು ಬಿಟ್ಟು, ಇದನ್ನು ಮಾಡುವುದು ಯಾರು? ಇವತ್ತು ಸದನದಲ್ಲಿ ಕಂದಾಯ ಇಲಾಖೆಯವರು ಯಾರೂ ಇಲ್ಲ. ಇಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಇರಬೇಕಾಗಿತ್ತು. ದಯವಿಟ್ಟು ತಕ್ಷಣ ಅವರಿಗೆ ಸೂಚನೆ ನೀಡಿ. ಮೊದಲು ಈ ಯೋಜನೆ ಏನಾಗಿತ್ತು, ಆ ಪ್ಲ್ಯಾನ್‌ನಲ್ಲಿ ಉಪ ನೋಂದಣಾಧಿಕಾರಿ ಕಛೇರಿಗೆ ಸ್ಥಳವನ್ನು ನೀಡಿದ್ದಾರೆಯೇ? ಅವರಿಗೆ ಸ್ಥಳಾವಕಾಶವನ್ನು ನೀಡಿದ್ದರೆ, ಅದಕ್ಕೆ ಸರ್ಕಾರದವರು allot ಮಾಡಬೇಕು. ಅದನ್ನು allot ಮಾಡದೆ, ಆ ಸ್ಥಳವನ್ನು ಮತ್ತೊಂದಕ್ಕೆ ಉಪಯೋಗಿಸಿಬಿಟ್ಟು, ಅವರಿಗೆ ಕೊಡಬೇಕು, ಕೊಡಬಾರದು ಎಂದು ತೀರ್ಮಾನ ತೆಗೆದುಕೊಳ್ಳುವುದರಿಂದ violate ಆಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರ ತಕ್ಷಣವಾಗಿ ಪ್ಲ್ಯಾನ್ ಪ್ರಕಾರ ಏನಿತ್ತು? ಆ ರೀತಿ ಮಾಡಲಿ. ಅವರು 2015ರಿಂದ ಕಟ್ಟಡಕ್ಕೆ ಬಾಡಿಗೆ ಕಟ್ಟುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಹಣವನ್ನು ಪೋಲ್ ಮಾಡುತ್ತಿದ್ದಾರೆ. ಬೇರೆ ಕಛೇರಿಗೆ ಏನೆಲ್ಲಾ ಕೊಡಬೇಕಾಗಿತ್ತೋ, ಆ ಯೋಜನೆಯನ್ನು ಯಾವುದೇ ರೀತಿಯಲ್ಲೂ deviate ಮಾಡುವಂತಹ ಕೆಲಸ ಮಾಡುವುದು ಬೇಡ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜುರವರು ಕೋಲಾರದವರು. ಇವರು ಯಾವಾಗ ಮಾತನಾಡಿದರೂ ಸಹ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರಿಗೆ ಒಳಿತಾಗುವಂತಹ ವಿಷಯಗಳನ್ನು ಚರ್ಚೆ ಮಾಡುವಂಥದ್ದನ್ನು ನಾನು ವಿಧಾನ ಪರಿಷತ್ತಿನಲ್ಲಿ ನೋಡಿದ್ದೇನೆ. ಆದರೆ, ಉಪ ನೋಂದಣಾಧಿಕಾರಿಗಳ ಕಛೇರಿ, ಸಾಮಾನ್ಯವಾಗಿ ಅಂಗವಿಕಲರಿರಬಹುದು ಮತ್ತು ಹಿರಿಯರಿರಬಹುದು ಮತ್ತೆ ಬೇರೆ ಬೇರೆಯವರು ಬರುವಂತಹ ವ್ಯವಸ್ಥೆಗೆ ಅವಕಾಶವಿರುವಂಥದ್ದು. ಆದರೆ, ಅಲ್ಲಿ 2300 ರಿಂದ 2700 ಚದರ ಅಡಿಗಳಿಗೆ ಅವಕಾಶ ಕೊಡುತ್ತಿಲ್ಲ. ಈಗ ಅವರು ಹೇಳಿದ ಮೇಲೆ ಮತ್ತೆ ಮಾನ್ಯ ಕಂದಾಯ ಸಚಿವರನ್ನು force ಮಾಡಿದ ಮೇಲೆ, ಅವರಿಗೆ ಆರು ಕೊಠಡಿಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ, ಅವರಿಗೆ ಕೊಠಡಿಗಳನ್ನು

ಒಂದೇ ಕಡೆ ನೀಡಿಲ್ಲ. ಅಂದರೆ, ಆ ಕಡೆ ಮೂರು ಕೊಠಡಿ ಮತ್ತು ಈ ಕಡೆ ಮೂರು ಕೊಠಡಿಗಳನ್ನು ನೀಡಿದ್ದಾರೆ. ಆ ಕಡೆ ಮೂರು ಕೊಠಡಿ ಮತ್ತು ಈ ಕಡೆ ಮೂರು ಕೊಠಡಿಗಳಿಗೆ, ಒಂದೇ ವೇದಿಕೆಯ ಕಟ್ಟಡವನ್ನು ನಿರ್ಮಿಸುವುದಕ್ಕೆ ಕಂದಾಯ ಸಚಿವರು ಸೂಚನೆಯನ್ನು ನೀಡಿದ್ದಾರೆ. ಅದನ್ನು ಸಧ್ಯದಲ್ಲಿಯೇ ಮಾಡುವಂಥದ್ದಕ್ಕೆ ತೀರ್ಮಾನ ಮಾಡುತ್ತಾರೆ. ಅದಾದ ನಂತರ, ಈ ಕಛೇರಿಯನ್ನು ಅಲ್ಲಿಗೆ ಶಿಫ್ಟ್ ಮಾಡುವಂಥದ್ದು, ಅದು sufficient ಜಾಗ ಇಲ್ಲದೇ ಹೋದರೆ, ಅಲ್ಲಿಗೆ ಶಿಫ್ಟ್ ಮಾಡುವುದಕ್ಕೆ ಅಂಗವಿಕಲರಿರಬಹುದು, ಹಿರಿಯರಿರಬಹುದು ಮತ್ತೆ ಬೇರೆ ಬೇರೆಯವರಿಗೆ ತೊಂದರೆಯಾಗುತ್ತದೆ ಎಂಬುದು ಮಾನ್ಯ ಸದಸ್ಯರ ದೃಷ್ಟಿ. ಮಾನ್ಯ ಸದಸ್ಯರು ಹೇಳುವಂತಹ ದೃಷ್ಟಿ ಒಳ್ಳೆಯದಿದೆ. ಈ ವಿಷಯವನ್ನು ಮಾನ್ಯ ಕಂದಾಯ ಸಚಿವರು ಬಂದ ನಂತರ, ಆದಷ್ಟು ಬೇಗ ಆ ಕಛೇರಿಯನ್ನು ಶಿಫ್ಟ್ ಮಾಡಿಸಲಿ ಎನ್ನುವಂತಹ ಮಾನ್ಯ ಸದಸ್ಯರ ಕೋರಿಕೆಯನ್ನು ಅವರ ಗಮನಕ್ಕೆ ತರುವಂತಹ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈಗ ನಾವು ಏನು ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ, ಆ ವಿಷಯ ಇವತ್ತಿನ ವೇಳಾಪಟ್ಟಿಯಲ್ಲಿ ಇದೆ. ಮಾನ್ಯ ಕಂದಾಯ ಸಚಿವರ ಪರವಾಗಿ, ಮಾನ್ಯ ಸಹಕಾರ ಸಚಿವರು ಉತ್ತರ ನೀಡುತ್ತಿದ್ದಾರೆ. ಆದರೆ, ಸದನದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಇರಬೇಕಲ್ಲವೇ? ಇಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಏಕೆ ಇಲ್ಲ? ಇದಕ್ಕೆ ಸಚಿವರು ಉತ್ತರ ನೀಡಬೇಕು. ಈಗ ಸದನ ನಡೆಯುತ್ತಿದೆ, ಅಧಿಕಾರಿಗಳಿಗೆ ಜವಾಬ್ದಾರಿ ಇಲ್ಲವೇ?

**ಸಭಾಪತಿಯವರು:-** ಇಲಾಖೆಯ ಅಧಿಕಾರಿಗಳನ್ನು ಕರೆಯಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳು ಇದ್ದಾರೆ.

**ಸಭಾಪತಿಯವರು:-** ಈಗ ಮಾನ್ಯ ಮಂತ್ರಿಗಳು ಉತ್ತರ ನೀಡುತ್ತಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಇಲಾಖೆಯ ಅಧಿಕಾರಿಗಳ ಪರವಾಗಿ ಮಾನ್ಯ ಸಹಕಾರ ಸಚಿವರು ಉತ್ತರ ನೀಡಿದ್ದಾರೆ. ಈಗ ಏನಾಗಿದೆ ಎಂದರೆ, ಉಪ ನೋಂದಣಾಧಿಕಾರಿಗಳ ಕಛೇರಿ ನೆಲಮಹಡಿಯಲ್ಲಿರಬೇಕು. ಅದು ಮೊದಲನೆ ಮಹಡಿಯಲ್ಲಿ ಇರುವುದರಿಂದ, ಅಂಗವಿಕಲರು ಮಹಡಿಯನ್ನು ಹತ್ತುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಹಾಗಾದರೆ, ಬೆಂಗಳೂರು ನಗರದಲ್ಲಿ ಯಾವ ಉಪ ನೋಂದಣಾಧಿಕಾರಿ ಕಛೇರಿ ನೆಲಮಹಡಿಯಲ್ಲಿದೆ?

ಇದಕ್ಕೆ ಮಾನ್ಯ ಸಚಿವರು ಮಾನ್ಯ ಕಂದಾಯ ಸಚಿವರ ಪರವಾಗಿ ಉತ್ತರ ನೀಡಬೇಕು. ಬೆಂಗಳೂರಿನಲ್ಲಿರುವಂಹ ಎಲ್ಲಾ ಉಪ ನೋಂದಣಾಧಿಕಾರಿಗಳ ಕಛೇರಿಗಳು ಮೊದಲನೆ ಮತ್ತು ಎರಡನೆ ಮಹಡಿಯಲ್ಲಿ ಕೆಲಸ ನಿರ್ವಹಿಸುತ್ತಿವೆ. ಅಲ್ಲಿ ಲಿಫ್ಟ್ ಸೌಲಭ್ಯವಿಲ್ಲವೆಂದು ಹೇಳಿದೆ, ಅದೇ ರೀತಿ ನನ್ನ ಒಂದು ಶಾಸಕರ ನಿಧಿಯಿಂದ ಲಿಫ್ಟ್ ಅನ್ನು ಸಹ ಹಾಕಿಸಿಕೊಡುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಲಿಫ್ಟ್ ಕೆಟ್ಟು ಹೋದರೆ ಏನು ಮಾಡುವುದು ಎಂದು ಹೇಳುತ್ತಾರೆ. ಹಾಗಾದರೆ, ಮನುಷ್ಯ ಸತ್ತು ಹೋದರೆ ಏನು ಮಾಡುವುದು? ಏಕೆಂದರೆ, ಇದು ಒಂದು ಆರಿಕೆ ಉತ್ತರ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದು ಆರಿಕೆ ಉತ್ತರವಲ್ಲ. ನಾನು ಮೊದಲೇ ಹೇಳಿದಂತೆ, ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜುರವರು ಯಾವುದೇ ರೀತಿಯ ವಿಷಯವನ್ನು ತಂದರೂ ಸಹ ಸಾರ್ವಜನಿಕರ ಒಳಿತಿಗಾಗಿ ಮತ್ತು ಸಾರ್ವಜನಿಕರ ಹಿತಾಸ್ತಕಿಯಲ್ಲಿ ಈ ವಿಷಯವನ್ನು ತಂದಿದ್ದಾರೆ. ನಾನು ಅದಕ್ಕೆ objection ಮಾಡುತ್ತಿಲ್ಲ. ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಮಾನ್ಯ ಕಂದಾಯ ಸಚಿವರಿಗೆ ತಿಳಿಸಿ, ಆ ಕಛೇರಿಯನ್ನು ಕೂಡಲೇ ಶಿಫ್ಟ್ ಮಾಡುವುದಕ್ಕೆ ಪ್ಲ್ಯಾನ್ ಮಾಡುವಂಥದಕ್ಕೆ ನಾನು co-ordinate ಮಾಡುತ್ತೇನೆಂದು ಹೇಳುತ್ತಿದ್ದೇನೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ನನಗೆ ನೀಡಿರುವಂತಹ ಉತ್ತರದ ಬಗ್ಗೆ ಹೇಳುತ್ತಿದ್ದೇನೆ. ಮೊದಲು ಏನು ಉಪ ನೋಂದಣಾಧಿಕಾರಿಯವರ ಕಛೇರಿ ಇತ್ತು, ಅಲ್ಲಿ ಮೂಲ ತಾಲ್ಲೂಕು ಕಛೇರಿ ಹಳೆ ಕಟ್ಟಡ ಇತ್ತು. ಈಗ ಅದಕ್ಕೆ ಪ್ಲ್ಯಾನ್ ಮಾಡಬೇಕಾದರೆ, ಮೊದಲನೆ ಮಹಡಿಯಲ್ಲಿ ಉಪ ನೋಂದಣಾಧಿಕಾರಿ ಕಛೇರಿಗೆ ಜಾಗವನ್ನು ಕಲ್ಪಿಸಿದ್ದಾರೆ. ಅದನ್ನು ಸರ್ಕಾರದ ಲೋಕೋಪಯೋಗಿ ಇಲಾಖೆಯವರೆ ಮಾಡಿರುವುದು. ಈಗ ತಾಲ್ಲೂಕು ಕಛೇರಿ ಇರಬಹುದು, ಉಪ ನೋಂದಣಾಧಿಕಾರಿ ಕಛೇರಿ ಇರಬಹುದು, ಜಿಲ್ಲಾಧಿಕಾರಿ ಕಛೇರಿಯಾಗಿರಬಹುದು ಮತ್ತು ಜಿಲ್ಲಾಧಿಕಾರಿಯಾಗಿರಬಹುದು. ಎಲ್ಲಾ ಕಂದಾಯ ಇಲಾಖೆಯ ಅಡಿಯಲ್ಲಿಯೇ ಬರುವುದರಿಂದ, ಇವರು ಯಾರಿಗೆ ಸಮಜಾಯಿಶಿ ಕೊಡಬೇಕು? ಯಾರು, ಯಾರನ್ನು ಕೇಳಬೇಕು? ಈಗ ಸ್ಥಳಾವಕಾಶ ಕೊಡಬೇಕಾದರೆ, ಜಿಲ್ಲಾಧಿಕಾರಿಗಳು ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ಕೊಟ್ಟು ಅದನ್ನು alteration ಮಾಡಿಸಿ, ಆ ಕಛೇರಿಯನ್ನು ಶಿಫ್ಟ್ ಮಾಡಬಹುದಲ್ಲವೇ? ನಾನು ಇದಕ್ಕೆ ಸಂಬಂಧಪಟ್ಟಂತೆ ಐದು ಬಾರಿ ಸರ್ಕಾರಕ್ಕೆ ಮನವಿ ಮಾಡಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅವರು 2004ನೇ ಇಸವಿಯಿಂದ 3085 ಚದರ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಅಲ್ಲಿ ಮಿನಿ ವಿಧಾನಸೌಧ ಓಪನ್ ಆಗಿ ನಾಲ್ಕು ವರ್ಷವಾಗಿದೆ. ಅಲ್ಲಿ ಪೂರ್ತಿ ಜಾಗವಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅಲ್ಲಿಗೆ ಶಿಫ್ಟ್ ಮಾಡಬೇಕಾದರೆ, ಅವರು ೩೦೦೦ ಚದುರ ಅಡಿ ಜಾಗವನ್ನು ಕೇಳುತ್ತಿದ್ದಾರೆ. ಈಗ ಅವರಿಗೆ ಆರು ಕೊಠಡಿಗಳನ್ನು ನೀಡಿದ್ದಾರೆ. ಆ ಕೊಠಡಿಗಳು ಒಂದೇ ಕಡೆಯಲ್ಲಿ ಇಲ್ಲ. ಅದು ಆ ಕಡೆಗೆ ಮೂರು ಕೊಠಡಿ ಮತ್ತು ಈ ಕಡೆಗೆ ಮೂರು ಕೊಠಡಿಗಳಿವೆ. ಆ ಕೊಠಡಿಗಳಿಗೆ ಹೋಗುವಂಥದ್ದಕ್ಕೆ ವ್ಯವಸ್ಥೆ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆಗೆ ಸೇರಿರುವುದರಿಂದ, ಅಲ್ಲಿ ಬೇರೆ ಯಾವ ಕಛೇರಿಗಳಿವೆ, ಅವುಗಳನ್ನು ಖಾಲಿ ಮಾಡಿಸಿ, ಏನು floor ಅನ್ನು designate ಮಾಡಿದ್ದಾರೆ. ಆ complete floor ಅನ್ನು ಅವರಿಗೆ ನೀಡಿದರೆ, ಇನ್ನು ಜಾಗ ಉಳಿಯುತ್ತದೆ. ಇದೆಲ್ಲಾ ಇವರಿಗೆ ಒಂದು ಕುಂಟುನೆಪ ಅಷ್ಟೆ. ಅವರು ಕುಂಟುನೆಪ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಇದನ್ನು serious ಆಗಿ ತೆಗೆದುಕೊಂಡು, ಇದನ್ನು immediate ಆಗಿ ಮಾಡಬೇಕೆಂದು ತಮ್ಮ ಮೂಲಕ ನನ್ನ ಒತ್ತಾಯವಾಗಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ವಿಷಯವನ್ನು serious ಆಗಿ ತೆಗೆದುಕೊಳ್ಳುತ್ತೇವೆ.

**(ಮುಂದು)**

(1067) 20.12.2022 04.40 LL-MD(VK) **(ಸಭಾಪತಿಯವರ ಉಪಸ್ಥಿತಿ)**

**ಆ) ವಿಷಯ:- ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾದೂರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ISPRL (Indian Strategic Petroleum Limited) ರವರು 2015ರಿಂದ ಗ್ರಾಮ ಪಂಚಾಯಿತಿಗೆ ಆಸ್ತಿ ಮತ್ತು ಕಟ್ಟಡ ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಕುರಿತು**

- - - - -

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾದೂರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ISPRL (Indian Strategic Petroleum Limited)ರವರು 2015ರಿಂದ ಗ್ರಾಮ ಪಂಚಾಯಿತಿಗೆ ಆಸ್ತಿ ಮತ್ತು ಕಟ್ಟಡ ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

**ಡಾ॥ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)(ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾದೂರು ಗ್ರಾಮದಲ್ಲಿ **ISPRL (Indian Strategic Petroleum Limited)** ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ ಪ್ರದೇಶದ ಆಸ್ತಿ ತೆರಿಗೆ ಕುರಿತಂತೆ ಗ್ರಾಮ ಪಂಚಾಯಿತಿಯಿಂದ 2016-17ರಿಂದ 2021-22ರವರೆಗೆ ತೆರಿಗೆ ಹಾಗೂ ಉಪಕರಣಗಳು ಸೇರಿ ಒಟ್ಟು ತೆರಿಗೆ ಮೊತ್ತವಾಗಿ ರೂ.37,42,17,898.00 ಮೊತ್ತವನ್ನು ನೀಡುವ ಬಗ್ಗೆ ಗ್ರಾಮ ಪಂಚಾಯಿತಿಯಿಂದ ದಿನಾಂಕ:24.06.2022ರಂದು ತಗಾದೆ ನೋಟೀಸನ್ನು ನೀಡಲಾಗಿರುತ್ತದೆ. ಸದರಿ ತಗಾದೆ ನೋಟೀಸಿನನ್ವಯ ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯು ತೆರಿಗೆ ವ್ಯಾಪ್ತಿಗೆ ಒಳಪಡದೇ ಇರುವುದರಿಂದ ಮತ್ತು ತೆರಿಗೆ ವಿನಾಯಿತಿಯನ್ನು ಹೊಂದಿರುವುದಾಗಿ ತಿಳಿಸಿರುವುದಲ್ಲದೇ ತೆರಿಗೆ ಲೆಕ್ಕಾಚಾರದ ಬಗ್ಗೆಯೂ ಸ್ಪಷ್ಟತೆ ಇಲ್ಲದಿರುವುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ಗ್ರಾಮ ಪಂಚಾಯತ್ ರಾಜ್ ಕಾಯ್ದೆ, 1993 ಹಾಗೂ ತತ್ಸಂಬಂಧ ನಿಯಮಗಳನ್ವಯ ಸದರಿ ನೊಂದಾಯಿತ ಸಂಸ್ಥೆಯು ತೆರಿಗೆ ವ್ಯಾಪ್ತಿಗೆ ಒಳಪಟ್ಟಿದ್ದು, ತೆರಿಗೆ ಮೊತ್ತ ಲೆಕ್ಕಾಚಾರದಲ್ಲಿ ಆಕ್ಷೇಪಣೆಗಳಿದ್ದಲ್ಲಿ ಸಂಸ್ಥೆಯವರ ಸಮ್ಮುಖದಲ್ಲಿ ತಾಂತ್ರಿಕ ಇಂಜಿನಿಯರ್‌ರವರ ಮೂಲಕ ಅಳತೆ ಮಾಡಿಸಿ ಪರಸ್ಪರ ಒಪ್ಪಿಗೆಯೊಂದಿಗೆ ತೆರಿಗೆ ಮೌಲ್ಯವನ್ನು ನಿರ್ಧರಿಸಲು ಗ್ರಾಮ ಪಂಚಾಯತ್ ವತಿಯಿಂದ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ ಸಂಸ್ಥೆಗೆ ಎಲ್ಲಾ ಸಹಕಾರವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಇದೀಗ ಸದರಿ ಆಸ್ತಿ ತೆರಿಗೆಗೆ ಸಂಬಂಧಿಸಿ ISPRL ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:21598/2022(LB-RES) ರಂತೆ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣದ ಬಗ್ಗೆ ದಾಖಲಾತಿಗಳ ಸಹಿತ ಕಂಡಿಕಾವಾರು ಷರಾವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ISPRL ಸಂಸ್ಥೆಯ ಸಿ.ಎಸ್.ಆರ್. ಅನುದಾನದಡಿ ಕಾಮಗಾರಿ ಅನುಷ್ಠಾನದ ಬೇಡಿಕೆಯ ಪಟ್ಟಿಯನ್ನು ಗ್ರಾಮ ಪಂಚಾಯಿತಿಯಿಂದ ಆಗ್ಗಿಂದಾಗ್ಗೆ ಸಂಸ್ಥೆಗೆ ನೀಡಲಾಗುತ್ತಿದೆ ಹಾಗೂ ಬಾಕಿ ತೆರಿಗೆ ಪಾವತಿ ಕುರಿತಂತೆ ಸಂಸ್ಥೆಯವರೊಂದಿಗೆ ಚರ್ಚಿಸಿ ಬಾಕಿ ಇರುವ ತೆರಿಗೆ ಮೊತ್ತವನ್ನು ಪಡೆಯುವ ಬಗ್ಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಕ್ರಮ ಜರುಗಿಸಲಾಗುತ್ತಿದೆ.

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ಇದು ಕಳೆದ ವರ್ಷ ಅಥವಾ ಈ ವರ್ಷದ್ದಲ್ಲ. ಇದು 2015ರಿಂದ ಆ ಸಂಸ್ಥೆ ಬಾಕಿ ತೆರಿಗೆ ಉಳಿಸಿಕೊಂಡು ಬಂದಿದೆ. ಗ್ರಾಮ ಪಂಚಾಯಿತಿ ಸಣ್ಣದು. ಮೊದಲನೆ ಹಂತದ ಯೋಜನೆಯಲ್ಲಿ 180 ಎಕರೆ ಮತ್ತು ಎರಡನೆ ಹಂತದ ಯೋಜನೆಯಲ್ಲಿ 250 ಎಕರೆಯನ್ನು ಆ ಸಂಸ್ಥೆಗೆ ನೀಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಲ್ಲಿ ಇದ್ದಂತಹ ಮನೆಗಳು ಅಥವಾ ವ್ಯಾಪಾರದ ಸಂಸ್ಥೆಗಳು ಅಲ್ಲಿಂದ ಹೊರಗೆ ಹೋಗುತ್ತಿವೆ. ಮುಖ್ಯ ಆದಾಯವಾಗಿಯೇ ಪಂಚಾಯಿತಿಗೆ ಬರುವ ಹಿನ್ನೆಲೆಯಲ್ಲಿ ಸರ್ಕಾರ ಸಾಧ್ಯವಾದಷ್ಟು ಬೇಗ ಆ ಪಂಚಾಯಿತಿಯವರ ಬೇಡಿಕೆ ಇರುವಂಥದ್ದು ಸಹ ಅಷ್ಟೇ. ಆ ದೃಷ್ಟಿಯಲ್ಲಿ ಅಲ್ಲಿ ಅವರ ಹೈಕೋರ್ಟ್‌ಗೆ ಹೋಗುತ್ತಾರೆ ಅಥವಾ ಬೇರೆ ಬೇರೆ ಕಡೆ ತೆರಿಗೆ ಕೊಡಲಿಕ್ಕೆ ಭಾದ್ಯರಲ್ಲ ಎನ್ನುವಂಥದ್ದನ್ನು ಹೇಳುತ್ತಾರೆ. ಒಂದು ಪಂಚಾಯಿತಿಗೆ ನೀಡಬೇಕಾದಂತಹ ತೆರಿಗೆಯನ್ನು ಸಾಧ್ಯವಾದಷ್ಟು ಬೇಗ ಆ ಪಂಚಾಯಿತಿಗೆ

ನೀಡಿ, ಆ ಊರಿನ ಅಭಿವೃದ್ಧಿಯ ದೃಷ್ಟಿಯಿಂದ ಅವಕಾಶ ಮಾಡಿಕೊಡಬೇಕು. ಇದು ಆ ಸಂಸ್ಥೆಯ ಜವಾಬ್ದಾರಿ ಕೂಡ ಆಗಿರುತ್ತದೆ ಎಂದು ಹೇಳುವ ಹಿನ್ನೆಲೆಯಲ್ಲಿ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

**ಡಾ॥ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ರೀತಿ, ವಿವರವಾದ ಮಾಹಿತಿಯನ್ನು ತೆಗೆದುಕೊಂಡು ಮತ್ತು ಆ ಕಾರ್ಖಾನೆಯ ಮಾಲೀಕರಿಗೆ, ಪಂಚಾಯಿತಿ ಅಧ್ಯಕ್ಷರು ಮತ್ತು ಪಿ.ಡಿ.ಓ.ಯವರಿಗೆ ತಿಳಿಸುವಂತಹ ವ್ಯವಸ್ಥೆ ಮಾಡುತ್ತೇನೆ.

**9. ನಿಯಮ 330ರ ಮೇರೆಗೆ ಚರ್ಚೆ**

**ಅ) ವಿಷಯ:- ದಿನಾಂಕ:01.04.2006ರ ನಂತರ ನೇಮಕಗೊಂಡಿರುವ ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ನಿಶ್ಚಿತ ಪಿಂಚಣಿ ಸೌಲಭ್ಯ ಕಲ್ಪಿಸದೇ ಇರುವುದು ಹಾಗೂ ಜ್ಯೋತಿ ಸಂಜೀವಿನಿ ಸೌಲಭ್ಯ ವಿಸ್ತರಿಸದೇ ಇರುವ ಕುರಿತು.**

---

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ಭಾರತ ದೇಶದಲ್ಲಿ ದಿನಾಂಕ:01.04.2006ರಲ್ಲಿ ಸಾಮಾನ್ಯವಾಗಿ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಅನ್ವಯಿಸುವಂತೆ ಒಂದು ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಯಿತು. ಆ ಸಂಬಂಧದಲ್ಲಿ ನಾನು ಇವೊತ್ತಿನ ದಿವಸ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಸೂಚನೆ ಕೊಟ್ಟಿರುವ ಪ್ರಕಾರದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಬೋಧಕ ಮತ್ತು ಬೋಧಕೇತರರಿಗೆ ಇದುವರೆವಿಗೂ ಕೂಡ ಯಾವುದೇ ಒಂದು ಪಿಂಚಣಿ ಸೌಲಭ್ಯ ಕೂಡ ದಿನಾಂಕ:01.04.2006ರ ನಂತರ ನೇಮಕಗೊಂಡಂತಹವರಿಗೆ ದೊರಕಿರುವುದಿಲ್ಲ. ಜೊತೆಗೆ, ದಿನಾಂಕ:01.04.2006ರಲ್ಲಿ ನೇಮಕಗೊಂಡು ದಿನಾಂಕ:01.04.2006ರ ನಂತರ ಅನುದಾನಕ್ಕೆ ಒಳಗಾಗಿರುವವರಿಗೂ ಕೂಡ

ಮಾನ್ಯ ಸುಪ್ರೀಂ ಕೋರ್ಟ್ ಒಂದು ನಿರ್ದೇಶನ ನೀಡಿರುತ್ತದೆ. ದಿನಾಂಕ:01.04.2006ಕ್ಕೆ ಹಿಂದೆ ನೇಮಕಗೊಂಡು ಆ ನಂತರ ಅನುದಾನಕ್ಕೆ ಒಳಗಾಗಿರುವವರಿಗೆ ಕೂಡ ಪಿಂಚಣಿ ಸೇವೆಗೆ ಅವರ ಸೇವೆಯನ್ನು ಪರಿಗಣಿಸಬೇಕೆಂದು ಒಂದು ಆದೇಶ ಇರುತ್ತದೆ. ಅದನ್ನು ಸಹ ಪರಿಗಣಿಸಿರುವುದಿಲ್ಲ. ಹೀಗಾಗಿ, ದಿನಾಂಕ:01.04.2006ರ ನಂತರ ನೇಮಕಗೊಂಡಿರುವಂತಹವರಿಗೆ ಯಾರಿಗೂ ಕೂಡ ಒಂದು ಪೈಸೆ ನಿಶ್ಚಿತ ಪಿಂಚಣಿ ಎಲ್ಲಿಯೂ ಕೂಡ ಹಣ ಠೇವಣಿಯಾಗುತ್ತಿಲ್ಲ. ಆ ದಿನ ಕಾಯಿದೆಯಲ್ಲಿ ಆಡಳಿತ ಮಂಡಳಿಯವರು ಶೇಕಡ 10 ರಷ್ಟು ಕೊಡಬೇಕು ಮತ್ತು ನೌಕರರ ಖಾತೆಯಿಂದ ಶೇಕಡ 10 ರಷ್ಟು ಕಾಯ್ದಿರಿಸಬೇಕೆನ್ನುವುದನ್ನು ಜಾರಿಗೆ ತಂದರು. ಇದು ಇವೊತ್ತಿನ ದಿವಸದವರೆಗೂ ಕೂಡ ಎಲ್ಲಿಯೂ ಜಾರಿಯಾಗಿರುವುದಿಲ್ಲ. ಒಬ್ಬರ ಪರವಾಗಿ ಒಂದು ಶಿಕ್ಷಣ ಸಂಸ್ಥೆಯವರು ಸಹ ಈ ಹಣವನ್ನು ಠೇವಣಿ ಇಟ್ಟಿರುವುದಿಲ್ಲ. ಹೀಗಾಗಿ, ತುಂಬಾ ಶೋಚನೀಯ ಸ್ಥಿತಿಯಲ್ಲಿ ಅವರು ಇದ್ದಾರೆ.

ಇದರ ಜೊತೆಗೆ, ಇನ್ನೊಂದು ದುರಂತ ಏನೆಂದರೆ, ದಿನಾಂಕ:01.04.2006ರ ಹಿಂದೆ ಹಳೆ ಪಿಂಚಣಿ ಯೋಜನೆಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಂತಹವರಿಗೆ ನಿಶ್ಚಿತವಾದಂತಹ ಪಿಂಚಣಿಯನ್ನು ಸರ್ಕಾರ ಕೊಡುತ್ತಾ ಬಂದಿರುತ್ತದೆ. ಇದನ್ನು 1980 ರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಗೊಂಡವರಿಗೂ ಸಹ ಪಿಂಚಣಿ ಸೌಲಭ್ಯವನ್ನು ಸರ್ಕಾರ ಕೊಡುತ್ತಾ ಬಂದಿರುತ್ತದೆ. ಆದರೆ, ಹೊಸ ಪಿಂಚಣಿ ಯೋಜನೆ ಬಂದ ಮೇಲೆ ಅದೇ ವ್ಯವಸ್ಥೆಯನ್ನು ಸರ್ಕಾರ ಮುಂದುವರೆಸಬೇಕಾಗಿತ್ತು. ಆದರೆ, ಅದನ್ನು ಕರ್ನಾಟಕ ರಾಜ್ಯ ಸರ್ಕಾರ ಮುಂದುವರೆಸಿರುವುದಿಲ್ಲ. ಇವೊತ್ತಿನ ದಿವಸ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದ ಮೇಲೆ ಕೇರಳ, ಆಂಧ್ರಪ್ರದೇಶ, ಓರಿಸ್ಸಾ, ಮಹಾರಾಷ್ಟ್ರ ರಾಜ್ಯಗಳಲ್ಲಿ ಈ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಸಹ ಕೆಲಸ ಮಾಡುತ್ತಿರುವಂತಹವಿರಗೂ ಕೂಡ ಹಳೆ ಪಿಂಚಣಿ ಯೋಜನೆ ಮಾದರಿಯಲ್ಲಿಯೇ ಅವರಿಗೂ ಕೂಡ ಸರ್ಕಾರ ಹಣ ತುಂಬುವಂತಹ ವ್ಯವಸ್ಥೆಯನ್ನು ಈ 4 ರಾಜ್ಯಗಳಲ್ಲಿ ಮಾಡುತ್ತಾ ಬಂದಿರುತ್ತದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಅದನ್ನು ಮಾಡಿರುವುದಿಲ್ಲ. ಇದರಿಂದಾಗಿ, ಈಗಾಗಲೇ ನಿವೃತ್ತಿಯಾಗಿರುವಂತಹವರ ಸಂಖ್ಯೆ ಸುಮಾರು 3 ಸಾವಿರ ಶಿಕ್ಷಕರು. ಆ 3 ಸಾವಿರ ಶಿಕ್ಷಕರು ತಮ್ಮ ಕೊನೆಯ ತಿಂಗಳ ವೇತನವನ್ನು ಪಡೆದುಕೊಂಡು ಬರಿಗೈಯಲ್ಲಿ ನಿವೃತ್ತರಾಗಿರುತ್ತಾರೆ. ಕೆಲವರು

ವೃತ್ತಿಯಲ್ಲಿರುವಾಗಲೇ ಮರಣ ಹೊಂದಿರುತ್ತಾರೆ. ಅವರ ಕುಟುಂಬ ನಿರ್ವಹಣೆ ಇವೊತ್ತಿನ ದಿವಸ ಬಹಳ ತ್ರಾಸವಾಗಿದೆ ಮತ್ತು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿ ಇವರೆಲ್ಲರೂ ಸಹ ಬದುಕುತ್ತಿದ್ದಾರೆ. ಆದರೆ, ಸಂವಿಧಾನ ಆರ್ಟಿಕಲ್ 14ರ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನ, ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವಂತಹವರಿಗೆ ಎರಡು ರೀತಿಯ ವೇತನ ಕೊಡತಕ್ಕಂಥದ್ದು, ಇದು ಸಂವಿಧಾನಕ್ಕೆ ವಿರೋಧವಾದಂಥದ್ದು ಎಂದು ನಮ್ಮ ಸರ್ಕಾರಗಳು ಮನಗಂಡಿದ್ದರೂ ಸಹ, ನಾವು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವೇತನ ಕೊಟ್ಟರೂ ಸಹ, ಅವರಿಗೆ ಪಿಂಚಣಿ ಕೊಡುವುದಿಲ್ಲ ಎನ್ನುವಂತಹ ತೀರ್ಮಾನ ಮಾಡಿರುವಂಥದ್ದು ಬಹಳ ಘೋರವಾದಂತಹ ಕೃತ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**(ಮುಂದು)**

(1068) 20.12.2022 ವೈಎಲ್-ಎಕೆ 4.50 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಇವತ್ತು ಈ ನಾಡಿನಲ್ಲಿ ದೇಶ ಕಟ್ಟುವಂತಹ ಸಮಾಜದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕೆಲಸ ಮಾಡುವಂಥವರು ನನ್ನ ಈ ಶಿಕ್ಷಕ ಬಂಧುಗಳು. ಈ ಶಿಕ್ಷಕ ಬಂಧುಗಳಿಗೆ ಈ ರಾಜ್ಯದಲ್ಲಾಗಲಿ, ದೇಶದಲ್ಲಾಗಲಿ ಲಂಚ ರುಜುವಾತುಗಳಿಲ್ಲದೇ ಬಹಳ ಶ್ರೇಷ್ಠತೆಯಿಂದ ಈ ದೇಶ ಕಟ್ಟುವಂತಹ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿರುವುದು ಯಾರೆಂದು ಹೇಳುವುದಾದರೆ, ಅದು ಶಿಕ್ಷಕ ವರ್ಗವಾಗಿದೆ. ಸಂಸ್ಥೆಗಳಲ್ಲಿ ಪ್ರಾಮಾಣಿಕತೆ, ದಕ್ಷತೆ, ಶ್ರೇಷ್ಠತೆ, ನಿಷ್ಠೆಯಿಂದ ಈ ನಾಡಿನ ಮಕ್ಕಳಿಗೆ ಶಿಕ್ಷಣ ನೀಡುವಂಥ ಶಿಕ್ಷಕ ಬಂಧುಗಳಿಗೆ ಪಿಂಚಣಿ ಇಲ್ಲದೇ ಕೆಲಸ ಮಾಡುತ್ತಿದ್ದು, ತುಂಬಾ ದುಃಖದ ಸಂಗತಿಯಲ್ಲಿ ಅವರು ಬದುಕನ್ನು ನಡೆಸುತ್ತಿದ್ದಾರೆ. ಅವರ ಬದುಕು ತುಂಬಾ ಆತಂಕದಿಂದ ಕೂಡಿದೆ. ಇವತ್ತಿನ ದಿವಸ ಪಿಂಚಣಿ ಪಡೆಯುತ್ತಿರುವಂಥವರು ನಿವೃತ್ತರಾದ ಮೇಲೆ ಅವರ ಕುಟುಂಬದವರೆ ಕಡೆಗಣಿಸುತ್ತಿರುವುದನ್ನು ಸಮಾಜದಲ್ಲಿ ನೋಡುತ್ತಿದ್ದೇವೆ. ಇನ್ನು ನಿವೃತ್ತರಾದವರಿಗೆ ಪಿಂಚಣಿಯೇ ಇಲ್ಲವೆಂದರೆ, ಅವರ ಬದುಕು ಎಷ್ಟು ತಾತ್ಸಾರ ಎಂಬುದನ್ನು ನಮ್ಮ ಸರ್ಕಾರ ಹಾಗೂ ನಾವು ಅರ್ಥ

ಮಾಡಿಕೊಳ್ಳಬೇಕಾಗಿದೆ. ದಯವಿಟ್ಟು ತಮ್ಮ ಮೂಲಕ ಘನ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಇವತ್ತು ದಿನಾಂಕ: 07.10.2022 ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಮಠದಿಂದ ಬೆಂಗಳೂರಿನವರೆಗೂ ಕೂಡಾ ಅನುದಾನಿತ ಶಾಲಾ ಬೋಧಕ/ಬೋಧಕೇತರೆಲ್ಲರೂ ಪಾದ ಯಾತ್ರೆಯಲ್ಲಿ ಜಾತಾ ಬಂದು ಫ್ರೀಡಂ ಪಾರ್ಕ್‌ನಲ್ಲಿ ಕಳೆದ 76 ನೇ ದಿನದಲ್ಲಿ ಧರಣಿ ಮಾಡುತ್ತಿದ್ದಾರೆ. ಮಳೆಗಾಲ, ಚಳಿಗಾಲದಲ್ಲಿ ಪ್ರತಿನಿತ್ಯ ಧರಣಿ ಮಾಡುತ್ತಿದ್ದಾರೆ. ನಿಜಕ್ಕೂ ಕೂಡಾ ಅವರ ಆಕ್ರಂದನ ಬಹಳ ಮುಗಿಲು ಮುಟ್ಟುತ್ತಿದ್ದೆ.

ಆದರೆ, ನಮ್ಮ ಸರ್ಕಾರ ಮತ್ತು ಜನ ಪ್ರತಿನಿಧಿಗಳಾದ ನಾವು ಕಣ್ಣು ಮುಚ್ಚಿಕೊಂಡಿದ್ದಾರೆ ವಿನಃ ಅವರ ಆಕ್ರಂದನವನ್ನು ನೋಡುತ್ತಿಲ್ಲ. ಬಹಳ ದುಃಖದಿಂದ, ಸಂಕಷ್ಟದಿಂದ ಮಹಿಳಾ ಶಿಕ್ಷಕರು ಫ್ರೀಡಂ ಪಾರ್ಕ್‌ಗೆ ಬಂದು ಧರಣಿ ನಡೆಸುತ್ತಿದ್ದಾರೆ ಎನ್ನುವುದನ್ನು ನಾವು ನೋಡಿದರೆ ಮಾತ್ರ ಅವರ ದುಃಖ ದುಮ್ಮಾನಗಳು ನಮಗೆ ಅರ್ಥವಾಗುತ್ತದೆ. ಇಂತಹ ಒಂದು ಹೀನಾಯ ಪರಿಸ್ಥಿತಿಯಲ್ಲಿ ನಮ್ಮ ದೇಶ ಕಟ್ಟುವಂತಹ ವಿದ್ಯಾರ್ಥಿಗಳನ್ನು ತಯಾರು ಮಾಡುವಂಥ ಶಿಕ್ಷಕ ವರ್ಗವನ್ನು ನಮ್ಮ ಸರ್ಕಾರ ನಡೆಸಿಕೊಳ್ಳುತ್ತಿರುವುದು ಒಳಿತಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈಗಾಗಲೇ ಎರಡು-ಮೂರು ಬಾರಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಈ ಧರಣಿ ನಿರತರಾದವರನ್ನು ಕರೆಸಿ ಮಾತನಾಡಿ, ಈ ಸಮಸ್ಯೆಗೆ ಪರಿಹಾರ ನೀಡುತ್ತೇನೆ ಎನ್ನುವಂಥ ಭರವಸೆಯನ್ನು ನಮಗೆ ನೀಡಿದ್ದರು. ಆದರೆ, ಅವರನ್ನು ಕರೆದು ಮಾತನಾಡಿ ಏನಾದರೂ ಭರವಸೆಯನ್ನು ನೀಡಿ, ನಿರ್ದಿಷ್ಟ ಅವಧಿಯಲ್ಲಿ ಮಾಡುತ್ತೇನೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಾಗಲಿ, ಮಾನ್ಯ ಸಚಿವರಾಗಲಿ ನಿರ್ದಿಷ್ಟವಾಗಿ ಹೇಳದೇ ಇರುವುದನ್ನು ನಾನು ಖಂಡಿಸಲೇಬೇಕಾಗಿದೆ. ನಾನು ಈ ಸರ್ಕಾರ, ಆ ಸರ್ಕಾರ ಎಂದು ಹೇಳುವುದಿಲ್ಲ. 2006 ರಿಂದ ಅಸ್ತಿತ್ವಕ್ಕೆ ಬಂದ ಎಲ್ಲಾ ಸರ್ಕಾರವು ಕೂಡಾ ನೊಂದ ಶಿಕ್ಷಕ ವರ್ಗವನ್ನು ಬಹಳ ಕಡೆಗಣಿಸಿದ್ದಾರೆ. ತಾಯಿ ಹೃದಯ ಇರುವಂಥ ಯಾವ ಸರ್ಕಾರವು ಈ ಬೋಧಕ/ಬೋಧಕೇತರ ಶಿಕ್ಷಕ ವರ್ಗವನ್ನು ಈ ರೀತಿಯಾಗಿ ನಡೆಸಿಕೊಳ್ಳುವುದು ನಮ್ಮ ನಾಡಿನಲ್ಲಿ ಸೂಕ್ತವಾಗಿಲ್ಲ. ದಯವಿಟ್ಟು ಉತ್ಪಾದಕ ವರ್ಗ ಎಂಬುದಕ್ಕಿಂತ ಹೆಚ್ಚಾಗಿ ಸೇವಾ ವಲಯ

ಎನ್ನುವುದನ್ನು ಈ ಶಿಕ್ಷಕ ಇಲಾಖೆಯ ವರ್ಗವನ್ನು ಪರಿಗಣಿಸಬೇಕಾಗಿದೆ. ಉತ್ಪಾದನ ವಲಯ ಎಂದು ಶಿಕ್ಷಕ ಸಂಸ್ಥೆಗಳನ್ನು ಸಹ ಕರೆಯುವುದಾದರೆ, ಈ ನಾಡಿನಲ್ಲಿ ಭವಿಷ್ಯ ರೂಪಿಸಲು ಖಂಡಿತವಾಗಿ ಸಾಧ್ಯವಿಲ್ಲ.

ಇವತ್ತು ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಅವರ ಸರ್ಕಾರವೇ ಅಸ್ತಿತ್ವದಲ್ಲಿದೆ. ಈ ವಿಚಾರವಾಗಿ ಇಡೀ ರಾಜ್ಯದಾದ್ಯಂತ ಮತ್ತು ದೇಶದಾದ್ಯಂತ ವ್ಯಾಪಕವಾದ ಚಳುವಳ ನಡೆಯುತ್ತಿದೆ. ನಿನ್ನೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದಿನಾಂಕ: 01.04.2006 ರಿಂದ ನೇಮಕಗೊಂಡ ಎನ್.ಪಿ.ಎಸ್. ನಲ್ಲಿರುವವರು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿರುವಂಥ ಎಲ್ಲಾ ನೌಕರರು ಸಹ ಒಟ್ಟಾಗಿ ಸೇರಿ ಸುಮಾರು ಒಂದು ಲಕ್ಷಕ್ಕೂ ಅಧಿಕ ಮಂದಿ ನೌಕರರು ಹಗಲು-ರಾತ್ರಿ ಹೆಣ್ಣು ಮಕ್ಕಳ ಆದಿಯಾಗಿ ಎಲ್ಲಾ ಮಹಿಳಾ ನೌಕರರು, ಮಹಿಳಾ ಶಿಕ್ಷಕರು ಧರಣಿ ನಿರತರಾಗಿದ್ದಾರೆ. ಒಟ್ಟಾರೆಯಾಗಿ ಈ ಎನ್.ಪಿ.ಎಸ್. ಅನ್ನು ಈ ರಾಜ್ಯದಿಂದ ತೆಗೆಯಬೇಕು, ನಮಗೆ ಅನ್ಯಾಯವಾಗುತ್ತದೆ, ನಿವೃತ್ತಿಯಾದ ಮೇಲೆ ಇದರಿಂದ ಬದುಕನ್ನು ಕಟ್ಟಿಕೊಳ್ಳುವುದಕ್ಕಾಗಲಿ, ಬದುಕನ್ನು ನಡೆಸುವುದಕ್ಕಾಗಲಿ ಆಗುವುದಿಲ್ಲ ಎನ್ನುವುದನ್ನು ಬಹಳ ಪ್ರಾಮಾಣಿಕತೆಯಿಂದ ತಮ್ಮ ಮುಂದೆ ವೇದನೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಅವರಿಗೆ ಬಹಳ ವಾಸ್ತವಿಕವಾಗಿ ಎನ್.ಪಿ.ಎಸ್. ನಿಂದ ಸರ್ಕಾರಿ ನೌಕರರಿಗೆ ಇರಬಹುದು ಹಾಗೂ ಅನುದಾನಿತ ಸಂಸ್ಥೆ ಇರಬಹುದು. ಅನುದಾನಿತ ಸಂಸ್ಥೆಯವರಿಗೆ ಏನೇನು ಇಲ್ಲದಂತಾಗಿದೆ. ಸರ್ಕಾರಿ ಸಂಸ್ಥೆಯವರಿಗೆ ಅಷ್ಟೋ, ಇಷ್ಟೋ ಹಣವನ್ನು ಮೀಸಲಿರಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ, ಅದು ಸಹ ಎಷ್ಟು ಹಣ ಬರುತ್ತದೆ ಎಂಬುದು ಯಾರಿಗೂ ಸಹ ಖಾತರಿ ಇಲ್ಲವೆಂದು ಸರ್ಕಾರಿ ನೌಕರರೆಲ್ಲರೂ ಒಟ್ಟಾರೆಯಾಗಿ ಈ ಚಳುವಳಿಯನ್ನು ಮಾಡಲು ಹೊರಟಿದ್ದಾರೆ. ನಾವು ಇದರ ಬಗ್ಗೆ ಗಂಭೀರವಾಗಿ ಗಮನಹರಿಸಬೇಕು. ಮಾನ್ಯ ಶಿಕ್ಷಣ ಸಚಿವರಿಂದಲೇ ಈ ಕೆಲಸವಾಗುತ್ತದೆ ಎಂಬ ನಿರೀಕ್ಷೆ ನನಗೆ ಏನಿಲ್ಲ. ಹಾಗೆಂದು ಮಾನ್ಯ ಸಭಾನಾಯಕರ ಮೇಲೆ ಸಹ ನಾನು ಒತ್ತಡ ಹೇರುವುದಿಲ್ಲ. ಇದರ ಬಗ್ಗೆ ಗಂಭೀರವಾದಂಥ ಚಿಂತನೆಯನ್ನು ಮಾನ್ಯ ಮುಖ್ಯಮಂತ್ರಿಗಳೇ ಮಾಡಿ, ಕೇಂದ್ರ ಸರ್ಕಾರದೊಂದಿಗೂ ಸಮಾಲೋಚನೆ ಮಾಡಬೇಕಾಗಿದೆ. ಜೊತೆಗೆ ಈ ವಿಚಾರದಲ್ಲಿ ವಿರೋಧ ಪಕ್ಷಗಳನ್ನು ಸಹ ವಿಶ್ವಾಸಕ್ಕೆ

ತೆಗೆದುಕೊಳ್ಳಬೇಕು. ಇದು ಅಂತಹ ಒಂದು ಜ್ವಲಂತ ಸಮಸ್ಯೆಯಾಗಿದೆ. ಆ ದಿಸೆಯಲ್ಲಿ ಏನಾದರೂ ಪರಿಹಾರ ನೀಡುವಂಥ ಪ್ರಯತ್ನವನ್ನು ಈ ಅಧಿವೇಶನದಲ್ಲಿಯೇ ನಿರ್ದಿಷ್ಟವಾದ ದಿನಾಂಕವನ್ನು ಗೊತ್ತುಪಡಿಸಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರೊಂದಿಗೆ ಸಮಾಲೋಚನೆ ಮಾಡಿ, ಈ ಸಮಸ್ಯೆಗೆ ಪರಿಹಾರ ಸೂಚಿಸುವಂಥ ಕೆಲಸವನ್ನು ಈ ಅಧಿವೇಶನದಲ್ಲಿಯೇ ಪ್ರಕಟಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಮತ್ತೊಂದು ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ದಿನಾಂಕ: 01.04.2006 ರಿಂದ ಹಿಂದೆ ಯಾವ ಸಂಸ್ಥೆಗಳು ಅನುದಾನಕ್ಕೆ ಒಳಪಟ್ಟಿದೆ ಅಂತಹ ಸಂಸ್ಥೆಗಳಲ್ಲಿ ಖಾಲಿಯಾದ ಹುದ್ದೆಗಳನ್ನು ನೀವು ದಿನಾಂಕ: 01.04.2006 ರ ನಂತರ ಭರ್ತಿ ಮಾಡುವಾಗ ಅದನ್ನು ಹಳೆಯ ಪಿಂಚಣಿ ಯೋಜನೆ ಅಡಿ ತರಬೇಕಾಗಿತ್ತು. ಆದರೆ, ಅವರಿಗೆ ಹಳೆಯ ಪಿಂಚಣಿ ಯೋಜನೆಯನ್ನು ನೀಡದೇ ಹೊಸ ಪಿಂಚಣಿ ಯೋಜನೆ ವ್ಯಾಪ್ತಿಗೆ ತರಲಾಗುತ್ತಿದೆ. ಏಕೆಂದರೆ, ಆ ಸಂಸ್ಥೆ ಅನುದಾನಕ್ಕೆ ಒಳಪಟ್ಟ ದಿನ ಹಳೆಯ ಪಿಂಚಣಿ ಯೋಜನೆ ಅಡಿ ಆ ಎಲ್ಲಾ ಹುದ್ದೆಗಳು ಒಳಪಟ್ಟಿರುವಂಥದಾಗಿದೆ. ನಿವೃತ್ತಿಯಿಂದ, ರಾಜೀನಾಮೆಯಿಂದ, ಮರಣದಿಂದ ಖಾಲಿಯಾದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡುತ್ತಿದೆ, ಆ ಹುದ್ದೆಗಳನ್ನು ಮತ್ತೆ ಹೊಸ ಪಿಂಚಣಿ ವ್ಯಾಪ್ತಿಗೆ ತರಲಾಗುತ್ತಿದೆ. ಇದು ಕೂಡಾ ತೀರಾ ಅನ್ಯಾಯದ ಸಂಗತಿಯಾಗಿದೆ. ಆ ದಿಸೆಯಿಂದ ತಾವು ಎಲ್ಲಾ ವಿಚಾರದ ಬಗ್ಗೆ ಚಿಂತನೆ ಮಾಡಿ, ಪಕ್ಕದ ನಾಲ್ಕು ರಾಜ್ಯಗಳಲ್ಲಿ ಅನುದಾನಿತ ಸಂಸ್ಥೆಯವರಿಗೆ ಏನು ಸವಲತ್ತು ಜಾರಿಗೆ ತರಲಾಗಿದೆ, ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಮಾಡಬೇಕು. ಒಟ್ಟಾರೆಯಾಗಿ ರಾಜ್ಯ ಸರ್ಕಾರಿ ನೌಕರರು ನಮಗೆ ಹೊಸ ಪಿಂಚಣಿ ಸೌಲಭ್ಯ ಬೇಡ, ಇದರಿಂದ ನಮಗೆ ಬದುಕನ್ನು ಕಟ್ಟಿಕೊಳ್ಳಲು ಆಗುವುದಿಲ್ಲ, ಬದುಕನ್ನು ನಡೆಸುವುದಕ್ಕಾಗುವುದಿಲ್ಲ, ನಮ್ಮ ಸಂಸಾರದಲ್ಲಿ ದೊಡ್ಡ ಚಿತ್ರಹಿಂಸೆಯಾಗಿದೆ ಎನ್ನುವಂಥದು ಮನುಷ್ಯನ ದೊಡ್ಡ ಆಕ್ರಂದನವಾಗಿದೆ. ಶಿಕ್ಷಕರಾಗಲಿ, ನೌಕರರಾಗಲಿ ಯಾವುದೇ ಹುದ್ದೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರಲಿ ನಿರಂತರವಾಗಿ ಸುಮಾರು 25, 35 ವರ್ಷ ಸೇವೆ ಸಲ್ಲಿಸಿ, ನಂತರ ಬರೀ ಕೈಯಲ್ಲಿ ಹೋಗಿ ಜೀವನ ನಡೆಸಲು ಸಾಧ್ಯವಾಗದೇ ಆತ್ಮಹತ್ಯೆಗೆ ಶರಣಾಗುವುದೇನಿದೆ, ಅದು ಜೀವಂತವಾಗಿ ಸರ್ಕಾರವೇ ಅವರನ್ನು

ಕೊಲ್ಲುವಂಥ ಒಂದು ಹೀನಾಯ ಪರಿಸ್ಥಿತಿ ನಮ್ಮ ನಾಡಿನಲ್ಲಾಗಲಿ, ದೇಶದಲ್ಲಾಗಲಿ ಬರಬಾರದು, ಯಾವುದೇ ಸರ್ಕಾರದಿಂದ ಈ ರೀತಿ ಆಗಬಾರದು. ಶಿಕ್ಷಣ ಇಲಾಖೆಯೆಂದರೆ, ಎಲ್ಲರಿಗೂ ಸರ್ವಸ್ವ ಇದ್ದ ಹಾಗೆ. ಶಿಕ್ಷಕರಿಂದ ಮತ್ತು ಶಿಕ್ಷಣದಿಂದಲೇ ಈ ಜಗತ್ತು ಬೆಳಗುತ್ತಿರುವುದು. ಅವರನ್ನು ನಾವು ಇವತ್ತು ಯಾವ ರೀತಿ ನಡೆಸಿಕೊಳ್ಳುತ್ತಿದ್ದೇವೆ? ನಮ್ಮ ಶಿಕ್ಷಕರಿಗೆ ಯಾವುದಾದರಿಂದ ಲಂಚ ಬರುತ್ತದೆಯೇ? ಪ್ರತಿಯೊಬ್ಬ ಶಿಕ್ಷಕರು ಮಕ್ಕಳಿಗೆ ಶಿಕ್ಷಣ ನೀಡುವಾಗ, "ನಾನು ಪಾಠವನ್ನು ಕಲಿಸುವಂಥ ವಿದ್ಯಾರ್ಥಿ, ನನಗಿಂತ ಎತ್ತರಕ್ಕೆ ಬೆಳೆಯಬೇಕು" ಎನ್ನುವಂಥ ಉದ್ದೇಶವನ್ನಿಟ್ಟುಕೊಂಡು ಕೆಲಸ ಮಾಡುವಂಥವರಾಗಿದ್ದಾರೆ. ಈ ಶಿಕ್ಷಕ ಸಮುದಾಯವು ಈ ನಾಡನ್ನು ಉತ್ತಮ ಸ್ಥಿತಿಗೆ ತೆಗೆದುಕೊಂಡು ಹೋಗಬೇಕೆಂದು ದುಡಿಯುತ್ತಿರುವಂಥ ಸರ್ಕಾರಿ ನೌಕರರನ್ನು ಮತ್ತು ಶಿಕ್ಷಕ ಸಮುದಾಯವನ್ನು ನಾವು ಈ ರೀತಿ ಹೀನಾಯವಾಗಿ ನಡೆಸಿಕೊಂಡು ಹೋಗುವುದು ಹಾಗೂ ಅವರ ಬದುಕಿನ ಬಗ್ಗೆ ಚಿಂತನೆ ಮಾಡದೇ ಇರುವುದು ಒಳಿತಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಮತ್ತೊಂದು ಪ್ರಮುಖವಾದ ವಿಚಾರವೇನೆಂದರೆ,...

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಮಾನ್ಯ ಸಚಿವರು ತಮಗೆ ಉತ್ತರವನ್ನು ನೀಡುತ್ತಾರೆ.

(ಮುಂದು)

(1069) 20.12.2022/5.00/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಈ ನಾಡಿನಲ್ಲಿ ಕೂಲಿ ಕಾರ್ಮಿಕರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿವೆ. ಒಂದಲ್ಲ ಒಂದು ರೀತಿಯಲ್ಲಿ ಕೂಲಿ ಕಾರ್ಮಿಕನ ನೆರವಿಗೆ ಬರಬೇಕು. ಆದರೆ ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ಬೋಧಕ ಮತ್ತು ಬೋಧಕೇತರರಿಗೆ ಯಾವುದೇ ಆರೋಗ್ಯ ಪಿಂಚಣಿ ಸವಲತ್ತುಗಳು ಕೂಡ ಇಲ್ಲ. ಒಂದು ಕುಟುಂಬದ ಸದಸ್ಯನಿಗೆ ಹೃದಯ ಚಿಕಿತ್ಸೆಯಾದರೆ, ಇಡೀ ಕುಟುಂಬದ ಸದಸ್ಯರೆಲ್ಲರೂ ಆ ಸಾಲವನ್ನು ತೀರಿಸುವುದಕ್ಕಾಗದೇ, ಕುಟುಂಬ ಸಮೇತ ನೇಣಿಗೆ ಶರಣಾಗುವ ಪರಿಸ್ಥಿತಿ ಇದೆ. ಈ ಅನುದಾನಿತ

ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರಾಗಿರುವವರಿಗೆ ಇಂತಹ ಹೀನಾಯ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಅನೇಕ ಬಾರಿ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಇದು ಬರೀ ಭರವಸೆ ಮಾತ್ರ ಆಗಿದೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುವುದೇನೆಂದರೆ, ದಯವಿಟ್ಟು, ಸರ್ಕಾರಿ ಶಾಲಾ ಶಿಕ್ಷಕರಿಗೆ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಲ್ಲಿ ಅವರ ಪ್ರತಿ ತಿಂಗಳ ಸಂಬಳದಲ್ಲಿ ವಂತಿಗೆಯನ್ನು ಕಲೆಕ್ಟ್ ಮಾಡಿ, ಅವರ ಕುಟುಂಬದ ಸದಸ್ಯರಿಗೆ ಜ್ಯೋತಿ ಸಂಜೀವಿನಿ ಯೋಜನೆಯ ಸೌಲಭ್ಯವನ್ನು ಕೊಟ್ಟಿದ್ದೀರಿ. ಅದೇ ರೀತಿ ಈ ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ಬೋಧಕ-ಬೋಧಕೇತರ ಸಂಬಳದ ಹಣದಿಂದ ವಂತಿಗೆಯನ್ನು ಸಂಗ್ರಹ ಮಾಡಿ, ಅವರನ್ನು ಕೂಡ ಈ ಜ್ಯೋತಿ ಸಂಜೀವಿನಿ ವ್ಯಾಪ್ತಿಯಲ್ಲಿ ತಂದು, ಅವರ ಕುಟುಂಬದ ಸದಸ್ಯರಿಗೂ ಕೂಡ ಈ ಆರೋಗ್ಯ ವಿಮಾ ಯೋಜನೆ ಸಿಗುವಂತೆ ಮಾಡಬೇಕಾಗಿದೆ. ಇದನ್ನು ಮಾಡುವುದಕ್ಕೆ ಕಾನೂನಿನಲ್ಲಿ ತೊಡಕು ಇದೆ ಎಂಬುದು ನಮಗೆ ಗೊತ್ತಿದೆ. ದಯವಿಟ್ಟು, ಆ ಕಾಯಿದೆಗೆ ತಿದ್ದುಪಡಿಯನ್ನು ತನ್ನಿ. ಕುಟುಂಬದ ಸದಸ್ಯರಿಗೆ ಆರೋಗ್ಯ ಮತ್ತೊಂದು ಇಲ್ಲವೆಂದಾಗ, ಅವರಿಗೆ ಬೇರೆ ರೀತಿಯ ಹಣಕಾಸಿನ ನೆರವು ಇಲ್ಲ. ಈ ನಾಡಿನಲ್ಲಿ ನೂರಕ್ಕೆ ತೊಂಬತ್ತು ಪರ್ಸೆಂಟ್ ಶಿಕ್ಷಕರು ವೇತನದಿಂದ ಬದುಕುತ್ತಿದ್ದಾರೆ. ಅವರಿಗೆ ಬೇರೆ ರೀತಿಯ ಆದಾಯದ ಮೂಲಗಳಿಲ್ಲ. ಅಂತಹ ಕುಟುಂಬದ ಒಬ್ಬ ಸದಸ್ಯನಿಗೆ ಶಸ್ತ್ರ ಚಿಕಿತ್ಸೆಯಾದರೆ, ಸಾಲದ ಶೂಲಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಅವರಿಗೆ ಯಾವುದೇ ಸವಲತ್ತು ಇಲ್ಲ. ಶಾಲೆಯಲ್ಲಿ ದುಡಿಯುವ ಮತ್ತು ದೇಶ ಕಟ್ಟುವ ಒಬ್ಬ ಶಿಕ್ಷಕರಿಗೆ ಇಂತಹ ಕನಿಷ್ಟ ಆರೋಗ್ಯ ವಿಮಾ ಯೋಜನೆಯನ್ನು ಕೊಡಲಿಲ್ಲವೆಂದರೆ, ನಮ್ಮ ಸರ್ಕಾರ ಆಡಳಿತವನ್ನು ಎಂತಹ ಲೋಪದಲ್ಲಿ ನಡೆಸುತ್ತಿದೆ. ಇದು ಮಾನವೀಯತೆಯ ಲಕ್ಷಣವಲ್ಲ. ಸರ್ಕಾರಕ್ಕೆ ತಾಯಿ ಹೃದಯ ಇರಬೇಕು. ಇಂತಹ ಪವಿತ್ರ ಸೇವೆಯನ್ನು ಸಲ್ಲಿಸುವಂತಹ ಬೋಧಕ-ಬೋಧಕೇತರರಿಗೆ ಆರೋಗ್ಯ ವಿಮೆ ಯೋಜನೆಯನ್ನು ಜ್ಯೋತಿ ಸಂಜೀವಿನಿ ಯೋಜನೆಯಡಿಯಲ್ಲಿ ತರುವುದಕ್ಕೆ ಕಾಯಿದೆಯಲ್ಲಿ ತಿದ್ದುಪಡಿ ತರುವುದಕ್ಕೆ ಕೂಡಲೇ ಕ್ರಮವಹಿಸಿ. ಅವರಿಂದಲೂ ವಂತಿಗೆಯನ್ನು ಸಂಗ್ರಹ ಮಾಡಿ. ದಯವಿಟ್ಟು, ಅವರ ಕುಟುಂಬದ ಸದಸ್ಯರೆಲ್ಲರೂ ಕೂಡ ಸರ್ಕಾರ ಗುರುತುಪಡಿಸಿದಂತಹ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸೌಲಭ್ಯ ದೊರಕುವಂತಹ ಕೆಲಸವನ್ನು ಮಾಡಬೇಕೆಂದು ಹೇಳತ್ತಾ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವೆರಡು ವಿಚಾರಗಳಲ್ಲಿ ನಿರ್ದಿಷ್ಟವಾದಂತಹ ಉತ್ತರವನ್ನು

ಕೊಡಬೇಕು. ಹಳೆ ಪಿಂಚಣಿ ಯೋಜನೆಯನ್ನು ಜಾರಿ ಮಾಡಬೇಕು. ಹೊಸ ಪಿಂಚಣಿ ಯೋಜನೆ ಸಂಪೂರ್ಣವಾಗಿ ರದ್ದಾಗಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಈ ಸದನದಲ್ಲಿ ಹೇಳಿಕೆ ಮಾಡಿಸಬೇಕು. ಈ ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ಏನೆಲ್ಲಾ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವ ಬಗ್ಗೆ ಸ್ಪಷ್ಟವಾದ ನಿಲುವು ಕೊಡಬೇಕು. ದಯವಿಟ್ಟು, ಜ್ಯೋತಿ ಸಂಜೀವಿನಿ ಯೋಜನೆಯನ್ನು ಜಾರಿ ತರಬೇಕೆಂದು ಹೇಳುತ್ತಾ, ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ. ಸಂಕನೂರವರೇ ಮಾತನಾಡಿ. ನಿಯಮ 330 ರಡಿಯಲ್ಲಿ ಶ್ರೀಯುತರುಗಳಾದ ಮಾನ್ಯ ಮರಿತಿಬ್ಬೇಗೌಡ, ಪುಟ್ಟಣ್ಣ ಹಾಗೂ ಎಸ್.ವ್ಹಿ. ಸಂಕನೂರರವರು ಕೊಟ್ಟಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತಿರುವಾಗ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿದ್ದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಶಿಕ್ಷಣ ಸಚಿವರಾದ ಮಾನ್ಯ ಬಿ.ಸಿ. ನಾಗೇಶ್‌ರವರು ಭರವಸೆ ಕೊಡಿ ಎಂದು ಕೇಳಿದರೆ, ಅವರಿಗೆ ಭರವಸೆ ಕೊಡುವುದು ಬಹಳ ಕಷ್ಟವಾಗುತ್ತದೆ. ಹಿರಿಯ ಸದಸ್ಯರಾದ ಮಾನ್ಯ ಮರಿತಿಬ್ಬೇಗೌಡರು ಈ ವಿಷಯದ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಮೂರು ಪ್ರತ್ಯೇಕವಾದ ವಿಷಯಗಳಿವೆ. ಮೊದಲನೆಯದಾಗಿ, ನಮ್ಮ ದೇಶದಲ್ಲಿ ಹಳೆ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, 2006ರ ನಂತರ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದರು. ಅದು ಸರ್ಕಾರಿ ನೌಕರರಿಗೆ ಜಾರಿಯಾಯಿತು. ಖಾಸಗೀ ಅನುದಾನಿತ ಶಾಲಾ ಕಾಲೇಜು ನೌಕರರಿಗೆ ಜಾರಿಯಾಗಲಿಲ್ಲ. ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆ ಜಾರಿಯಾಗುವ ಸಂದರ್ಭದಲ್ಲಿ ಎಲ್ಲಾ ಸರ್ಕಾರಿ ನೌಕರರು ತುಂಬಾ ಸಂತಸದಲ್ಲಿದ್ದರು. ಏಕೆಂದರೆ, ಆ ರೀತಿಯಾದಂತಹ ವಾತಾವರಣ ನಿರ್ಮಾಣವಾಯಿತು. ಸರ್ಕಾರಿ ನೌಕರರ ಸಂಬಳದಲ್ಲಿ ಡಿ.ಎ. ಶೇಕಡಾ 10 ಮತ್ತು ಸರ್ಕಾರ ಶೇಕಡಾ 10 ರಷ್ಟು ಹಣವನ್ನು ಕೋಡುತ್ತೀರಿ. ಅದನ್ನು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡುತ್ತೇವೆ. ಅದು ಡಬಲ್ ಆಗುತ್ತಾ ಹೋಗುತ್ತದೆ. ಸರ್ಕಾರಿ ನೌಕರರು ನಿವೃತಿಯ ವೇಳೆಯಲ್ಲಿ ನಿಮ್ಮಗಳಿಗೆಲ್ಲಾ ದೊಡ್ಡ

ಮೊತ್ತ ಬಂದು, ಕೋಟ್ಯಾಧಿಪತಿಗಳಾಗುತ್ತೀರಿ ಎನ್ನುವಂತಹ ಭ್ರಮೆಯ ವಾತಾವರಣವನ್ನು ಮೂಡಿಸಿಬಿಟ್ಟಿದ್ದರು. ಎಲ್ಲಾ ಸರ್ಕಾರಿ ನೌಕರರು ಹೊಸ ಪಿಂಚಣಿ ಯೋಜನೆಯನ್ನು ಸ್ವೀಕಾರ ಮಾಡಿದರು. ಆದರೆ ಸರ್ಕಾರಿ ನೌಕರರಿಗೆ ಇವತ್ತು ಗೊತ್ತಾಗುತ್ತಿದೆ. ನನ್ನ ಸ್ನೇಹಿತರೊಬ್ಬರು ಮೊನ್ನೆ ತಾನೇ ನಿವೃತ್ತಿಯಾದರು. ಹಳೆ ಪಿಂಚಣಿ ಯೋಜನೆ ಜಾರಿಯಾಗಿದ್ದರೆ, ರೂ.29,000/- ಪಿಂಚಣಿ ನಿಗದಿಯಾಗುತ್ತಿತ್ತು. ಬರೀ ರೂ.8,000/- ಪಿಂಚಣಿ ನಿಗದಿಯಾಗುತ್ತದೆ. ಹಳೆ ಪಿಂಚಣಿ ಯೋಜನೆ ಮತ್ತು ಹೊಸ ಪಿಂಚಣಿ ಯೋಜನೆಯಲ್ಲಿ ಎಷ್ಟೊಂದು ವ್ಯತ್ಯಾಸ ಮತ್ತು ಅನ್ಯಾಯವಾಗುತ್ತಿದೆ. ಇಡೀ ರಾಜ್ಯ ಸರ್ಕಾರಿ ನೌಕರರು ನಿನ್ನೆ ಬೆಂಗಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ ದೊಡ್ಡ ಹೋರಾಟವನ್ನು ನಡೆಸಿದ್ದಾರೆ. ನಮ್ಮ ದೇಶದಲ್ಲಿರುವ ನಾಲ್ಕು ರಾಜ್ಯಗಳಾದ ರಾಜಸ್ತಾನ್, ಜಾರ್ಖಂಡ್, ಪಂಜಾಬ್, ಛತ್ತೀಸ್‌ಘಡ್ ಹೊಸ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, ಹಳೆ ಪಿಂಚಣಿ ಯೋಜನೆಯನ್ನು ಜಾರಿ ಮಾಡಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿ ಮಾಡಿರುವುದರಿಂದ ಬಹಳ ತೊಂದರೆಯಾಗಿದೆ. ರೂ.29,000/- ಪಿಂಚಣಿ ನಿಗದಿಯಾಗುವುದು, ಬರೀ ರೂ.8,000/- ಪಿಂಚಣಿ ನಿಗದಿಯಾಗುತ್ತದೆ. ಹಾಗಾಗಿ, ಹೊಸ ಪಿಂಚಣಿ ಯೋಜನೆಯನ್ನು ರದ್ದು ಪಡಿಸಬೇಕು. ಹಳೆ ಪಿಂಚಣಿ ಯೋಜನೆಯನ್ನು ಪುನಃ ಜಾರಿಗೆ ತರಬೇಕು ಎನ್ನುವುದು ಮೊದಲನೇ ವಿಷಯವಾಗಿದೆ.

ಎರಡನೇ ವಿಷಯವಾಗಿ, ಹಿರಿಯ ಸದಸ್ಯರಾಗಿ ಮಾನ್ಯ ಮರಿತಿಬ್ಬೇಗೌಡರು ಸವಿಸ್ತಾರವಾಗಿ ಹೇಳಿದ್ದಾರೆ. ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ಹೊಸ ಪಿಂಚಣಿ ಯೋಜನೆ ಮತ್ತು ಹಳೆ ಪಿಂಚಣಿ ಯೋಜನೆ ಸೌಲಭ್ಯವಿಲ್ಲ. ಒಬ್ಬ ಶಿಕ್ಷಕ ಆರವತ್ತು ವರ್ಷಗಳವರೆಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ, ಅವರು ನಿವೃತ್ತಿಯಾಗಿ ಬರೀ ಕೈಯಲ್ಲಿ ಹೋಗಬೇಕೆಂದರೆ, ಬದುಕು ನಡೆಸುವುದು ಹೇಗೆ? ಅವರ ಬದುಕಿನ ಮೂಲ ಪ್ರಶ್ನೆಯಾಗಿದೆ. ಅವರು ಭಿಕ್ಷೆ ಪಾತ್ರೆಯನ್ನು ಹಿಡಿದುಕೊಂಡು ಹೋಗಿ, ಬದುಕು ನಡೆಸಬೇಕಾ? ಇದರ ಬಗ್ಗೆ ಸರ್ಕಾರ ಬಹಳಷ್ಟು ಚಿಂತನೆ ನಡೆಸಬೇಕು. ಸರ್ಕಾರಿ ನೌಕರರಿಗೆ 2006 ರ ನಂತರ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರಿ. ಅದೇ ರೀತಿಯಾಗಿ ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಜಾರಿಗೆ ತರಬೇಕಾಗಿತ್ತು. ಮ್ಯಾನೇಜ್‌ಮೆಂಟ್‌ನವರು

ಕಾಂಟ್ರಿಬ್ಯೂಷನ್ ಶೇಕಡಾ 10 ರಷ್ಟು ಕೊಡಿ ಎಂದು ಸರ್ಕಾರದವರು ಒಂದು ಸುತ್ತೋಲೆಯನ್ನು ಹೊರಡಿಸಿದರು. ಕಾಂಟ್ರಿಬ್ಯೂಷನ್ ಆಗಿ ಶೇಕಡಾ 10 ಇದ್ದಿದ್ದು, ಈಗ ಹದಿನಾಲ್ಕು ಆಗಿದೆ. ಯಾವ ಮ್ಯಾನೇಜ್‌ಮೆಂಟ್ ಕಾಂಟ್ರಿಬ್ಯೂಷನ್ ಕೊಡುತ್ತದೆ? ಯಾವ ಮ್ಯಾನೇಜ್‌ಮೆಂಟ್‌ನವರು ಕಾಂಟ್ರಿಬ್ಯೂಷನ್ ಕೊಡುವುದಿಲ್ಲ. ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು ಕೊಡುವುದಕ್ಕೆ ತಯಾರಿದ್ದೇವೆ. ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಕಾಂಟ್ರಿಬ್ಯೂಷನ್ Basic + D.A ನ 10% ಕೊಡಬೇಕಾಗಿದೆ. ಆ ಹಣವನ್ನು ಕೊಡುತ್ತೇವೆ. ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳ ಮ್ಯಾನೇಜ್‌ಮೆಂಟ್‌ನವರು ಕೊಡುತ್ತಿಲ್ಲ. ಅದನ್ನು ಯಾರು ಕೊಡಬೇಕೆಂದರೆ, ಈಗಿನ ಸರ್ಕಾರ ಕೊಡಬೇಕು. ಅದನ್ನು ಏತಕ್ಕೆ ಕೊಡಲಿಲ್ಲ? ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ತಮ್ಮ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಮೂರು-ನಾಲ್ಕು ಬಾರಿ ತೀರ್ಪು ಕೊಟ್ಟಿದೆ. ಆ ತೀರ್ಪು ಏನು ಕೊಟ್ಟಿದೆ ಎಂದರೆ, ಸರ್ಕಾರಿ ಶಾಲೆಯ ಶಿಕ್ಷಕರಿಗೆ ಏನೆಲ್ಲಾ ಬೆನಿಫಿಟ್ ಕೊಡುತ್ತೀರಿ. ಸರ್ಕಾರಿ ಶಾಲೆಯ ಶಿಕ್ಷಕರಿಗೆ ಕೊಟ್ಟಂತಹ ಬೆನಿಫಿಟ್‌ನ್ನು ಯಥಾವತ್ತಾಗಿ ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ extend ಮಾಡಬೇಕೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯ ತೀರ್ಪು ಕೊಟ್ಟಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯ ನೀಡಿರುವ ತೀರ್ಪಿಗೆ ಸರ್ಕಾರದವರು ಗೌರವ ಕೊಡುವುದಿಲ್ಲವೇ? ಬೆನಿಫಿಟ್‌ನ್ನು 2006 ರಿಂದ ಕೊಡಬೇಕಾಗಿತ್ತು. ಅದನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೌಕರರಿಗೆ ಬಹಳ ಅನ್ಯಾಯವಾಗಿದೆ ಮತ್ತು ಅವರ ಬದುಕು ನಡೆಸುವುದು ಹೇಗೆ? ನಾನು ಹೇಳಿರುವಂತೆ ಆರವತ್ತು ವರ್ಷ ಸೇವೆ ಸಲ್ಲಿಸಿ, ಅವರು ಮುಂದೆ ಬದುಕು ನಡೆಸಬೇಕೆಂದರೆ, ಭಿಕ್ಷೆ ಪಾತ್ರೆ ಇಟ್ಟುಕೊಂಡು ಹೋಗಬೇಕಾಗುತ್ತದೆ. ಸರ್ಕಾರ ಇನ್ನು ಮುಂದಿನ ದಿನಮಾನಗಳಲ್ಲಿ ಆ ತರಹ ಪರಿಸ್ಥಿತಿ ತರುವುದು ಒಳ್ಳೆಯದಲ್ಲ. ನಾನು ರೂಲಿಂಗ್ ಪಾರ್ಟಿಯ ಮೆಂಬರ್ ಆಗಿ ಮಾತನಾಡಿದರೆ, ತಪ್ಪಾಗುತ್ತದೆ. ಇದರಿಂದ ಬಹಳ ಕೆಟ್ಟ ಪರಿಣಾಮ ಉಂಟಾಗುತ್ತದೆ. ಫ್ರೀಡಂ ಪಾರ್ಕ್‌ನಲ್ಲಿ ಸರ್ಕಾರಿ ನೌಕರರು ಕಳೆದ 76 ದಿನಗಳಿಂದ ಹೋರಾಟ ಮಾಡುತ್ತಿದ್ದಾರೆ. ಇದರಿಂದ ಬಹಳಷ್ಟು ನನಗೆ ನೋವಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಈ ಹಿಂದೆ ಶಿಕ್ಷಣ ಸಚಿವರಾದ ಮಾನ್ಯ ಸುರೇಶ್‌ಕುಮಾರ್‌ರವರು ಇದ್ದಾಗ, ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಯವರನ್ನು ಕರೆಸಿ, 2006 ರ

ನಂತರ ಹೊಸ ಪಿಂಚಣಿ ಯೋಜನೆಯನ್ನು ಸರ್ಕಾರ ಕೊಟ್ಟರೆ, ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುತ್ತದೆ ಎಂಬುದರ ಬಗ್ಗೆ ಲೆಕ್ಕ ಮಾಡಿ ಇಟ್ಟಿದ್ದಾರೆ. ನಾನು ತಮ್ಮ ಮೂಲಕ ಶಿಕ್ಷಣ ಸಚಿವರಾದ ಮಾನ್ಯ ಬಿ.ಸಿ. ನಾಗೇಶ್‌ರವರಿಗೆ ಬಹಳ ಕರುಣೆ ಮತ್ತು ಅನುಕಂಪವಿದೆ. ನಾನು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರಿಗೆ ಹೇಳುವುದೇನೆಂದರೆ, ಸರ್ಕಾರದ ಶೇಕಡಾ 10 ರಷ್ಟು ಕಾಂಟ್ರಿಬ್ಯೂಷನ್ ಕೊಟ್ಟರು ಎಂದರೆ, ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುತ್ತದೆ ಎಂಬುದರ ಬಗ್ಗೆ ಲೆಕ್ಕ ಮಾಡಿದ್ದರಲ್ಲಾ, ದಯವಿಟ್ಟು ಅದನ್ನು ತರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿ ಮಾಡಿದಂತೆ, ಅದೇ ರೀತಿಯಾಗಿ ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಕೂಡ ಜಾರಿ ಮಾಡಬೇಕು. ಇನ್ನು ಮುಂದೆ ಹೊಸ ಪಿಂಚಣಿ ಯೋಜನೆ ರದ್ದಾಯಿತು ಎಂದರೆ, ಹಳೆ ಪಿಂಚಣಿ ಯೋಜನೆ ಜಾರಿಯಾಯಿತು ಎಂದರೆ, ಇವರಿಗೂ ಕೂಡ ಅನ್ವಯವಾಗುತ್ತದೆ. ಹಿರಿಯ ಸದಸ್ಯರಾದ ಮಾನ್ಯ ಮರಿತಿಬ್ಬೇಗೌಡರು ಒಂದು ವಿಷಯವನ್ನು ಹೇಳಿದರು. 2006 ಕ್ಕೆ grant ಗೆ admit ಆಗಿದೆ. ಅವರು 2006ರ ಪೂರ್ವದೊಳಗೆ ಕೆಲಸ ಮಾಡಿದ್ದಾರೆ. ಅವರಿಗೆ ಎಂಟು ವರ್ಷ ಹತ್ತು ವರ್ಷ ನಂತರ 2006 ರಿಂದ grant ಗೆ admit ಆಯಿತು. ಈ ವಿಷಯದ ಕುರಿತಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅನುದಾನ ರಹಿತ ಅವಧಿಯನ್ನು ಪರಿಗಣಿಸಿ, ಎಲ್ಲಾ ಬೆನ್‌ಫಿಟ್ ಕೊಡಬೇಕೆಂದು ತೀರ್ಪು ಕೊಟ್ಟಿದೆ. ಅದಕ್ಕೆ ಅವರಿಗೆ right ಇದೆ. 2006 ರ ನಂತರ ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು grant ಗೆ admit ಮಾಡಿದ್ದೀರಲ್ಲ, ಅವರು ಮೊದಲೇ ಸೇವೆಯಲ್ಲಿದ್ದಾರೆ. ಅವರು ಹಳೆ ಪಿಂಚಣಿ ಯೋಜನೆಯ ಜಾರಿ ಮಾಡಬೇಕೆಂಬ ಬಗ್ಗೆ ಡಿಮ್ಯಾಂಡ್‌ನ್ನು ಇಟ್ಟಿದ್ದಾರೆ. ಅದು ನ್ಯಾಯಯುತವಾದ ಡಿಮ್ಯಾಂಡ್ ಇದೆ. ಅದನ್ನು ತಕ್ಷಣ ಈಡೇರಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಾನು ಒಬ್ಬ ಉಪನ್ಯಾಸಕ ಮತ್ತು ಪ್ರಾಂಶುಪಾಲನಾಗಿ ಸುಮಾರು ಮೂವತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಜ್ಯೋತಿ ಸಂಜೀವಿನಿ ಸೌಲಭ್ಯದ ಬಗ್ಗೆ ಅವತ್ತಿನಿಂದಲೂ ಹೋರಾಟ ಮಾಡುತ್ತಾ ಬಂದಿದ್ದೇವೆ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಶಿಕ್ಷಣ ಸಚಿವರಾಗಿದ್ದರು ಮತ್ತು ಮಾನ್ಯ ಅಡಗೂರು ಹೆಚ್. ವಿಶ್ವನಾಥ್‌ರವರು ಸದನದಲ್ಲಿ ಇಲ್ಲ. ಅವರು ಕೂಡ ಶಿಕ್ಷಣ ಸಚಿವರಾಗಿದ್ದರು.

(1070) 20.12.2022 5.10 TCH-RN **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):**

ಹೋರಾಟ ಮಾಡುವಾಗ ಜ್ಯೋತಿ ಸಂಜೀವಿನಿಯನ್ನು ಸರ್ಕಾರಿ ನೌಕರರಿಗೆ ಕೊಟ್ಟಿದ್ದೇವೆ, ನಿಮಗೂ ಕೊಡಬೇಕಾಗಿದೆ. ಅದನ್ನು ನ್ಯಾಯಯುತವಾಗಿ ಕೊಡಬೇಕಾಗಿದೆ ಎಂದು ಎಲ್ಲರೂ ಹೇಳಿಕೊಂಡು ಬಂದರು. ಅದು ಇವತ್ತಿಗೂ ಕೂಡ ಆಗುತ್ತಿಲ್ಲ. ಎಲ್ಲರೂ ಕೂಡ ಒಪ್ಪುತ್ತಾರೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೂ ಕೂಡ ಜ್ಯೋತಿ ಸಂಜೀವಿನಿ ಕೊಡಬೇಕು. ಅದು ನ್ಯಾಯಯುತವಾಗಿದೆ ಎಂಬುದರ ಬಗ್ಗೆ ಉದಾಹರಣೆಯನ್ನು ಕೊಟ್ಟಿದ್ದಿರಿ. ಅವರಿಗೆ ಯಾರಿಗಾದರೂ ಹಾರ್ಟ್ ಪ್ರಾಬ್ಲಮ್, ಕಿಡ್ನಿ ಪ್ರಾಬ್ಲಮ್ ಮತ್ತು ಕ್ಯಾನ್ಸರ್‌ನಂತಹ ರೋಗ ಏನಾದರೂ ಬಂದರೆ ಅವರು ಏನು ಮಾಡಬೇಕು? ಅವರು ಸಾಲ ಮಾಡಿ ಮಕ್ಕಳಿಗೆ ಟ್ರೀಟ್‌ಮೆಂಟ್ ಕೊಡಿಸಬೇಕು. ಹೆಂತಿಗೆ ಏನಾದರೂ ಆದಲ್ಲಿ ಸಾಲ ಮಾಡಿ ಟ್ರೀಟ್‌ಮೆಂಟ್ ಕೊಡಿಸಬೇಕು. ಆ ಸಾಲವನ್ನು ಅವರು ತೀರಿಸುವುದಕ್ಕೆ ಆಗುವುದಿಲ್ಲ. ಶಿಕ್ಷಕರ ಪರಿಸ್ಥಿತಿ ಯಾವ ರೀತಿ ಇದೆಯೆಂದರೆ, ಪಗಾರ ಬಂದು 20ನೇ ತಾರೀಖಿಗೆ ಬ್ಯಾಂಕ್ ಬ್ಯಾಲೆನ್ಸ್ 'Nil' ಆಗಿರುತ್ತದೆ. ಅವರ ಅಕೌಂಟ್‌ನಲ್ಲಿ ಹಣವೇ ಇರುವುದಿಲ್ಲ. ಹೆಂಡತಿ-ಮಕ್ಕಳು ಮತ್ತು ತಂದೆ-ತಾಯಿಗೆ ಏನಾದರೂ ಆದಲ್ಲಿ ಅವರು ಏನು ಮಾಡಬೇಕು? ಇದರ ಬಗ್ಗೆ ಎಲ್ಲಾ ಶಿಕ್ಷಣ ಸಚಿವರು ಅನುಕಂಪದಲ್ಲಿ ಮಾಡಬೇಕೆಂದು ಹೇಳಿದ್ದಾರೆ. ಆದರೆ ಒಬ್ಬರೂ ಕೂಡ ಗಟ್ಟಿ ಮನಸ್ಸು ಮಾಡಿ ಮಾಡುತ್ತಿಲ್ಲ. ಹಾಗಾಗಿ, ಜ್ಯೋತಿ ಸಂಜೀವಿನಿಯನ್ನು ಸರ್ಕಾರಿ ನೌಕರರಿಗೆ ಯಾವ ರೀತಿ ಕೊಟ್ಟಿದ್ದೀರಿ, ಅದೇ ರೀತಿ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೂ ಕೊಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರಲ್ಲಿ ನನ್ನ ವಿನಂತಿ ಏನೆಂದರೆ ಈ ಸದನದಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಯವರು ಇದ್ದಾಗ ಪ್ರಸ್ತಾಪ ಮಾಡಿದ್ದರೆ ಇದಕ್ಕೆ ಏನಾದರೂ ಉತ್ತರ ಸಿಗುತ್ತಿತ್ತು. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಬಿ.ಸಿ.ನಾಗೇಶ್ ರವರು ಇದ್ದಾರೆ. ಅವರು ಏನು ಮಾಡಬೇಕು?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನೀವು ಇದನ್ನು ಮಾಡಬೇಕು ಎಂದು ಹೇಳಲಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇದೇ ವಿಷಯ ಇನ್ನೊಮ್ಮೆ ಈ ವಿಷಯ ಪ್ರಸ್ತಾಪ ಆಗಬೇಕು, ಇಲ್ಲದಿದ್ದರೆ ಇದು ಅಂತ್ಯ ಕಾಣುವುದಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ನೀವು ಏನು ಹೇಳುತ್ತೀರೋ ಹೇಳಿ. ಮಾನ್ಯ ಮರಿತಿಬ್ಬೇಗೌಡ ರವರು ಏನು ಹೇಳಬೇಕೋ ಹೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡ ರವರು ನಮ್ಮ ಪರವಾಗಿಯೇ ಇದ್ದಾರೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಮಾನ್ಯ ಮರಿತಿಬ್ಬೇಗೌಡ ರವರು ಅದನ್ನೇ ಹೇಳಿದ್ದಾರೆ. ಈಗ ತಾವು ಕೂಡ ಅದನ್ನೇ ಹೇಳುತ್ತಿದ್ದೀರಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗ ultimate decision ಕೊಡುವವರು ಯಾರು? ಇನ್ನೊಮ್ಮೆ ವಿಷಯ ಪ್ರಸ್ತಾಪ ಆಗಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಎಸ್.ವ್ಹಿ.ಸಂಕನೂರರವರೇ, ತಾವು ಆಡಳಿತ ಪಕ್ಷದಲ್ಲೇ ಇದ್ದೀರಿ. ನಾಳೆ ದಿವಸ ನೀವೇ ಏನಾದರೂ ಶಿಕ್ಷಣ ಸಚಿವರಾದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಕಡೆ ಕೈ ತೋರಿಸುತ್ತೀರಿ. ಅದನ್ನು ನಾನು ನೇರವಾಗಿ ಹೇಳಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ಉತ್ತರಿಸಲಿ ಎಂದು ಹೇಳಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ನೌಕರರ ಬದುಕಿಗೆ ಸಂಬಂಧಿಸಿದಂತೆ ಬಹಳ ಗಂಭೀರವಾದ ವಿಷಯ. ಸರ್ಕಾರ 2006ರ ನಂತರ ಕೆಲಸಕ್ಕೆ ಸೇರಿದವರಿಗೆ ಈ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬಂತು. ಆದರೆ ನಮ್ಮ ರಾಜ್ಯದಲ್ಲಿ ಇದನ್ನು ಜಾರಿಗೆ ಕೊಟ್ಟಿದ್ದು ಯಾವಾಗ? 2010ರಲ್ಲಿ ಈ ಕಾಯ್ದೆಯನ್ನು ಒಪ್ಪಿಕೊಂಡಿದ್ದು. 2010ರಲ್ಲಿ ಜಾರಿಗೆ ತಂದಂತಹ ಕಾಯ್ದೆಯನ್ನು retrospective effect ಆಗಿ ಕೊಡುವುದಕ್ಕೆ

ಬರುತ್ತದೆಯೇ ಎನ್ನುವುದೇ ಬಹಳ ದೊಡ್ಡ ಪ್ರಶ್ನೆ. 2006ರಲ್ಲಿ ಇದನ್ನು ಜಾರಿಗೆ ತಂದರು. ನಾಲ್ಕು ವರ್ಷಗಳ ನಂತರ ನೀವು ಹಿಂದಿನವರಿಗೆಲ್ಲಾ ಅನ್ವಯ ಮಾಡಿದ ಕೂಡಲೇ ಈ ಸಮಸ್ಯೆ ಬಹಳ ಅಗಾಧವಾಗಿ ಬೆಳೆದುಕೊಂಡಿತು. ಪ್ರತಿಯೊಬ್ಬ ವ್ಯಕ್ತಿಯು ಕೂಡ ತನ್ನ ಅಂತ್ಯ ಕಾಲದಲ್ಲಿ ಗೌರವಾನ್ವಿತ ಸಾವನ್ನು ಮತ್ತು ಗೌರವಾನ್ವಿತ ಬದುಕನ್ನು ಕಾಣತಕ್ಕಂಥ ಹಕ್ಕು ಈ ನಾಗರಿಕ ಸಮಾಜದಲ್ಲಿದೆ. ಆ ಕಾರಣಕ್ಕೋಸ್ಕರವೇ ಸರ್ಕಾರಗಳು ಸಾಮಾಜಿಕ ಬದ್ಧತೆ ಹಿನ್ನೆಲೆಯಲ್ಲಿ Old Age Pension, Widow Pension ಮತ್ತು ಅಂಗವಿಕಲರ ಪೆನ್ಷನ್ ಇತ್ಯಾದಿ ಎಲ್ಲವನ್ನು ತಂದಿದ್ದೇವೆ. ಆದರೆ ಸರ್ಕಾರ ಉದ್ದೇಶವನ್ನು ಈಡೇರಿಸುವುದಕ್ಕೋಸ್ಕರ ಸರ್ಕಾರದ ಅಂಗಗಳಾಗಿ ಮತ್ತು ಉಪಕರಣಗಳಾಗಿ ಕೆಲಸ ಮಾಡಿದಂತಹ ಈ ನೌಕರರಿಗೆ pension ಇಲ್ಲದಂತೆ ಮಾಡುವುದು ಅತ್ಯಂತ ಅಮಾನವೀಯ. OPS ನವರು ಬೇರೆ, NPS ನವರು ಬೇರೆ ಎಂದು ಈ ನೌಕರ ವರ್ಗ ಇಬ್ಭಾಗ ಆಗಿದೆ. ಇವತ್ತಿನ ದಿವಸ ಒಂದು ಲಕ್ಷಕ್ಕಿಂತ ಹೆಚ್ಚು ಸರ್ಕಾರಿ ನೌಕರರು ನನಗೆ NPS ಬೇಡ, OPS ಕೊಡಿ ಎಂದು ಹೋರಾಟವನ್ನು ಮಾಡುತ್ತಿದ್ದಾರೆ. ಶೇ.10 ಮತ್ತು ಶೇ.14 ಒಟ್ಟು ಶೇ.24ರಷ್ಟು ಹಣ ಎಲ್ಲಿ ವಿನಿಯೋಗ ಆಗುತ್ತಿದೆ. ಇದು ನೌಕರರ ಹಣ. ಆ ನೌಕರರಿಂದ deduct ಮಾಡಿದಂತಹ ಹಣ ಯಾವ ಕಂಪನಿಯಲ್ಲಿ ವಿನಿಯೋಗ ಆಗುತ್ತಿದೆ, ಅದರ ಮಾರುಕಟ್ಟೆ ಸ್ಥಿತಿಗತಿಗಳೇನು? ಅದನ್ನು ಶೇರು ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡುತ್ತಾರೆ. ಉಕ್ರೇನ್ ಮತ್ತು ರಷ್ಯಾದಲ್ಲಿ ಯುದ್ಧವಾದರೆ ಈ ನೌಕರರ ಬಂಡವಾಳದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಪ್ರಪಂಚದಲ್ಲಿ ಯಾವುದೋ ಮೂಲೆಯಲ್ಲಿ ಆಗುವಂತಹ ಘಟನೆ ತನ್ನ ಬದುಕಿನೊಳಗೆ ಈ ಶೇರು ಮಾರ್ಕೇಟ್ ತಲ್ಲಣಗೊಂಡು ಈ ಶೇರು ಮಾರ್ಕೆಟ್ ವ್ಯತ್ಯಾಸವಾಗುತ್ತದೆ. ನೌಕರರಿಗೆ ಖಾತರಿಯಾದಂತಹ ನಿವೃತ್ತಿ ಜೀವನ ಇಲ್ಲ. ಸುಪ್ರೀಂ ಕೋರ್ಟ್ 'ಪೆನ್ಷನ್‌ನ್ನು ಸರ್ಕಾರ ಕೊಡತಕ್ಕಂಥದ್ದಲ್ಲ, ಇದು Deferred Wage. ಪೆನ್ಷನ್ ಎನ್ನುವುದು ಮುಂದೂಡಲ್ಪಟ್ಟಂಥ ವೇತನ' ಎಂದು ಹೇಳಿದೆ. ಅದನ್ನು ಯಾವುದೋ ಮರ್ಜಿಯಿಂದ ಕೊಡುವುದಲ್ಲ. ಆ ರೀತಿಯ ಮುಂದೂಡಲ್ಪಟ್ಟ ವೇತನವನ್ನು ಇವತ್ತಿನ ದಿವಸ ನೌಕರರು ಕೇಳುತ್ತಿದ್ದಾರೆ. 2010ರ ನಂತರ ತಂದಂತಹ ಕಾನೂನನ್ನು ನಾಲ್ಕು ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗಿ ಮಾಡಿದ್ದಾರೆ. ನಾವು ಯಾವುದಾದರು benefit ನ್ನು ಆ ರೀತಿ ಕೊಟ್ಟಿದ್ದೇವೆಯೇ? ಬಹಳಷ್ಟು ಜನ

ಐ.ಎ.ಎಸ್.,ಅಧಿಕಾರಿಗಳಲ್ಲಿ ಕೆಲವರು NPS ಮತ್ತೆ ಕೆಲವರು OPS. ಹೊಸದಾಗಿ ಕೆಲಸಕ್ಕೆ ಸೇರಿರುವ ಅಧಿಕಾರಿ ಮತ್ತು ನೌಕರರು ಎನ್‌ಪಿಎಸ್. ಆದರೆ 2018ರಲ್ಲಿ ಬಂದಿರುವ ನನಗೆ OPS ಇದೆ.

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೇ, ತಾವು ಮೊದಲು ಕೂಡ ಓಪಿಎಸ್ ಇದ್ದರಿ ಅಲ್ಲವೇ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಮೊದಲು OPS ಇದ್ದೆನು. ನನಗೆ ಆಯಿತು. ನನ್ನ ಪಕ್ಕದಲ್ಲಿರುವ ಶ್ರೀ ಶಶೀಲ್ ಜಿ.ನಮೋಷಿಯವರು ಕೂಡ ಇದ್ದಾರೆ.

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೇ, ಅವರು ಕೂಡ ಮೊದಲು ಇದ್ದರು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈಗ ಎಂ.ಎಲ್.ಸಿ.ಯಾಗುವುದಕ್ಕಿಂತ ಮುಂಚೆ ಅವರು ಇದ್ದರು. ಹೊಸದಾಗಿ ಎಂ.ಎಲ್.ಸಿ.ಯಾಗಿ ಆಯ್ಕೆಯಾಗಿ ಬಂದಿರುವ ಶ್ರೀ ಡಿ.ಎಸ್.ಅರುಣ್, ಶ್ರೀ ಚಿದಾನಂದ್ ಎಂ.ಗೌಡ ಮತ್ತು ಶ್ರೀ ಶಾಂತರಾಮ್ ಬುಡ್ನ ಸಿದ್ದಿ ಹಾಗೂ ಡಾ.ವೈ.ಎ.ನಾರಾಯಣಸ್ವಾಮಿ ಇವರೆಲ್ಲಾ 2018-2020ರಲ್ಲಿ ಬಂದಿದ್ದಾರೆ. ಇವರಿಗೆಲ್ಲಾ OPS. ಏಕೆಂದರೆ ನಾವು ಶಾಸಕರು ಅಲ್ಲವೇ? ನಾವು ಮತ್ತು ನನ್ನ ಕುಟುಂಬ ಚೆನ್ನಾಗಿ ಇರಬೇಕು. ನನ್ನ ನಂತರ ನನ್ನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ರಕ್ಷಣೆ ಸಿಗಬೇಕು. ಏಕೆಂದರೆ ನಾನು ಜನಪ್ರತಿನಿಧಿ. ಅವರ ಪ್ರತಿನಿಧಿಯಾಗಿ ನನಗೆ ಲಾಭ ಬೇಕು. ನನ್ನನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿರತಕ್ಕಂಥ ಜನಕ್ಕೆ ಅದು ಸಿಗಬಾರದು ಎಂದರೆ ಶಾಸಕರ ಆತ್ಮ ಸಾಕ್ಷಿಗೆ ಏನು ಉತ್ತರ ಕೊಡಬೇಕು? ನನ್ನನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟವರಿಗೆ ಇಲ್ಲದಿರುವ ಸೌಲಭ್ಯ ನನಗೆ ಸಿಗುತ್ತಿದೆ. ನನಗೆ ಸೌಲಭ್ಯ ಬಹಳ ಚೆನ್ನಾಗಿದೆ ಎನ್ನುವುದಾದರೆ ಸನ್ಮಾನ್ಯ ಬಿ.ಸಿ.ನಾಗೇಶ್ ರವರೆ, NPS ನ್ನು ಮಾನ್ಯ ಶಾಸಕರುಗಳಿಗೆ ಏಕೆ ಅನ್ವಯ ಮಾಡಬಾರದು. ಹಾಗಾದರೆ ಶಾಸಕರುಗಳಿಗೂ NPS ತೆಗೆದುಕೊಂಡು ಬನ್ನಿ. ಇತ್ತೀಚೆಗೆ ಗೆದ್ದು ಬಂದಂತಹ ನನಗೆ ಮತ್ತು ಮಾನ್ಯ ಬಿ.ಕೆ.ಹರಿಪ್ರಸಾದ್ ರವರಿಗೆ ಎರಡು ಪೆನ್ಷನ್ ಸಿಗುತ್ತದೆ. ನಮಗೆ ರಾಜ್ಯ ಸಭಾ ಪೆನ್ಷನ್ ಮತ್ತು ಅಸೆಂಬ್ಲಿ ಪೆನ್ಷನ್ ಕೂಡ ಸಿಗುತ್ತದೆ.

**ಡಾ.ವೈ.ಎ.ನಾರಾಯಣಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅಸೆಂಬ್ಲಿಯದ್ದು ಸಿಗುವುದಿಲ್ಲ. ಒಂದೇ ಪೆನ್ಷನ್ ಸಿಗುವುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅವರು ಎಲ್ಲೋ ಇದ್ದಾರೆ. ಅವರಿಗೆ ಗೊತ್ತಾದರೆ ಪಾರ್ಲಿಮೆಂಟ್ ಹೋಗುತ್ತಿದ್ದರು. ಅವರು ಇಲ್ಲೇ ಇರುವುದರಿಂದ ಗೊತ್ತಾಗಿಲ್ಲ. I am drawing both pensions. ಅವರಿಗೆ ಕಾನೂನಿನ ಐಡಿಯಾ ಇಲ್ಲ. ಬೇಕಾದರೆ ಡಾ.ತೇಜಸ್ವಿನಿಗೌಡ ರವರನ್ನು ಕೇಳಲಿ. ಎರಡರಲ್ಲಿ ಒಂದು ಪೆನ್ಷನ್ ಸಿಗುತ್ತದೆ. ಅಂದರೆ ಸೆಂಟ್ರಲ್‌ದು ಒಂದು ಪೆನ್ಷನ್ ಮತ್ತು ಸ್ಟೇಟ್‌ದು ಒಂದು ಪೆನ್ಷನ್ ಸಿಗುತ್ತದೆ. ವಿಧಾನ ಮಂಡಲಕ್ಕೆ ಒಂದು ಪೆನ್ಷನ್ ಮತ್ತು ರಾಜ್ಯ ಸಭೆಗೆ ಒಂದು ಪೆನ್ಷನ್ ಬರುತ್ತದೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಎರಡು ಕಡೆ ಪೆನ್ಷನ್ ಬರುತ್ತಿದ್ದರೆ ಒಂದು ಕಡೆ forgo ಮಾಡಿ ಒಂದೇ ಕಡೆ ಪೆನ್ಷನ್ ತೆಗೆದುಕೊಳ್ಳಬಹುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಖಂಡಿತ.

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಅವರಿಗೆ ಪೆನ್ಷನ್ ಬಗ್ಗೆ ಯೋಚನೆ ಇಲ್ಲ. ಸಮಸ್ಯೆ ಏನೆಂದರೆ, ಎಂ.ಎಲ್.ಎ., ಆಗಲಿ ಅಥವಾ ಎಂ.ಎಲ್.ಸಿ.,ಯಾಗಲಿ ಎರಡೂ ಹೌಸ್‌ಗೆ ಒಂದೇ ಪೆನ್ಷನ್ ಬರುತ್ತದೆ. ಆದರೆ ಪಾರ್ಲಿಮೆಂಟ್ ಹೋದರೆ ಇನ್ನೊಂದು ಪೆನ್ಷನ್ ಸಿಗಬಹುದು. ಅವರು ಆಗಲೇ ಎಂ.ಎಲ್.ಎ., ಮತ್ತು ಎಂ.ಎಲ್.ಸಿ., ಎರಡಕ್ಕೂ ಸಿಗುತ್ತದೆ ಎಂದಿದ್ದಕ್ಕೆ ಹೇಳಿದೆನು ಅಷ್ಟೇ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ವಿಧಾನಮಂಡಲದಲ್ಲಿ ಒಂದು ಪೆನ್ಷನ್ ಮತ್ತು ಪಾರ್ಲಿಮೆಂಟ್‌ನಲ್ಲಿ ಒಂದು ಪೆನ್ಷನ್ ಸಿಗುತ್ತದೆ. ನಾನು ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯನಾಗಿದ್ದೇನೆ. ಅವೆರಡರಲ್ಲಿ ಒಂದು ಪೆನ್ಷನ್ ಸಿಗುತ್ತದೆ. ವಿಧಾನಸಭಾ ಸದಸ್ಯನಾಗಿದ್ದೆನು ಮತ್ತು ವಿಧಾನಪರಿಷತ್ತಿನ ಸದಸ್ಯನಾಗಿದ್ದೇನೆ. ಇವೆರಡರಲ್ಲಿ ಒಂದು ಪೆನ್ಷನ್ ಬರುತ್ತದೆ. ಅಂದರೆ ನನಗೆ ಎರಡು ಪೆನ್ಷನ್ ಬರುತ್ತದೆ. ಇವೆರಡೂ ಕೂಡ "Old Pension Scheme" ಎಂದು ಹೇಳುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್ ರವರು ಸ್ಪಷ್ಟತೆ ಮಾಡಿದ್ದಾರೆ. ಡಾ.ವೈ.ಎ.ನಾರಾಯಣಸ್ವಾಮಿಯವರು ಸಂಸತ್ ಸದಸ್ಯರಾಗಿ ಹೋಗಿಯೇ ಹೋಗುತ್ತಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡ ರವರು ಕೂಡ ಹೋದರೂ ಹೋಗಬಹುದು, ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಬಹಳ ಸಂತೋಷ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾವು ನಮ್ಮ ಬದುಕಿನೊಳಗೆ ಎರಡು ಪೆನ್ಷನ್ ತೆಗೆದುಕೊಂಡು safety ಯಲ್ಲಿದ್ದೇವೆ. ಆದರೆ, ಅವರು ಅಲ್ಲಿ ಅವರ ಕುಟುಂಬಕ್ಕೋಸ್ಕರ 'ಜ್ಯೋತಿ ಸಂಜೀವಿನಿ' ಕೊಡಿ ಎಂದು ಕೇಳುತ್ತಿದ್ದಾರೆ. ನಮಗೆ ಇಷ್ಟೆಲ್ಲಾ ಸೌಲಭ್ಯಗಳಿದೆ. ಸುಮಾರು ರೂ. 2 ಲಕ್ಷ ಸಂಬಳ ಬರುತ್ತದೆ. ನಮಗೆ Medical Allowance ಇದೆ. ಒಂದು ವೇಳೆ ನಮಗೆ ಆರೋಗ್ಯ ಸಮಸ್ಯೆಯಾದರೆ ಹೆಲಿಕಾಪ್ಟರ್‌ನಲ್ಲಿ ಸಿಂಗಾಪುರಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿ ಕರೆದುಕೊಂಡು ಬರುತ್ತೇವೆ. ಆದರೆ, ಪ್ರಜಾಪ್ರಭುತ್ವದಲ್ಲಿ ನನಗೆ ಮತ ಕೊಟ್ಟಂತಹ ಮತದಾರ ಯಾವ ಸ್ಥಿತಿಯಲ್ಲಿದ್ದಾನೆಂದು ನೋಡಬೇಕಲ್ಲವೇ? ಆ ಹಿನ್ನೆಲೆಯಲ್ಲಿ NPS ರದ್ದಾಗಬೇಕು. ಉದಾಹರಣೆಗೆ ಹೇಳುವುದಾದರೆ, ರಸ್ತೆಯಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ಕೂಲಿ, ಹಮಾಲಿ ಹಾಗೂ ಮತ್ತೊಬ್ಬ ಯಾರಿಗೊ ನಾವು ಸೆಕ್ಯೂರಿಟಿ ಕೊಟ್ಟಿದ್ದೇವೆ. ನೌಕರನಿಗೆ ನಾವೇಕೆ ಸೆಕ್ಯೂರಿಟಿಯನ್ನು ಕೊಡಬಾರದು. ಆ ಕಾರಣಕ್ಕೋಸ್ಕರ ಇರತಕ್ಕಂಥ ಬೇಡಿಕೆಯಾದ NPS ನ್ನು ರದ್ದುಪಡಿಸಿದರೆ ಅವರಿಗೆಲ್ಲಾ ಬಹಳ ಅನುಕೂಲವಾಗುತ್ತದೆ. ಈಗ ಎನ್‌ಪಿಎಸ್‌ನಲ್ಲಿ DCRG (Death-Cum-Retirement Gratuity) ಕೊಡುತ್ತಿದ್ದೇವೆ. ಎನ್.ಪಿ.ಎಸ್., ಈಗಾಗಲೇ alter ಆಗಿದೆ. ಸರ್ಕಾರ ಅವರಿಗೆ ಈಗಾಗಲೇ DCRG ಕೊಡುತ್ತಿದೆ. ಕೆಲವು ಎನ್.ಪಿ.ಎಸ್., ನೌಕರರು ಸತ್ತರೆ ಸುಮಾರು ಲಕ್ಷ ಪರಿಹಾರ ಸಿಗುತ್ತಿದೆ. ಆದರೆ ಆತ ನಿವೃತ್ತಿಯಾದರೆ ಏನೂ ಸಿಗುವುದಿಲ್ಲ. ಎನ್.ಪಿ.ಎಸ್.ನೌಕರನಿಗೆ ಏನಾದರೂ ಲಾಭ ಸಿಗಬೇಕಾದರೆ ಅವನು ಸತ್ತರೆ ಮಾತ್ರ. 'ಸ್ವರ್ಗ ಕಾಣಬೇಕಾದರೆ ಸಾಯಬೇಕು' ಎಂದು ಹೇಗೆ ಹೇಳುತ್ತಾರೋ ಅದೇ ರೀತಿ ನಿವೃತ್ತಿ ವೇತನ ಅಥವಾ

benefit ಬೇಕೆಂದರೆ ಸಾಯಬೇಕು ಎನ್ನತಕ್ಕಂಥ ರೀತಿಯಲ್ಲಿ ಈ ಮುಂಚೆ DCRG 2018ರ ನಂತರ ಕೊಡುತ್ತಿದ್ದೀರಿ. ಇತ್ತೀಚೆಗೆ ಅದನ್ನು 2006 ರಿಂದ ಅನ್ವಯವಾಗುವಂತೆ ಕೊಡುತ್ತಿದ್ದೀರಿ. ಈಗಾಗಲೇ New Pension Scheme ಅರ್ಧ alteration ಆಗಿಹೋಗಿದೆ. ಇನ್ನು ಸ್ವಲ್ಪ ಭಾಗ ಮಾತ್ರ ಆಗಬೇಕು. ನೀವು ಸರ್ಕಾರವನ್ನು ಕೂರಿಸಿ ನಮ್ಮನ್ನೆಲ್ಲಾ ಕರೆಯಿರಿ. ಅಧಿಕಾರಿಗಳು ಹೇಳುವ ರೀತಿ ಬಹಳ ದೊಡ್ಡ ಹೊರೆಯಾಗುವುದಿಲ್ಲವೆಂದು ನಮ್ಮ ನಮ್ಮ ತಿಳುವಳಿಕೆಗೆ ಅನುಗುಣವಾಗಿ ಸರ್ಕಾರವನ್ನು convince ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಸರ್ಕಾರದಲ್ಲಿ ಈಗಾಗಲೇ ಎಷ್ಟು ಹಣ ಇದೆ? ಅದನ್ನು ಹೇಗೆ ಬಳಕೆ ಮಾಡಿಕೊಳ್ಳಬಹುದು. ನಾವು ಕಟ್ಟುವಂತಹ ಹಣ ಹೇಗಿದೆ. ಮತ್ತೆ ಪ್ರತಿ ವರ್ಷ ಇನ್ನೆಷ್ಟು ಜನ ನಿವೃತ್ತಿಯಾಗುತ್ತಾರೆ?

**(ಮುಂದು)**

(1071)20.12.2022/5.20/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಪ್ರತಿ ವರ್ಷ ನಿವೃತ್ತಿಯಾಗುವವರೆಷ್ಟು ಮತ್ತು ನಮ್ಮ ಹತ್ತಿರ ಹಣ ಇರುವುದೆಷ್ಟು ಇಂತಹವನ್ನೆಲ್ಲ ಲೆಕ್ಕಾಚಾರ ಹಾಕಿಕೊಂಡು ಓ.ಪಿ.ಎಸ್., ಕೊಡುವುದಕ್ಕೆ ಸಾಧ್ಯವಿದೆ. ಹಾಗಾಗಿ ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಕೊಡಬೇಕು. "ದೋಬಿ ಕಾ ಗಧಾ ನ ಘರ್ ಕಾ, ನ ಘಾಟ್ ಕಾ" ಎಂದು ಒಂದು ಗಾದೆ ಇದೆ. ಅನುದಾನಿತ ಶಾಲೆಯವರಿಗೆ ಏನೂ ಇಲ್ಲ. ಅನುದಾನಿತ ಶಾಲೆಯವರಿಗೆ ಸಂಬಳ ಕೊಡುವುದು ಸರ್ಕಾರ. ಸ್ವಲ್ಪ ಪೆನ್ಷನ್ ಹಣವನ್ನೂ ಸೇರಿಸಿ ಕೊಡುವುದಕ್ಕೆ ಏನು ತೊಂದರೆಯಾಗುತ್ತದೆ? ಸರ್ಕಾರ ಸಂಬಳವನ್ನು ಕೊಡುತ್ತದೆ. ಅನುದಾನವನ್ನು ತಾವು ಕೊಡುತ್ತೀರಿ. ಅವತ್ತು ಮ್ಯಾನೇಜ್‌ಮೆಂಟ್‌ಗೆ ಫ್ರೀ ಬಿಟ್ಟುಬಿಟ್ಟಿರಿ. ಇಷ್ಟು ಹಣವನ್ನು ಕಟ್ಟಬೇಕೆಂದು ಕಡ್ಡಾಯವಾದ ನಿಯಮ ತಂದಿದ್ದರೆ ಅದನ್ನು private management ಕಟ್ಟುತ್ತಿದ್ದವು. ಅದನ್ನು optional ಮಾಡಿಬಿಟ್ಟಿರಿ. ಈಗ ಯಾವ private management ಕೂಡ ಕಟ್ಟುವುದಕ್ಕೆ ತಯಾರಿಲ್ಲ. ಅವರು ಈಗ ಎನ್.ಪಿ.ಎಸ್ ಕೇಳುತ್ತಿದ್ದಾರೆ. ಓ.ಪಿ.ಎಸ್. ತಂದಾಗ ಓ.ಪಿ.ಎಸ್. ಕೊಡುವಿರಂತೆ

ಅಲ್ಲಿಯವರೆಗೂ ನಮಗೆ ಎನ್.ಪಿ.ಎಸ್. ಆದರೂ ಕೊಡಿ ಎಂದು ಕೇಳುತ್ತಿದ್ದಾರೆ. ಅವರು ಮುಷ್ಕರ ಆರಂಭಿಸಿ ಇಂದಿಗೆ 76 ದಿನಗಳಾಯಿತು. 76 ದಿನಗಳಂದ ಬೆಂಗಳೂರಿನಲ್ಲಿ ಇಷ್ಟು ಚಳ ಮಳೆ ಗಾಳಯಾಗುತ್ತಿದೆ ಅಲ್ಲಿ ಕುಳತುಕೊಂಡು ಹಗಲು-ರಾತ್ರಿ ನರಳುತ್ತಿರುವವರನ್ನು ನೋಡಿದಾಗ ನಾವು ಸಹಜವಾದ ಮಾನವೀಯತೆ ಮತ್ತು ಕಳಕಳಯನ್ನು ವ್ಯಕ್ತ ಮಾಡಬೇಕಲ್ಲವೇ. ಆ ವ್ಯಕ್ತಿಗಳನ್ನು ಕಾಪಾಡುವುದು ಅಥವಾ ಅವರನ್ನು ಮುಷ್ಕರದಿಂದ ಎಬ್ಬಿಸುವ ಕೆಲಸ ಮಾಡಬೇಕಲ್ಲವೇ. ಮಾನ್ಯ ಶಿಕ್ಷಣ ಸಚಿವರು ಎರಡು ಸುತ್ತು ಮಾತುಕತೆಯಾಡಿದ್ದಾರೆ. ಆರ್ಥಿಕ ಇಲಾಖೆಯ ಬಹಳ ದೊಡ್ಡ impact ಬೇರೆ ಬೇರೆ ಇಲಾಖೆಗಳ ಮೇಲೆ ಬರುತ್ತದೆಂಬ ಸಾಧ್ಯತೆ ಇರುವುದರಿಂದಾಗಿ ಶಿಕ್ಷಣ ಸಚಿವರಿಂದ ಮಾಹಿತಿ ತೆಗೆದುಕೊಂಡು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಿ. ಸರ್ಕಾರ ಕೂಡಲೇ ಒಂದು ನಿರ್ಧಾರಕ್ಕೆ ಬರಬೇಕು. ಇದನ್ನು ಬಹಳ ಎಳೆದಾಡಿಕೊಂಡು ಹೋಗಬಾರದು. ಎಲ್ಲಾ ನೌಕರರಿಗೂ ಓ.ಪಿ.ಎಸ್. ಅನ್ನು ಕೊಡಬೇಕು. 'ಜ್ಯೋತಿ ಸಂಜೀವಿನಿ' ಬಗ್ಗೆ ಬಹಳ ವಿವರವಾಗಿ ಮಾತನಾಡಿದ್ದಾರೆ. ಮನುಷ್ಯನ ಆರೋಗ್ಯವನ್ನು ಕಾಪಾಡುವಂತಹ ಹೊಣೆಗಾರಿಕೆ ಸರ್ಕಾರದ್ದಿದೆ. ಆ ಕಾರಣಕ್ಕಾಗಿಯೇ ನಾವು ಬೇರೆ-ಬೇರೆ ಸ್ಕೀಂಗಳಾದ ಆಯುಷ್ಮಾನ್ ಇತ್ಯಾದಿ ಸ್ಕೀಂಗಳನ್ನು ತೆಗೆದುಕೊಂಡು ಬಂದಿದ್ದೇವೆ. ಇವರಿಗೂ ಅನ್ವಯವಾಗುವಂತಹ ಯಾವುದಾದರೂ ಸ್ಕೀಂ ಅನ್ನು ತೆಗೆದುಕೊಂಡು ಬನ್ನಿ. ಅವರು ಸರ್ಕಾರದ ಸೇವೆಗೋಸ್ಕರ ಇರುವಂತಹವರು. ಆ ಕಾರಣಕ್ಕೋಸ್ಕರ ಇದು ಬಹಳ ವಿವರವಾಗಿ ಮಾತನಾಡುವಂತಹ ವಿಷಯವಾಗಿದ್ದರೂ ಸಹ ಈಗಾಗಲೇ ನಮ್ಮ ಇಬ್ಬರು ಗೆಳೆಯರು ಮಾತನಾಡಿದ್ದಾರೆ. ಕೂಡಲೇ ಎನ್.ಪಿ.ಎಸ್. ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ ತರಬೇಕು; ಅಲ್ಲಿ ನಡೆಯುತ್ತಿರುವಂತಹ ಮುಷ್ಕರಕ್ಕೆ ಒಂದು ಕೊನೆ ಹಾಡಬೇಕು. ಬೆಂಗಳೂರಿನಲ್ಲಿ ಸುಮಾರು ಎರಡೂವರೆ ಲಕ್ಷಕ್ಕಿಂತ ಹೆಚ್ಚು ಎನ್.ಪಿ.ಎಸ್. ಗೆ ಒಳಗಾದ ನೌಕರರು ಓ.ಪಿ.ಎಸ್. ಗೆ ಹೋರಾಟ ಮಾಡುತ್ತಿದ್ದಾರೆ. ಇದರಿಂದ ಸರ್ಕಾರದ ಯಂತ್ರ ಕುಂಠಿತವಾಗುತ್ತದೆ. ಕೆಲಸಕಾರ್ಯಗಳು ನಡೆಯುವುದಿಲ್ಲ. ಅವರು ಬಂದು ಸತ್ಯಾಗ್ರಹ ಮಾಡಿದರೆ ಸಾರ್ವಜನಿಕರಿಗೆ ಸಿಗಬೇಕಾದ ಸೇವೆಗಳಲ್ಲಿ ಕೊರತೆಯಾಗುತ್ತದೆ. ಆ ಕಾರಣಕ್ಕೋಸ್ಕರ ಸರ್ಕಾರ ಕೂಡಲೇ ದೊಡ್ಡ ಮನಸ್ಸು ಮಾಡಿ ಇದಕ್ಕೊಂದು ಇತ್ಯರ್ಥ ಸೂತ್ರವನ್ನು ಕಂಡುಕೊಳ್ಳಬೇಕು, ಅದನ್ನು ಜಾರಿಗೊಳಸಬೇಕು ಎನ್ನುವ ಆಗ್ರಹ ಮಾಡುತ್ತಾ, ನಮ್ಮ ಇಬ್ಬರು ಹಿರಿಯ ಗೆಳೆಯರಾದ ಮಾನ್ಯ ಸಂಕನೂರು ಮತ್ತು

ಮಾನ್ಯ ಮರಿತಿಬ್ಬೇಗೌಡರು ಒಳ್ಳೆಯ ವಿಷಯವನ್ನು ತಂದಿದ್ದಾರೆ. ಅದನ್ನು ಸಂಪೂರ್ಣವಾಗಿ ಬೆಂಬಲಿಸಿ ಸರ್ಕಾರ ತೀರ್ಮಾನವನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡಿ ಅವಕಾಶ ಕೊಟ್ಟಿದ್ದಕ್ಕಾಗಿ ಕೊನೆಯ ದಿನದ ಸಭಾಪತಿಗಳಾದ ತಮಗೆ ನಮಸ್ಕಾರ ಮಾಡಿ;

**ಸಭಾಪತಿಯವರು:-** ಇನ್ನೂ ಒಂದು ದಿವಸ ಬಾಕಿ ಇದೆ.

**ಶ್ರೀ ಆಯನೂರು ಮಂಜುನಾಥ್:-** ತಾವು ನಾಳೆ ಒಂದು ದಿನ ಮಧ್ಯಾಹ್ನದ ತನಕ ಇರುತ್ತೀರಿ. ಇವತ್ತಿನತನಕ ತಾವು ನಮಗೆಲ್ಲಾ ಪತಿಗಳಾಗಿದ್ದಿರಿ, ನಾಳೆಯಿಂದ ನಿಮ್ಮ ಮನೆಯವರಿಗಷ್ಟೇ ಪತಿಯಾಗಿರುತ್ತೀರಿ. ಹೋಗಬೇಕಾದರೆ ತಾವು ಒಂದು ಒಳ್ಳೆಯ ನಿರ್ಣಯವನ್ನು ಕೊಟ್ಟು ಹೋಗಿ ಎಂದು ಆಗ್ರಹ ಮಾಡುತ್ತಾ, ಮಾನ್ಯ ಬಸವರಾಜ ಹೊರಟ್ಟಿಯವರು ಇವತ್ತಿನತನಕ ಅವರ ಮನೆಯವರಿಗಷ್ಟೇ ಪತಿಯಾಗಿದ್ದರು, ನಾಳೆಯಿಂದ ನಮಗೆಲ್ಲಾ ಪತಿಯಾಗುತ್ತಾರೆ. ಆ ಕಾರಣಕ್ಕೆ ತಾವು ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿದ್ದೀರಿ, ನಮ್ಮ ಜೊತೆಗೆ ಬಹಳ ಸ್ನೇಹಭಾವದಿಂದ ನಡೆದುಕೊಂಡಿದ್ದೀರಿ. ನಾಳೆ ನಿಮ್ಮನ್ನು ಅಭಿನಂದಿಸುವುದಕ್ಕೆ ಅವಕಾಶ ಸಿಗುವುದೋ ಇಲ್ಲವೋ ಗೊತ್ತಿಲ್ಲ. ನಮ್ಮ ಹಿರಿಯರು front-line ನವರು ಮಾತನಾಡುತ್ತಾರೆ, ನಾವೆಲ್ಲಾ ಸೆಕೆಂಡ್ ಲೈನ್‌ನವರು. ಹಾಗಾಗಿ ತಮಗೆ ಧನ್ಯವಾದ ಮತ್ತು ಕೃತಜ್ಞತೆಯ ಬೀಳ್ಕೊಡುಗೆಯನ್ನು ಮುಂಚಿತವಾಗಿ ಕೊಡುತ್ತಿದ್ದೇನೆ. ತಮ್ಮೆಲ್ಲರಿಗೂ ನಮಸ್ಕಾರಗಳು.

**ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಸನ್ಮಿತ್ರರು ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ದಿನಾಂಕ 01-4-2006ಕ್ಕಿಂತಲೂ ಪೂರ್ವದಲ್ಲಿ ನಮ್ಮ ರಾಜ್ಯದಲ್ಲಿ ಓ.ಪಿ.ಎಸ್., Old Pension Scheme ಜಾರಿಯಲ್ಲಿತ್ತು. ಹಳೆಯ ಪೆನ್ಷನ್ ಸ್ಕೀಂನಲ್ಲಿ ಅದು ಆ ಸರ್ಕಾರ, ಈ ಸರ್ಕಾರ ಎಂದು ನಾನು ಹೇಳುವುದಿಲ್ಲ. It is a continuous process. ಆದರೆ ಎಲ್ಲೋ ಒಂದು ಕಡೆ ಪೆನ್ಷನ್ ಕೊಡುವಂತಹ ಮೊತ್ತ ಬಹಳ ಜಾಸ್ತಿ ಇದೆ, ಇಷ್ಟು ದೊಡ್ಡ ಮೊತ್ತವನ್ನು idle ಆಗಿ ಇಡುತ್ತಿದ್ದೇವೆ. ಅದನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿಲ್ಲ ಎಂದು ಕೇಂದ್ರದಲ್ಲಿ ಅಥವಾ ಬೇರೆ ಬೇರೆ ರಾಜ್ಯಗಳಲ್ಲಿ ಈ ಅಂಶ ಅವರ ಗಮನಕ್ಕೆ ಬಂದ ಮೇಲೆ ನಾವು ಇದಕ್ಕೇನಾದರೂ ಬದಲಾವಣೆ ತರಬೇಕೆಂದು ಹೊಸ ಪೆನ್ಷನ್

ಯೋಜನೆಯನ್ನು ತಂದಿದ್ದಾರೆ. ಷೇರು ಮಾರುಕಟ್ಟೆಯಲ್ಲಿ; ಮೊದಲು ಏನು ಮಾಡುತ್ತಿದ್ದರು ಎಂದರೆ, ಎಲ್.ಐ.ಸಿ. ನಲ್ಲಿಯೋ ಬ್ಯಾಂಕ್‌ನಲ್ಲಿಯೋ ಇಟ್ಟು ಅದರ ಲಾಭವನ್ನು, ಬಡ್ಡಿಯನ್ನು ಪಡೆದು ಅದು ಎಷ್ಟಾದರೂ ಬರಲಿ, ಹಣ ಎಷ್ಟು ಬರುತ್ತದೆ ಎಂಬುದನ್ನು ನೋಡಲಿಲ್ಲ. ಸರ್ಕಾರದ ಬೊಕ್ಕಸದಿಂದ ಓ.ಪಿ.ಎಸ್ ಕೊಡುತ್ತಿತ್ತು. Subsequently, ಸರ್ಕಾರಕ್ಕೆ ಏನನ್ನಿಸಿತೋ ಬಹಳ ದೊಡ್ಡ ಪ್ರಮಾಣದ ಲಾಭವನ್ನು ನಾವು ಬೇರೆ ಬೇರೆ ಷೇರುಗಳಲ್ಲಿ ಹಾಕಿದರೆ ಲಾಭ ಬರುತ್ತದೆಂದು ಲೆಕ್ಕಾಚಾರ ಮಾಡಿಕೊಂಡು ಷೇರುಮಾರುಕಟ್ಟೆಯಲ್ಲಿ invest ಮಾಡುವಂತಹ ಪ್ರಯತ್ನ ಮಾಡಿದರು. ದುರ್ದೈವದ ಸಂಗತಿಯೇನೆಂದರೆ, ಹಿಂದೆ ಯಾವ ಪ್ರಮಾಣದಲ್ಲಿ increasing trend in share market ಇತ್ತು, ಅದು ಇವತ್ತು ಇಲ್ಲ. ಇನ್ನೊಂದು ಕಡೆ the interest given by the banks ಬಹಳ ಜಾಸ್ತಿ ಇತ್ತು. 25 ವರ್ಷದ ಹಿಂದೆ ವಿಚಾರ ಮಾಡಿ ನೋಡಿದರೆ ನಾವು ಬ್ಯಾಂಕಿಗೆ ಶೇ.16ರಷ್ಟು ಬಡ್ಡಿ ಕಟ್ಟುತ್ತಿದ್ದೆವು. ಇವತ್ತು ಶೇ.8ರಷ್ಟು ಬಡ್ಡಿಯಲ್ಲಿಯೇ ಲೋನ್ ಸಿಗುತ್ತದೆ. ಅದು ವ್ಯಾಪಾರಸ್ಥರಿಗೆಲ್ಲರಿಗೂ ಗೊತ್ತಿದೆ. ಈ ಒಂದು ಬದಲಾವಣೆಯಿಂದಲೂ ಕೂಡ ಬರಬೇಕಾದಂತಹ ಲಾಭ ಅದರಲ್ಲಿ ಬರುತ್ತಿಲ್ಲ. ದುರ್ದೈವದ ಸಂಗತಿಯೇನೆಂದರೆ, ಯಾವ ಒಬ್ಬ ನಾಲ್ಕನೇ ದರ್ಜೆಯ ನೌಕರನಿಗೆ ರೂ. 18,000 ದಿಂದ 20,000 ರೂಪಾಯಿ ಪೆನ್ಷನ್ ಬರುತ್ತಿತ್ತು, ಇವತ್ತು ನಿವೃತ್ತರಾದವರಿಗೆ ರೂ. 1200-1500 ಕೂಡ ಪೆನ್ಷನ್ ಬರುತ್ತಿಲ್ಲ. ಇದಕ್ಕೆಲ್ಲಾ ಮೂಲ ಕಾರಣವೇನೆಂದರೆ, ಹೊಸ ಪೆನ್ಷನ್ ನೀತಿ ಮತ್ತು ವಿಶೇಷವಾಗಿ ಎಲ್ಲಾ ಸರ್ಕಾರಿ ನೌಕರರಿಗೆ ಎನ್.ಪಿ.ಎಸ್. introduce ಮಾಡಿದಿರಿ. ದಯವಿಟ್ಟು ಎನ್. ಪಿ.ಎಸ್. ಅನ್ನು ತೆಗೆದು ಹಾಕಿ ಓ.ಪಿ.ಎಸ್. ಕೊಡಿ ಎಂದು ಎಲ್ಲಾ ಕಡೆಯೂ ಬಹಳ ದೊಡ್ಡ ಕೂಗಿದೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯವಾಗಿದೆ. ವಿಶೇಷವಾಗಿ ಇವತ್ತು ಅನುದಾನಿತ ಶಾಲೆಗಳಿಗೆ ದೊಡ್ಡ ಪ್ರಮಾಣದ ಹೊಡೆತ ಬಿದ್ದಿದೆ. ಇದನ್ನು ಬಹುಶಃ ಯಾರೂ ನಿರೀಕ್ಷೆ ಮಾಡಿರಲಿಲ್ಲ. ದಿನಾಂಕ 01.04.2006ರ ನಂತರ Contributory Pension ಎಂದು introduce ಮಾಡಿದರು. ನಾನು ಸರ್ಕಾರಕ್ಕೆ ಒಂದು ಪ್ರಶ್ನೆ ಮಾಡುತ್ತೇನೆ. Subsequent governments have come and gone. ಪ್ರಶ್ನೆ ಅದಲ್ಲ. ಆದರೆ, ಮೊದಲು ಅವರಿಗೆ ಏನು ಪೆನ್ಷನ್ ಸಿಗುತ್ತಿತ್ತು ಅದು ಅವರಿಗೆ ಸಿಗುತ್ತಿದೆಯೇ ಎಂದು ಎಂದಾದರೂ ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ? Employer ಅರ್ಧ, ಶೇ.10ರಷ್ಟು ಅವರು ಮತ್ತು ಶೇ.10ರಷ್ಟು ಇವರು ಎಂದು ಹೇಳಿದರು. ಪ್ರಾರಂಭದಲ್ಲಿ

ಶೇ.10ರಷ್ಟು ಎಂದು ಇತ್ತು. ಅದನ್ನು ಶೇ.14ಕ್ಕೆ ಏರಿಸಿದರು. ನಮ್ಮ ಭಾಗದ ಅತ್ಯಂತ ದೊಡ್ಡ private management ಒಂದರ ಸಂಸ್ಥೆಗೆ ನಾನು ಅಧ್ಯಕ್ಷನಾಗಿದ್ದೆ. ಆದರೆ ಅದು ದೊಡ್ಡ ಸಂಸ್ಥೆಯಾಗಿದ್ದರೂ ಸಹ ಒಬ್ಬರೂ ಒಂದು ರೂಪಾಯಿಯನ್ನು ಕೂಡ ಅದಕ್ಕೆ contribution ಮಾಡಲಿಲ್ಲ. ಹಾಗಿದ್ದಾಗ ಇವರಿಗೆ ಪೆನ್ಷನ್ ಸರಿಯಾಗಿ ಸಿಗುತ್ತಿಲ್ಲ ಎಂದು ಸರ್ಕಾರ ಏತಕ್ಕೆ ಆಲೋಚನೆ ಮಾಡಿಲ್ಲ? ಅವರ ಸ್ಥಿತಿ ಗತಿ ಏನು ಎಂದು review ಮಾಡಲಾಗಿದೆಯೇ? National Human Rights Commission ನವರು ನೀವು review ಮಾಡಿದಿರಾ? ಇಲ್ಲದಿದ್ದರೆ, review ಮಾಡಬೇಕೆಂದು ಸರ್ಕಾರಕ್ಕೆ ಹೇಳುತ್ತಾರೆ. ಮೊದಲು ಏನು ಪೆನ್ಷನ್ ಸಿಗುತ್ತಿತ್ತು ಆ ಪ್ರಮಾಣದ ಪೆನ್ಷನ್ ಅನ್ನು ಇವತ್ತು ಏತಕ್ಕೆ ಕೊಡುತ್ತಿಲ್ಲ? Have you reviewed? ಇದು ನನ್ನ ಪ್ರಶ್ನೆ. Safeguarding the Human Rights of the Employees. ಹೊಸ ಪೆನ್ಷನ್‌ನಿಂದ ಆಗಿಲ್ಲ. ಏತಕ್ಕೆ ಆಗಿಲ್ಲ ಎಲ್ಲಿ ಕೊರತೆಯಾಯಿತು? ಸರ್ಕಾರ ಏತಕ್ಕೆ ಇದರ ಬಗ್ಗೆ ಚಿಂತನೆ ಮಾಡಿಲ್ಲ? ಕೇರಳ, ಆಂಧ್ರಪ್ರದೇಶ, ಹಿಮಾಚಲಪ್ರದೇಶ ಮತ್ತು ಪಂಜಾಬ್ ಈ ರಾಜ್ಯಗಳ ಸರ್ಕಾರಗಳು ಇದರ ಬಗ್ಗೆ review ಮಾಡುವುದಕ್ಕೆ ಪ್ರಾರಂಭ ಮಾಡಿ, ಇದನ್ನು ಬದಲಾವಣೆ ಮಾಡಿದರೆ ಎಷ್ಟು ಹೊರೆಯಾಗುತ್ತದೆಂದು ಕಮಿಟಿಯನ್ನು ರಚನೆ ಮಾಡಿ ಬಹಳ ವಿವರವಾಗಿ homework ಮಾಡುತ್ತಿದ್ದಾರೆ. ನಾವು ಕೂಡ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿದಾಗ, ನಾವು ಕೂಡ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದರು. ನನ್ನ ಪ್ರಶ್ನೆಯೇನೆಂದರೆ, ಇದು ಇನ್ನೂ ಎಷ್ಟು ವರ್ಷ? 16 ವರ್ಷವಾದರೂ ಕೂಡ ನಾವು ಇನ್ನೂ ಒಂದು conclusion ಗೆ ಬರಲಿಲ್ಲವೆಂದರೆ ಇನ್ನು ಯಾವಾಗ ಬರುತ್ತೀರಿ? ನಿವೃತ್ತರಾದವರ ಗತಿಯೇನು? ಅನುದಾನಿತ ಸಂಸ್ಥೆಯವರಿಗೆ ಒಂದು ಮಟ್ಟದ standard of living ಗೆ ಬಂದಿರುತ್ತಾರೆ. ಇವತ್ತು ಅನುದಾನಿತ ಪದವಿ ಕಾಲೇಜಿನಲ್ಲಿ ಸುಮಾರು ಎರಡೂವರೆ ಲಕ್ಷ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾರೆ. 60 ವರ್ಷವಾದ ನಂತರ ಅವರು ನಿವೃತ್ತರಾದಮೇಲೆ ಅವರಿಗೆ ಏನೂ ಬರುವುದಿಲ್ಲ. Can they maintain the standard? ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಿದೆಯೇ? ಇವತ್ತು ಒಂದು ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುವುದೇನೆಂದರೆ, the New Pension Scheme has not been

implemented for the Armed Forces. Armed Forces ಗೆ ಏತಕ್ಕೆ ಹೊಸ ಪೆನ್ಷನ್ ಸ್ಕೀಂ ತಂದಿಲ್ಲ. ನಾನು ತರಬೇಕೆಂದು ಹೇಳುವುದಿಲ್ಲ.

(ಮುಂದು)

(1072) 20-12-2022 5-30 KH/VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ.ನಮೋಶಿ (ಮುಂದು):-**

ಅವರಿಗೆ ತಂದಿಲ್ಲ ಎಂದಾದಾಗ ಎಲ್ಲಿಯೋ ಒಂದು ಕಡೆ something is wrong in NPS. Why the Government is not serious about this? ನಾವು ಎಲ್ಲಿಯೋ ತಪ್ಪಿದ್ದೇವೆ ಎಂದು ಇದನ್ನು ಏಕೆ ಸರಿಪಡಿಸುವುದಿಲ್ಲ. CAG has revealed shocking facts about the implementation of the New Pension Scheme. Planning, monitoring, ಇದರಿಂದ ತೊಂದರೆಯಾಗಿದೆ. ಇದನ್ನು ಏಕೆ ಸರಿ ಮಾಡಿಲ್ಲ ಎಂದು ನಾನು ಎಲ್ಲಾ Human Rights ಇಂತಹ ಒಂದು Body ಯವರು ಹೇಳುತ್ತಿದ್ದಾಗ ನಾವು ಇದರ ಬಗ್ಗೆ ಏಕೆ ಗಮನಹರಿಸಬಾರದು. ಇನ್ನು ಎಷ್ಟು ದಿವಸ ನಾವು ಅದೇ ರೀತಿ ಅವರ patience ಅನ್ನು ಚೆಕ್ ಮಾಡೋಣ. ಈಗ ಇದು ಸಾಕು. ಈ ಹೊಸ ಪೆನ್ಷನ್ ಸ್ಕೀಮ್ ಅನ್ನು ಯಾವ ರೀತಿ ವಿತ್‌ಡ್ರಾ ಮಾಡುತ್ತೀರಿ? ಇದಷ್ಟೇ ಅಲ್ಲ. ಅನುದಾನಿತ ಶಾಲಾ ಕಾಲೇಜುಗಳಗೂ ಕೂಡ ನಾವು ಪೆನ್ಷನ್ ಕೊಡುವ ರೀತಿಯಲ್ಲಿ ತಾವು ಏನು ಮಾಡಬೇಕೆಂಬ ಬಗ್ಗೆ ಕಾರ್ಯಪ್ರವೃತ್ತರಾಗಬೇಕು. ಕೋವಿಡ್-19 ಸಂದರ್ಭದಲ್ಲಿ ಎಲ್ಲರಿಗೂ ನಾವು ಯಾವುದಾದರೂ ಒಂದು ರೀತಿಯಲ್ಲಿ ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆ ಯಾವ ರೀತಿಯಲ್ಲಿ ಇದೆ. ಆ ಒಂದು ರೀತಿಯಲ್ಲಿ Health Insurance Scheme ಅನ್ನು ಕೊಡಬೇಕೆಂಬ ಬಗ್ಗೆ ಎಲ್ಲಾ ಹಂತದಲ್ಲಿಯೂ ಪ್ರಯತ್ನ ಮಾಡಲಾಗಿದೆ. ಬೇರೆ ಬೇರೆ ಸಂಸ್ಥೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ Corporate Houses ಎಲ್ಲರೂ ಇದರಲ್ಲಿ ಕೈ ಹಾಕಿ ಅವರೆಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ medical insurance ಕೊಡುವುದಕ್ಕೆ ಮುಂದಾಗಿದ್ದಾರೆ. ಸರ್ಕಾರ ಕೂಡ ಅನುದಾನಿತ ಶಾಲಾ ಸಂಸ್ಥೆಗಳಗೆ ಅಥವಾ ಅನುದಾನಿತ ಶಾಲಾ ನೌಕರರ ಬಗ್ಗೆ ಏಕೆ ಚಿಂತನೆ ಮಾಡಬಾರದು?

ಮೊನ್ನೆಯ ದಿವಸ ನಾನು ಅನೇಕ ಸಂಘಟನೆಗಳವರ ಜೊತೆ ಮಾತನಾಡಿದಾಗ ಅವರು ಒಂದು ದಿನದ ಸಂಬಳವನ್ನು monthly contribute ಮಾಡುವುದಕ್ಕೆ ತಯಾರು ಇದ್ದೇವೆ ಎಂದು ಹೇಳಿದ್ದಾರೆ. ಅದು ಸಣ್ಣ ಮೊತ್ತ ಅಲ್ಲ. It is only for the Government, ಅದರ ಬಗ್ಗೆ ಏನು ಮಾಡಬೇಕೆನ್ನುವ ಬಗ್ಗೆ ಮಾನ್ಯ ಸಚಿವರು ಕುಳಿತುಕೊಂಡು ಚರ್ಚೆ ಮಾಡಿ, ಮನಸ್ಸು ಮಾಡಿದರೆ ಒಂದೇ ಒಂದು ತಿಂಗಳಿನಲ್ಲಿ ಅವರಿಗೂ ಕೂಡ insurance scheme ಅನ್ನು ಜಾರಿಗೆ ತರಬಹುದು. I complement, ಮಾನ್ಯ ಸಚಿವರಿಗೂ ಇದರ ಬಗ್ಗೆ ಲೆಕ್ಕಚಾರ ಮಾಡಿ I will come back ಎಂದು ಹೇಳಿದ್ದಾರೆ. ಶ್ರೀ ವಿಶಾಲ್‌ರವರು ಇದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಸೆಕ್ರೆಟರಿಯವರು ಇದರ ಬಗ್ಗೆ ಚಿಂತನೆ ಮಾಡೋಣ ಎಂದು ಹೇಳಿದ್ದಾರೆ. ದಯವಿಟ್ಟು, ತಕ್ಷಣ ಇದರ ಬಗ್ಗೆ ಅವರು ಏನು contribute ಮಾಡುತ್ತಾರೋ, ಮಾಡಲಿ. ಸ್ವಲ್ಪ ಹಣ ತಾವು ಕೊಡಿ. Health Insurance ಗೆ ಕೊಟ್ಟಿದ್ದು ಏನು ತಪ್ಪಲ್ಲ. ಕೋವಿಡ್-19 ಸಮಯದಲ್ಲಿ ನಾವು ಬಹಳ ದೊಡ್ಡ ಪ್ರಮಾಣದ ಸಮಸ್ಯೆಯನ್ನು ಎದುರಿಸಿದ್ದೇವೆ. ಈಗಲಾದರೂ ನಾವು ಎಚ್ಚೆತ್ತುಕೊಂಡು ಆ ಕೆಲಸವನ್ನು ಸರ್ಕಾರ ಮಾಡಬೇಕೆಂದು ಕೈಜೋಡಿಸಿ ನಾನು ವಿನಂತಿ ಮಾಡುತ್ತೇನೆ. ದಯವಿಟ್ಟು, ಎನ್‌ಪಿಎಸ್ ಅನ್ನು ವಿತ್‌ಡ್ರಾ ಮಾಡಿ. ಯಾವ ರೀತಿ ಮಾಡಿದರೆ ಒಳ್ಳೆಯದು ಎಂದು ಚಿಂತನೆ ಮಾಡಿ. ಆದಷ್ಟು ಬೇಗ ನಮ್ಮ ಸರ್ಕಾರ ಇದನ್ನು ಮಾಡಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಈ ವಿಷಯದ ಬಗ್ಗೆ ತಾವು ಕೊನೆಯದಾಗಿ ಮಾತನಾಡಿ. ಈಗ ಸಮಯ ಇಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ.

**ಸಭಾಪತಿಯವರು:-** ಕೇವಲ 3 ಜನ ನೋಟಿಸ್ ಕೊಟ್ಟಿರುವವರು. ಈ ರೀತಿ ಪ್ರತಿ ವಿಷಯದಲ್ಲಿಯೂ ಎಲ್ಲರೂ ಮಾತನಾಡುವುದಕ್ಕೆ ಚಾಲು ಮಾಡಿದರೆ ವಿಷಯವನ್ನು ಹೇಗೆ ಕೈಗೆತ್ತಿಕೊಳ್ಳಬೇಕು? ಕೊನೆಯದಾಗಿ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಈ ವಿಷಯದ ಬಗ್ಗೆ ಮಾತನಾಡಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು Chief Whip ಮಾತನಾಡಬಾರದು ಎಂದು ಒಂದು ಆದೇಶವನ್ನು ಕೊಟ್ಟಿದ್ದಾರೆ. ಆದರೂ ನಮ್ಮ ಇಲಾಖೆಗೆ ಸಂಬಂಧಪಟ್ಟ ವಿಚಾರವನ್ನು ಎರಡು ನಿಮಿಷದಲ್ಲಿ ಮಾತನಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ವಿಷಯಗಳನ್ನು ಸಹ ಪುನರಾವರ್ತನೆ ಮಾಡಬಾರದು. ಒಬ್ಬರೂ ಆ ವಿಷಯ ಹೇಳಿದ್ದರೆ, ಅದನ್ನು ಬಿಟ್ಟು ಬೇರೆ ವಿಷಯಗಳನ್ನು ಮಾತನಾಡುವುದು ಒಳ್ಳೆಯದು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ವಿಚಾರವನ್ನು ಮಾನ್ಯ ಮರಿತಿಬ್ಬೇಗೌಡರವರು, ಮಾನ್ಯ ಎಸ್.ವ್ಹಿ.ಸಂಕನೂರ ರವರು, ಮಾನ್ಯ ಪುಟ್ಟಣ್ಣನವರು, ಮಾನ್ಯ ಶಶೀಲ್ ಜಿ.ನಮೋಶಿಯವರು, ಮಾನ್ಯ ಆಯನೂರು ಮಂಜುನಾಥ್ ರವರು ಮಾತನಾಡಿದ್ದಾರೆ. ಅವರು ಮಾತನಾಡಿದ ಎಲ್ಲಾ ವಿಚಾರಗಳಿಗೆ ಸಹಮತವನ್ನು ವ್ಯಕ್ತಪಡಿಸುತ್ತಾ, ಇಲ್ಲಿ ಮೂರು ವಿಚಾರಗಳು ಇವೆ. ಮೊದಲನೆಯದು, No Pension Scheme, ಎರಡನೆಯದು, New Pension Scheme, ಮೂರನೆಯದು Old Pension Scheme. ನನ್ನ ಮೊಟ್ಟ ಮೊದಲ ಆದ್ಯತೆ ಏನೆಂದರೆ, No Pension Scheme ಎಂದು ಯಾವ ನೌಕರರು ಇದ್ದಾರೆ, ಅವರಿಗೆ ಪೆನ್ಷನ್ ಸ್ಕೀಮ್ ಅನ್ನು ಕೊಡಬೇಕೆನ್ನುವುದು ನನ್ನ ಮೊದಲ ಆದ್ಯತೆ. ಇಲ್ಲಿ ಎನ್‌ಪಿಎಸ್ ಕೊಡುತ್ತಿರೋ, ಓಪಿಎಸ್ ಕೊಡುತ್ತಿರೋ ಅದು ಬೇರೆ ವಿಚಾರ. ಒಂದು ಪೆನ್ಷನ್ ಪದ್ಧತಿ ಅವರಿಗೆ ಕೊಡಿ. ಎರಡನೆಯ ವಿಚಾರವೇನೆಂದರೆ, ಎನ್‌ಪಿಎಸ್ ರವರು ಓಪಿಎಸ್ ಆಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಇದು ಇಡೀ ದೇಶದ ಸಮಸ್ಯೆಯಾಗಿದ್ದು, ಇದರ ಬಗ್ಗೆ ಚರ್ಚೆಯಾಗಲಿ. ಸರ್ಕಾರ ಇದರ ಬಗ್ಗೆ ಕ್ರಮವಹಿಸಬೇಕೆನ್ನುವುದಾಗಿದೆ. ಮೂರನೇಯದಾಗಿ, No Pension Scheme ಬಗ್ಗೆ ನಾನು ಏಕೆ ಹೇಳುತ್ತೇನೆ ಎಂದರೆ, ಅನುದಾನಿತ ಶಾಲಾ ಮತ್ತು ಕಾಲೇಜುಗಳಲ್ಲಿ ಸಂಬಳ ತೆಗೆದುಕೊಳ್ಳುವುದೇ ದುರ್ಬರ, ದುರ್ಲಭ ಆಗುವ ವ್ಯವಸ್ಥೆ ಇದೆ. ಆಡಳಿತ ಮಂಡಳಿಯವರು ಮ್ಯಾನೇಜ್‌ಮೆಂಟ್ contribution ಅನ್ನು ಒಂದು ರೂಪಾಯಿಯನ್ನೂ ಕಟ್ಟದೇ ಇರುವುದರಿಂದ ಈ ರೀತಿಯಾಗಿದೆ. Old Pension Scheme ಮೊದಲು ಇದ್ದ ಸಂದರ್ಭದಲ್ಲಿ ಮ್ಯಾನೇಜ್‌ಮೆಂಟ್ contribution

ಸರ್ಕಾರವೇ ಕೊಡುತ್ತಿತ್ತು. ನಂತರ beneficiary contribution ಅನ್ನು ಶಿಕ್ಷಕರು ಕೊಡುತ್ತಿದ್ದರು. ಹಾಗಾಗಿ ಸ್ಕೀಮ್ ಇತ್ತು. ಈಗ ಮ್ಯಾನೇಜ್‌ಮೆಂಟ್‌ನವರು ಒಂದು ರೂಪಾಯಿಯನ್ನು ಕಟ್ಟುವುದಕ್ಕೆ ಮುಂದೆ ಬರದೇ ಇರುವುದರಿಂದ, ಈ ಸ್ಕೀಮ್ ಇಲ್ಲ. ಅನುದಾನಿತ ಸಂಸ್ಥೆ ಆದಮೇಲೆ ಈಗ ಶಿಕ್ಷಕರು ಬಹಳ ದಯನೀಯ ಸ್ಥಿತಿಯಲ್ಲಿದ್ದಾರೆ. ಇದರ ಬಗ್ಗೆ ಹೇಳಿದರೆ ಬಹಳ ನೋವಾಗುತ್ತದೆ. ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳ ಹತ್ತಿರ ವಾಚ್‌ಮೆನ್ ಕೆಲಸ ಮಾಡುವುದಕ್ಕೆ ಶಿಕ್ಷಕರು ಹೋಗುತ್ತಿದ್ದಾರೆ. ಆ ಮಟ್ಟದಲ್ಲಿ ಒಂದು ದೊಡ್ಡ ದುರಂತವಾಗಿದೆ. ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಸಚಿವರಾದಂತಹ ಬಿ.ಸಿ.ನಾಗೇಶ್‌ರವರು ಮೊನ್ನೆಯ ದಿವಸ ಒಂದು ಸಭೆಯನ್ನು ಮಾಡಿದ್ದು, ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಈ ಪೆನ್ಷನ್ ಪದ್ಧತಿಯನ್ನು ಜಾರಿಗೆ ತಂದರೆ ಎಷ್ಟು ದುಡ್ಡು ಖರ್ಚಾಗುತ್ತದೆ ಎಂದು ಲೆಕ್ಕ ಹಾಕಿ ವರದಿ ಕೊಡಿ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಇದನ್ನು ಆದಷ್ಟು ಬೇಗ ತರಿಸಿಕೊಳ್ಳಬೇಕು. ನಾಲ್ಕನೆಯದಾಗಿ ಎನ್‌ಪಿಎಸ್ ಅನ್ನು ಓಪಿಎಸ್ ಆಗಿ ಕನ್‌ವರ್ಟ್ ಮಾಡುವ ಬಗ್ಗೆ ಒಂದು ದೊಡ್ಡ ಹೋರಾಟ ನಡೆಯುತ್ತಿದೆ. ಇದರ ಬಗ್ಗೆ ಸ್ನೇಹಿತರೆಲ್ಲಾ ಸೇರಿ ಬೆಳಕು ಚೆಲ್ಲಿದ್ದಾರೆ. ಅದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಐದನೆಯದಾಗಿ ಜ್ಯೋತಿ ಸಂಜೀವಿನಿ ಸ್ಕೀಮ್ ಎಂದು ಸರ್ಕಾರಿ ಶಾಲಾ ಶಿಕ್ಷಕರಿಗೆ ಇರುವುದನ್ನು ಅನುದಾನಿತ ಶಾಲಾ ಶಿಕ್ಷರಿಗೂ ಅನ್ವಯಿಸಬೇಕು. ಆರನೆಯದಾಗಿ, ಇನ್ನೊಂದು ವರ್ಗ ಇದೆ. ಈ Government, Aided ಬಿಟ್ಟು Unaided ಶಾಲೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರಿಗೆ ಯಾವುದೇ benefit ಇಲ್ಲ. ಇವರಿಗೆ ಮುಖ್ಯಮಂತ್ರಿ relief fund ಕೊಡಿಸಬೇಕೆಂದು ಅರ್ಜಿ ಬರೆದರೆ ಇವರು ಶಿಕ್ಷಕರು ಎಂದು ಬಿಇಓ ಕಛೇರಿಯಲ್ಲಿ, ಸ್ಕೂಲ್‌ನಲ್ಲಿ enroll ಆಗಿದ್ದರೆ ಅವರಿಗೆ ಒಂದು ನಯಾ ಪೈಸೆ ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳುತ್ತಾರೆ. ಇವರು ರಾಜ್ಯದಲ್ಲಿ ಸುಮಾರು 2 ರಿಂದ 3 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಇವತ್ತು ಬಂದಿರುವ ಮಾಹಿತಿ ಪ್ರಕಾರ ಸುಮಾರು 4 ಕೋಟಿ 80 ಲಕ್ಷಕ್ಕಿಂತ ಹೆಚ್ಚಾಗಿ ಆಯುಷ್ಮಾನ್ ಭಾರತ್ ಕಾರ್ಡ್‌ಗಳು ನಮ್ಮ ರಾಜ್ಯದಲ್ಲಿ ಚಾಲ್ತಿಯಲ್ಲಿವೆ. ಆಯುಷ್ಮಾನ್ ಭಾರತ್ ಕಾರ್ಡ್‌ಗಳು ಇಲ್ಲದೇ, ಪೆನ್ಷನ್ ಇಲ್ಲದೇ, ಜ್ಯೋತಿ ಸಂಜೀವಿನಿ ಯೋಜನೆ ಇಲ್ಲದೇ, ಯಾವುದೂ ಇಲ್ಲದೇ ಇರುವಂತಹ ವರ್ಗ ಸುಮಾರು 4 ರಿಂದ 5 ಲಕ್ಷ ಜನರು ಮಾತ್ರ ಇದ್ದಾರೆ. ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ಒಂದು insurance scheme ಅನ್ನು

purely unaided ಶಾಲೆಯವರಿಗೆ ತರಬೇಕು ಎನ್ನುವುದು ದೊಡ್ಡ ಪ್ರಮಾಣದಲ್ಲಿ ನನ್ನ ಆಗ್ರಹ ಇದೆ. ಅದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂಬ ಮಾತನ್ನು ಹೇಳಿ, ತಾವು ಇದರ ಬಗ್ಗೆ ವಿಶೇಷವಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಸರ್ಕಾರದ ಕಾಳಜಿಯನ್ನು ತೋರಿಸಿ, ಈ ನಾಲ್ಕು ವಿಚಾರಗಳ ಬಗ್ಗೆ ತಾರ್ಕಿಕ ಅಂತ್ಯ ಹಾಡಬೇಕು. ಆ ಶಿಕ್ಷಕರಿಗೆ ಸವಲತ್ತನ್ನು ಕೊಡುವುದರ ಮುಖಾಂತರ ಅವರ ನೆರವಿಗೆ ಬರಬೇಕೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರಗಳು.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ತಂದಿರುವಂತಹ ನಿಲುವಳಿ ಸೂಚನೆಗೆ ಸಾಕಷ್ಟು ಜನ ಎಂಎಲ್‌ಸಿ ಗಳು ಮಾತನಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಇನ್ನು ಕೆಲವರು ಮಾತನಾಡಬೇಕು. ಅದನ್ನು ಸಹ ತಾವು ಪರಿಗಣಿಸಿ ಉತ್ತರ ಕೊಡಿ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಸುಮಾರು 4 ದಿನಗಳ ಹಿಂದೆ ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎಂಎಲ್‌ಸಿ ಗಳನ್ನು ಸೇರಿಸಿ ಒಂದು ಸಭೆ ಮಾಡಲಾಗಿದೆ. ಅದನ್ನು ಜಾರಿಗೆ ತಂದರೆ ಆಗುವಂತಹ ಆರ್ಥಿಕ ಪರಿಣಾಮಗಳ ಬಗ್ಗೆ ನಾವು Finance Department ರವರನ್ನು ಕೂರಿಸಿಕೊಂಡು ಮಾತನಾಡಿದ್ದೇವೆ. ಇಷ್ಟು ಹೊತ್ತು ಎನ್‌ಪಿಎಸ್ ಬಗ್ಗೆ ಏನೇನು ವಿಚಾರಗಳನ್ನು ಮಾತನಾಡಿದ್ದಾರೆ. ಬೆಳಗ್ಗೆ ಕೆಳಮನೆಯಲ್ಲಿಯೂ ಸಹ ಎನ್‌ಪಿಎಸ್ ಬಗ್ಗೆ ಒಂದು ದಿನ ಚರ್ಚೆ ಮಾಡಿ, ಎಲ್ಲಾ ಪಕ್ಷದವರು ಅವರ ಅಭಿಪ್ರಾಯಗಳನ್ನು ಕೊಟ್ಟ ಮೇಲೆ ರಾಜ್ಯದ ಆರ್ಥಿಕ ವ್ಯವಸ್ಥೆಗಳ ಮೇಲೆ ಏನು ಪರಿಣಾಮಗಳಾಗಬಹುದು ಎನ್ನುವ ಬಗ್ಗೆ ಯೋಚನೆ ಮಾಡಿ ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳೋಣ ಎನ್ನುವಂತಹದ್ದನ್ನು ಸಹಿತ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಲ್ಲಿ ಎನ್‌ಪಿಎಸ್ ಬಗ್ಗೆ ಚರ್ಚೆಯಾದ ನಂತರ ಮಾನ್ಯ ಮುಖ್ಯಮಂತ್ರಿಯವರ ಜೊತೆ ನಾವು ಕುಳಿತುಕೊಂಡು ಇದರ ಬಗ್ಗೆ ಯೋಚನೆ ಮಾಡಬಹುದು. ಎರಡನೆಯದಾಗಿ, ಖಂಡಿತವಾಗಿ ನಾವು ಇಷ್ಟೊಂದು ಕಳಕಳಿಯಿಂದ 6 ಲಕ್ಷ ಸಿಬ್ಬಂದಿಗಳ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡಿದ್ದೇವೆ. ಮಾನ್ಯ ಪ್ರಧಾನ ಮಂತ್ರಿಯಾದ ಮೋದಿಯವರು ದೇಶದಲ್ಲಿರುವ ಜನರ ಬಗ್ಗೆ ತುಂಬಾ

ಗಂಭೀರವಾಗಿ ಯೋಚನೆ ಮಾಡಿ "ರೈತ ಕಿಸಾನ್ ಸಮ್ಮಾನ್ ಯೋಜನೆ" ಯಡಿ ಪ್ರತಿ ರೈತರ ಹತ್ತಿರ ಪಹಣಿ ಇರುವವರಿಗೆ 500 ರೂಪಾಯಿಗಳು ತಲುಪಲಿ. ಇದರ ಜೊತೆಗೆ ರಾಜ್ಯ ಸರ್ಕಾರ ಸಹಿತ ಒಂದಷ್ಟು ಕಾರ್ಯಕ್ರಮಗಳನ್ನು ಮಾಡಿದೆ. ಆಯುಷ್ಮಾನ್ ಭಾರತ್ ಯೋಜನೆಯಡಿ ದೇಶಕ್ಕೆ 5 ಲಕ್ಷ ರೂಪಾಯಿಗಳಷ್ಟು ಹೆಲ್ತ್ ಸ್ಕೀಮ್‌ಗಳನ್ನು ಮಾಡುವಂತಹ ಪ್ರಯತ್ನ ಸಹಿತ ಸರ್ಕಾರ ಮಾಡುತ್ತಿದೆ. ಸರ್ಕಾರ ಹೆಜ್ಜೆ ಹಜ್ಜೆ ಇಡುತ್ತಲೇ ಇದೆ. ಇಷ್ಟು ಹೊತ್ತು 6 ಲಕ್ಷ ಸಿಬ್ಬಂದಿಗಳ ಬಗ್ಗೆ ತುಂಬಾ ಚರ್ಚೆ ಮಾಡಲಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆ ಮತ್ತು ಆರ್ಥಿಕ ಇಲಾಖೆಯವರ ಜೊತೆ ಕುಳಿತುಕೊಂಡು ಚರ್ಚೆ ಮಾಡಿ, ಇದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಮೂರನೆಯದಾಗಿ, ಮೊನ್ನೆಯ ದಿವಸ ಇದರ ಬಗ್ಗೆ ಚರ್ಚೆ ಮಾಡಿದಾಗ ಎಲ್ಲಾ ಎಂ.ಎಲ್.ಸಿ.,ಗಳು ಒಂದಷ್ಟು ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನೌಕರರ ಸಂಘದವರು ಸಹ ಒಂದು ದಿನದ ಸಂಬಳವನ್ನು ಕೊಡುತ್ತೇವೆ ಎನ್ನುವಂತಹ ಪತ್ರವನ್ನು ಸಹ ನಮಗೆ ಕೊಟ್ಟಿದ್ದಾರೆ. ಯಾವುದಾದರೂ insurance scheme ಜೊತೆಗೆ tie up ಮಾಡಿ ಸರ್ಕಾರದ ಕಡೆಯಿಂದಲೇ ಇದನ್ನು ಮಾಡಬೇಕೆಂಬುದು ಅವರ ಆಸೆ ಇದೆ. ಒಟ್ಟು ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಮಾಡೋಣ. ಈಗಿನ medical ನಿಯಮದ ಪ್ರಕಾರ ಇವರನ್ನು ತರುವುದಕ್ಕೆ ಆಗುವುದಿಲ್ಲ. ಮಾನ್ಯ ಮರಿತಿಬ್ಬೇಗೌಡರವರು ಹೇಳಿದ ಹಾಗೆ ನಿಯಮದಲ್ಲಿ ಏನಾದರೂ ಬದಲಾವಣೆ ಮಾಡಬಹುದೇ ಎಂದು ಕಾನೂನು ಸಚಿವರ ಜೊತೆ ಚರ್ಚೆ ಮಾಡಿ ಮತ್ತು ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ ಖಂಡಿತವಾಗಿಯೂ ಇದಕ್ಕೆ ಪರಿಹಾರವನ್ನು ತರುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ. ನಾನು ಮಾನ್ಯ ಸಚಿವರಿಗೆ ಧನ್ಯವಾದ ಹೇಳಬೇಕಲ್ಲವೇ?

(ಮುಂದು)

(1073)20-12-2022(05-40)bsd-vk

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಉತ್ತರ ಬೆಟ್ಟ ಅಗೆದು ಇಲಿ ಹಿಡಿದಂತೆ ಆಗಿದ್ದು, ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಕೆಳಮನೆಯಲ್ಲಿ ಚರ್ಚೆ ಮಾಡಿ, ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ತೀರ್ಮಾನ ಮಾಡುವ ಬಗ್ಗೆ ತಿಳಿಸಿದ್ದಾರೆ. ಈ ಸದನ ಮುಕ್ತಾಯವಾಗುವುದರೊಳಗೆ ಈ ಸದನದಲ್ಲಿಯೇ ನಿರ್ದಿಷ್ಟವಾದ ಹಾಗೂ ನಂಬಿಕೆ-ವಿಶ್ವಾಸಪೂರ್ವಕ ಉತ್ತರ ಬರಬೇಕು. ಏಕೆಂದರೆ ಸುಮಾರು 2 ಲಕ್ಷ ಜನರು Freedom Park ನಲ್ಲಿ ಧರಣಿ ಮಾಡುತ್ತಿದ್ದು, ಅವರೆಲ್ಲರೂ ಕಛೇರಿ ತೆರವು ಮಾಡಿ ಹಗಲು-ರಾತ್ರಿ ಧರಣಿ ಮಾಡುತ್ತಿದ್ದಾರೆ. ಧರಣಿಯಲ್ಲಿ ಮಹಿಳಾ ನೌಕರರು, ಹೆಣ್ಣು ಮಕ್ಕಳು ಸೇರಿಕೊಂಡು ಇಂತಹ ಮಳೆ, ಚಳಿ, ಗಾಳಿಯಲ್ಲಿ ಇದ್ದಾರೆ. ಇದು ಎಂತಹ ಭೀಕರ ಸಮಸ್ಯೆ ಆಗಿದ್ದು, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಾನೂನು ಸಚಿವರು, ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಆಚಾರ್ ಹಾಲಪ್ಪ ಬಸಪ್ಪರವರುಗಳೆಲ್ಲರೂ ಸೇರಿಕೊಂಡು ಒತ್ತಾಯಪೂರ್ವಕವಾಗಿ ಸದನದಲ್ಲಿ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರಬೇಕು. Old Pension Scheme ಅನ್ನು ಜಾರಿಗೆ ತರಲು ಈ ಸರ್ಕಾರ ಕಟಿಬದ್ಧವಾಗಿದೆ ಎಂಬ ಸ್ಪಷ್ಟ ತೀರ್ಮಾನವನ್ನು ಕೊಡಿಸಬೇಕು. ಯಾವ ಕಾಯ್ದೆಗೆ ತಿದ್ದುಪಡಿ ತರಲು ಸಾಧ್ಯವಿಲ್ಲ? ಕಾಯ್ದೆಗೆ ತಿದ್ದುಪಡಿ ತರಲು ಮಾನ್ಯ ಕಾನೂನು ಸಚಿವರು ವಿರೋಧ ಇದ್ದಾರೆಯೇ? ಕಾನೂನಿಗೆ ತಿದ್ದುಪಡಿ ತಂದು ಅವರೆಲ್ಲರನ್ನೂ ಜ್ಯೋತಿ ಸಂಜೀವಿನಿ ವ್ಯಾಪ್ತಿಗೆ ತರುವ ಕೆಲಸವನ್ನು ಮಾಡಬೇಕು. ಸದನ ಮುಗಿಯುವುದರೊಳಗೆ ಇದರ ವಿಚಾರದಲ್ಲಿ ಸ್ಪಷ್ಟ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಕೊಡಿಸಬೇಕೆಂದು ಮನವಿ ಮಾಡುತ್ತೇನೆ.

ಆ) ವಿಷಯ: ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ನಿರ್ವಹಣೆಗೆ ಸರ್ಕಾರದ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಕಾಯ್ದಿರಿಸುವ ಕುರಿತು.

- - - -

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯದಲ್ಲಿ ಮೈಸೂರಿನಂತಹ ಪಾರಂಪರಿಕ ನಗರದಲ್ಲಿ ಸಾಕಷ್ಟು building ಬಿದ್ದು ಹೋಗುತ್ತಿವೆ. ಮೊನ್ನೆ ಮೈಸೂರಿನಲ್ಲಿ ಮಹಾರಾಣಿ ಕಾಲೇಜಿನಲ್ಲಿ ಒಂದು ಕೊಠಡಿ ಬಿದ್ದು ಹೋಗಿರುತ್ತದೆ. ಕಾರಣವೇನೆಂದರೆ, ಆ building ಗಳನ್ನು maintain ಮಾಡುವುದಿಲ್ಲ. ಮೈಸೂರಿನ ತಾಲ್ಲೂಕು ಕಛೇರಿಯ ಮೇಲೆ ಗಿಡ-ಮರಗಳು ಬೆಳೆದಿವೆ. ಎಲ್ಲಾ ಸರ್ಕಾರಿ ಕಟ್ಟಡಗಳ ಮುಂಭಾಗ, ಹಿಂಭಾಗ ಮತ್ತು ಅಕ್ಕ-ಪಕ್ಕದಲ್ಲಿ ಆಲದ ಮರ, ಬಸುರಿ ಮರ ಸೇರಿದಂತೆ ಇತ್ಯಾದಿ ಮರಗಳು ಬೆಳೆಯುತ್ತಿವೆ. ಇದರಿಂದಾಗಿ ಆ building ಗಳನ್ನು ಕಾಪಾಡುವ ಜವಾಬ್ದಾರಿಯನ್ನು ಸರ್ಕಾರ ಮಾಡುತ್ತಿಲ್ಲ. ಅಲ್ಲಿರುವ ಅಧಿಕಾರಿಗಳು building ಅನ್ನು maintain ಮಾಡುವ ಬಗ್ಗೆ ಗಮನಹರಿಸುತ್ತಿಲ್ಲ. Especially, ಸರ್ಕಾರಿ ಕಟ್ಟಡಗಳು, ಶಾಲಾ-ಕಾಲೇಜುಗಳ ಕಟ್ಟಡಗಳು ಮತ್ತು ಸರ್ಕಾರಕ್ಕೆ ಒಳಪಟ್ಟ ದೇವಸ್ಥಾನಗಳಲ್ಲಿ ಮರ-ಗಿಡಗಳು ಬೆಳದು building ಗಳು ಬಿದ್ದುಹೋಗುವ ಸ್ಥಿತಿಗೆ ಬಂದಿವೆ. ಆ building ಗಳನ್ನು ಸಾರ್ವಜನಿಕರ ಹಣದಿಂದ ಕಟ್ಟಿ, ಆ building ಗಳನ್ನು ಉಪಯೋಗಿಸದೇ ಶಿಥಿಲಾವಸ್ಥೆಗೆ ಹೋಗುತ್ತಿರುವುದು ಒಂದು ರೀತಿಯಾದರೆ, ಇನ್ನೊಂದು ಕಡೆ ಹೊಸದಾಗಿ ಕಟ್ಟಿರುವ ಕಟ್ಟಡಗಳಲ್ಲಿ lift ವ್ಯವಸ್ಥೆ ಇರಬಹುದು, ಕಛೇರಿಗಳನ್ನು maintain ಮಾಡಲು ವಿದ್ಯುಚ್ಛಕ್ತಿ ವ್ಯವಸ್ಥೆ ಇರಬಹುದು, ಇವೆಲ್ಲವೂ ಕೊರತೆಯಾಗಿದೆ. ಉದಾಹರಣೆಗೆ ಮೈಸೂರಿನ ತಾಲ್ಲೂಕು ಕಛೇರಿಯಲ್ಲಿ lift ಇಲ್ಲದೇ ರೂ.2.5 ಲಕ್ಷ ನನ್ನ ಸ್ವಂತ ಹಣದಿಂದ lift ಅಳವಡಿಸಿದ್ದೇನೆ. ಸರ್ಕಾರ ಈ ಮಟ್ಟದಲ್ಲಿದ್ದುಕೊಂಡು, ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ building ಗಳನ್ನು ಕಟ್ಟಿ, ಅಲ್ಲಿನ maintenance ಬಹಳ poor ಆಗಿದೆ. ಅದರ ಬಗ್ಗೆ ಕೇಳಿದಾಗ Budget ನಲ್ಲಿ ಅವಕಾಶವನ್ನು ಮಾಡಿಕೊಟ್ಟಿಲ್ಲ, building ಗಳ ನಿರ್ವಹಣೆಗೆ ಯಾವರೀತಿಯ ಹಣ ಬಂದಿಲ್ಲ ಎಂಬ ಉತ್ತರ ಕೊಡುತ್ತಿದ್ದಾರೆ. ಸರ್ಕಾರವು ಇತ್ತ ಗಮನಹರಿಸಿ building ಗಳನ್ನು maintain ಮಾಡಲು

ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕು ಮತ್ತು building ಕಟ್ಟಿರುವಲ್ಲಿ power ವ್ಯವಸ್ಥೆ ಇಲ್ಲದೇ, ಆ building ಗಳಲ್ಲಿ power ಹೋದರೆ ಇಡೀ office ಸ್ಥಗಿತವಾಗುತ್ತಿದೆ. ಉದಾಹರಣೆಗೆ ಮೈಸೂರಿನ ನಜ಼ರಬಾದ್‌ನಲ್ಲಿ ಒಂದು DC Office ಅನ್ನು ಕಟ್ಟಿದ್ದಾರೆ, ಆದರೆ ಅವರು ಇನ್ನೂ ಹಳೆಯ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಛೇರಿಯು ಇನ್ನೂ shift ಆಗಿರುವುದಿಲ್ಲ. ಹೊಸ ಕಛೇರಿಗೆ shift ಮಾಡಿಕೊಂಡಾಗ ಹಳೆಯ ಕಛೇರಿಯ ಪಾರಂಪರಿಕತೆಯ ಕಳೆಯು ಹೊರಟು ಹೋಗುತ್ತದೆ ಎಂಬುದನ್ನು ಗಮನಿಸಬೇಕು. ಮತ್ತೆ building ಅನ್ನು shift ಮಾಡುವ ಕೆಲಸವೂ ಆಗಬೇಕು ಎನ್ನುವ ದೃಷ್ಟಿಯಿಂದ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಹಣದ ಪ್ರಶ್ನೆ ಇಲ್ಲ, ಒಂದು ಆದೇಶವನ್ನು ಹೊರಡಿಸಿದರೆ ಕಟ್ಟಡ ನಿರ್ವಹಣೆಯಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಆನಂದ್ ಸಿಂಗ್ (ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿ ಲಗತ್ತಿಸಿದೆ)**

ಪಾರಂಪರಿಕ ಕಟ್ಟಡಗಳು ಇದ್ದರೆ ಖಂಡಿತವಾಗಿಯೂ ನಮ್ಮ ಇಲಾಖೆಯ ವತಿಯಿಂದ ಪರಿಶೀಲನೆ ಮಾಡುತ್ತೇನೆ. ಮೈಸೂರಿನಲ್ಲಿ 131 ಕಟ್ಟಡಗಳನ್ನು identify ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಸರ್ಕಾರಿ ಕಟ್ಟಡಗಳಲ್ಲಿ ಮರಗಳು ಬೆಳೆದಿವೆ, ಇಲಾಖೆಗಳನ್ನು ನಡೆಸುತ್ತಿರುವ ಕಟ್ಟಡಗಳಲ್ಲಿನ ವಿಚಾರಕ್ಕೆ ಸಂಬಂಧಪಟ್ಟಂತೆ ಇಲಾಖಾ ಮಂತ್ರಿಗಳು ಮತ್ತು ಸಿಬ್ಬಂದಿಗಳು ಮಾಡಬೇಕಾಗಿದ್ದು, ಇದು ಕಂದಾಯ ಇಲಾಖೆಗೆ ಸೇರಿರುತ್ತದೆ. ಪಾರಂಪರಿಕ ಕಟ್ಟಡಗಳ ಬಗ್ಗೆ ಪರಿಶೀಲನೆ ಮಾಡಿದಾಗ ಅನೇಕ ಕಟ್ಟಡಗಳು ಶಿಥಿಲವಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು 3 ಪ್ರಶ್ನೆಗಳನ್ನು ಕೇಳಿದ್ದಾರೆ. ಅದರಲ್ಲಿ ಬೇರೆ ರಾಜ್ಯದಲ್ಲಿರುವ amendment ನಮ್ಮ ರಾಜ್ಯದಲ್ಲಿ ಏಕೆ ಇಲ್ಲ ಎಂದು ಪ್ರಶ್ನೆ ಮಾಡಿರುವುದರಿಂದ, ಮೊನ್ನೆ Zonal Regulation (Amendment) 2020 ಎಂದು ಮಾಡಿದ್ದೇವೆ. ಬೇರೆ ರಾಜ್ಯದಲ್ಲಿರುವಂತೆ ನಮ್ಮ ರಾಜ್ಯದಲ್ಲಿಯೂ ಮಾಡಿದ್ದೇವೆ. ಪಾರಂಪರಿಕ ಕಟ್ಟಡಗಳನ್ನು ರಕ್ಷಣೆ ಮಾಡುವುದು ಸರ್ಕಾರ ಮತ್ತು ನಮ್ಮೆಲ್ಲರ ಜವಾಬ್ದಾರಿಯಾಗಿದೆ. **ಪಾರಂಪರಿಕ ಕಟ್ಟಡಗಳ ಬಗ್ಗೆ ಮಾಹಿತಿ ತರಿಸಿ, ಪರಿಶೀಲನೆ ಮಾಡಿ, ಎಷ್ಟು ಸಾಧ್ಯವಾಗುತ್ತದೋ ಅಷ್ಟರಮಟ್ಟಿಗೆ ಕಾಳಜಿಯಿಂದ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ನನ್ನ ಸಹಮತ ಇದೆ. ಮೈಸೂರಿನಲ್ಲಿ ಗುರುತಿಸಿರುವ ಪಾರಂಪರಿಕ ಕಟ್ಟಡಗಳ ಸಂಖ್ಯೆಯನ್ನು ಮಾನ್ಯ ಸಚಿವರು ಹೇಳಿದರು. ಅದರಲ್ಲಿ ಸರ್ಕಾರಿ ಕಟ್ಟಡಗಳು ಇವೆ. ಅಲ್ಲಿ Market ಇರಬಹುದು, Lansdowne Building ಇರಬಹುದು, University Building ಇರಬಹುದು, University Hospital ಗಳು ಇರಬಹುದು, Medical College Hostel ಇರಬಹುದು, ಇವೆಲ್ಲವೂ heritage ಗೆ ಸೇರಿದೆ. ಅದರಲ್ಲಿ ವಿಶೇಷವಾಗಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಸುಮಾರು 3,700 ವಿದ್ಯಾರ್ಥಿನಿಯರು ಕಲಿಯುತ್ತಿದ್ದು, ಒಂದು ತಿಂಗಳ ಹಿಂದೆ ಅಲ್ಲಿನ ಪ್ರಯೋಗಾಲಯದ ಕಟ್ಟಡ ಕುಸಿದು ಬಿತ್ತು. ಅದು media ಸೇರಿದಂತೆ ಎಲ್ಲಾ ಕಡೆ ಪ್ರಚಾರವಾಯಿತು. ಆದರೆ ಇದುವರೆಗೂ ಜಿಲ್ಲಾ ಮಂತ್ರಿಗಳು ಅಥವಾ ಶಿಕ್ಷಣ ಮಂತ್ರಿಗಳು ಅಲ್ಲಿಗೆ ಭೇಟಿ ಕೊಟ್ಟಿಲ್ಲ. ಏನಾಗಿದೆ ಎನ್ನುವುದನ್ನು ಚಿಂತನೆ ಮಾಡಲಿಲ್ಲ. ಆ ಕಾಲೇಜು ಪಾಳಿ ವ್ಯವಸ್ಥೆಯಲ್ಲಿ ಬೆಳಗ್ಗೆ 8

ಗಂಟೆಗೆ ಪ್ರಾರಂಭವಾದರೆ ಸಂಜೆ 6 ಗಂಟೆಯವರೆಗೂ ನಡೆಯುತ್ತಿರುತ್ತದೆ. ಮಂಡ್ಯ, ಮೈಸೂರು, ಹಾಸನ, ಕೊಡಗು ಮತ್ತು ಚಾಮರಾಜನಗರ ಸೇರಿದಂತೆ ನಾಲ್ಕೈದು ಜಿಲ್ಲೆಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಇಡೀ ರಾಜ್ಯದಾದ್ಯಂತ ಆ ಕಾಲೇಜಿಗೆ ಮಕ್ಕಳು ಸೇರಿರುತ್ತಾರೆ. ಈಗ ಅಭದ್ರತೆ ಇದೆ ಎಂದು entire building ಅನ್ನು ತೆರವುಗೊಳಿಸಿ, ಪಕ್ಕದಲ್ಲಿರುವ ಹೊಸ ಕಟ್ಟಡದಲ್ಲಿ ಮತ್ತು ಕಲಾ ಕಾಲೇಜಿನಲ್ಲಿರುವ ಕೆಲವು ಕೊಠಡಿಗಳನ್ನು ಬಳಸಿಕೊಂಡು ತರಗತಿಗಳನ್ನು ನಡೆಸುತ್ತಿದ್ದಾರೆ. ಪ್ರಯೋಗಾಲಯದ bench, ಕುರ್ಚಿ ಎಲ್ಲವನ್ನು ತೆಗೆದುಕೊಂಡು ಹಾಕಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆಯ ಅಥವಾ ಯಾವ ಶಿಕ್ಷಣ ಇಲಾಖೆಯ ಅಧಿಕಾರಿಗಳು ನೆರವಿಗೆ ಬರಲಿಲ್ಲ. ಕಾಲೇಜಿನ ಪ್ರಾಂಶುಪಾಲರು ಮತ್ತು ಅಧ್ಯಾಪಕರುಗಳು ಎಲ್ಲವನ್ನು shift ಮಾಡಿಕೊಂಡರು. ಇದು ಎಂತಹ ಹೀನಾಯ ಪರಿಸ್ಥಿತಿಯಾಗಿದೆ. ಸರ್ಕಾರವು heritage building ಎಂದು ನೋಡಲಿಲ್ಲ. 3,700 ಮಂದಿ ಹೆಣ್ಣುಮಕ್ಕಳು ಕಲಿಯುತ್ತಿದ್ದಾರೆ. ಮಹಾರಾಜರು ಕಟ್ಟಿದಂತಹ ಹೆಣ್ಣುಮಕ್ಕಳ ಕಾಲೇಜು ಇದಾಗಿದೆ. ಇಲ್ಲಿ heritage ಎಂದು ಕಾನೂನು ಮಾಡಿಬಿಟ್ಟರು. Heritage building ಅನ್ನು ಸಂರಕ್ಷಣೆ ಮಾಡಲು ಮೂರು ಕಾಸಿನ ಅನುದಾನ ಇಲಾಖೆಯಲ್ಲಿ ಇಲ್ಲ. ಆ entire building ನ ಸ್ಥಿತಿಗತಿ ನೋಡಲು ಉನ್ನತ ಶಿಕ್ಷಣ ಸಚಿವರಾಗಲೀ, District Minister ರಾಗಲೀ ಬರಲಿಲ್ಲ ಎಂದರೆ ಹೇಗೆ? ವಾರಕ್ಕೆ ಮೂರು ಸಾರಿ ಬಂದರೂ ಅಲ್ಲಿಗೆ ಹೋಗಿ ನೋಡಲಿಲ್ಲ.

(ಮುಂದು)

**(1074) 20.12.2022/5.50/ಹೆಚ್‌ವಿ:ಬಿಎನ್‌ಎಸ್**

**ಶ್ರೀ ಮರಿತಿಬ್ಬೇಗೌಡ(ಮುಂದು):**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರವಾಸೋದ್ಯಮ ಮತ್ತು ಪರಿಸರ ಸಚಿವರಾದರು ಅಲ್ಲಿಗೆ ಭೇಟಿ ಕೊಟ್ಟು ಆ ಕಾಲೇಜಿನ ಕಟ್ಟಡದ ಸ್ಥಿತಿ-ಗತಿ ನೋಡಿ, ಎಲ್ಲ ಮಾಹಿತಿಗಳನ್ನು ತೆಗೆದುಕೊಂಡು, ಸರ್ಕಾರದ ವತಿಯಿಂದ ಆ ಕಾಲೇಜನ್ನು ಸುಸ್ಥಿತಿಗೆ ತರಬೇಕಾಗಿತ್ತು. ಆ ಕಟ್ಟಡವನ್ನು ದುರಸ್ತಿ ಮಾಡಿದರೆ, ಇನ್ನೂ ಬಹಳಷ್ಟು ವರ್ಷಗಳ ಕಾಲ ಬಾಳಿಕೆ ಬರುತ್ತದೆ ಎನ್ನುವುದರ ಬಗ್ಗೆ ಒಂದು ವರದಿಯನ್ನು ತೆಗೆದುಕೊಂಡು, ಕೂಡಲೇ ಆ ಕಟ್ಟಡವನ್ನು ದುರಸ್ತಿಯನ್ನಾದರೂ ಮಾಡಬೇಕು ಅಥವಾ

ಅದನ್ನು ಕೆಡವಿ ಹೊಸದಾಗಿ ಕಟ್ಟಬೇಕು ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಇಂತಹ ಒಂದು ಕಾಲೇಜು ಹಳ್ಳಿಯಲ್ಲಿ ಇರಲೀ, ನಗರದಲ್ಲಿ ಇರಲೀ ಅಥವಾ ಮೈಸೂರಿನಲ್ಲಿ ಇರಲೀ ಅದನ್ನು ಸರಿಪಡಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಈ ಘಟನೆ ನಡೆಯುವುದಕ್ಕೂ 10 ನಿಮಿಷಗಳ ಮುಂಚೆ ಏನೋ ಅನುಮಾನ ಬಂದು ಆ ಕಾಲೇಜಿನ ಪ್ರಿನ್ಸಿಪಾಲರು ಮತ್ತು ಕೆಲವು ಪ್ರಾಧ್ಯಾಪಕರು ಆ ಕಟ್ಟಡದಲ್ಲಿದ್ದ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದವರನ್ನು ಹೊರಗಡೆಗೆ ಕಳುಹಿಸಿಕೊಟ್ಟು " ಆ ಕಡೆಗೆ ಹೋಗಬೇಡಿ" ಎಂದು ಹೇಳಿ ಬೀಗ ಹಾಕಿಕೊಂಡು ಬಂದಿದ್ದಾರೆ. ಅವರುಗಳು ಹೊರಗೆ ಬಂದ 10 ನಿಮಿಷಗಳಲ್ಲಿಯೇ ಆ ಕಟ್ಟಡದ ಮೇಲ್ಛಾವಣಿಯಾದಿಯಾಗಿ ಇಡೀ ಕಟ್ಟಡ ಕುಸಿದು ಬಿದ್ದಿದೆ. ಒಂದು ವೇಳೆ ಅನಾಹುತ ಸಂಭವಿಸಿದ ಸಂದರ್ಭದಲ್ಲಿ ಆ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಇದ್ದಿದ್ದರೆ ಕನಿಷ್ಠ 30 ರಿಂದ 40 ಮಂದಿ ವಿದ್ಯಾರ್ಥಿಗಳು ಸಾವನ್ನಪ್ಪುತ್ತಿದ್ದರು. ಒಂದು ವೇಳೆ ಇಂತಹ ಅವಘಡ ಸಂಭವಿಸಿದ್ದರೆ, ಇಡೀ ಸರ್ಕಾರವೇ ಅನುಕಂಪ ವ್ಯಕ್ತಪಡಿಸುತ್ತಿತ್ತು. ಇಂತಹ ಒಂದು ದೊಡ್ಡ ಅವಘಡವನ್ನು ತಪ್ಪಿಸುವುದಕ್ಕಾಗಿ ಆ ಕಾಲೇಜಿನ ಪ್ರಿನ್ಸಿಪಾಲರು ಜಾಗರೂಕತೆಯಿಂದ ಕೆಲಸ ಮಾಡಿದ್ದಾರೆ. ಕುಸಿದು ಬಿದ್ದಿರುವ ಈ ಕಾಲೇಜಿನ ಕಟ್ಟಡವನ್ನು ಪರಿಶೀಲನೆ ಮಾಡುವುದಕ್ಕೆ ಶಿಕ್ಷಣ ಸಚಿವರಾಗಲೀ, ಪ್ರವಾಸೋದ್ಯಮ ಸಚಿವರಾಗಲೀ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಲೀ ಯಾರೂ ಸಹ ಭೇಟಿ ನೀಡಲಿಲ್ಲ. ಇದು ಎಂತಹ ಹೀನಾಯ ಸ್ಥಿತಿ? ನಾನು ಈ ವಿಚಾರದ ಬಗ್ಗೆ ನಾಲ್ಕು ಬಾರಿ ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸಹ ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿಲ್ಲ. ತಮ್ಮ ಮೂಲಕ ನಾನು ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ಕೂಡಲೇ ಮಹಾರಾಣಿ ಕಾಲೇಜಿಗೆ ಸಂಬಂಧಪಟ್ಟ ಸಚಿವರುಗಳು ಭೇಟಿ ಕೊಡಬೇಕಾಗಿದೆ. ಈ ಕಾಲೇಜಿನ ಕಟ್ಟಡ ಪಾರಂಪರಿಕ ಕಟ್ಟಡವಾಗಿರುವುದರಿಂದ ಶಿಕ್ಷಣ ಸಚಿವರು ಮತ್ತು ಮಾನ್ಯ ಆನಂದ್‌ಸಿಂಗ್‌ರವರು ಸಮನ್ವಯತೆಯಿಂದ ಚರ್ಚೆ ಮಾಡಿ ಆ ಕಟ್ಟಡವನ್ನು ದುರಸ್ತಿ ಮಾಡಬೇಕೇ ಅಥವಾ ಪೂರ್ಣ ಕೆಡವಿ ಹೊಸದಾಗಿ ನಿರ್ಮಾಣ ಮಾಡಬೇಕೇ ಎನ್ನುವುದರ ಬಗ್ಗೆ ಕೂಡಲೇ ತೀರ್ಮಾನ ತೆಗೆದುಕೊಂಡು ಅದಕ್ಕೆ ಅಗತ್ಯವಿರುವಂತಹ ಅನುದಾನವನ್ನು ಒದಗಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಮೈಸೂರು ನಗರವನ್ನು ಕೇಂದ್ರ ಸರ್ಕಾರದವರು ಪಾರಂಪರಿಕ ನಗರವೆಂದು ಪರಿಗಣಿಸಿದ್ದಾರೆ. ಈ ನಗರದಲ್ಲಿ ಇರುವಂತಹ ಸುಮಾರು 131 ಪಾರಂಪರಿಕ ಕಟ್ಟಡಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರಿನ ಮಹಾರಾಜರು ಮತ್ತು ಅವರಿಗಿಂತ ಹಿಂದೆ ಆಡಳಿತ ನಡೆಸಿದಂತಹ ರಾಜ ಮನೆತನದವರು ನಿರ್ಮಾಣ ಮಾಡಿದ್ದಾರೆ. ಈಗ ಈ ಕಟ್ಟಡಗಳನ್ನು ರಕ್ಷಣೆ ಮಾಡಿ ಉಳಿಸಿಕೊಳ್ಳುವುದೇ ಒಂದು ದೊಡ್ಡ ಕೆಲಸವಾಗಿದೆ. ಇದಕ್ಕಾಗಿ, the Karnataka Town and Country Planning Act, 1961 ಅಡಿಯಲ್ಲಿ 2020ನೇ ಇಸವಿಯಲ್ಲಿಯೇ ಕೆಲವು ತಿದ್ದುಪಡಿಗಳನ್ನು ತರಲಾಗಿದೆ. ಮಾನ್ಯ ಸಚಿವರು ನೀಡಿರುವ ಲಿಖಿತರೂಪದ ಉತ್ತರದಲ್ಲಿ "…..ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಂಪರೆ ಸಂರಕ್ಷಣಾ ಸಮಿತಿಯನ್ನು ರಚನೆ ಮಾಡಲಾಗಿದೆ" ಎಂದು ಹೇಳಲಾಗಿದೆ. ಈ ಸಮಿತಿ ರಚನೆ ಮಾಡಿರುವುದು ಮಾನ್ಯ ಮಂತ್ರಿಗಳ ಗಮನದಲ್ಲಿ ಇದೆಯೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯದಾಗಿ, ಈ ಸಮಿತಿ ಎಷ್ಟು ಸಭೆಗಳನ್ನು ನಡೆಸಿದೆ ಮತ್ತು ಏನು ಶಿಫಾರಸ್ಸುಗಳನ್ನು ಮಾಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, "131 ಕಟ್ಟಡಗಳ ಸ್ಥಿತಿಗತಿಗಳ ಬಗ್ಗೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ತಜ್ಞರ ಸಮಿತಿಯಿಂದ ಭೌತಿಕ ಪರಿಶೀಲನೆ ನಡೆಸಲಾಗುತ್ತಿದ್ದು, ಸದರಿ ವರದಿ ಬಂದ ನಂತರ ದುರಸ್ತಿ ಮತ್ತು ಸಂರಕ್ಷಣಾ ಕಾಮಗಾರಿಗಳಿಗೆ ಸೂಕ್ತ ಅನುದಾನವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು" ಎನ್ನುವ ಉತ್ತರವನ್ನು ನೀಡಿದ್ದಾರೆ. ಅಂದರೆ, ಇಲ್ಲಿಯವರೆಗೆ ಯಾವುದೇ ವರದಿ ಬಂದಿಲ್ಲವೇ? ಎಷ್ಟು ಅನುದಾನವನ್ನು ಸರ್ಕಾರ ಇದಕ್ಕಾಗಿ ಮೀಸಲಿಟ್ಟಿದೆ ಎನ್ನುವುದರ ಬಗ್ಗೆಯೂ ಮಾನ್ಯ ಸಚಿವರು ಉತ್ತರವನ್ನು ನೀಡಬೇಕಾಗಿದೆ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ ಹಿಂದೆ ಖಾಸಗಿ ಶಾಲೆಗಳಿಗೆ building stability certificate ಪಡೆಯಬೇಕೆನ್ನುವುದರ ಬಗ್ಗೆ ಚರ್ಚೆ ನಡೆದಂತಹ ಸಂದರ್ಭದಲ್ಲಿ "ಸರ್ಕಾರಿ ಕಟ್ಟಡಗಳು ನೆಲ ಮಹಡಿಯಲ್ಲಿ ಇರುವುದರಿಂದ ಅವುಗಳಿಗೆ building stability certificate ಆಗಬಹುದು ಅಥವಾ fire and emergency services department ನಿಂದ ಎನ್.ಓ.ಸಿ., ಪಡೆದುಕೊಳ್ಳುವುದರ ಅವಶ್ಯಕತೆ ಇಲ್ಲ" ಎನ್ನುವ ಮಾತನ್ನು

ಮಾನ್ಯ ಶಿಕ್ಷಣ ಸಚಿವರು ಹೇಳಿರುತ್ತಾರೆ. ಈಗ ಮಾನ್ಯ ಮರಿತಿಬ್ಬೇಗೌಡರು ಉಲ್ಲೇಖ ಮಾಡಿರುವಂತೆ ಸರ್ಕಾರಿ ಕಟ್ಟಡ ಕುಸಿದು ಬಿದ್ದಿರುವುದರಿಂದ, ಸರ್ಕಾರಿ ಕಟ್ಟಡಗಳಿಗೂ ಸಹ ಅಗ್ನಿಶಾಮಕ ಇಲಾಖೆಯಿಂದ ಎನ್.ಓ.ಸಿ. ಪಡೆದುಕೊಳ್ಳಬೇಕೆನ್ನುವುದನ್ನು ಕಡ್ಡಾಯಗೊಳಿಸಬೇಕಾಗುತ್ತದೆ ಎನ್ನುವುದು ನನ್ನ ಒತ್ತಾಯವಾಗಿದೆ. ನಾನು ಹೇಳುತ್ತಿರುವುದನ್ನು ಮಾನ್ಯ ಶಿಕ್ಷಣ ಸಚಿವರು ಕೇಳಿಸಿಕೊಳ್ಳುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸಿ, ಅವರು ಕೇಳಿಸಿಕೊಳ್ಳುತ್ತಿದ್ದಾರೆ.

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೆಲ ಮಹಡಿಯಲ್ಲಿರುವ ಸರ್ಕಾರಿ ಕಟ್ಟಡಗಳ ಬಗ್ಗೆ ಮಾತನಾಡುತ್ತಿದ್ದಾರೆ, ಅದನ್ನು ನಾನು ಕೇಳಿಸಿಕೊಳ್ಳುತ್ತಿದ್ದೇನೆ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಎಷ್ಟೋ ವಿಚಾರಗಳ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದು ಯಾವುದು ಅನುಷ್ಠಾನಗೊಂಡಿಲ್ಲ. ಅದಕ್ಕಾಗಿಯೇ ಮಾನ್ಯ ಶಿಕ್ಷಣ ಸಚಿವರು ನಾನು ಮಾತನಾಡುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದಾರೆಯೋ ಇಲ್ಲವೋ ಎಂದು ಕೇಳಿದೆ ಅಷ್ಟೇ. ಒಬ್ಬರಿಗೆ ಒಂದು ರೀತಿಯ ಕಾನೂನು; ಮತ್ತೊಬ್ಬರಿಗೆ ಇನ್ನೊಂದು ರೀತಿಯ ಕಾನೂನು ಈ ರೀತಿಯ ತಾರತಮ್ಯ ಮನೋಭಾವ ಸಲ್ಲದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಖಾಸಗಿ ಶಾಲೆಯವರಿಗೆ building stability certificate ಮತ್ತು ಅಗ್ನಿಶಾಮಕ ಇಲಾಖೆಯವರಿಂದ ಎನ್.ಓ.ಸಿ. ಪಡೆದುಕೊಳ್ಳುವುದು ಕಡ್ಡಾಯವಾಗಿದೆ. ಸರ್ಕಾರಿ ಶಾಲೆಗಳಿಗೆ ಏತಕ್ಕೋಸ್ಕರ ಇದನ್ನು ಅನ್ವಯಿಸುವುದಿಲ್ಲವೆಂದು ಅವರು ಕಾರಣಗಳನ್ನು ಹೇಳಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ಈಗ ಪಾರಂಪರಿಕ ಕಟ್ಟಡಗಳ ಬಗ್ಗೆ ಮಾತನಾಡಿ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, building stability ಇದ್ದಿದ್ದರೆ ಪಾರಂಪರಿಕ ಕಟ್ಟಡವೇಕೆ ಬಿತ್ತು ಹೋಗುತ್ತಿತ್ತು? ಕಾಲೇಜು ಕಟ್ಟಡ ಬಿದ್ದು ಹೋಗಿರುವುದು ಅದು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

**ಶ್ರೀ ಬಿ.ಸಿ.ನಾಗೇಶ್:-** ಸನ್ಮಾನ್ಯ ಸಭಾಪತಿಯವರೇ, ಇದು ಕಾಲೇಜು ಕಟ್ಟಡವಾಗಿರುವುದರಿಂದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಅದರ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆಯವರು ಮಾಡುತ್ತಾರೆ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರತಿ ವರ್ಷ ಲೋಕೋಪಯೋಗಿ ಇಲಾಖೆಯಿಂದ private schools/colleges ಗೆ ಹೇಗೆ building stability certificate ಅನ್ನು ತೆಗೆದುಕೊಳ್ಳಲಾಗುತ್ತದೆಯೋ ಅದೇ ರೀತಿಯಲ್ಲಿ ಇದಕ್ಕೂ ಲೋಕೋಪಯೋಗಿ ಇಲಾಖೆಯವರಿಂದ building stability certificate ಅನ್ನು ತೆಗೆದುಕೊಳ್ಳಬೇಕಾಗಿತ್ತು. ಮುಂದಿನ ದಿನಗಳಲ್ಲಿ ಸರ್ಕಾರಿ ಕಟ್ಟಡಗಳಿಗೂ ಸಹ building stability certificate ಮತ್ತು ಅಗ್ನಿಶಾಮಕ ಇಲಾಖೆಯಿಂದ ಎನ್.ಓ.ಸಿ.ಯನ್ನು ಪಡೆದುಕೊಳ್ಳುವಂತಹ ನಿಯಮವನ್ನು ಜಾರಿಗೊಳಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಆನಂದ್ ಸಿಂಗ್ (ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣ ನಮ್ಮ ಗಮನಕ್ಕೆ ಬಂದ ಮೇಲೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಹೇಳಿರುವ ಪ್ರಕಾರ ಮೈಸೂರಿನ ಮಹಾರಾಣಿ ಕಾಲೇಜಿಗೆ ನಾನು ಮತ್ತು ಮಾನ್ಯ ಶಿಕ್ಷಣ ಸಚಿವರು ಭೇಟಿ ನೀಡುತ್ತೇವೆ.

**ಸಭಾಪತಿಯವರು:-** ತಾವು ಅಲ್ಲಿಗೆ ಭೇಟಿ ನೀಡುವ ಸಂದರ್ಭದಲ್ಲಿ ಮಾನ್ಯ ಶಾಸಕರನ್ನು ಕರೆದುಕೊಂಡು ಹೋಗಿ.

**ಶ್ರೀ ಆನಂದ್ ಸಿಂಗ್:-** ನಾವೆಲ್ಲರೂ ಹೋಗಿ ಸ್ಥಳ ಪರಿಶೀಲನೆ ಮಾಡಿ, ನಮ್ಮ ಇಲಾಖೆಯ ವತಿಯಿಂದ ಎಷ್ಟು ಸಾಧ್ಯವೋ ಅಷ್ಟು ಕುಸಿದಿರುವ ಕಟ್ಟವನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ಇದನ್ನು ದುರಸ್ತಿಗೊಳಿಸುವುದಕ್ಕಾಗಿ ಅಥವಾ ಹೊಸದಾಗಿ ನಿರ್ಮಾಣ ಮಾಡುವುದಕ್ಕಾಗಿ ಎಷ್ಟು ಅನುದಾನದ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಈ ಕಟ್ಟಡ ಸ್ವಾತಂತ್ರ್ಯಪೂರ್ವದಲ್ಲಿ ನಿರ್ಮಾಣವಾಗಿರುವ ಕಟ್ಟಡವಾಗಿದೆ. ಇಂತಹ ಪಾರಂಪರಿಕ ಕಟ್ಟಡಗಳನ್ನು ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಅದು ಸರ್ಕಾರದ ಗಮನದಲ್ಲಿಯೂ

ಇದೆ. ಇದರ ಬಗ್ಗೆ ಪರಿಶೀಲನೆ ಮಾಡಿ, ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಪಿ.ಆರ್. ರಮೇಶ್:-** ಸನ್ಮಾನ್ಯ ಸಭಾಪತಿಯವರೇ, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಂಪರೆ ಸಂರಕ್ಷಣಾ ಸಮಿತಿಯನ್ನು ರಚನೆ ಮಾಡಲಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆ ಸಮಿತಿ ಎಷ್ಟು ಮೀಟಿಂಗ್‌ಗಳನ್ನು ಮಾಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಆನಂದ್ ಸಿಂಗ್:-** ಸನ್ಮಾನ್ಯ ಸಭಾಪತಿಯವರೇ, ಸಮಿತಿ ರಚನೆಯಾಗಿದೆ. ಆ ಸಮಿತಿ ಎಷ್ಟು ಮೀಟಿಂಗ್‌ಗಳನ್ನು ನಡೆಸಿದೆ ಎನ್ನುವುದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಂಡು ಮಾನ್ಯ ಸದಸ್ಯರಿಗೆ ನೀಡುತ್ತೇನೆ. ಆ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳು, ಜಂಟಿ ಕಾರ್ಯದರ್ಶಿಗಳು ಎನ್.ಜಿ.ಓ.,ಗಳು ಹೀಗೆ ಸುಮಾರು 21 ಜನ ಸದಸ್ಯರಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮೈಸೂರಿನ ಮಹಾರಾಣಿ ಕಾಲೇಜಿಗೆ ನಾನು ಭೇಟಿ ಕೊಟ್ಟು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಜರುಗಿಸಲಾಗುತ್ತದೆ. ಉಳಿದಿರುವ ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮದ ಬಗ್ಗೆ ಪರಿಶೀಲಿಸಲಾಗುತ್ತದೆ.

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಗಳವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 21ನೇ ಡಿಸೆಂಬರ್ ಮಾಹೆ 2022ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>